ಗುರುವಾರ, ಅಕ್ಟೋಬರ್ 19, 2023 | ಬೆಂಗಳೂರು | ₹ 7.00 | ಸಂಪುಟ 76| ಸಂಚಿಕೆ 290 | ಪುಟ 18
● www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ಭಾರತ-ತಾಂಜಾನಿಯ ಸಂಬಂಧಗಳು

ಆಳ-ಅಗಲ
ಹಸಿವು ಸೂಚ್ಯಂಕದಲ್ಲಿ ಕಳಪೆ ಸಾಧನೆ
ಸಿ.ಎಂ. ಇಬ್ರಾಹಿಂ ಉಚ್ಚಾಟನೆ ಸಾಧ್ಯತೆ 5
ಬಿಆರ್‌ಎಸ್‌–ಕಾಂಗ್ರೆಸ್ ನಡುವೆ ಸ್ಪರ್ಧೆ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
65,877 ▼	19,671 ▲	₹61,140 (ಬೆಂಗಳೂರು) ▲	₹73,700 (ಬೆಂಗಳೂರು) ▲	83.28 ▼

ವಿದ್ಯುತ್ ದರ ಹೆಚ್ಚಳದ ಮೂಲಕ ಅದಾನಿ ಸಮೂಹದಿಂದ ಜನರಿಗೆ ಹೊರೆ: ರಾಹುಲ್ ಆರೋಪ

‘₹12 ಸಾವಿರ ಕೋಟಿ ಸುಲಿಗೆ’

ಪ್ರಜಾವಾಣಿ ವಾರ್ತೆ

ನವದೆಹಲಿ: ವಿದ್ಯುತ್ ದರ ಹೆಚ್ಚಳದ ಮೂಲಕ ಅದಾನಿ ಸಮೂಹವು ಜನಸಾಮಾನ್ಯರಿಂದ ₹12 ಸಾವಿರ ಕೋಟಿ ಸುಲಿಗೆ ಮಾಡಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಬುಧವಾರ ಇಲ್ಲಿ ಆರೋಪಿಸಿದರು.

ಇಂಡೊನೇಷ್ಯಾದಿಂದ ಆಮದು ಮಾಡಿಕೊಂಡ ಕಲ್ಲಿದ್ದಲಿಗೆ ಹೆಚ್ಚಿನ ದರ ಪಾವತಿಸಲಾಗಿದೆ ಎಂದು ತೋರಿಸಿ, ಅದಾನಿ ಸಮೂಹವು ಜನರ ಜೇಬಿನಿಂದ ಹಣವನ್ನು ‘ನೇರವಾಗಿ’ ಪಡೆದುಕೊಳ್ಳುತ್ತಿದೆ ಎಂದು ರಾಹುಲ್ ದೂರಿದರು.

ಜನರಿಗಾಗುವ ಈ ಹೊರೆ ತಪ್ಪಿಸಲು ಕರ್ನಾಟಕದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರವು ವಿದ್ಯುತ್ತನ್ನು 200 ಯೂನಿಟ್‌ವರೆಗೆ ಉಚಿತವಾಗಿ ನೀಡುತ್ತಿದೆ. ಮಧ್ಯಪ್ರದೇಶದಲ್ಲೂ ಇಂಥದ್ದೇ ಭರವಸೆ ನೀಡಿದೆ ಎಂದು ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಆದರೆ ಈ ಆರೋಪಗಳನ್ನು ಅದಾನಿ ಸಮೂಹವು ಅಲ್ಲಗಳೆದಿದೆ.

‘ಫೈನಾನ್ಷಿಯಲ್ ಟೈಮ್ಸ್’ನಲ್ಲಿ ಈ ಕುರಿತು ಈಚೆಗೆ ಪ್ರಕಟವಾಗಿರುವ ವರದಿಯೊಂದನ್ನು ಪ್ರಸ್ತಾಪಿಸಿದ ರಾಹುಲ್, ‘ಈ ವಿಷಯದ ಬಗ್ಗೆ ಪ್ರಧಾನಿ ಮೋದಿ ಅವರು ಮೌನವಾಗಿರುವುದು ಏಕೆ’ ಎಂದು ಕೇಳಿದರು.

> **ಪ್ರಧಾನಿ ಅವರಿಂದ ರಕ್ಷಣೆ ಇಲ್ಲದೆ ಇದು ನಡೆಯಲು ಸಾಧ್ಯವಿಲ್ಲ. ಈ ಸಂಭಾವಿತ ವ್ಯಕ್ತಿಯ (ಅದಾನಿ) ವಿರುದ್ಧ ಏಕೆ ಕ್ರಮ ತೆಗೆದುಕೊಳ್ಳುತ್ತಿಲ್ಲ ಎಂಬುದು ಈಗಿರುವ ಪ್ರಶ್ನೆ**
> **ರಾಹುಲ್ ಗಾಂಧಿ,** ಕಾಂಗ್ರೆಸ್ ನಾಯಕ

‘ಅದಾನಿ ಸಮೂಹ ಇಂಡೊನೇಷ್ಯಾದಲ್ಲಿ ಕಲ್ಲಿದ್ದಲು ಖರೀದಿಸಿತು. ಆದರೆ, ಇದು ಭಾರತಕ್ಕೆ ಬರುವ ವೇಳೆಗೆ ದರ ದುಪ್ಪಟ್ಟಾಯಿತು. ಭಾರತದ ಬಡ ಜನರ ಜೇಬಿನಿಂದ ಇವರು ₹12,000 ಕೋಟಿ ಎತ್ತಿದ್ದಾರೆ. ನಮ್ಮ ವಿದ್ಯುತ್ ದರ ಏರುತ್ತಲೇ ಇದೆ’ ಎಂದರು.

‘ಇದನ್ನು ಲೆಕ್ಕಕ್ಕೆ ತೆಗೆದುಕೊಂಡರೆ, ಅದಾನಿ ಸಮೂಹವು ಲೂಟಿ ಮಾಡಿದ ಹಣದ ಮೊತ್ತವು ₹32,000 ಕೋಟಿಗೆ ತಲುಪಿದೆ. ಮುಂದಿನ ದಿನಗಳಲ್ಲಿ, ಲೂಟಿಯ ಮೊತ್ತವು ಇನ್ನಷ್ಟು ಹೆಚ್ಚಲಿದೆ’ ಎಂದು ಹೇಳಿದರು.

‘ನಾವು ಕರ್ನಾಟಕದಲ್ಲಿ ವಿದ್ಯುತ್‌ಗೆ ಸಬ್ಸಿಡಿ ನೀಡುತ್ತಿದ್ದೇವೆ, ಮಧ್ಯಪ್ರದೇಶದಲ್ಲಿ ಸಬ್ಸಿಡಿ ನೀಡಲಿದ್ದೇವೆ. ಆದರೆ, ಇದೇ ವೇಳೆ ಅದಾನಿ ಸಮೂಹವು ಕಲ್ಲಿದ್ದಲಿನ ಬಿಲ್ ಹೆಚ್ಚಳದ ನೆಪದಲ್ಲಿ ದೇಶದ ಜನರಿಂದ ನೇರವಾಗಿ ಹಣ ಕದಿಯುತ್ತಿದೆ. ಪ್ರಧಾನಿ ಈ ಬಗ್ಗೆ ಏಕೆ ಮಾತನಾಡುತ್ತಿಲ್ಲ ಎಂಬುದು ನನಗೆ ಅರ್ಥವಾಗುತ್ತಿಲ್ಲ’ ಎಂದರು.

‘ಶರದ್ ಪವಾರ್ ಅವರು ಗೌತಮ್ ಅದಾನಿ ಜೊತೆ ಹೊಂದಿರುವ ಉತ್ತಮ ಸಂಬಂಧದ ಬಗ್ಗೆ ಪ್ರಶ್ನಿಸಿದ್ದೀರಾ’ ಎಂದು ಕೇಳಿದಾಗ, ‘ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಈ ದೇಶದ ಪ್ರಧಾನಿ ಅಲ್ಲ. ಅವರು ಈ ಉದ್ಯಮಿಯನ್ನು ರಕ್ಷಿಸುತ್ತಿಲ್ಲ’ ಎಂದು ಪ್ರತಿಕ್ರಿಯಿಸಿದರು.

‘ಮೋದಿ ಅವರು (ಅದಾನಿ ಅವರನ್ನು) ರಕ್ಷಿಸುತ್ತಿದ್ದಾರೆ. ಆದ್ದರಿಂದಲೇ ನಾನು ಮೋದಿ ಅವರನ್ನು ಪ್ರಶ್ನಿಸುತ್ತೇನೆಯೇ ಹೊರತು ಶರದ್ ಪವಾರ್ ಅವರನ್ನಲ್ಲ. ಒಂದು ವೇಳೆ, ಪವಾರ್ ಅವರು ಭಾರತದ ಪ್ರಧಾನಿಯಾಗಿದ್ದು, ಅದಾನಿ ಅವರನ್ನು ರಕ್ಷಿಸುತ್ತಿದ್ದರೆ ಆಗ ನಾನು ಪವಾರ್ ಅವರಿಗೂ ಈ ಪ್ರಶ್ನೆ ಕೇಳುತ್ತಿದ್ದೆ’ ಎಂದು ಉತ್ತರಿಸಿದರು.

‘ಫೈನಾನ್ಷಿಯಲ್ ಟೈಮ್ಸ್‌ನಲ್ಲಿ ಬಂದಿರುವ ವರದಿಯು ಯಾವುದೇ ಸರ್ಕಾರವನ್ನು ಉರುಳಿಸುವಷ್ಟು ದೊಡ್ಡ ಸುದ್ದಿ. ಪ್ರಧಾನಿ ಅವರಿಂದ ಮತ್ತೆ, ಮತ್ತೆ, ಮತ್ತೆ ರಕ್ಷಿಸಲ್ಪಡುತ್ತಿರುವ ವ್ಯಕ್ತಿಯೊಬ್ಬ ನೇರವಾಗಿ ಕಳ್ಳತನ ನಡೆಸಿದ ಸುದ್ದಿ ಇದು. ಯಾವುದೇ ಮಾಧ್ಯಮದವರು ಈ ಸುದ್ದಿಯನ್ನು ಕೈಗೆತ್ತಿಕೊಳ್ಳಲು ಆಸಕ್ತಿ ತೋರದಿರುವುದು ಅಚ್ಚರಿ’ ಎಂದರು.

‘ದಾಖಲೆಗಳು ಸಿಗುತ್ತಿಲ್ಲ ಎಂದು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ಹೇಳುತ್ತಿದೆ. ಆದರೆ ಪತ್ರಿಕೆಯೊಂದಕ್ಕೆ ದಾಖಲೆಗಳೂ ಸಿಕ್ಕಿವೆ. ಅದಾನಿ ಸಮೂಹವು ಪ್ರಧಾನಿ ಅವರಿಂದ ರಕ್ಷಣೆ ಪಡೆಯುತ್ತಿದೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ’ ಎಂದು ಆರೋಪಿಸಿದರು.

ವಿದ್ಯುತ್‌ಗೆ ಸಬ್ಸಿಡಿ ನೀಡುತ್ತಿರುವ ಕಾಂಗ್ರೆಸ್ ಆಡಳಿತವಿರುವ ರಾಜ್ಯ ಸರ್ಕಾರಗಳು ಅದಾನಿ ಸಮೂಹದ ವಿರುದ್ಧ ತನಿಖೆಗೆ ಮುಂದಾಗುತ್ತವೆಯೇ ಎಂದು ಪ್ರಶ್ನಿಸಿದಾಗ, ಈ ಬಗ್ಗೆ ಪರಿಶೀಲಿಸಲಾಗುವುದು ಎಂದರು.

ಗಾಂಧಿ ಕುಟುಂಬದ ವಿರುದ್ಧ ಬಿಜೆಪಿ ಆರೋಪ

ನವದೆಹಲಿ (ಪಿಟಿಐ): ರಾಹುಲ್ ಆರೋಪಕ್ಕೆ ಪ್ರತಿಯಾಗಿ ಬಿಜೆಪಿಯು ಗಾಂಧಿ ಕುಟುಂಬದ ವಿರುದ್ಧ ಭ್ರಷ್ಟಾಚಾರ ಆಪಾದನೆ ಮಾಡಿದೆ.

ಉದ್ಯಮ ಸಮೂಹವನ್ನು ಒಳಗೊಂಡ ವಿಷಯವು ಸುಪ್ರೀಂಕೋರ್ಟ್ ಮುಂದಿದೆ. ಸಂವಿಧಾನದಲ್ಲಿ ಅಥವಾ ಸುಪ್ರೀಂಕೋರ್ಟ್‌ನಲ್ಲಿ ರಾಹುಲ್ ಗಾಂಧಿಗೆ ನಂಬಿಕೆ ಇಲ್ಲ ಎಂಬುದನ್ನು ಅವರ ಹೇಳಿಕೆಗಳು ಸೂಚಿಸುತ್ತವೆ ಎಂದು ಬಿಜೆಪಿ ವಕ್ತಾರ ಗೌರವ್ ಭಾಟಿಯಾ ಪ್ರತಿಕ್ರಿಯಿಸಿದ್ದಾರೆ.

ವಿಶ್ವದಲ್ಲೇ ಗಾಂಧಿ ಕುಟುಂಬ ಅತ್ಯಂತ ಭ್ರಷ್ಟ ಕುಟುಂಬ ಎಂದು ಆರೋಪಿಸಿದ ಅವರು, ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಸ್ವತಃ ರಾಹುಲ್ ಅವರೇ ಜಾಮೀನು ಪಡೆದುಕೊಂಡಿದ್ದಾರೆ ಎಂದು ವ್ಯಂಗ್ಯವಾಡಿದರು. ತಮ್ಮ ಮತ್ತು ರಾಬರ್ಟ್ ವಾದ್ರಾ ವಿರುದ್ಧದ ಭ್ರಷ್ಟಾಚಾರ ಆರೋಪದ ಬಗ್ಗೆ ಅವರು ಎಂದೂ ಮಾತನಾಡುವುದಿಲ್ಲ ಎಂದರು.



ಬೆಂಗಳೂರಿನ ಕೋರಮಂಗಲದ ಮಡ್‌ಪೈಪ್ ಕೆಫೆಯಲ್ಲಿ ಸಂಭವಿಸಿದ ಬೆಂಕಿ ಅವಘಡದಿಂದ ಪಾರಾಗಲು ಯುವಕ ಕಟ್ಟಡದಿಂದ ಜಿಗಿಯಲು ಪ್ರಯತ್ನಿಸಿದ ಸಂದರ್ಭ

ಅಗ್ನಿ ಅವಘಡ: ಕಟ್ಟಡದಿಂದ ಜಿಗಿದ ಯುವಕ

ಪ್ರಜಾವಾಣಿ ವಾರ್ತೆ

ಪ್ರೇಮ್ ಸಿಂಗ್

ಬೆಂಗಳೂರು: ಕೋರಮಂಗಲದ ತಾವರೆಕೆರೆ ಜಂಕ್ಷನ್ ಹೊಸೂರು ಮುಖ್ಯ ರಸ್ತೆಯಲ್ಲಿರುವ ಮಡ್‌ಪೈಪ್ ಕೆಫೆಯಲ್ಲಿ ಬುಧವಾರ ಮಧ್ಯಾಹ್ನ ಸಿಲಿಂಡರ್‌ನಿಂದ ಅನಿಲ ಸೋರಿಕೆಯಾಗಿ ಸಂಭವಿಸಿದ ಬೆಂಕಿ ಅವಘಡದಿಂದ ಪಾರಾಗಲು ಕಟ್ಟಡದಿಂದ ಜಿಗಿದಿದ್ದ ಪ್ರೇಮ್ ಸಿಂಗ್ ಸೌದ ಅವರ ಸ್ಥಿತಿ ಗಂಭೀರವಾಗಿದೆ.

ಸದ್ಯ ಅಪೋಲೊ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಅವರು ಚಿಕಿತ್ಸೆ ಪಡೆಯುತ್ತಿದ್ದಾರೆ.

ಜೆ.ಪಿ.ನಗರದಲ್ಲಿ ನೆಲೆಸಿದ್ದ ನೇಪಾಳದ ಪ್ರೇಮ್ ಕೆಫೆಯಲ್ಲಿ ಕೆಲಸ ಮಾಡುತ್ತಿದ್ದರು. ಬುಧವಾರ ಮಧ್ಯಾಹ್ನ ಅಡುಗೆ ಕೆಲಸದಲ್ಲಿ ತೊಡಗಿದ್ದಾಗ ಸಿಲಿಂಡರ್‌ನಲ್ಲಿ ಅನಿಲ ಸೋರಿಕೆಯಾಗಿ ಬೆಂಕಿ ಹೊತ್ತಿಕೊಂಡು ಇಡೀ ಕಟ್ಟಡವನ್ನೇ ಆವರಿಸಿತ್ತು. ವಾಣಿಜ್ಯ ಬಳಕೆಯ ಐದಕ್ಕೂ ಹೆಚ್ಚು ಸಿಲಿಂಡರ್‌ಗಳು ಸ್ಫೋಟಗೊಂಡಿದ್ದರಿಂದ ಬೆಂಕಿ ತೀವ್ರತೆ ಹೆಚ್ಚಿತ್ತು.

ಪ್ರೇಮ್ ಜತೆಗಿದ್ದ ಕಾರ್ಮಿಕರು ಕಟ್ಟಡದಿಂದ ಹೊರಬಂದು ಪಾರಾದರು. ಆದರೆ, ಪ್ರೇಮ್‌ಗೆ ಪಾರಾಗಲು ಸಾಧ್ಯವಾಗಿರಲಿಲ್ಲ. ಕಟ್ಟಡದ ಮೇಲ್ಭಾಗಕ್ಕೆ ತೆರಳಿ, ಅಲ್ಲಿಂದ ಜಿಗಿದು ಪ್ರಾಣ ಉಳಿಸಿಕೊಳ್ಳುವ ಪ್ರಯತ್ನ ಮಾಡಿದರು.

10ನೇ | ಪುಟ ನೋಡಿ

ಕೇಂದ್ರ ಸರ್ಕಾರಿ ನೌಕರರ ತುಟ್ಟಿಭತ್ಯೆ ಶೇ 4ರಷ್ಟು ಹೆಚ್ಚಳ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸರ್ಕಾರಿ ನೌಕರರು ಮತ್ತು ಪಿಂಚಣಿದಾರರ ತುಟ್ಟಿಭತ್ಯೆ ಹಾಗೂ ಪರಿಹಾರ ಭತ್ಯೆಯನ್ನು ಶೇ 4ರಷ್ಟು ಹೆಚ್ಚಿಸುವುದಕ್ಕೆ ಕೇಂದ್ರ ಸಚಿವ ಸಂಪುಟ ಬುಧವಾರ ಅನುಮೋದನೆ ನೀಡಿದೆ.

ಅಲ್ಲದೇ, ರೈಲ್ವೆಯ ಪತ್ರಾಂಕಿತ ಯೇತರ ಸಿಬ್ಬಂದಿಗೆ 78 ದಿನಗಳ ವೇತನವನ್ನು ಬೋನಸ್ ನೀಡುವುದಕ್ಕೂ ಸಭೆ ಅನುಮೋದನೆ ನೀಡಿದೆ.

ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ ಕೈಗೊಂಡ ಈ ನಿರ್ಧಾರದಿಂದ 48.67 ಲಕ್ಷದಷ್ಟಿರುವ ಕೇಂದ್ರ ಸರ್ಕಾರಿ ನೌಕರರಿಗೆ, 67.95 ಲಕ್ಷ ಪಿಂಚಣಿದಾರರಿಗೆ ಹಾಗೂ ರೈಲ್ವೆಯ 11.07 ಲಕ್ಷಕ್ಕೂ ಅಧಿಕ ಸಿಬ್ಬಂದಿಗೆ ಪ್ರಯೋಜನವಾಗಲಿದೆ.

ತುಟ್ಟಿಭತ್ಯೆ ಹೆಚ್ಚಳವು ಜುಲೈ 1ರಿಂದ ಪೂರ್ವಾನ್ವಯವಾಗಲಿದೆ ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್ ಸಭೆ ಬಳಿಕ ಸುದ್ದಿಗಾರರಿಗೆ ತಿಳಿಸಿದರು.

ಈ ಮೊದಲು ತುಟ್ಟಿಭತ್ಯೆ ಪ್ರಮಾಣವು ಶೇ 42ರಷ್ಟಿತ್ತು. ಪರಿಷ್ಕರಣೆ ಬಳಿಕ ಇದು ಶೇ 46ಕ್ಕೆ ಹೆಚ್ಚಳವಾಗಿದೆ. ರೈಲ್ವೆ ಸಿಬ್ಬಂದಿಗೆ ಘೋಷಿಸಿರುವ ಬೋನಸ್‌ನಿಂದ ಬೊಕ್ಕಸಕ್ಕೆ ₹1,968.87 ಕೋಟಿ ಯಷ್ಟು ಹೊರೆ ಬೀಳಲಿದೆ ಎಂದು ಅಂದಾಜಿಸಲಾಗಿದೆ.

ಈಜಿಪ್ಟ್ ಗಡಿಯಿಂದ ಗಾಜಾ ಜನರಿಗೆ ನೆರವು

ಜೆರುಸಲೇಂ/ಟೆಲ್ ಅವೀವ್ (ರಾಯಿಟರ್ಸ್/ಎಪಿ): ಗಾಜಾ ಪ್ರದೇಶಕ್ಕೆ ಮಾನವೀಯ ನೆಲೆಯಲ್ಲಿ ಅಗತ್ಯ ವಸ್ತುಗಳನ್ನು ಇಸ್ರೇಲ್‌ಗೆ ಹೊಂದಿಕೊಂಡಿರುವ ಗಡಿಯ ಕಡೆಯಿಂದ ಸಾಗಿಸಲು ಅವಕಾಶ ಕೊಡುವುದಿಲ್ಲ ಎಂದು ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರ ಕಚೇರಿ ತಿಳಿಸಿದೆ. ಆದರೆ, ಅಗತ್ಯ ವಸ್ತುಗಳನ್ನು ಈಜಿಪ್ಟ್‌ಗೆ ಹೊಂದಿಕೊಂಡಿರುವ ಗಡಿಯ ಕಡೆಯಿಂದ ಸಾಗಿಸಲು ಅಡ್ಡಿಪಡಿಸುವುದಿಲ್ಲ ಎಂದು ಅದು ಭರವಸೆ ನೀಡಿದೆ.

‘ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರ ಬೇಡಿಕೆಗೆ ಅನುಗುಣವಾಗಿ, ಈಜಿಪ್ಟ್ ಕಡೆಯಿಂದ ಬರುವ ಅಗತ್ಯ ವಸ್ತುಗಳಿಗೆ ಇಸ್ರೇಲ್ ಅಡ್ಡಿ ಉಂಟುಮಾಡುವುದಿಲ್ಲ. ಆದರೆ ಗಾಜಾ ಪಟ್ಟಿಯ ದಕ್ಷಿಣ ಭಾಗದಲ್ಲಿ ಇರುವ ನಾಗರಿಕರಿಗೆ ಆಹಾರ, ನೀರು ಮತ್ತು ಔಷಧಗಳನ್ನು ಮಾತ್ರ ಒದಗಿಸಬೇಕು’ ಎಂಬ ಷರತ್ತನ್ನು ಇಸ್ರೇಲ್ ವಿಧಿಸಿದೆ.

‘ಇಸ್ರೇಲ್‌ನ ಒತ್ತೆಯಾಳುಗಳನ್ನು ಬಿಡುಗಡೆ ಮಾಡುವವರೆಗೆ ಇಸ್ರೇಲ್ ಕಡೆಯಿಂದ ಗಾಜಾ ಪಟ್ಟಿಯೊಳಕ್ಕೆ ಯಾವುದೇ ಅಗತ್ಯ ವಸ್ತುಗಳು ಪ್ರವೇಶಿಸುವುದಕ್ಕೆ ಅವಕಾಶ ಇಲ್ಲ’ ಎಂದು ಖಚಿತಪಡಿಸಿದೆ.

‘ಮಾನವೀಯ ನೆಲೆಯಲ್ಲಿ ಅಗತ್ಯ ವಸ್ತುಗಳು ನಾಗರಿಕರಿಗೆ ಮಾತ್ರ ತಲುಪಬೇಕು. ಹಮಾಸ್ ಬಂಡುಕೋರರಿಗೆ ಸಿಗಬಾರದು ಎಂಬ ಷರತ್ತಿನ ಅಡಿಯಲ್ಲಿ ಇಸ್ರೇಲ್ ಇದಕ್ಕೆ ಒಪ್ಪಿದೆ’ ಎಂದು ಇಸ್ರೇಲ್ ಭೇಟಿ ವೇಳೆ ಅಮೆರಿಕದ ಅಧ್ಯಕ್ಷ ಜೋ ಬೈಡನ್ ಹೇಳಿದ್ದಾರೆ. ಗಾಜಾ, ವೆಸ್ಟ್ ಬ್ಯಾಂಕ್‌ಗೆ ಹೆಚ್ಚುವರಿಯಾಗಿ 100 ಮಿಲಿಯನ್ ಡಾಲರ್ (ಅಂದಾಜು ₹832 ಕೋಟಿ) ನೆರವನ್ನು ಅಮೆರಿಕ ಒದಗಿಸಲಿದೆ ಎಂದು ಬೈಡನ್ ತಿಳಿಸಿದ್ದಾರೆ.

ಅ.7ರಂದು ಹಮಾಸ್ ಬಂಡುಕೋರರು ಇಸ್ರೇಲ್ ಪ್ರಜೆಗಳ ಮೇಲೆ ದಾಳಿ ನಡೆಸಿದ ನಂತರ ಗಾಜಾ ಪಟ್ಟಿಗೆ ಇಸ್ರೇಲ್ ದಿಗ್ಬಂಧನ ವಿಧಿಸಿತ್ತು. ಅಲ್ಲಿಗೆ ಆಹಾರ, ನೀರು ಪೂರೈಕೆ ಇಲ್ಲದಂತೆ ಮಾಡಿತ್ತು. ಇದು ವ್ಯಾಪಕ ಖಂಡನೆಗೆ ಗುರಿಯಾಗಿತ್ತು. ಇಸ್ರೇಲ್ ಜೊತೆ ದೃಢವಾಗಿ ನಿಂತಿರುವ ಅಮೆರಿಕ ಕೂಡ ಈ ಕ್ರಮಕ್ಕೆ ಆಕ್ಷೇಪ ವ್ಯಕ್ತಪಡಿಸಿತ್ತು.

‘ಎಲ್ಲ ಮಿಲಿಟರಿ ಕಾರ್ಯಾಚರಣೆಗಳು ಯುದ್ಧಕ್ಕೆ ಸಂಬಂಧಿಸಿದ ನಿಯಮಗಳಿಗೆ ಅನುಗುಣವಾಗಿಯೇ ಇರಬೇಕು... ನಾಗರಿಕರಿಗೆ ನೀರು, ಆಹಾರ ಮತ್ತು ಔಷಧಗಳು ಲಭ್ಯವಿರಬೇಕು ಎಂಬ ಸಂದೇಶವನ್ನು ಅಮೆರಿಕವು ಬಹಿರಂಗದಲ್ಲಿಯೂ ಖಾಸಗಿಯಾಗಿಯೂ ನೀಡುತ್ತಿದೆ’ ಎಂದು ಅಮೆರಿಕದ ರಾಷ್ಟ್ರೀಯ ಭದ್ರತಾ ಸಲಹೆಗಾರ ಜೇಕ್ ಸಲುವಾನ್ ಹೇಳಿದ್ದರು.

ಇನ್ನಷ್ಟು ಸುದ್ದಿಗಳು | 06

ಪ್ರತ್ಯೇಕ ಪ್ಯಾಲೆಸ್ಟೀನ್ ರಾಷ್ಟ್ರಕ್ಕೆ ಬೆಂಬಲ

ಟೆಲ್ ಅವೀವ್ (ಎಎಫ್‌ಪಿ): ಪ್ರತ್ಯೇಕ ಪ್ಯಾಲೆಸ್ಟೀನ್ ದೇಶದ ನಿರ್ಮಾಣಕ್ಕೆ ತಾವು ಬದ್ಧ ಎಂದು ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರು ಪುನರುಚ್ಚರಿಸಿದರು.

‘ನಾವು ಶಾಂತಿ ಸ್ಥಾಪಿಸಲು ಯತ್ನವನ್ನು ನಡೆಸುತ್ತಿರಬೇಕು. ಇಸ್ರೇಲ್ ಮತ್ತು ಪ್ಯಾಲೆಸ್ಟೀನ್‌ನ ಜನ ಸುರಕ್ಷತೆಯಿಂದ ಹಾಗೂ ಘನತೆಯಿಂದ ಶಾಂತಿಯುತವಾಗಿ ಬಾಳ್ವೆ ನಡೆಸಲು ಅಗತ್ಯವಿರುವ ಮಾರ್ಗ ಹುಡುಕಲು ಯತ್ನಿಸುತ್ತಿರಬೇಕು. ಇದೇ ದ್ವಿರಾಷ್ಟ್ರ ಸೂತ್ರ’ ಎಂದು ಎಂದು ಬೈಡನ್ ಹೇಳಿದ್ದಾರೆ

ಮುಖ್ಯಾಂಶಗಳು

- ನಾಗರಿಕರಿಗೆ ಮಾತ್ರ ಅಗತ್ಯ ವಸ್ತುಗಳು; ಉಗ್ರರಿಗಲ್ಲ
- ಗಾಜಾ, ವೆಸ್ಟ್ ಬ್ಯಾಂಕ್‌ಗೆ ಅಮೆರಿಕ ನೆರವು

ಲೆವೆಲ್ ಕ್ರಾಸಿಂಗ್ ತಪ್ಪಿಸಲು 10 ಸ್ಥಳಗಳಲ್ಲಿ ಜಾರಿ ● ರಾಜ್ಯದಲ್ಲೇ ಪ್ರಥಮ

ಹಳಿಯನ್ನೇ ಎತ್ತರಿಸುವ ಯೋಜನೆ

● ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಲೆವೆಲ್ ಕ್ರಾಸಿಂಗ್ (ಎಲ್‌ಸಿ) ತಪ್ಪಿಸಲು ಇಲ್ಲಿವರೆಗೆ ರೈಲು ಹಳಿಯ ಕೆಳಗೆ (ಆರ್‌ಯುಬಿ) ಅಥವಾ ಮೇಲ್ಸೇತುವೆ (ಆರ್‌ಒಬಿ) ನಿರ್ಮಿಸಲಾಗುತ್ತಿತ್ತು. ಈಗ ಈ ಪದ್ಧತಿಯನ್ನು ಬಿಟ್ಟು ಹಳಿಯನ್ನೇ ಎತ್ತರಿಸುವ ಯೋಜನೆಯನ್ನು ನಗರದ 10 ಲೆವೆಲ್ ಕ್ರಾಸಿಂಗ್‌ಗಳಲ್ಲಿ ಜಾರಿಗೆ ತರಲಾಗುತ್ತಿದೆ. ರಾಜ್ಯದಲ್ಲಿಯೇ ಮೊದಲ ಯೋಜನೆ ಇದಾಗಿದೆ.

ಆರ್‌ಒಬಿ, ಆರ್‌ಯುಬಿಗಳಿಗೆ ಭೂ ಸ್ವಾಧೀನ ಮಾಡಲು ಕಷ್ಟ ಇರುವ ನಗರಗಳಲ್ಲಿ ಈ ಯೋಜನೆ ಹೆಚ್ಚು ಉಪಯೋಗವಾಗಲಿದೆ ಎಂದು ಕೆ–ರೈಡ್ ಅಧಿಕಾರಿಗಳು ತಿಳಿಸಿದ್ದಾರೆ

ಬೆಂಗಳೂರು ನಗರ ವ್ಯಾಪ್ತಿಯಲ್ಲಿ 26 ಲೆವೆಲ್ ಕ್ರಾಸಿಂಗ್‌ಗಳಿವೆ. ಮಾರತ್‌ಹಳ್ಳಿ ರಸ್ತೆ ಸೇರಿದಂತೆ ಹಲವೆಡೆ ವಾಹನ ದಟ್ಟಣೆ ಉಂಟಾಗಲು ಈ ಲೆವೆಲ್ ಕ್ರಾಸಿಂಗ್‌ಗಳ ಪಾತ್ರವೂ ಇದೆ. ರೈಲು ಬರುವ ವೇಳೆಗೆ ಗೇಟ್ ಹಾಕುವುದರಿಂದ ವಾಹನಗಳು ಸಾಲುಗಟ್ಟಿ ಮುಖ್ಯರಸ್ತೆವರೆಗೂ ನಿಲ್ಲುವುದು, ಕ್ರಾಸಿಂಗ್ ದಾಟಿ ರೈಲು ಹೋದ ಬಳಿಕ ಒಮ್ಮೆಲೇ ವಾಹನಗಳು ನುಗ್ಗುವುದು ದಟ್ಟಣೆಯನ್ನು ಹೆಚ್ಚಿಸಿವೆ.

ಬೆಂಗಳೂರು ಉಪನಗರ ರೈಲ್ವೆ ಯೋಜನೆಯಲ್ಲಿ (ಬಿಎಸ್‌ಆರ್‌ಪಿ) ನಾಲ್ಕು ಕಾರಿಡಾರ್‌ಗಳಿವೆ. ಒಟ್ಟು 149 ಕಿಲೋಮೀಟರ್ ಉದ್ದದ ಈ ಯೋಜನೆಯನ್ನು ಕರ್ನಾಟಕ ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ (ಕೆ–ರೈಡ್) ಜಾರಿಗೆ ತರುತ್ತಿದೆ. ಅದರಲ್ಲಿ ಈಗಾಗಲೇ ಬೈಯಪ್ಪನಹಳ್ಳಿ–ಚಿಕ್ಕಬಾಣಾವರ ನಡುವೆ (ಕಾರಿಡಾರ್–2) ಕಾಮಗಾರಿ ಚಾಲ್ತಿಯಲ್ಲಿದೆ. ಈ ಕಾರಿಡಾರ್‌ನಲ್ಲಿ ಪ್ರಮುಖ ಏಳು ಲೆವೆಲ್ ಕ್ರಾಸಿಂಗ್ ತೆರವಿಗೆ ಯೋಜನೆ ರೂಪಿಸಲಾಗಿದೆ. ಅದಕ್ಕಾಗಿ ಹೆಬ್ಬಾಳ–ಬಾಣಸವಾಡಿ ನಡುವೆ 6 ಕಿಲೋಮೀಟರ್‌ನಷ್ಟು ರೈಲ್ವೆ ಹಳಿಯನ್ನು 10 ಅಡಿಯಷ್ಟು ಎತ್ತರಿಸಲಾಗುವುದು ಎಂದು ಕೆ–ರೈಡ್ ಅಧಿಕಾರಿಗಳು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದ್ದಾರೆ.

ಕಾರಿಡಾರ್–1ರಲ್ಲಿ (ಬೆಂಗಳೂರು ನಗರ–ದೇವನಹಳ್ಳಿ) 3 ಲೆವೆಲ್ ಕ್ರಾಸಿಂಗ್‌ಗಳನ್ನು ತೆರವು ಮಾಡಲು ಇದೇ ಮಾದರಿಯಲ್ಲಿ ಹಳಿ ಎತ್ತರಿಸಲಾಗುವುದು. ಪ್ರಮುಖವಾದ 10 ಎಲ್‌ಸಿಗಳನ್ನು ಗುರುತಿಸಿದ್ದರೂ, ಅವುಗಳಲ್ಲದೇ ಇದೇ ಮಾರ್ಗಗಳಲ್ಲಿ ಸಣ್ಣ ಸಣ್ಣ ರಸ್ತೆಗಳ ಕ್ರಾಸಿಂಗ್ ಕೂಡ ಇವೆ. ಹಳಿ ಎತ್ತರಿಸುವುದರಿಂದ ಎಲ್ಲದಕ್ಕೂ ಪರಿಹಾರ ಸಿಗಲಿದೆ. ನಗರ ವ್ಯಾಪ್ತಿಯ ಎಲ್ಲ ಲೆವೆಲ್ ಕ್ರಾಸಿಂಗ್‌ಗಳು ಬಿಎಸ್‌ಆರ್‌ಪಿ ಸಾಗುವ ಹಾದಿಯಲ್ಲೇ ಬರುವುದರಿಂದ ನಾಲ್ಕು ಕಾರಿಡಾರ್‌ಗಳ ಕಾಮಗಾರಿಗಳು ಸಂಪೂರ್ಣಗೊಂಡಾಗ ಬೆಂಗಳೂರು ‘ಲೆವೆಲ್ ಕ್ರಾಸಿಂಗ್ ರಹಿತ’ ನಗರವಾಗಿ ಗುರುತಿಸಿಕೊಳ್ಳಲಿದೆ.

ರೈಲು ಸಂಚಾರಕ್ಕೆ ತೊಡಕಾಗಲ್ಲ: ಕಾರಿಡಾರ್‌ಗಳು ಈಗಾಗಲೇ ಇರುವ ರೈಲು ಹಳಿಯ ಪಕ್ಕದಲ್ಲೇ ನಿರ್ಮಾಣಗೊಳ್ಳುತ್ತವೆ. ಮೊದಲು ಬಿಎಸ್‌ಆರ್‌ಪಿ ಹಳಿಗಳನ್ನು ಎತ್ತರಿಸಿ ಅಳವಡಿಸಲಾಗುತ್ತದೆ. ರೈಲು ಸಂಚಾರವನ್ನು ಈ ಹಳಿಗಳಿಗೆ ಬದಲಾಯಿಸಿದ ಬಳಿಕ ಈಗಿರುವ ಹಳಿಗಳನ್ನು ಎತ್ತರಿಸಲಾಗುತ್ತದೆ. ನಾಲ್ಕು ಪಥಗಳು ನಿರ್ಮಾಣಗೊಂಡ ಬಳಿಕವಷ್ಟೇ ಬಿಎಸ್‌ಆರ್‌ಪಿ ರೈಲು ಸಂಚಾರ ಆರಂಭಗೊಳ್ಳಲಿದೆ. ಹಾಗಾಗಿ ಹಳಿಗಳನ್ನು ಎತ್ತರಿಸುವ ಕಾಮಗಾರಿ ನಡೆಯುವ ಸಮಯದಲ್ಲಿ ರೈಲು ಸಂಚಾರಕ್ಕೆ ಯಾವುದೇ ತೊಡಕಾಗುವುದಿಲ್ಲ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

9ಸಿ | ಪುಟ ನೋಡಿ

ಬೆಂಗಳೂರಿನಲ್ಲಿ ಲೆವೆಲ್ ಕ್ರಾಸಿಂಗ್ ತಪ್ಪಿಸಲು ನಿರ್ಮಾಣಗೊಳ್ಳಲಿರುವ ಹಳಿ ಎತ್ತರಿಸುವ ಯೋಜನೆಯ ಮಾದರಿ

ಅಂಕಿ ಅಂಶ...

185
ನೈರುತ್ಯ ರೈಲ್ವೆ ಬೆಂಗಳೂರು ವಿಭಾಗದ ವ್ಯಾಪ್ತಿಯಲ್ಲಿರುವ ರೈಲ್ವೆ ಕ್ರಾಸಿಂಗ್‌ಗಳು

26
ಬೆಂಗಳೂರು ನಗರ ವ್ಯಾಪ್ತಿಯಲ್ಲಿ ತೆರವುಗೊಳ್ಳಲಿರುವ ರೈಲ್ವೆ ಕ್ರಾಸಿಂಗ್‌ಗಳು

52
ನೈರುತ್ಯ ರೈಲ್ವೆ ಬೆಂಗಳೂರು ವಿಭಾಗದ ವ್ಯಾಪ್ತಿಯಲ್ಲಿ ತೆರವಾಗಲಿರುವ ಒಟ್ಟು ರೈಲ್ವೆ ಕ್ರಾಸಿಂಗ್‌ಗಳು

ಹರೀಶ್ ಪೂಂಜ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಉಜಿರೆ (ದಕ್ಷಿಣ ಕನ್ನಡ): ಬೆಳ್ತಂಗಡಿ ತಾಲ್ಲೂಕಿನ ಕಳೆಂಜ ಗ್ರಾಮದ ಮೀಸಲು ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡಿದ್ದಾರೆ ಎನ್ನಲಾದ ಜಾಗದಲ್ಲಿ ನಿರ್ಮಿಸಿದ್ದ ಮನೆ ತೆರವಿನ ವೇಳೆ ಉಪ್ಪಿನಂಗಡಿ ಅರಣ್ಯಾಧಿಕಾರಿಯ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದ ಮೇಲೆ ಶಾಸಕ ಹರೀಶ್ ಪೂಂಜ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ದೂರಿನಲ್ಲಿ ಏನಿದೆ?: ‘ಕಳೆಂಜ ಗ್ರಾಮದ ಸರ್ವೆ ನಂಬರ್ 309ರಲ್ಲಿ ಮೀಸಲು ಅರಣ್ಯ ಪ್ರದೇಶವನ್ನು ಅತಿಕ್ರಮಣ ಮಾಡಿ ಲೋಲಾಕ್ಷ ಗೌಡ ಅವರು ಮನೆ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದರು. ಹಿರಿಯ ಅಧಿಕಾರಿಗಳ ಸೂಚನೆಯಂತೆ ಅ.9ರಂದು ಬೆಳಿಗ್ಗೆ ಇಲಾಖಾ ಅಧಿಕಾರಿಗಳು ಮತ್ತು ಸಿಬ್ಬಂದಿ ಸ್ಥಳಕ್ಕೆ ತೆರಳಿದ್ದೆವು. ಆಗ ಲೋಲಾಕ್ಷ ಗೌಡ ಅವರು ಮೀಸಲು ಅರಣ್ಯದಲ್ಲಿ ಮನೆಯ ತಳಪಾಯ ಹಾಕಿದ್ದು ಕಂಡುಬಂದಿತ್ತು. ಅದನ್ನು ತೆರವುಗೊಳಿಸಲು ಮುಂದಾದೆವು. ಆಗ ಬೆಂಬಲಿಗರೊಂದಿಗೆ ಸ್ಥಳಕ್ಕೆ ಬಂದ ಶಾಸಕ ಹರೀಶ್ ಪೂಂಜ ತೆರವು ಕಾರ್ಯವನ್ನು ತಡೆದು, ಅವಾಚ್ಯ ಪದಗಳಿಂದ ನಿಂದಿಸಿದರು’ ಎಂದು ಉಪ್ಪಿನಂಗಡಿ ಅರಣ್ಯಾಧಿಕಾರಿ ಜಯಪ್ರಕಾಶ್ ಕೆ.ಕೆ. ಅವರು ಅ.13 ರಂದು ಧರ್ಮಸ್ಥಳ ಠಾಣೆಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ

ಪ್ರಜಾವಾಣಿ
ನವವರ್ಣ
9ಬಿ ಮತ್ತು 9ಡಿ ಪುಟಗಳನ್ನು ನೋಡಿ

ಒಳ ಪುಟಗಳು

ತಲಕಾವೇರಿಯಲ್ಲಿ ತೀರ್ಥೋದ್ಭವ ಸಂಭ್ರಮ 5
ವೃದ್ಧ ದಂಪತಿ ರಕ್ಷಿಸಿದ ಕೇರಳದ ‘ಸೂಪರ್ ವುಮೆನ್’ 6

ಹೆಚ್ಚುತ್ತಿರುವ ಪ್ರಕರಣಗಳ ಸಂಖ್ಯೆ– ಘಟಕದ ಬಲವರ್ಧನೆಗೆ ನಿರ್ಧಾರ

ಲೋಕಾಯುಕ್ತ: ನಗರಕ್ಕೆ ಆರು ಎಸ್‌ಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಾಯುಕ್ತದ ಬೆಂಗಳೂರು ನಗರ ಪೊಲೀಸ್ ವಿಭಾಗದಲ್ಲಿ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಿರುವುದರಿಂದ ಇಬ್ಬರು ಐಪಿಎಸ್ ಅಧಿಕಾರಿಗಳೂ ಸೇರಿದಂತೆ ಆರು ಎಸ್‌ಪಿಗಳನ್ನು ನೇಮಿಸಲು ನಿರ್ಧರಿಸಲಾಗಿದೆ.

ಒಬ್ಬ ಐಪಿಎಸ್ ಅಧಿಕಾರಿ ಲೋಕಾಯುಕ್ತದ ಬೆಂಗಳೂರು ನಗರ ಪೊಲೀಸ್ ಘಟಕದ ಪ್ರಕರಣಗಳ ತನಿಖೆಯ ಸಂಪೂರ್ಣ ಉಸ್ತುವಾರಿ ವಹಿಸಿರುತ್ತಿದ್ದರು. ಈಗ ಇಡೀ ವಿಭಾಗವನ್ನೇ ಪುನರ್ ರಚಿಸಲಾಗಿದೆ. ಇಬ್ಬರು ಐಪಿಎಸ್ ಅಧಿಕಾರಿಗಳು ಹಾಗೂ ರಾಜ್ಯ ಪೊಲೀಸ್ ಸೇವೆಯ ನಾಲ್ವರನ್ನು ಎಸ್‌ಪಿ ಹುದ್ದೆಗೆ ನಿಯೋಜಿಸಲಾಗುತ್ತಿದೆ.

ಸ್ಥಳಾವಕಾಶದ ಕೊರತೆ

ಅಂಬೇಡ್ಕರ್ ವೀದಿಯಲ್ಲಿರುವ ಬಹುಮಹಡಿ ಕಟ್ಟಡದಲ್ಲಿರುವ ಲೋಕಾಯುಕ್ತ ಕಚೇರಿಯ ಜತೆಗೆ ಖನಿಜ ಭವನದಲ್ಲಿ ಭ್ರಷ್ಟಾಚಾರ ನಿಗ್ರಹ ದಳಕ್ಕೆ (ಎಸಿಬಿ) ನೀಡಿದ್ದ ಕಚೇರಿಯನ್ನೂ ಲೋಕಾಯುಕ್ತ ಪೊಲೀಸ್ ವಿಭಾಗಕ್ಕೆ ನೀಡಲಾಗಿದೆ. ಆದರೂ, ಸ್ಥಳಾವಕಾಶದ ಕೊರತೆ ಎದುರಾಗಿದೆ. ಈ ಕಾರಣದಿಂದ ಹೆಚ್ಚುವರಿ ಸ್ಥಳಾವಕಾಶ ಒದಗಿಸುವಂತೆಯೂ ಲೋಕಾಯುಕ್ತರು ಮುಖ್ಯ ಕಾರ್ಯದರ್ಶಿಯವರನ್ನು ಕೋರಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕೆ.ವಿ. ಅಶೋಕ್ ಅವರ ವರ್ಗಾವಣೆಯಿಂದ ತೆರವಾದ ಸ್ಥಾನಕ್ಕೆ ಕೆ. ವಂಶಿಕೃಷ್ಣ ಬಂದಿದ್ದಾರೆ. ಅವರೊಂದಿಗೆ ಲೋಕಾಯುಕ್ತದ ಬೆಂಗಳೂರು ಗ್ರಾಮಾಂತರ ಎಸ್‌ಪಿ ಹುದ್ದೆಯಲ್ಲಿದ್ದ ಶ್ರೀನಾಥ್ ಎಂ. ಜೋಶಿ ಅವರನ್ನೂ ನಗರ ಘಟಕಕ್ಕೆ ನಿಯೋಜಿಸಲಾಗಿದೆ. ರಾಜ್ಯ ಪೊಲೀಸ್ ಸೇವೆಯ ನಾಲ್ವರು ಎಸ್‌ಪಿಗಳ ನಿಯೋಜನೆಗೆ ಸಿದ್ಧತೆ ನಡೆದಿದೆ ಎಂದು ಲೋಕಾಯುಕ್ತದ ಉನ್ನತ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಬಲ ಹೆಚ್ಚಳಕ್ಕೂ ಪ್ರಸ್ತಾವ: ಲೋಕಾಯುಕ್ತದ ಬೆಂಗಳೂರು ನಗರ ಪೊಲೀಸ್ ವಿಭಾಗದಲ್ಲಿ 20 ಡಿವೈಎಸ್‌ಪಿ ಮತ್ತು 26 ಇನ್‌ಸ್ಪೆಕ್ಟರ್‌ಗಳ ಹುದ್ದೆಗಳ ಮಂಜೂರಾತಿ ಇದೆ. ಈ ಪೈಕಿ ನಾಲ್ಕು ಡಿವೈಎಸ್‌ಪಿ ಮತ್ತು ಎಂಟು ಇನ್‌ಸ್ಪೆಕ್ಟರ್‌ಗಳ ಹುದ್ದೆಗಳು ಖಾಲಿ ಇವೆ.

'ಖಾಲಿ ಇರುವ ಹುದ್ದೆಗಳ ಭರ್ತಿಗೆ ಪೊಲೀಸ್ ಅಧಿಕಾರಿಗಳನ್ನು ಒದಗಿಸುವುದರ ಜತೆಯಲ್ಲೇ ಹೆಚ್ಚುವರಿ ಹುದ್ದೆಗಳನ್ನು ಸೃಜಿಸುವಂತೆಯೂ ಪ್ರಸ್ತಾವ ಸಲ್ಲಿಸಲು ನಿರ್ಧರಿಸಲಾಗಿದೆ. ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಅವರು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ ಅವರೊಂದಿಗೆ ಇತ್ತೀಚೆಗೆ ನಡೆಸಿದ ಸಭೆಯಲ್ಲಿ ಈ ವಿಷಯ ಪ್ರಸ್ತಾಪಿಸಲಾಗಿದೆ' ಎಂದು ಲೋಕಾಯುಕ್ತದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಉದ್ಯೋಗ ಮೇಳ: 41 ಅಭ್ಯರ್ಥಿಗಳು ಆಯ್ಕೆ

ಪ್ರಜಾವಾಣಿ ವಾರ್ತೆ

ಉದ್ಯೋಗಾಕಾಂಕ್ಷಿಗಳು ವಿವಿಧ ಹುದ್ದೆಗಳಿಗಾಗಿ ನೋಂದಣಿ ಮಾಡಿಸಿ, ಸಂದರ್ಶನದ ಕುರಿತು ಮಾಹಿತಿ ಪಡೆದರು.

ಯಲಹಂಕ: ರಾಜಾನುಕುಂಟೆ ಗ್ರಾಮ ಪಂಚಾಯಿತಿ ಮತ್ತು ಶ್ರೀರಾಮನಹಳ್ಳಿಯ ಪೀಪಲ್ ಟ್ರಸ್ಟ್, ರೋಟರಿ ಕ್ಲಬ್ ಆಫ್ ಬೆಂಗಳೂರು ಓಯಸಿಸ್ ಹಾಗೂ ಡಾ.ರೆಡ್ಡಿಸ್ ಫೌಂಡೇಶನ್ ಜಂಟಿ ಆಶ್ರಯದಲ್ಲಿ ರಾಜಾನುಕುಂಟೆ ಸರ್ಕಾರಿ ಶಾಲೆಯಲ್ಲಿ ಆಯೋಜಿಸಿದ್ದ ಉದ್ಯೋಗ ಮೇಳದಲ್ಲಿ ಸ್ಥಳದಲ್ಲೇ 41 ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಯಿತು.

ಶಾಸಕ ಎಸ್.ಆರ್.ವಿಶ್ವನಾಥ್ ಚಾಲನೆ ನೀಡಿದರು. ಆಕ್ಸೆಂಚರ್, ಎಚ್.ಪಿ, ಕ್ರೋಮಾ, ಟೈಟಾನ್, ಆಕ್ಸಿಸ್, ಐಸಿಐಸಿಐ ಬ್ಯಾಂಕ್ ಸೇರಿದಂತೆ 28 ಕಂಪನಿಗಳು ಪಾಲ್ಗೊಂಡಿದ್ದವು.

ಜಿ. ಪಂ ಮಾಜಿ ಅಧ್ಯಕ್ಷ ಚೊಕ್ಕನಹಳ್ಳಿ ವೆಂಕಟೇಶ್, ಗ್ರಾಂ.ಪಂ ಅಧ್ಯಕ್ಷೆ ಅಂಬಿಕಾ ರಾಜೇಂದ್ರಕುಮಾರ್, ಉಪಾಧ್ಯಕ್ಷ ವೆಂಕಟೇಶ್, ಮಾಜಿ ಅಧ್ಯಕ್ಷ ಎಸ್.ಜಿ. ನರಸಿಂಹಮೂರ್ತಿ, ಸದಸ್ಯ ಸಾದೇನಹಳ್ಳಿ ಚಿಕ್ಕಣ್ಣ, ಪಿ.ಡಿ.ಒ ನಾಗರಾಜ್, ಪೀಪಲ್ ಟ್ರಸ್ಟ್ ಸಂಸ್ಥೆಯ ಕಾರ್ಯಕ್ರಮ ನಿರ್ದೇಶಕ ರಾಮಸ್ವಾಮಿ, ರೋಟರಿ ಕ್ಲಬ್‌ನ ದಿನೇಶ್ ಇದ್ದರು.

ಮೇಳದಲ್ಲಿ ಒಟ್ಟು 223 ಉದ್ಯೋಗಾಕಾಂಕ್ಷಿಗಳು ವಿವಿಧ ಹುದ್ದೆಗಳಿಗಾಗಿ ನೋಂದಾಯಿಸಿದ್ದರು. ಸ್ಥಳದಲ್ಲೇ ಆಯ್ಕೆಯಾದ 41 ಅಭ್ಯರ್ಥಿಗಳಿಗೆ ನೇಮಕಾತಿ ಪತ್ರ ನೀಡಲಾಯಿತು. 87 ಅಭ್ಯರ್ಥಿಗಳಿಗೆ ಮುಂದಿನ ಸುತ್ತಿನ ಸಂದರ್ಶನಕ್ಕಾಗಿ ಕಂಪನಿಗಳಿಗೆ ಆಹ್ವಾನಿಸಲಾಯಿತು.

ನೀರಿನ ಘಟಕಕ್ಕೆ ಚಾಲನೆ: ರಾಜಾನುಕುಂಟೆ ಸರ್ಕಾರಿ ಶಾಲೆಯ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ಶುದ್ಧ ಕುಡಿಯುವ ನೀರಿನ ಘಟಕಕ್ಕೆ ಶಾಸಕ ವಿಶ್ವನಾಥ್ ಚಾಲನೆ ನೀಡಿದರು.

CONNECT ಕ್ಲಾಸಿಫೈಡ್ಸ್

BAND BOX
ಬ್ಯಾಂಡ್ ಬಾಕ್ಸ್
CLEANERS & DYERS
SINCE : 1968
Announce the Opening of their
22nd Showroom
in
VIDYARANYAPURA
Opp. Bangalore One
Contact : 080-43025187
Mob : 99005 - 22000
We are the Oldest and we are still the best

Indian Council for Cultural Relations
(Ministry of External Affairs, Government of India)
Zonal Office (South), Bengaluru
in collaboration with
Dept. of Youth Empowerment & Sports, Govt. of Karnataka
Presents
'Ak-Niet'
Folk choreographic ensemble of the
National Centre for Children and Youth & "Seitek"
from
KYRGYZSTAN

on Friday, 20th October, 2023 at 6.30 p.m.
at Yavanika, State Youth Centre,
Nrupathunga Road, Bengaluru - 560 001
All are welcome
Entry Free on a first- come, first-served basis

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

CHANGE OF NAME
WE, **RAHUL P. JAIN** and **RUCHI B. JAIN** R/a #1487, 7th Main Road, RPC Layout, Vijayanagar, Bangalore-560040 have Changed Our Minor Son's Name From **HRIDAAN R.** to **HRIDAAN PORWAD** (DOB: 14.06.2021) Vide Affidavit Dated 18.10.2023 Sworn Before Notary Mamatha N.K. Bangalore.

BUSINESS

Business Offers

Finance

NRI'S INVESTMENT
And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

Stores/ Purchase

FOR A New Furniture Showroom in Indiranagar, Applications are invited from any retail experienced candidates for the Manager, Assistant Manager and Sales Executive position. decordesigns00@gmail.com

PERSONAL

Announcements

OUR SUBSCRIBERS and guarantors this is for your information to further communication our old office of VVN CHITS (Karnataka) PRIVATE LIMITED, Lakshmi Chambers #178, 8th F Main, 3rd Block, Jayanagar Bengaluru 560011 has shifted our NEW ADDRESS IS No.10, 3rd Floor, 24th Main, 18th Cross, Puttenahalli, JP.Nagar, 7th Phase, Bengaluru 560078. This is for your reference and further communication. Contact 99456-45095/ 84310-25594 Email: vvnchits@gmail.com

PUBLIC NOTICE

TENDER NOTICE
FOR CONSTRUCTION WORKS AT PUEBLO VILLA PROJECT
Pueblo Villa Owners Co-Operative Society Ltd invites sealed tenders for providing construction works from Class (I) contractors.
Name of the work
Construction of Road in the project. Estimated cost is Rs. 75 lakhs. EMD : 75k. Application fee : 1500/-.
The contractors may visit the site and obtain tender forms from 22-10-2023 to 25-10-2023 and sealed tenders along with EMD in the form of DD may be submitted on 06.11.2023. on 5pm, Sealed tenders will be opened on 08.11.2023 at 11am in the society office in the presence of office bearers and contractors. MC decision is final.
for more details: PVOCSL, No.36/3, 1st floor, Naganathapura Village, Doddanagmangala Road, BBMP ward -191, Bangalore - 560100. Contact: 9341226213. email : pueblovillaoa@gmail.com

Change of Name

I, LAVANYA_K.R W/o.K.N Shravanth Kumar, R/a#B1204 Ohana Apartment Old Madras Road, Next HP Petrol Bunk, Bhattarahalli, Virgo Nagar Post, Bangalore-560049 Have Changed My Name to K.S LAVANYA vide`affidavit dated:17.10.2023 before`Notary K.B Sadhashivappa Bangalore

KUSUM BHALE RAO, Mother/o, 6497805X, SEP/ASH, BHALERAO NAGESH NARAYAN, Vill-Kalamb, Ambegaon, Pune, Maharashtra changed name KUSUM BHALE RAO to KUSUM NARAYAN BHALERAO, 18/10/2023, Notary K.V. Mani, Bangalore

PREETI DIVE, Wife/o, JC681785K, SUB/ASH, MITHLESH KUMAR, Vill-Jalaun, Uttar Pradesh changed name PREETI DIVE to PREETI, 17/10/2023, Notary K.V. Mani, Bangalore.

JOB OPPORTUNITIES

Architects

WANTED ARCHITECTS with 6 to 7 years of experience for an architect's office. Please contact 9449009325



For Details : 6364685716 / 9036658774 / Entry Free
Karnataka Chitrakala Parishath
Kumara Krupa Road, Bengaluru
Arts • Handicrafts • Handlooms • Home decor • Jewelers

NARAYAN, FATHER/O, 6497805X, SEP/ASH, BHALERAO NAGESH NARAYAN, Vill – Kalamb, Ambegaon, Pune, Maharashtra changed name NARAYAN to NARAYAN BHIMAJI BHALERAO, 18/10/2023, Notary K.V. Mani, Bangalore

I,HARSHA MENSINAKAI CHIDAMBARA S/o Late M.V.CHIDAMBARA, R/a No.126, 3rd 'E'Cross, Kasturinagar,NGEF-East, Bangalore-43 have changed my daughter's name from PRARTHANA to PRARTHANA HARSHA MENSINAKAI vide Affidavit dated:17-10-2023 sworn before Sri. R.S.Vijay, Notary Public,Govt. of India, Bangalore.

CHANGE OF NAME
I, **ARUNA NAYAK P @ MADHU NAYAK S,** Residing at A-308, Prakruthi Meadows, No. 122, Kashinagar, Amruthahalli, Bangalore-93, Declare that the above names pertain to me and henceforth I shall be knows as **MADHU NAYAK S** vide affidavit dt.18-02-2014, before Notary S K Manjunath,Bangalore.

I, SHARANJITH SHETTY KODMAN, S/o Balakrishna Kodman, residing at no-105 Baba Enclave, 6th Cross, 2nd Main, Ganganagar, Bengaluru-560032 passport No.L7078790 have changed my name to SHARANJITH SHETTY, vide affidavit dated:18-10-2023 before Notary G.B.Turamari, Bengaluru.

CHANGE OF NAME
I, **IBATTESAM ATTAR,** W/o Babu Ashapak Dhalait, R/at # 597, Attar Galli, Shindikurbet, Gokat Tq, Belagavi-591306, have changed my name to **IBATTESAM BABU DHALAIT** vide affidavit dt. 19-10-2023, before Notary B.V. Nagabhushana, Bengaluru, Henceforth I shall be known as **IBATTESAM BABU DHALAIT** only

CHANGE OF NAME
I, **JAY KUMAR,** R/at # 24, B-Street, Jayaraja Nagar, Halasuru, Bangalore-560008 have changed my name to **G. JAYA KUMAR** vide affidavit dt.18-10-2023, before Notary C.V. Earappa, Bangalore. Henceforth I shall be know as **G. JAYA KUMAR** only

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

DH DECCAN HERALD ಪ್ರಜಾವಾಣಿ
Classifieds
More value, more impact
REAL ESTATE
The 1st thing to do when Selling/Buying your Property
#1 PLACE YOUR AD HERE
www.dhclassifieds.com
BOOK NOW
Book your ad with us now! For more details contact:
+91 9886213331 | +91 9901641752 | +91 9845114560 | +91 9900428036 | +91 9731810277 | 080- 45557163/164

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ

ಅಲ್ಪಾವಧಿ ಸಂಧಾನ ಪ್ರಕಟಣೆ

ಉಲ್ಲೇಖ: ಸಂ:ಕರಾಸಾ/ಚಿಬವಿ/ಸಂ/ವಾ/1028/2023–24 ದಿನಾಂಕ: 17.10.2023

ಚಿಕ್ಕಬಳ್ಳಾಪುರ ವಿಭಾಗದ ವ್ಯಾಪ್ತಿಯ ಚಿಕ್ಕಬಳ್ಳಾಪುರ, ಚಿಂತಾಮಣಿ, ಶಿಡ್ಲಘಟ್ಟ ಮುಖ್ಯ/ಮಿನಿ, ಬಾಗೇಪಲ್ಲಿ, ಗುಡಿಬಂಡೆ, ಗೌರಿಬಿದನೂರು ಹಾಗೂ ದೊಡ್ಡಬಳ್ಳಾಪುರ ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ ವಾಣಿಜ್ಯ ಮಳಿಗೆಗಳಿಗೆ ಹಾಗೂ ಜಾಹೀರಾತು ಹೋರ್ಡಿಂಗ್ಸ್/ಪ್ಲಾಟ್‌ಫಾರಂ ಫಲಕಗಳ ಪ್ಯಾಕೇಜ್‌ಗಳಿಗೆ ಪರವಾನಗಿದಾರರನ್ನು ಆಯ್ಕೆ ಮಾಡಲು ದಿನಾಂಕ: 18.10.2023 ರಿಂದ ಸಂಧಾನ ಪ್ರಕಟಣೆಯ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಸಂಧಾನದ ಅರ್ಜಿ ಫಾರಂ, ಷರತ್ತು / ನಿಯಮಾವಳಿಗಳನ್ನು ದಿನಾಂಕ: 26.10.2023 ರ 15.00 ಗಂಟೆಯವರೆಗೆ ಈ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ವಿಭಾಗೀಯ ನಿಯಂತ್ರಣಾಧಿಕಾರಿ, ಕ.ರಾ.ರ.ಸಾ. ನಿಗಮ, ಚಿಕ್ಕಬಳ್ಳಾಪುರ ವಿಭಾಗ ಇವರ ಕಛೇರಿಯಲ್ಲಿ ದಿನಾಂಕ: 27.10.2023 ರಂದು ಸಮಯ 11.30 ಗಂಟೆಗೆ ನಡೆಯಲಿರುವ ಸಂಧಾನದಲ್ಲಿ ಭಾಗವಹಿಸಿ, ನಿಗಮದ ನಿಯಮಗಳನ್ನು ಪಾಲಿಸಿ ಪರವಾನಿಗೆದಾರರಾಗಿ ಆಯ್ಕೆಯಾಗಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ **ವಿಭಾಗೀಯ ಕಛೇರಿ, ಕರಾರಸಾ ನಿಗಮ, ಚಿಕ್ಕಬಳ್ಳಾಪುರ ವಿಭಾಗ** ರವರ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ವಿಭಾಗೀಯ ಸಂಚಲನಾಧಿಕಾರಿ ಮೊಬೈಲ್ ಸಂ. 7760990352 ಹಾಗೂ ವಿಷಯ ನಿರ್ವಾಹಕರ ಮೊಬೈಲ್ ಸಂ. 9380519303.

ಸಹಿ/– ವಿಭಾಗೀಯ ನಿಯಂತ್ರಣಾಧಿಕಾರಿ,
ವಾ.ಸಾ.ಸಂ.ಇ/ವಾಪ್ರ/1759/ಆಕಾರ್/2023–24 ಕ.ರಾ.ರ.ಸಾ. ನಿಗಮ, ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಉದ್ಯಮ)
ಗ್ರಾಮೀಣಾಭಿವೃದ್ಧಿ ಭವನ, 4 ಮತ್ತು 5ನೇ ಮಹಡಿ, ಆನಂದರಾವ್ ವೃತ್ತ , ಬೆಂಗಳೂರು–09
ಸಂಖ್ಯೆ: ಕೆಆರ್‌ಐಡಿಎಲ್/ಆಡಳಿತ/ಸಿಆರ್–ಕೋಲಾರ/ಬಿ.ಎನ್.ವಿ/2023–24(ಇವಿ–304) ದಿನಾಂಕ: 17.10.2023

ನೋಟೀಸು

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ ಸಂಸ್ಥೆಯಲ್ಲಿ ಸಹಾಯಕ ಅಭಿಯಂತರರು, ಗ್ರೇಡ್–2 ಎಂದು ಕೆಲಸ ನಿರ್ವಹಿಸುತ್ತಿದ್ದ ಶ್ರೀ ಬಿ.ಎನ್. ವಿಜಯಕುಮಾರ್ ಆದ ನೀವು ಸಂಸ್ಥೆಯ ಕೋಲಾರ ಉಪ ವಿಭಾಗದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಗ್ರೇಡ್–2 (ಪ್ರಭಾರ) ಎಂದು ಕರ್ತವ್ಯವನ್ನು ನಿರ್ವಹಿಸುತ್ತಿದ್ದ ಅವಧಿಯಲ್ಲಿ ನಡೆದಿದೆ ಎನ್ನಲಾದ ಆರ್ಥಿಕ ಅವ್ಯವಹಾರಗಳ ಕುರಿತಾಗಿ ಇಲಾಖಾ ವಿಚಾರಣೆಗೆ ಆದೇಶಿಸಿ, ವಿಚಾರಣೆಗೆ ಹಾಜರಾಗಲು ಸೂಚಿಸಿ ನೋಟೀಸುಗಳನ್ನು ನೀಡಿದ್ದರೂ ಕೂಡ ನೀವು ಇಲಾಖಾ ವಿಚಾರಣೆಗೆ ಹಾಜರಾಗದೇ ಗೈರು ಹಾಜರಾಗಿರುತ್ತೀರಿ. ಸದರಿ ಇಲಾಖಾ ವಿಚಾರಣೆಗೆ ಸಂಬಂಧಿಸಿದಂತೆ ಮುಂದಿನ ವಿಚಾರಣೆಯನ್ನು **ದಿನಾಂಕ: 03.11.2023ರ ಶುಕ್ರವಾರ ಬೆಳಿಗ್ಗೆ 11.30 ಗಂಟೆಗೆ** ಸಂಸ್ಥೆಯ ಸಭಾಂಗಣ–1 ರಲ್ಲಿ ನಿಗದಿಪಡಿಸಲಾಗಿದೆ. ಇಲಾಖಾ ವಿಚಾರಣೆಗೆ ನಿಗದಿಪಡಿಸಿರುವ ದಿನಾಂಕದಂದು ತಪ್ಪದೇ ಕಡ್ಡಾಯವಾಗಿ ವಿಚಾರಣೆಗೆ ಹಾಜರಾಗಲು ಸೂಚಿಸಲಾಗಿದೆ. ತಪ್ಪಿದಲ್ಲಿ ನಿಮ್ಮ ವಿರುದ್ಧದ ಆರೋಪಗಳಿಗೆ ನಿಮ್ಮ ಹೇಳಿಕೆಯೇನೂ ಇರುವುದಿಲ್ಲವೆಂದು ಭಾವಿಸಿ, ನಿಯಮಾನುಸಾರ ಏಕಪಕ್ಷೀಯ ತೀರ್ಮಾನವನ್ನು ಕೈಗೊಂಡು ನಿಮ್ಮ ವಿರುದ್ಧ ಶಿಸ್ತು ಕ್ರಮ ವಹಿಸಲಾಗುವುದು.

ಸಹಿ/- ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಐಡಿಎಲ್, ಬೆಂಗಳೂರು

ಗೆ,
ಶ್ರೀ ಬಿ.ಎನ್. ವಿಜಯಕುಮಾರ್,
ನಂ. 431/17, ಮುತ್ತುರಾಯಸ್ವಾಮಿ ಬಡಾವಣೆ,
ಹುಳಿಮಾವು, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560 076.

Azadi Ka Amrit Mahotsav | icmr | NCDIR | G20

ICMR-NATIONAL CENTRE FOR DISEASE INFORMATICS AND RESEARCH
Department of Health Research, Ministry of Health and Family Welfare, Government of India, Nirmal Bhawan- ICMR Complex, Poojanahalli Road, Kannamangala Post, Bengaluru-562110. Karnataka (India) Email: **adm.ncdir@gov.in**

Advertisement No. 6/2023

Applications are invited from eligible candidates for **WALK-IN-INTERVIEW** of various temporary/contractual project posts i.e. **Project Research Scientist - II (Medical), Project Research Scientist-I (Medical), Project Research Scientist - I (Non-Medical), Project Technical Support - III (Programmer), Project Technical Support - III (Statistics), Project Technical Support - III (MSW), Project Technical Support - III.** Detailed advertisement and other terms and conditions can be viewed/ downloaded from the websites **www.ncdirindia.org / www.icmr.nic.in**

Sd/-
Director

आई सी एम आर-राष्ट्रीय रोग सूचना विज्ञान और अनुसंधान केंद्र
स्वास्थ्य अनुसंधान विभाग, स्वास्थ्य और परिवार कल्याण मंत्रालय, भारत सरकार, निर्मल भवन- आईसीएमआर कॉम्प्लेक्स, पूजनहल्ली रोड, कन्नमंगला पोस्ट, बेंगलुरु-562110 कर्नाटक (भारत) Email: **adm.ncdir@gov.in**

विज्ञापन संख्या ६/२०२३

विभिन्न अस्थायी / संविदा परियोजना पदों के **वॉक-इन-इंटरव्यू (प्रवेश साक्षात्कार) के लिए पात्र उम्मीदवारों से आवेदन आमंत्रित किए जाते हैं अर्थात परियोजना अनुसंधान वैज्ञानिक-II (चिकित्सा), परियोजना अनुसंधान वैज्ञानिक-I (चिकित्सा), परियोजना अनुसंधान वैज्ञानिक-I, (गैर-चिकित्सा), परियोजना तकनीकी सहायक-I (प्रोग्रामर), परियोजना तकनीकी सहायक-III (सांख्यिकी), परियोजना तकनीकी सहायक-III (एमएसडब्ल्यू), परियोजना तकनीकी सहायक-III** । विस्तृत विज्ञापन और अन्य नियम व शर्तें वेबसाइटों से देखी / डाउनलोड की जा सकती हैं **www.ncdirindia.org / www.icmr.nic.in**

हस्ताक्षरित/-
निदेशक

ವ್ಯಕ್ತಿಗೆ ಹಸುವಿನ ಸ್ನಾಯುರಜ್ಜು ಅಳವಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭುಜದ ಮೂಳೆ ಮತ್ತು ಸ್ನಾಯುಗಳಲ್ಲಿ ಸವೆತ ಉಂಟಾಗಿ, ಸ್ನಾಯುರಜ್ಜು ಗಾಯದಿಂದ ಬಳಲುತ್ತಿದ್ದ ಇಲ್ಲಿನ 44 ವರ್ಷದ ವ್ಯಕ್ತಿಯೊಬ್ಬರಿಗೆ ಹಸುವಿನ ಸ್ನಾಯುರಜ್ಜು ಅಳವಡಿಸಲಾಗಿದೆ.

ಫೋರ್ಟಿಸ್ ಆಸ್ಪತ್ರೆಯ ವೈದ್ಯರು ಮೂಳೆ ಚಿಕಿತ್ಸಾ ವಿಭಾಗದ ನಿರ್ದೇಶಕ ಡಾ. ರಘು ನಾಗರಾಜ್ ನೇತೃತ್ವದಲ್ಲಿ ಈ ಶಸ್ತ್ರಚಿಕಿತ್ಸೆ ನಡೆಸಿದ್ದಾರೆ.

'ಐಟಿ ಉದ್ಯಮಿ ಹಾಗೂ ಕ್ರಿಕೆಟ್ ಆಟಗಾರರಾಗಿದ್ದ ವ್ಯಕ್ತಿ, ಹಲವು ತಿಂಗಳಿನಿಂದ ಭುಜದ ಮೂಳೆ ನೋವು ಅನುಭವಿಸುತ್ತಿದ್ದರು. ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾದಾಗ ಭುಜದ ಸ್ನಾಯುರಜ್ಜುವಿಗೆ ಹಾನಿಯಾಗಿರುವುದು ತಿಳಿದು ಬಂದಿತು. ಹೀಗಾಗಿ, ಅವರಿಗೆ ಹಸುವಿನ ಕಾಲಿನ ಹಿಂಭಾಗದಲ್ಲಿರುವ ಸ್ನಾಯುರಜ್ಜುವನ್ನು ಬಳಸಿಕೊಂಡು ಶಸ್ತ್ರಚಿಕಿತ್ಸೆ ನಡೆಸಲಾಯಿತು. ಈ ಶಸ್ತ್ರಚಿಕಿತ್ಸೆಯಿಂದ ಯಾವುದೇ ಅಡ್ಡ ಪರಿಣಾಮವಿಲ್ಲ. ಹೊಸ ಸ್ನಾಯುರಜ್ಜು ಬೆಳೆಯುವ ವೇಳೆಗೆ, ಅಂದರೆ 6-8 ತಿಂಗಳಲ್ಲಿ ಹಸುವಿನ ಸ್ನಾಯುರಜ್ಜು ಸಂಪೂರ್ಣ ಕರಗಲಿದೆ. ಈ ಚಿಕಿತ್ಸೆ ಭುಜದ ನೋವಿನಿಂದ ಬಳಲುವವರಿಗೆ ವರದಾನವಾಗಿದೆ' ಎಂದು ಡಾ. ರಘು ನಾಗರಾಜ್ ತಿಳಿಸಿದ್ದಾರೆ.

'ಸಾಮಾನ್ಯವಾಗಿ 50 ವರ್ಷ ಮೇಲ್ಪಟ್ಟವರಲ್ಲಿ ಭುಜದ ನೋವು ಹಾಗೂ ಸ್ನಾಯುಗಳ ಸೆಳೆತ ಕಂಡು ಬರುತ್ತದೆ. ಈ ರೀತಿಯ ಪ್ರಕರಣಗಳಿಗೆ ಶಸ್ತ್ರಚಿಕಿತ್ಸೆ ನಡೆಸುವುದು ಕಷ್ಟಸಾಧ್ಯ. ಆದರೆ, ಈ ಸ್ನಾಯುರಜ್ಜು ಗಾಯವಾದವರಿಗೆ ಎಮ್ಮೆ, ಹಸುಗಳ ಕಾಲಿನ ಹಿಂಭಾಗದಲ್ಲಿರುವ ಸ್ನಾಯುರಜ್ಜು ಪಡೆದು, ಅಳವಡಿಸಬಹುದು' ಎಂದು ಹೇಳಿದ್ದಾರೆ.

ವಿದ್ಯುತ್ ವ್ಯತ್ಯಯ ನಾಳೆಯಿಂದ

ಬೆಂಗಳೂರು: ಅಂಜನಾಪುರ ಹಾಗೂ ಜಯದೇವ ವಿದ್ಯುತ್ ನಿರ್ವಹಣಾ ಕೇಂದ್ರದಲ್ಲಿ ನಿರ್ವಹಣೆ ಕಾಮಗಾರಿ ಕೈಗೊಂಡಿರುವುದರಿಂದ ಇದೇ 20 ಮತ್ತು 21ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 3ಗಂಟೆವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

20ಕ್ಕೆ ವ್ಯತ್ಯಯವಾಗುವ ಸ್ಥಳಗಳು: ಆವಲಹಳ್ಳಿ, ನಂದಿ ಗಾರ್ಡನ್ ಅಪಾರ್ಟ್‌ಮೆಂಟ್‌ಗಳು, ಅಂಜನಾಪುರ ಗ್ರಾಮ, ರಾಯಲ್ ಲೇಕ್ ಫ್ರಂಟ್ ವ್ಯೂ ರೆಸಿಡೆನ್ಸಿ, ಬ್ರೂಕ್ಸ್ ಲೇಔಟ್, ದೀಪಕ್ ಲೇಔಟ್, ಶ್ರೀನಿವಾಸ ಬ್ಯಾಂಕ್ ಲೇಔಟ್, ತಲಘಟ್ಟಪುರ, ವಾಜರಹಳ್ಳಿ, ಶೋಭಾ ಅಪಾರ್ಟ್‌ಮೆಂಟ್, ಕೆಎಸ್‌ಐಟಿ ಕಾಲೇಜು, ನೇಕಾರರ ಕಾಲೊನಿ, ಪುರವಂಕರ ಅಪಾರ್ಟ್‌ಮೆಂಟ್, ಅಮೃತನಗರ, ವಡ್ಡರಪಾಳ್ಯ, ಕೆಂಬತ್ತಹಳ್ಳಿ, ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

21ಕ್ಕೆ ವ್ಯತ್ಯಯ: ಬಿಳೆಕಹಳ್ಳಿ, ರಂಕಾ ರಸ್ತೆ, ಎನ್.ಎಸ್. ಪಾಳ್ಯ, ಅನುಗ್ರಹ ಲೇಔಟ್, ವಿಜಯ ಬ್ಯಾಂಕ್ ಲೇಔಟ್ 1ನೇ ಭಾಗ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.

ನಂ: ಬೆಂಅಪ್ರಾ/ನಯೋಸ/CLU-57/21–22/1521/2023–24 ದಿನಾಂಕ: 18.10.2023

ಪ್ರಕಟಣೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಪರಿಷ್ಕೃತ ಮಹಾಯೋಜನೆ–2015 ಸರ್ಕಾರದ ಆದೇಶ ಸಂಖ್ಯೆ: ಯುಡಿಡಿ 540 ಬೆಂಅಸೇ 2004, ದಿನಾಂಕ: 22.06.2007ರಲ್ಲಿ ಅನುಮೋದನೆಯಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69(2)ರ ಅಡಿಯಲ್ಲಿ ಪ್ರಶ್ನಿತ ಜಮೀನುಗಳ ಸಾರ್ವಜನಿಕ/ಅರೆ ಸಾರ್ವಜನಿಕ ಭೂಉಪಯೋಗ ರದ್ದಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 69(4) ರನ್ವಯ ಈ ಕೆಳಕಂಡ ಜಮೀನನ್ನು ವಸತಿ ಉಪಯೋಗಕ್ಕಾಗಿ ಭೂಉಪಯೋಗ ನಿಗದಿಪಡಿಸಲು ಅರ್ಜಿದಾರರು ಕೋರಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ರ ಕಲಂ 69(3)ರ ಅಡಿಯಲ್ಲಿ ಈ ಕೆಳಕಂಡಂತೆ ಭೂಉಪಯೋಗ ನಿಗದಿಪಡಿಸುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಸಲಹೆ/ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಸಲಹೆ/ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಚ.ಮೀ.ಗಳಲ್ಲಿ	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	M/s. Vinayakaiah Builders & Developers Pvt. Ltd. Rep. by M.D. Sri Venkateshwaralu Murama Reddy	ಬೆಂಗಳೂರು ದಕ್ಷಿಣ	ಉತ್ತರಹಳ್ಳಿ	ಗೊಟ್ಟಿಗೆರೆ	45/9	180.25	ಸಾರ್ವಜನಿಕ/ ಅರೆ ಸಾರ್ವಜನಿಕ	ವಸತಿ
					57/2	1979.37		
					57/3	225.68		
					ಒಟ್ಟು	**2385.30**		

BDA/PRO/CLU-34/2023-24 ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

₹120 ಕೋಟಿ ಕೆಲಸ • ಪ್ರಮುಖ ಕಟ್ಟಡಗಳ ನಿರ್ವಹಣೆಯಲ್ಲಿ 'ಅಕ್ರಮ'?

ಎಂಜಿನಿಯರುಗಳೇ ಬೇನಾಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರದ ಪ್ರಮುಖ ಕಟ್ಟಡಗಳ ನಿರ್ವಹಣೆಯ ಹೊಣೆ ಹೊತ್ತ ಲೋಕೋಪಯೋಗಿ ಇಲಾಖೆಯ ನಂ.1 ಕಟ್ಟಡಗಳ ವಿಭಾಗದಲ್ಲಿ ವಾರ್ಷಿಕ ₹120 ಕೋಟಿಗೂ ಹೆಚ್ಚು ಮೊತ್ತದ ಕಾಮಗಾರಿ ನಡೆಯುತ್ತಿದ್ದು, ಎಂಜಿನಿಯರುಗಳೇ ತಮ್ಮ ನೆಂಟರಿಷ್ಟರ ಹೆಸರಿನಲ್ಲಿ ಬೇನಾಮಿ ನಡೆಸುತ್ತಿದ್ದಾರೆ ಎಂದು ಗುತ್ತಿಗೆದಾರರು ದೂರಿದ್ದಾರೆ.

'ಪ್ರಮುಖ ಕಟ್ಟಡಗಳ ಸುಣ್ಣ-ಬಣ್ಣ, ಶೌಚಾಲಯಗಳ ನಿರ್ವಹಣೆ, ವಿದ್ಯುತ್ ಪರಿಕರಗಳು, ಶೌಚಾಲಯ, ಅಲಂಕಾರಿಕ ಸಾಮಗ್ರಿಗಳು ಹೀಗೆ ಎಲ್ಲವೂ ಈ ವಿಭಾಗದ ವ್ಯಾಪ್ತಿಯಲ್ಲಿದೆ. ಸರ್ಕಾರದ ಪ್ರಮುಖರ ವಸತಿಗೃಹ, ಕಚೇರಿಗಳ ನಿರ್ವಹಣೆ ಆಯಾ ಸಚಿವರ ಆಸಕ್ತಿಗೆ ಅನುಗುಣವಾಗಿ ಬದಲಾಗುತ್ತಿರುತ್ತದೆ. ಹೀಗಾಗಿ, ಟೆಂಡರ್ ಕರೆಯದೇ 'ತುರ್ತು ಕಾಮಗಾರಿ' ಹೆಸರಿನಲ್ಲಿ ಕಾಮಗಾರಿಗಳನ್ನು ನಡೆಸಲಾಗುತ್ತದೆ. ಬಳಿಕ, ಹೊಸ ಕಾಮಗಾರಿಯ ಬಿಲ್ ಮಾಡುವಾಗ 'ಹೊಂದಾಣಿಕೆ'ಗಾಗಿ ಹಿಂದಿನ ವರ್ಷದ ಕಾಮಗಾರಿಗಳನ್ನು ಸೇರಿಸಿ ಬಿಲ್ ಮಾಡುವ ಪದ್ಧತಿಯೂ ಇದೆ' ಎನ್ನುತ್ತಾರೆ ಹೆಸರು ಬಹಿರಂಗಪಡಿಸಲು ಬಯಸದ ಅಧಿಕಾರಿಯೊಬ್ಬರು.

ತುರ್ತು ಕಾಮಗಾರಿ ಹೆಸರಿನಲ್ಲಿ ಯಾವಾಗ ಬೇಕಾದರೂ ಕೆಲಸ ನಡೆಸುವ, ಸಂಸದರು– ಶಾಸಕರ ಕಾಟವಿಲ್ಲದೇ ಬಿಲ್ ಮಾಡುವ ಅವಕಾಶ ಇರುವ ನಂ.1 ಕಟ್ಟಡ ವಿಭಾಗದ ಕಾರ್ಯಪಾಲಕ ಎಂಜಿನಿಯರ್(ಇ.ಇ) ಹುದ್ದೆಯೂ ಲೋಕೋಪಯೋಗಿ ಇಲಾಖೆಯ ಮುಖ್ಯ ಎಂಜಿನಿಯರ್ ಹುದ್ದೆಗಿಂತ ಪ್ರಭಾವಶಾಲಿಯಾದುದು.

ಈ ಹುದ್ದೆಯಲ್ಲಿ ಎರಡು ವರ್ಷದಿಂದ ಇರುವ ಪ್ರಕಾಶ್, ತಮ್ಮ ಕಾರ್ಯಾವಧಿಯ ಉದ್ದಕ್ಕೂ ಬೆಂಗಳೂರಿನಲ್ಲೇ ಇರುವ ನಂ.1 ಮತ್ತು ನಂ.2 ವಿಭಾಗದಲ್ಲೇ ಇದ್ದಾರೆ. ನಂ.2 ವಿಭಾಗದ ನಂ.8 ಉಪವಿಭಾಗದಲ್ಲಿ ಸಹಾಯಕ ಎಂಜಿನಿಯರ್(ಎಇ) ಆಗಿ ಸೇರಿದ ಇವರು ಸಹಾಯಕ ಕಾರ್ಯಪಾಲಕ ಎಂಜಿನಿಯರ್(ಎಇಇ) ಹುದ್ದೆಗೆ ಬಡ್ತಿ ಪಡೆದು ನಂ.8ರ ಉಪವಿಭಾಗಕ್ಕೆ ಬಂದರು. ಅಲ್ಲಿಂದ ನಂ.1 ಕಟ್ಟಡ ವಿಭಾಗದ ನಂ.6 ಉಪವಿಭಾಗಕ್ಕೆ ವರ್ಗಾವಣೆಯಾಗಿ, ಬಳಿಕ ನಂ.1 ಇ.ಇ. ಬಡ್ತಿ ಪಡೆದರು. ಕೆಳಹಂತದಿಂದ ಬಂದ ಇವರು, ತಮ್ಮ ಸಂಬಂಧಿಗಳ ಹೆಸರಿನಲ್ಲಿ ಬೇನಾಮಿ ಗುತ್ತಿಗೆ ನಡೆಸುತ್ತಾರೆ ಎಂದು ಗುತ್ತಿಗೆದಾರರು ದೂರಿದ್ದಾರೆ.

ಕಡಿಮೆ ದರದ ಬಿಡ್: ನಿರ್ವಹಣೆಯ ಗುತ್ತಿಗೆಯನ್ನು ನಿಯಮದಂತೆ ಕರೆಯಲಾಗುತ್ತದೆ. ಆದರೆ, ಕಾರ್ಯಾದೇಶ ನೀಡುವಾಗ ನಿಯಮವನ್ನು ಉಲ್ಲಂಘಿಸಲಾಗಿದೆ. ನಿಯಮದಂತೆ ಕಡಿಮೆ ದರ ನಮೂದಿಸಿದವರಿಗೆ ಟೆಂಡರ್ ನೀಡಬೇಕು. ಇ-ಪ್ರೊಕ್ಯೂರ್‌ಮೆಂಟ್ ಜಾಲತಾಣದಲ್ಲಿ ಕರೆದ ಟೆಂಡರ್‌ಗೆ ಹೊರಗಿನ ಗುತ್ತಿಗೆದಾರರು ಹಾಕಿದ ಮೊತ್ತಕ್ಕಿಂತ ತಮ್ಮ ಸಂಬಂಧಿಗಳು, ಆಪ್ತರಾದ ಸಂಜಯದೀಪ್, ಮನೀಷ್ ಹಾಗೂ ಶ್ರೀಕಾಂತ್ ಹೆಸರಿನಲ್ಲಿ ಬಿಡ್ ಮಾಡಿಸಿದ್ದರು. ಟೆಂಡರ್‌ಗೆ ಅರ್ಜಿ ಸಲ್ಲಿಸುವಾಗ, ಗುತ್ತಿಗೆ ಅರ್ಹತೆಗಾಗಿ ಹಿಂದೆ ನಿರ್ವಹಿಸಿದ ಅದೇ ಮಾದರಿಯ ಕಾಮಗಾರಿಯ ದೃಢೀಕರಣ ಪತ್ರ (ವರ್ಕ್‌ಡನ್ ಸರ್ಟಿಫಿಕೇಟ್) ಲಗತ್ತಿಸಿರಬೇಕು. ನಂ.1 ಕಟ್ಟಡ ವಿಭಾಗದಲ್ಲಿ ಈ ದೃಢೀಕರಣ ಪತ್ರ ನೀಡದೇ ಇರುವವರಿಗೆ ಟೆಂಡರ್ ನೀಡಿರುವ ದಾಖಲೆ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

ಇಲ್ಲಿಯವರೆಗೆ ಬೇನಾಮಿ ಹೆಸರಿನಲ್ಲಿ ನಿರ್ವಹಣಾ ಕಾಮಗಾರಿ ನಡೆಸುತ್ತಿದ್ದ ಈ ವಿಭಾಗದಲ್ಲಿ, ವಿಧಾನಸೌಧದ ಪೂರ್ಣ ನಿರ್ವಹಣೆಯನ್ನು ಕೆಟಿಪಿಪಿ ಕಾಯ್ದೆಯಡಿ ಸೆಕ್ಷನ್ 4-ಜಿ ಅಡಿಯಲ್ಲಿ ವಿನಾಯ್ತಿ ನೀಡುವ ಆದೇಶ ತರುವ ಯತ್ನ ನಡೆಯುತ್ತಿದೆ ಎಂಬ ದೂರುಗಳಿವೆ.

ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ಪ್ರಕಾಶ್ ಅವರಿಗೆ ಕರೆ ಮಾಡಿದರೆ ಅವರ ದೂರವಾಣಿ ಸಂಪರ್ಕಕ್ಕೆ ಸಿಗಲಿಲ್ಲ.

ಹೂವಿನ ಹಾರಕ್ಕೆ ₹10 ಲಕ್ಷ!

ವಿಧಾನಸೌಧ ಆವರಣದಲ್ಲಿರುವ ಗಣ್ಯರ ಪ್ರತಿಮಗಳಿಗೆ ಹೂವಿನ ಹಾರ ಹಾಕುವ ಟೆಂಡರ್ ಅನ್ನು ₹13 ಲಕ್ಷಕ್ಕೆ ಕರೆಯಲಾಗಿತ್ತು. ಅದನ್ನು ಕೊನೆಗೆ ₹10 ಲಕ್ಷಕ್ಕೆ ಇಳಿಸಲಾಗಿದೆ.

'ಈ ಗಣ್ಯರ ಪ್ರತಿಮೆಗಳಿಗೆ ನಿತ್ಯವೂ ಹಾರಹಾಕುವುದಿಲ್ಲ. ಆಗಸ್ಟ್ 15, ಗಣರಾಜ್ಯ ದಿನ, ನವೆಂಬರ್ 1 ಹಾಗೂ ಗಣ್ಯರ ಜಯಂತಿಯ ದಿನವಷ್ಟೇ ಹಾರ ಹಾಕಲಾಗುತ್ತದೆ. ಒಂದು ದಿನ ಎಲ್ಲ ಪ್ರತಿಮೆಗಳಿಗೆ ಹಾರಹಾಕಲು ಹೆಚ್ಚೆಂದರೆ ₹5 ಸಾವಿರ–₹6 ಸಾವಿರ ವೆಚ್ಚವಾಗಬಹುದು. ಎಲ್ಲ ಲೆಕ್ಕ ಹಾಕಿದರೂ ₹4 ಲಕ್ಷ ದಾಟುವುದಿಲ್ಲ. ಇದರ ಜತೆಗೆ, ವಿದ್ಯುದ್ದೀಪ, ಫ್ಯಾನ್, ಪೀಠೋಪಕರಣಗಳ ಬದಲಾವಣೆ ಹಾಗೂ ನಿರ್ವಹಣೆಯಲ್ಲಿ ಕೂಡ ಇದೇ ಮಾದರಿಯಲ್ಲಿ ವೆಚ್ಚ ಮಾಡಲಾಗುತ್ತಿದೆ' ಎಂದು ಹೆಸರು ಬಹಿರಂಗಪಡಿಸಲು ಬಯಸದ ನಿವೃತ್ತ ಅಧೀಕ್ಷಕ ಎಂಜಿನಿಯರ್ ಒಬ್ಬರು ಹೇಳಿದರು.

ನಂ01 ವಿಭಾಗಕ್ಕೆ ಯಾವ ಕಟ್ಟಡಗಳು

ವಿಧಾನಸೌಧ, ವಿಕಾಸಸೌಧ, ಬಹುಮಹಡಿ ಕಟ್ಟಡ, ಶಾಸಕರ ಭವನ, ಹೈಕೋರ್ಟ್, ಕುಮಾರಕೃಪಾ ಅತಿಥಿಗೃಹ, ದೆಹಲಿಯ ಕರ್ನಾಟಕ ಭವನ, ವಿಶ್ವೇಶ್ವರಯ್ಯ ಗೋಪುರ.

ಮುಖ್ಯಮಂತ್ರಿ ಸೇರಿದಂತೆ ಸಚಿವರ ವಸತಿಗೃಹಗಳು, ನ್ಯಾಯಮೂರ್ತಿಗಳಿಗೆ ನೀಡಲಾದ ವಸತಿಗೃಹಗಳು, ನ್ಯಾಯಾಂಗ ಬಡಾವಣೆಯ ವಸತಿಗೃಹಗಳು

ಚಲ್ಲಘಟ್ಟ ರೈಲ್ವೆ ಕೆಳಸೇತುವೆ ನಿರ್ಮಾಣ ಕಾರ್ಯ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಬಿಡಿಎ ಬಡಾವಣೆಯಲ್ಲಿ ಹಾದು ಹೋಗುವ ಮೈಸೂರು ರಸ್ತೆ-ಮಾಗಡಿ ರಸ್ತೆ ಸಂಪರ್ಕಿಸುವ ಎಂಎಆರ್ ರಸ್ತೆ ಯಲ್ಲಿ ಚಲ್ಲಘಟ್ಟ ಬಳಿ ರೈಲ್ವೆ ಕೆಳ ಸೇತುವೆ ಕಾಮಗಾರಿ ಆರಂಭಗೊಂಡಿದೆ.

ಕೆಂಗೇರಿ ಮತ್ತು ಹೆಜ್ಜಾಲ ರೈಲು ನಿಲ್ದಾಣಗಳ ನಡುವೆ ಬರುವ ಈ ಕೆಳ ಸೇತುವೆಯು ಮೆಟ್ರೊ ನಿರ್ಮಿಸುತ್ತಿರುವ ಸುರಂಗ ಮಾರ್ಗವನ್ನು ಸಂಪರ್ಕಿಸಲಿದೆ. ಈ ಕಾಮಗಾರಿಗೆ ನೈರುತ್ಯ ರೈಲ್ವೆಯಿಂದ ಬಿಡಿಎ ಅನುಮತಿ ಪಡೆದುಕೊಂಡಿದೆ.

ಹೊಸದಾಗಿ 10.7 ಕಿ.ಮೀ. ಮೇಜರ್ ಆರ್ಟೀರಿಯರ್ ರೋಡ್ (ಎಂಎಆರ್) ನಿರ್ಮಾಣಗೊಳ್ಳಲಿದ್ದು, ಅದರ ಭಾಗವಾಗಿ ₹ 39 ಕೋಟಿ ವೆಚ್ಚದಲ್ಲಿ ಬಿಡಿಎ ಆರ್‌ಯುಬಿ ನಿರ್ಮಿಸುತ್ತಿದೆ. ಎರಡೂ ಬದಿಗಳಲ್ಲಿ ಸರ್ವಿಸ್ ರಸ್ತೆ ಮತ್ತು ತಡೆಗೋಡೆಗಳ ಸಹಿತ ನಿರ್ಮಾಣಗೊಳ್ಳುತ್ತಿರುವ ಈ ಕಾಮಗಾರಿ ಆರು ತಿಂಗಳಲ್ಲಿ ಪೂರ್ಣ ಗೊಳ್ಳುವ ನಿರೀಕ್ಷೆಯಿದೆ ಎಂದು ಬಿಡಿಎ ಅಧಿಕಾರಿಗಳು ತಿಳಿಸಿದ್ದಾರೆ.

ನಿಧಾನಗತಿ: ಆರು ಪಥದ ಈ ರಸ್ತೆಗೆ 321 ಎಕರೆ ಜಮೀನು ಸ್ವಾಧೀನ ವಾಗಬೇಕಿತ್ತು. ಹಲವರು ನ್ಯಾಯಾಲಯ ದಲ್ಲಿ ವ್ಯಾಜ್ಯ ಹೂಡಿದ್ದರಿಂದ ಭೂ ಸ್ವಾಧೀನ ಪ್ರಕ್ರಿಯೆ ವಿಳಂಬವಾಗಿತ್ತು. ಉಪಮುಖ್ಯಮಂತ್ರಿ ಡಿ.ಕೆ. ಶಿವ ಕುಮಾರ್ ಯೋಜನೆ ಪರಿಶೀಲನೆ ನಡೆಸಿ ಕೆಲವು ಅಡೆತಡೆಗಳನ್ನು ತೆರವುಗೊಳಿಸಿ ದ್ದರು. ಸೂಳಿಕೆರೆಯಲ್ಲಿ ಬಿಡಿಎಗೆ ಸುಮಾರು ನಾಲ್ಕು ಎಕರೆ ಅರಣ್ಯ ಭೂಮಿ ಅಗತ್ಯವಿದೆ. ಮುಂದಿನ ತಿಂಗಳಲ್ಲಿ ಸ್ವಾಧೀನ ಪ್ರಕ್ರಿಯೆ ಆರಂಭವಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಚಲ್ಲಘಟ್ಟದಿಂದ ತಾವರಕೆರೆವರೆಗಿನ ಸುಮಾರು ನಾಲ್ಕು ಕಿ.ಮೀ ರಸ್ತೆ ಕಾಮಗಾರಿ ಮುಂದಿನ 8 ತಿಂಗಳಲ್ಲಿ ಪೂರ್ಣಗೊಳ್ಳಲಿದೆ. ಕೆಲವು ವ್ಯಾಜ್ಯಗಳು ಇತ್ಯರ್ಥವಾಗಿದ್ದು, ಮಾಚೋಹಳ್ಳಿ ಕೈಗಾರಿಕಾ ಜಮೀನು ವಿವಾದ ಸಹಿತ ಹಲವು ಕಡೆಗಳ ಜಮೀನಿಗೆ ಸಂಬಂಧಿಸಿದ ದಾವೆಗಳು ನ್ಯಾಯಾಲಯದಲ್ಲಿವೆ. ಅವೆಲ್ಲ ಇತ್ಯರ್ಥವಾದರೆ ಕಾಮಗಾರಿ ಚುರುಕುಗೊಳ್ಳಲಿದೆ.

ಆಯುಧ ಪೂಜೆ: ರಾಸಾಯನಿಕ ಬಣ್ಣ ಬಳಸದಂತೆ ಸೂಚನೆ

ಬೆಂಗಳೂರು: ವಿಧಾನಸೌಧ, ವಿಕಾಸಸೌಧ ಮತ್ತು ಬಹುಮಹಡಿ ಕಟ್ಟಡಗಳಲ್ಲಿ ಆಯುಧ ಪೂಜೆಯಲ್ಲಿ ರಾಸಾಯನಿಕಯುಕ್ತ ಬಣ್ಣಗಳನ್ನು ಬಳಸದಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಬುಧವಾರ ಸುತ್ತೋಲೆ ಹೊರಡಿಸಿದೆ.

ವಿಧಾನಸೌಧ, ವಿಕಾಸಸೌಧ ಮತ್ತು ಬಹುಮಹಡಿ ಕಟ್ಟಡಗಳು ಪಾರಂಪರಿಕ ಕಟ್ಟಡಗಳಾಗಿವೆ. ಈ ಕಟ್ಟಡಗಳಲ್ಲಿ ಆಯುಧ ಪೂಜೆ ಮಾಡುವಾಗ ಕುಂಬಳಕಾಯಿ ಮತ್ತು ರಂಗೋಲಿಗಳಲ್ಲಿ ರಾಸಾಯನಿಕ ಮಿಶ್ರಿತವಾದ ಬಣ್ಣ, ಅರಿಶಿನ, ಕುಂಕುಮ ಮತ್ತು ಸುಣ್ಣವನ್ನು ಬಳಸಬಾರದು ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

Bangalore:- **Garuda Wheels: Hoskote** - 9035040171; **Whitefield Yamaha: Whitefield** - 9606061054; **Mahadevapura** - 9148086668; **Motoworld: Bommanahalli** - 08069643030; **Chandapura** - 08069643030; **Bangalore Wheels: Rajajinagar** - 9964156618; **Vijayanagar** - 9611920002; **Malathahalli** - 9916610017; **Kengeri** - 9916610022; **Perfect Riders: Lalbagh Road** - 8497816000, **Jayanagar** - 8497816000; **Pacer Yamaha: Hebbal** - 6360237411; **Kalyan Nagar** - 9902607629; **Rr.nagar** - 7624818307, **Vidyaranyapura** - 9036690334; **Vinayak Motors: Domlur** - 9591072222, **Kormangala** - 9035961010; **Laxmi International: Bannerghatta Road** - 9739364819; **Chandan Motors: Banashankari** - 9606861911; **Geetha Motors - Nelamangala** - 7619628882; **Peenya** - 895195456;. **Panache Enterprises: Indiranagar** - 9844011961; **Marathahalli** - 9844011961; **Yamaha Automotives: K R Puram** - 8088448844; **Srijaya Motors: Yalahanka** - 7406622213/18; **Anurag Motors: Bull Temple Road** - 9845151508; **Sree Geetha Motors: Tumkur** - 6364885726; **Sri Rv Advent Ride: Kolar** - 9071374827; **Xtreme Motors: Chikaballapur** - 9353279001; **Yamaha Bike Corner: Varthur - Touch Yamaha** - 9986547353; **Anekal: Anekal Yamaha Motors** - 9972909455; **Devanahalli: Nandi Bikes** - 9739030606; **Magadi: Sri Narashima Motors** - 9482090890; **Tiptur: Jenukallu Yamaha** - 7892862641; **Mulbagal: Sri RV Advent Ride** - 9071374830; **Kunigal: Manjunathaswamy Yamaha** - 7411979755; **Chintamani: Xtreme Motors** - 9353279001; **Attibele: Moto World** - 8884452700; **Dommasandra: Moto World** - 8884452899.

Sri Devaraj Urs Educational Trust &
R L Jalappa Group of Institutions
pays tributes to

Late Sri R L Jalappa ji,

FOUNDER CHAIRMAN, SDUET.

Celebration of Founder's Day on 19th October 2023
on the occasion of 98th birthday of Sri R L Jalappa ji
Time & Venue: 11:00am onwards,
Silver Jubilee Auditorium , SDUAHER, Tamaka, Kolar

Honb'leTrustees

Sri G H Nagaraja
President

Sri J Rajendra
Vice President

Sri KG Hanumantha Raju
Secretary

Sri Rajesh N Jagdale

Sri N Vinay

Smt Mrunalini

Sri R Harishchandra

Sri H Prakash

Dr Yathindra

Sri Dharmaveera M S

SRI DEVARAJ URS ACADEMY OF HIGHER EDUCATION AND RESEARCH
SRI DEVARAJ URS MEDICAL COLLEGE
R.L. JALAPPA HOSPITAL AND RESEARCH CENTRE
DEVARAJ URS EDUCATIONAL TRUST PHARMA
SRI DEVARAJ URS SCHOOL/COLLEGE OF NURSING
R.L. JALAPPA CENTRAL SCHOOL
R.L. JALAPPA INSTITUTE OF TECHNOLOGY
SRI DEVARAJ URS INTERNATIONAL RESIDENTIAL SCHOOL
SRI DEVARAJ URS HIGH SCHOOL & PU COLLEGE
SRI DEVRAJ URS DEGREE COLLEGE
R.L. JALAPPA INDUSTRIAL TRAINING INSTITUTE
R.L. JALAPPA POLYTECHNIC

From:
Vice chancellor, Staff & Students of
SDUAHER, Kolar
Staff and Students of R L Jalappa Group of
Institutions,
Doddaballapura

ದೇಶದ ಅತಿ ಎತ್ತರದ ಸ್ಕೈ ಡೆಕ್ ನಿರ್ಮಾಣ ಪ್ರಸ್ತಾವದ ಬಗ್ಗೆ ಪರ ವಿರೋಧದ ಚರ್ಚೆ

‘ಗೋಪುರದಿಂದ ರಸ್ತೆಗುಂಡಿ ನೋಡಬೇಕೆ?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾನಿನಿಂದ ಬೆಂಗಳೂರು ಸೌಂದರ್ಯವನ್ನು ಕಣ್ತುಂಬಿಕೊಳ್ಳಲು ಸಾಧ್ಯವಾಗುವಂತಹ ದೇಶದ ಅತೀ ಎತ್ತರದ ವೀಕ್ಷಣಾ ಗೋಪುರವನ್ನು ನಗರದಲ್ಲಿ ನಿರ್ಮಿಸುವ ಪ್ರಸ್ತಾವನೆ ಸಾಮಾಜಿಕ ಜಾಲತಾಣದಲ್ಲಿ ಪರ ವಿರೋಧದ ಚರ್ಚೆಗೆ ಗ್ರಾಸವಾಗಿದೆ.

ಆಸ್ಟ್ರಿಯಾದ ಕೂಪ್ ಹಿಮ್ಮೆಲ್ಬ್ (ಎಲ್) ಎಯು ಸಂಸ್ಥೆಯು ವಿಶ್ವ ವಿನ್ಯಾಸ ಸಂಸ್ಥೆ ಸಹಯೋಗದಲ್ಲಿ ಸ್ಕೈ ಡೆಕ್ (ವೀಕ್ಷಣಾ ಗೋಪುರ) ನಿರ್ಮಿಸಲು ವಿನ್ಯಾಸ ಸಿದ್ಧಪಡಿಸಿದೆ. ಈ ವಿನ್ಯಾಸವನ್ನು ಪರಿಶೀಲಿಸಿದ ನಗರಾಭಿವೃದ್ಧಿ ಸಚಿವರೂ ಆಗಿರುವ ಉಪಮುಖ್ಯ ಮಂತ್ರಿ ಡಿ.ಕೆ. ಶಿವಕುಮಾರ್, ಯೋಜನೆ ಅನುಷ್ಠಾನಕ್ಕೆ 8 ರಿಂದ 10 ಎಕರೆ ಭೂಮಿಯನ್ನು ಗುರುತಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಈ ಬಗ್ಗೆ ಅವರು ತಮ್ಮ ‘ಎಕ್ಸ್’ ಖಾತೆಯಲ್ಲಿ ವಿನ್ಯಾಸದ ವಿಡಿಯೊ ಸಹಿತ ಮಾಹಿತಿ ಹಂಚಿಕೊಂಡಿದ್ದರು. ಇದಕ್ಕೆ ಪ್ರತಿಕ್ರಿಯಿಸಿದವರಲ್ಲಿ ಹಲವರು ಮೊದಲು ಸುಸಜ್ಜಿತ ರಸ್ತೆ ಹಾಗೂ ಪಾದಚಾರಿ ಮಾರ್ಗ ನಿರ್ಮಿಸುವಂತೆ ಡಿ.ಕೆ. ಶಿವಕುಮಾರ್ ಅವರಿಗೆ ಆಗ್ರಹಿಸಿದ್ದಾರೆ. ಕೆಲವರು ಇದು ದುಂದು ವೆಚ್ಚವೆಂದು ಟೀಕಿಸಿದರೆ, ಇನ್ನೂ ಕೆಲವರು ಇದರಿಂದ ಬೆಂಗಳೂರಿನ ‘ಬ್ರ್ಯಾಂಡ್’ ಮೌಲ್ಯ ವೃದ್ಧಿಯಾಗುತ್ತದೆ ಎಂದು ಮೆಚ್ಚುಗೆಯನ್ನೂ ವ್ಯಕ್ತಪಡಿಸಿದ್ದಾರೆ.

ಪ್ರಸ್ತಾವಿತ ಸ್ಕೈ ಡೆಕ್ ವಿನ್ಯಾಸ

‘ಸಂಚಾರ ದಟ್ಟಣೆ, ಪಾದಚಾರಿ ಮಾರ್ಗ ದುಸ್ಥಿತಿ, ಮೆಟ್ರೊ ಕಾಮಗಾರಿ ವಿಳಂಬ, ಕಸ’ ಸೇರಿ ನಗರದ ವಿವಿಧ ಸಮಸ್ಯೆಗಳ ಬಗ್ಗೆಯೇ ಬಹುತೇಕರು ಪ್ರಸ್ತಾಪಿಸಿದ್ದು, ಗೋಪುರ ನಿರ್ಮಾಣದ ಬಗ್ಗೆ ಅಸಮಾಧಾನ ಹೊರಹಾಕಿದ್ದಾರೆ. ‘ಗೋಪುರದ ಮೇಲೆ ನಿಂತು ರಸ್ತೆಗುಂಡಿ ನೋಡಬೇಕೇ’, ‘ಕಸದ ಬೆಟ್ಟ ವೀಕ್ಷಿಸಬೇಕೇ’ ಎಂದೂ ಕೆಲವರು ಕಾಲೆಳೆದಿದ್ದಾರೆ.

‘ಐದು ತಿಂಗಳ ಬಳಿಕ ಕನಕಪುರಕ್ಕೆ ಪ್ರಯಾಣ ಮಾಡಿದೆ. ರಸ್ತೆ ಅಪಾಯಕಾರಿಯಾಗಿದ್ದು, ಚಾಲನೆ ಕಷ್ಟಸಾಧ್ಯ. ಯಾವುದೇ ಸೂಚನಾ ಫಲಕಗಳು ಕಾಣಸಿಗುವುದಿಲ್ಲ. ದಯವಿಟ್ಟು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿ’ ಎಂದು ಲೋಕನಾಥ್ ಡಿ. ಎನ್ನುವವರು ‘ಎಕ್ಸ್’ನಲ್ಲಿ ಹಂಚಿಕೊಂಡಿದ್ದಾರೆ.

‘ಇದು ನೋಡಲು ಚೆನ್ನಾಗಿದೆ. ಆದರೆ, ನಗರದ ಬಹುದೊಡ್ಡ ಸಮಸ್ಯೆ ಸಂಚಾರ ದಟ್ಟಣೆ. ಉಪನಗರ ರೈಲ್ವೆ ಕಾರಿಡಾರ್ ಅನ್ನು ಮೊದಲು ಕಾರ್ಯಗತಗೊಳಿಸಿ. ಇದರಿಂದ ಸಂಚಾರ ದಟ್ಟಣೆ ಸಮಸ್ಯೆ ಶೇ 30 ರಷ್ಟು ನಿವಾರಣೆಯಾಗಲಿದೆ. ನಮಗೆ ಶುದ್ಧ ಗಾಳಿ, ನೀರು ಹಾಗೂ ಸಾರಿಗೆ ಅಗತ್ಯ’ ಎಂದು ಕಮಲಾಕರ್ ಪಂಡಿತ್ ತಿಳಿಸಿದ್ದಾರೆ.

‘ಇದನ್ನು ಗ್ರಾಫಿಕ್ ವಿನ್ಯಾಸದಲ್ಲಿ ನೋಡಲು ಚೆನ್ನಾಗಿ ಇರುತ್ತದೆ. ವಾಸ್ತವದಲ್ಲಿ ಇದು ಸಾಧ್ಯವಿಲ್ಲ’ ಎಂದು ಅನಂತ್ ಕುಹಕವಾಡಿದ್ದಾರೆ.

ಪ್ರವಾಸಿ ತಾಣ: ಅನಿಕೇಶ್ ಗುಪ್ತ ಎನ್ನುವವರು ಇದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದು, ‘ಬೆಂಗಳೂರಿಗೆ ಇಂತಹ ಪ್ರವಾಸಿ ತಾಣ ಅಗತ್ಯ. ಇದು ಉತ್ತಮವಾದ ಪ್ರಾಜೆಕ್ಟ್. ಇದು ಬೆಂಗಳೂರಿಗೆ ಹೊಸ ಗುರುತನ್ನು ನೀಡಲಿದೆ’ ಎಂದು ಶ್ಲಾಘಿಸಿದ್ದಾರೆ.

‘ಈ ಗೋಪುರ ನಿರ್ಮಾಣದಿಂದ ಬೆಂಗಳೂರು ವಿಶ್ವದರ್ಜೆಯ ಪ್ರವಾಸಿ ತಾಣವಾಗಿ ಹೊರಹೊಮ್ಮಲಿದೆ. ಸ್ವಾತಂತ್ರ್ಯ ಉದ್ಯಾನವು ಇದನ್ನು ನಿರ್ಮಿಸಲು ಉತ್ತಮವಾದ ಸ್ಥಳ’ ಎಂದು ನಂದೀಶ್ ಜೆ.ಆರ್. ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಸದ್ಯ ಜಗತ್ತಿನಲ್ಲಿ ದುಬೈನ ಬುರ್ಜ್ ಖಲೀಫಾ (828 ಮೀಟರ್), ಶಾಂಘೈನ ಶಾಂಘೈ ಟವರ್ (632 ಮೀಟರ್), ಚೀನಾದ ಶೆಂಜೆನ್‌ನ ಪಿಂಗ್ ಆನ್ ಫೈನಾನ್ಸ್ ಸೆಂಟರ್ (599 ಮೀಟರ್), ಚೀನಾದ ಗುಂವಾಂಗ್ಝುವಿನ ಕ್ಯಾಂಟನ್ ಟವರ್ (597 ಮೀಟರ್), ದಕ್ಷಿಣ ಕೊರಿಯಾದ ಲಾಟ್ಟೆ ವರ್ಲ್ಡ್ ಟವರ್ (555 ಮೀಟರ್) ವಿಶ್ವದ ಎತ್ತರದ ವೀಕ್ಷಣಾ ಗೋಪುರಗಳಾಗಿವೆ.

250 ಮೀಟರ್ ಎತ್ತರ ಗೋಪುರ

ಪ್ರಸ್ತಾಪಿತ ವೀಕ್ಷಣಾ ಗೋಪುರವು 250 ಮೀಟರ್ ಎತ್ತರವಿರಲಿದೆ. ಗುಜರಾತ್‌ನಲ್ಲಿರುವ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಏಕತಾ ಪ್ರತಿಮೆ 182 ಮೀ. ಎತ್ತರವಿದೆ. ತಮಿಳುನಾಡಿನ ರಾಮೇಶ್ವರ ಟಿ.ವಿ. ಟವರ್ 323 ಮೀ. ಎತ್ತರವಿದ್ದರೂ ಅದು ಮನುಷ್ಯರು ನಿಂತು ವೀಕ್ಷಿಸಲು ಸಾಧ್ಯವಿಲ್ಲ. ಆದ್ದರಿಂದ ಇಲ್ಲಿ ನಿರ್ಮಾಣವಾಗುವ ಗೋಪುರವು ದೇಶದ ಅತ್ಯಂತ ಎತ್ತರದ ವೀಕ್ಷಣಾ ಗೋಪುರ ಎಂಬ ಹಿರಿಮೆಗೆ ಭಾಜನವಾಗಲಿದೆ.

ಈ ಗೋಪುರದಲ್ಲಿ ವಾಣಿಜ್ಯ ಚಟುವಟಿಕೆಗಳಿಗೂ ಅವಕಾಶ ನೀಡಬೇಕೆನ್ನುವುದು ಪ್ರಸ್ತಾವದಲ್ಲಿ ಇದೆ. ಪ್ರದರ್ಶನ, ಸ್ಕೈ ಡೆಕ್, ಬಾರ್ ಮತ್ತು ರೆಸ್ಟೋರೆಂಟ್, ಗಣ್ಯರ ಪ್ರದೇಶ ಸೇರಿ ಹಲವು ವೈಶಿಷ್ಟ್ಯಗಳಿರಲಿವೆ. ಚೀನಾದ ಶಾಂಘೈ ಟವರ್ ಈ ಯೋಜನೆಗೆ ಪ್ರೇರಣೆಯಾಗಿದೆ. ಇದನ್ನು ನಾಗವಾರ, ಹಲಸೂರು ಕೆರೆ ಅಥವಾ ವೈಟ್‌ಫೀಲ್ಡ್‌ನಲ್ಲಿ ನಿರ್ಮಿಸುವ ಬಗ್ಗೆ ಚರ್ಚೆಗಳು ನಡೆದಿವೆ.

ಸುದ್ದಿ 2 ನಿಮಿಷ

ಇಂದಿನಿಂದ ‘ಪರ್ವ’ ಇಂಗ್ಲಿಷ್ ನಾಟಕ ಪ್ರದರ್ಶನ

ಬೆಂಗಳೂರು: ಕಾದಂಬರಿಕಾರ ಎಸ್.ಎಲ್. ಭೈರಪ್ಪ ಅವರ ‘ಪರ್ವ’ ಕಾದಂಬರಿ ಆಧಾರಿತ ಇಂಗ್ಲಿಷ್ ನಾಟಕವು ಇದೇ ಗುರುವಾರದಿಂದ ಭಾನುವಾರದವರೆಗೆ ಬೆಳಿಗ್ಗೆ 10.30ಕ್ಕೆ ಇಲ್ಲಿನ ಚೌಡಯ್ಯ ಮೆಮೋರಿಯಲ್ ಹಾಲ್‌ನಲ್ಲಿ ಪ್ರದರ್ಶನ ಕಾಣಲಿದೆ.

ಇದನ್ನು ಸೆಂಟರ್ ಫಾರ್ ಫಿಲ್ಮ್ ಆ್ಯಂಡ್ ಡ್ರಾಮಾ ಪ್ರಸ್ತುತ ಪಡಿಸುತ್ತಿದೆ. ‘ಪರ್ವ’ ಕಾದಂಬರಿಯನ್ನು ರಂಗಕರ್ಮಿ ಪ್ರಕಾಶ್ ಬೆಳವಾಡಿ ಅವರು ರಂಗರೂಪಕಕ್ಕೆ ಅಳವಡಿಸಿ, ನಿರ್ದೇಶಿಸಿದ್ದಾರೆ. ಇದು ಎಂಟು ಗಂಟೆಗಳ ನಾಟಕವಾಗಿದೆ.

ಈ ಹಿಂದೆ ಕನ್ನಡದಲ್ಲಿ ಪ್ರದರ್ಶನ ಕಂಡಿದ್ದ ಈ ನಾಟಕ, ಭಾರಿ ಜನಮನ್ನಣೆ ಪಡೆದಿತ್ತು. ಮೈಸೂರು ರಂಗಾಯಣದ ಕಲಾವಿದರು ಪ್ರಸ್ತುತಪಡಿಸಿದ್ದರು. ರಾಜ್ಯದ ವಿವಿಧೆಡೆ 43 ಪ್ರದರ್ಶನಗಳನ್ನು ಮಾಡಲಾಗಿತ್ತು. ಇದೇ ಮೊದಲ ಬಾರಿ ಇಂಗ್ಲಿಷ್‌ಗೆ ಅಳವಡಿಸಿ, ಪ್ರದರ್ಶಿಸಲಾಗುತ್ತಿದೆ.

ಈ ಕಾದಂಬರಿಯನ್ನು ಭೈರಪ್ಪ ಅವರು 1979ರಲ್ಲಿ ಬರೆದಿದ್ದಾರೆ. ಇದು ಮಹಾಭಾರತದ ಕಥೆಯನ್ನು ಆಧರಿಸಿದ್ದು, ದ್ರೌಪದಿ ಅನುಭವಿಸುವ ಯಾತನೆ, ಆ ಹಿನ್ನೆಲೆಯ ಕಥಾನಕದ ಕಾದಂಬರಿ ಇದಾಗಿದೆ. ಈ ಕಾದಂಬರಿ ಮನುಷ್ಯನ ಬೌದ್ಧಿಕ, ಭಾವನಾತ್ಮಕ ಸಂಘರ್ಷಗಳಿಗೆ ಹಿಡಿದ ಕೈಗನ್ನಡಿಯಾಗಿದೆ. ನಗರದ ಆಯ್ದ ಕಲಾವಿದರಿಂದ ಈ ನಾಟಕವನ್ನು ಪ್ರಸ್ತುತ ಪಡಿಸಲಾಗುತ್ತಿದೆ ಎಂದು ಆಯೋಜಕರು ತಿಳಿಸಿದ್ದಾರೆ. ನಾಟಕದ ಟಿಕೆಟ್‌ಗಳು ‘ಬುಕ್ ಮೈ ಶೋ’ದಲ್ಲಿ ಲಭ್ಯವಿವೆ.



ವಿಶ್ವಕಪ್ ಕ್ರಿಕೆಟ್ ಪಂದ್ಯದ ದಿನಗಳಲ್ಲಿ ಮೆಟ್ರೊ ರೈಲಿನಲ್ಲಿ ಪೇಪರ್ ಟಿಕೆಟ್

ಬೆಂಗಳೂರು: ಇಲ್ಲಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ವಿಶ್ವಕಪ್ ಕ್ರಿಕೆಟ್ ಪಂದ್ಯ ಇರುವ ದಿನಗಳಲ್ಲಿ ಮೆಟ್ರೊ ಪ್ರಯಾಣಿಕರಿಗೆ 'ರಿಟರ್ನ್ ಜರ್ನಿ' ಪೇಪರ್ ಟಿಕೆಟ್ ಎಲ್ಲ ಮೆಟ್ರೊ ನಿಲ್ದಾಣಗಳಲ್ಲಿ ದೊರೆಯಲಿದೆ.

ಅ.20, 26, ನವೆಂಬರ್ 4, 9 ಮತ್ತು 12ರಂದು ಕ್ರಿಕೆಟ್ ಪಂದ್ಯ ನಡೆಯಲಿದೆ. ಕಬ್ಬನ್ ಪಾರ್ಕ್ ಮತ್ತು ಎಂ.ಜಿ. ರಸ್ತೆ ನಿಲ್ದಾಣಗಳಿಂದ ಯಾವುದೇ ಮೆಟ್ರೊ ನಿಲ್ದಾಣಕ್ಕೆ ಆ ದಿನಗಳಲ್ಲಿ ಸಂಜೆ 4ರ ನಂತರ ಒಮ್ಮೆ ಪ್ರಯಾಣಿಸಲು ‘ರಿಟರ್ನ್ ಜರ್ನಿ’ ಪೇಪರ್ ಟಿಕೆಟ್ ಬಳಸಬಹುದು.

ಕಾಗದ ಟಿಕೆಟ್ ಬೆಲೆ ₹ 50 ಆಗಿರುತ್ತದೆ. ಕ್ರಿಕೆಟ್ ಆರಂಭವಾಗುವ ಮೊದಲೇ ಪೇಪರ್ ಟಿಕೆಟ್ ಖರೀದಿಸಿದರೆ, ಪಂದ್ಯ ಮುಗಿದ ಬಳಿಕ ಅಡಚಣೆ ಇಲ್ಲದೇ ಹಿಂತಿರುಗಬಹುದು. ಎಂ.ಜಿ. ರಸ್ತೆ, ಕಬ್ಬನ್ ಪಾರ್ಕ್ ಮೆಟ್ರೊ ನಿಲ್ದಾಣಗಳಲ್ಲಿ ಜನದಟ್ಟಣೆ ಕಡಿಮೆ ಮಾಡಲು ಈ ಕ್ರಮ ಕೈಗೊಳ್ಳಲಾಗಿದೆ. ಎಂದಿನಂತೆ ಸ್ಮಾರ್ಟ್ ಕಾರ್ಡ್ ಮತ್ತು ಎನ್‌ಸಿಎಂಸಿ ಕಾರ್ಡ್‌ಗಳನ್ನು ಉಪಯೋಗಿಸಬಹುದು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

‘ಪಠ್ಯ ಪರಿಷ್ಕರಣೆ: ಸಮಿತಿ ತೀರ್ಮಾನವೇ ಅಂತಿಮ’

ಮೈಸೂರು: ‘ಮಕ್ಕಳ ಅಗತ್ಯಕ್ಕೆ ಅನುಗುಣವಾಗಿ ಪಠ್ಯಪುಸ್ತಕ ಪರಿಷ್ಕರಣೆ ಮಾಡುತ್ತೇವೆ. ಈ ವಿಚಾರದಲ್ಲಿ ತಜ್ಞರ ಸಮಿತಿಯೇ ಅಂತಿಮ ತೀರ್ಮಾನ ಕೈಗೊಳ್ಳಲಿದೆ’ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ‘ಯಾವುದನ್ನು ಉಳಿಸಬೇಕು, ಯಾವುದನ್ನು ತೆಗೆಯಬೇಕೆಂಬುದನ್ನು ಪರಿಷ್ಕರಣಾ ಸಮಿತಿಯೇ ತೀರ್ಮಾನಿಸುತ್ತದೆ. ಅವಶ್ಯಕವಿದ್ದರೆ ಪರಿಷ್ಕರಣೆಯಾಗುತ್ತದೆ. ಇಲ್ಲದಿದ್ದರೆ ಅದೇ ಮುಂದುವರಿಯುತ್ತದೆ. ಶಿಕ್ಷಣ ಇಲಾಖೆಯಲ್ಲಿ ಶಿಕ್ಷಕರ ನೇಮಕ, ಪೌಷ್ಟಿಕಾಂಶಯುಕ್ತ ಆಹಾರ ಪೂರೈಕೆ ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ಕಾಲಮಿತಿಯಲ್ಲಿ ಜಾರಿಗೆ ತರಲಾಗುವುದು. ಮುಂದಿನ ಶೈಕ್ಷಣಿಕ ಸೈಕಲ್ ವಿತರಣೆಗೂ ಕ್ರಮ ಕೈಗೊಳ್ಳಲಾಗುವುದು’ ಎಂದು ಭರವಸೆ ನೀಡಿದರು.

ಹಣದ ಮೇಲೆ ಕಾಲಿಟ್ಟು ನಿಂತ ಸಚಿವ ಶಿವಾನಂದ ಪಾಟೀಲರ ಫೋಟೊ ಕುರಿತು ಪ್ರತಿಕ್ರಿಯಿಸಿದ ಅವರು ‘ರಾಜಕಾರಣಿಗಳು, ಸಿನಿಮಾ ನಟರನ್ನು ಜನ ಗಮನಿಸುತ್ತಲೇ ಇರುತ್ತಾರೆ. ಆದಷ್ಟು ಎಚ್ಚರಿಕೆಯಿಂದ ಇರಬೇಕು’ ಎಂದು ಸಲಹೆ ನೀಡಿದರು.

‘ಕಾಂಗ್ರೆಸ್ ಸಿದ್ಧಾಂತವನ್ನು ಒಪ್ಪಿ ಸಿ.ಎಂ. ಇಬ್ರಾಹಿಂ ಸೇರಿದಂತೆ ಯಾರೇ ಬಂದರೂ ಸ್ವಾಗತ. ಈ ಬಗ್ಗೆ ಹೈಕಮಾಂಡ್ ತೀರ್ಮಾನಿಸಲಿದೆ’ ಎಂದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ,
ಕೆಂಗೇರಿ ವಿಭಾಗ, ಆರ್.ಆರ್. ನಗರ ವಲಯ,
ನಂ.144, 2ನೇ ಮುಖ್ಯರಸ್ತೆ, ಜಗಜ್ಯೋತಿ ಲೇಔಟ್, ಬೆಂಗಳೂರು – 560056.

ಸಂಖ್ಯೆ: ಕಾಅ/ಕೆಂಗೇರಿ/ಟೆಂಡರ್/08/2023–24 ದಿನಾಂಕ: 18–10–2023

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಕೆಂಗೇರಿ ವಿಭಾಗ, ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಕಂಡ ನಿರ್ಮಾಣ ಕಾಮಗಾರಿಗಳಿಗೆ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು / ಪ್ರವರ್ಗ	ಕಾಮಗಾರಿ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)
	ಏಕ ಲಕೋಟೆ ಪದ್ಧತಿ – ಕರೆ–2		
1	2023–24ನೇ ಸಾಲಿಗೆ ಹಂತ–2, ವಾರ್ಡ್ ಸಂಖ್ಯೆ. 40, ದೊಡ್ಡಬಿದರಕಲ್ಲು (110 ಗ್ರಾಮಗಳ ವ್ಯಾಪ್ತಿಯಡಿಯಲ್ಲಿ ಬರುತ್ತದೆ) ಇಲ್ಲಿನ ಅಂದ್ರಹಳ್ಳಿ, ಲಿಂಗಧೀರನಹಳ್ಳಿ ಮತ್ತು ಹೊಸಹಳ್ಳಿ ಗೊಲ್ಲರಪಾಳ್ಯ ಗ್ರಾಮಗಳ ವ್ಯಾಪ್ತಿಯಲ್ಲಿ ಬರುವ ಬೋರ್‌ವೆಲ್‌ಗಳ ನಿರ್ವಹಣೆ. (ಇತರೆ)	20.00	50,000/-
2	2023–24ನೇ ಸಾಲಿಗೆ ಹಂತ–2, ವಾರ್ಡ್ ಸಂಖ್ಯೆ. 72, ಹೇರೋಹಳ್ಳಿಯಲ್ಲಿನ (110 ಗ್ರಾಮಗಳ ವ್ಯಾಪಿಯಡಿಯಲ್ಲಿ ಬರುತ್ತದೆ) ಹೇರೋಹಳ್ಳಿ ಮತ್ತು ಗಿಡದಕೋನೇನಹಳ್ಳಿ ಗ್ರಾಮಗಳ ವ್ಯಾಪ್ತಿಯಲ್ಲಿ ಬರುವ ಬೋರ್‌ವೆಲ್‌ಗಳ ನಿರ್ವಹಣೆ. (ಇತರೆ)	17.00	42,500/-
	ಏಕ ಲಕೋಟೆ ಪದ್ಧತಿ – ಕರೆ–3		
3	ವಾರ್ಡ್ ಸಂಖ್ಯೆ. 40, ದೊಡ್ಡಬಿದರಕಲ್ಲು ಇಲ್ಲಿನ ದೊಡ್ಡಬಿದರಕಲ್ಲು ಗ್ರಾಮ ವ್ಯಾಪ್ತಿಯಲ್ಲಿರುವ ವೇಣುಗೋಪಾಲನಗರ, ಸಪ್ತಗಿರಿ ಲೇಔಟ್, ಶಿವಗಂಗಾ ಲೇಔಟ್, ಮೈಸೂರು ಲ್ಯಾಂಪ್ ಲೇಔಟ್, ಅಂದಾನಪ್ಪ ಲೇಔಟ್, ಮಾರಣ್ಣ ಲೇಔಟ್, ಗಂಗಮಹಿಮಯ್ಯ ಬಡಾವಣೆ ಮತ್ತು ಇಂದಿರಾನಗರದಲ್ಲಿ 6 ಬೋರ್‌ವೆಲ್‌ಗಳನ್ನು ಕೊರೆಯುವುದು ಮತ್ತು ಪಂಪ್, ಮೋಟಾರ್ ಸ್ಥಾಪಿಸುವುದು, ವಿದ್ಯುದ್ದೀಕರಣ ಮತ್ತು ಹೊಸ ಪೈಪ್‌ಲೈನ್ ಒದಗಿಸುವುದು. (ಇತರೆ)	50.00	1,25,000/-
4	ವಾರ್ಡ್ ಸಂಖ್ಯೆ 40, ದೊಡ್ಡಬಿದರಕಲ್ಲು ಇಲ್ಲಿನ ಕರಿಹೋಬನಹಳ್ಳಿ ಗ್ರಾಮ ವ್ಯಾಪ್ತಿಯಲ್ಲಿರುವ ಪಿಳ್ಳಣ್ಣ ಗಾರ್ಡನ್, ಎಸ್‌ಎಲ್‌ಎನ್ ಎನ್‌ಕ್ಲೇವ್, ಅನುಪಮಾ ಸ್ಕೂಲ್ ವಿಸಿನಿಟಿ ನಂದಗೋಕುಲ ಬಡಾವಣೆ, ನವಿಲುನಗರ, ಬಾಲಾಜಿ ಲೇಔಟ್‌ಗಳಲ್ಲಿ 6 ಬೋರ್‌ವೆಲ್‌ಗಳನ್ನು ಕೊರೆಯುವುದು ಮತ್ತು ಪಂಪ್, ಮೋಟಾರ್ ಸ್ಥಾಪಿಸುವುದು, ವಿದ್ಯುದ್ದೀಕರಣ ಮತ್ತು ಹೊಸ ಪೈಪ್‌ಲೈನ್ ಒದಗಿಸುವುದು. (ಇತರೆ)	50.00	1,25,000/-
5	ವಾರ್ಡ್ ಸಂಖ್ಯೆ. 72, ಹೇರೋಹಳ್ಳಿ ಇಲ್ಲಿನ ಹೇರೋಹಳ್ಳಿ ಗ್ರಾಮ ವ್ಯಾಪ್ತಿಯಲ್ಲಿರುವ ವಿಘ್ನೇಶ್ವರ ನಗರ, ಮುನೇಶ್ವರ ನಗರ, ನಾಗರಹೊಳೆ ನಗರ, ವೀರಭದ್ರೇಶ್ವರ ನಗರ ಮತ್ತು ಜವರಯ್ಯೇಗೌಡ ಬಡಾವಣೆಗಳಲ್ಲಿ 3 ಬೋರ್‌ವೆಲ್‌ಗಳನ್ನು ಕೊರೆಯುವುದು ಮತ್ತು ಪಂಪ್, ಮೋಟಾರ್ ಸ್ಥಾಪಿಸುವುದು, ವಿದ್ಯುದ್ದೀಕರಣ ಮತ್ತು ಹೊಸ ಪೈಪ್‌ಲೈನ್ ಒದಗಿಸುವುದು. (ಎಸ್.ಟಿ)	25.00	31,500/-
6	ವಾರ್ಡ್ ಸಂಖ್ಯೆ. 40, ದೊಡ್ಡಬಿದರಕಲ್ಲು (110 ಗ್ರಾಮಗಳ ವ್ಯಾಪ್ತಿಯಲ್ಲಿ ಬರುತ್ತದೆ) ಇಲ್ಲಿನ ದೊಡ್ಡಬಿದರಕಲ್ಲು ಮತ್ತು ಕರಿಹೋಬನಹಳ್ಳಿ ಗ್ರಾಮಗಳ ವ್ಯಾಪ್ತಿಯಲ್ಲಿನ ಬೋರ್‌ವೆಲ್‌ಗಳ ನಿರ್ವಹಣೆ. (ಇತರೆ)	30.00	75,000/-
7	ವಾರ್ಡ್ ಸಂಖ್ಯೆ. 40 ರಲ್ಲಿ, ದೊಡ್ಡಬಿದರಕಲ್ಲು (110 ಗ್ರಾಮಗಳ ವ್ಯಾಪ್ತಿಯಲ್ಲಿ ಬರುತ್ತದೆ) ಇಲ್ಲಿನ ಅಂದ್ರಹಳ್ಳಿ, ಲಿಂಗಧೀರನಹಳ್ಳಿ ಮತ್ತು ಹೊಸಹಳ್ಳಿ ಗೊಲ್ಲರಪಾಳ್ಯ ಗ್ರಾಮಗಳ ವ್ಯಾಪ್ತಿಯಲ್ಲಿನ ಬೋರ್‌ವೆಲ್‌ಗಳ ನಿರ್ವಹಣೆ. (ಇತರೆ)	30.00	75,000/-
8	ವಾರ್ಡ್ ಸಂಖ್ಯೆ. 72 ರಲ್ಲಿ, ಹೇರೋಹಳ್ಳಿ (110 ಗ್ರಾಮಗಳ ವ್ಯಾಪ್ತಿಯಲ್ಲಿ ಬರುತ್ತದೆ) ಇಲ್ಲಿನ ಹೇರೋಹಳ್ಳಿ ಮತ್ತು ಗಿಡದಕೋನೇನಹಳ್ಳಿ ಗ್ರಾಮಗಳ ವ್ಯಾಪ್ತಿಯಲ್ಲಿನ ಬೋರ್‌ವೆಲ್‌ಗಳ ನಿರ್ವಹಣೆ. (ಇತರೆ)	40.00	1,00,000/-

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಿಂದ ದಿನಾಂಕ: **19–10–2023 ರಂದು ಸಂಜೆ 4.00 ಗಂಟೆಯಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **31–10–2023 ರಂದು ಸಂಜೆ 4.00 ಗಂಟೆಯವರೆಗೆ.** 3) ಬಿಡ್‌ಗಳನ್ನು ತೆರೆಯುವ ದಿನಾಂಕ: **02–11–2023 ರಂದು ಬೆಳಿಗ್ಗೆ 11.00 ಗಂಟೆಗೆ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಕೆಂಗೇರಿ ವಿಭಾಗ, ಬಿಬಿಎಂಪಿ.

ನಾಗಸಂದ್ರ ಮೆಟ್ರೊ ನಿಲ್ದಾಣದಿಂದ ಐಕಿಯಾಗೆ ಸಂಪರ್ಕ

‘ಫುಟ್ ಬ್ರಿಡ್ಜ್’ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ನಾಗಸಂದ್ರ ಮೆಟ್ರೊ ನಿಲ್ದಾಣದಿಂದ ಐಕಿಯಾ ಫರ್ನೀಚರ್ ಸ್ಟೋರ್‌ಗೆ ಸಂಪರ್ಕ ಕಲ್ಪಿಸುವ ನೂತನ 'ನೇರ ಸಂಪರ್ಕ ಸೇತುವೆ'(ಫುಟ್ ಓವರ್ ಬ್ರಿಡ್ಜ್) ಅನ್ನು ಬೆಂಗಳೂರು ಮೆಟ್ರೊ ರೈಲು ಕಾರ್ಪೊರೇಷನ್ ಲಿಮಿಟೆಡ್‌ನ(ಬಿಎಂಆರ್‌ಸಿಎಲ್) ಕಾರ್ಯನಿರ್ವಾಹಕ ನಿರ್ದೇಶಕ ಎ.ಎಸ್. ಶಂಕರ್ ಬುಧವಾರ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ‘ನಮ್ಮ ಮೆಟ್ರೊ’ ನಿಲ್ದಾಣದಿಂದ ಐಕಿಯಾ ಸ್ಟೋರ್ ತಲುಪಲು 'ನೇರ ಸಂಪರ್ಕ ಸೇತುವೆ' ಕಲ್ಪಿಸಿರುವುದರಿಂದ ಪ್ರಯಾಣಿಕರಿಗೆ ತುಂಬಾ ಅನುಕೂಲವಾಗಿದೆ. ಈಗಾಗಲೇ ಮಂತ್ರಿಸ್ಕ್ವೇರ್ ಮೆಟ್ರೊ ಸ್ಟೇಷನ್‌ನಿಂದ ಮಂತ್ರಿ ಮಾಲ್‌ಗೆ ಇಂಥದ್ದೊಂದು ನೇರ ಸಂಪರ್ಕ ಸೇತುವೆ ನಿರ್ಮಾಣವಾಗಿದೆ. ಇದು ಎರಡನೆಯದು’ ಎಂದರು.

‘ನಾಗಸಂದ್ರದಿಂದ ಬಿಐಇಸಿವರೆಗೂ ಮೆಟ್ರೊ ಮಾರ್ಗ ವಿಸ್ತರಿಸಲಾಗುತ್ತಿದೆ. ಸದ್ಯಕ್ಕೆ ನೆಲಮಂಗಲಕ್ಕೆ ವಿಸ್ತರಿಸುವ ಯೋಚನೆ ಇಲ್ಲ’ ಎಂದ ಅವರು, 'ದಾಸರಹಳ್ಳಿ ಮೆಟ್ರೊ ನಿಲ್ದಾಣದ ಹತ್ತಿರ ಸ್ಕೈವಾಕ್ ಮಾಡಬೇಕಿದೆ. ಅದನ್ನು ಬಿಎಂಆರ್‌ಸಿಎಲ್ ಅಥವಾ ಬಿಬಿಎಂಪಿ ಯಾರು ನಿರ್ಮಿಸಬೇಕೆಂದು ತಿಳಿದ ಮೇಲೆ ಮಾಹಿತಿ ನೀಡಲಾಗುತ್ತದೆ’ ಎಂದು ಮಾಧ್ಯಮದವರಿಗೆ ಉತ್ತರಿಸಿದರು.

ಐಕಿಯಾದ ಮಾರ್ಕೆಟಿಂಗ್ ವ್ಯವಸ್ಥಾಪಕಿ ಅಂಜೆ ಹೇಯಿಮ್ ಮಾತನಾಡಿ 'ನೇರ ಸಂಪರ್ಕ ಸೇತುವೆ, ಪ್ರಯಾಣಿಕರು, ಗ್ರಾಹಕರು ಹಾಗೂ ಸ್ಟೋರ್‌ನ ಕೆಲಸಗಾರು ಸುಲಭವಾಗಿ ಐಕಿಯಾ ಸ್ಟೋರ್ ಪ್ರವೇಶಿಸಲು ಅನುಕೂಲ ಕಲ್ಪಿಸುತ್ತದೆ. ಹೆಚ್ಚು ಗ್ರಾಹಕರನ್ನು ಮೆಟ್ರೊದಲ್ಲಿ ಸಂಚರಿಸುವಂತೆ ಪ್ರೋತ್ಸಾಹಿಸುತ್ತದೆ’ ಎಂದರು.

ನಾಗಸಂದ್ರ ಮೆಟ್ರೊ ಸ್ಟೇಷನ್‌ನಿಂದ ಐಕಿಯಾ ಮಳಿಗೆಗೆ ನೇರ ಸಂಪರ್ಕ ಸೇತುವೆ(ಫುಟ್ ಓವರ್ ಬ್ರಿಡ್ಜ್)ಯನ್ನು ಬಿಎಂಆರ್‌ಸಿಎಲ್ ಕಾರ್ಯನಿರ್ವಾಹಕ ನಿರ್ದೇಶಕ ಎ.ಎಸ್. ಶಂಕರ್ ಉದ್ಘಾಟಿಸಿದರು. ಐಕಿಯಾ ಮಾರ್ಕೆಟಿಂಗ್ ವ್ಯವಸ್ಥಾಪಕಿ ಅಂಜೆ ಹೇಯಿಮ್ ಇದ್ದರು

ಕೆವೈಸಿ ಅಪ್‌ಡೇಟ್ ಹೆಸರಿನಲ್ಲಿ ವಂಚನೆ

ಚಿಕ್ಕಬಳ್ಳಾಪುರ: ಕೆವೈಸಿ ಅಪ್‌ಡೇಟ್ ಹೆಸರಿನಲ್ಲಿ ಗೌರಿಬಿದನೂರಿನ ಬಿ.ಎನ್. ಶ್ರೀನಿವಾಸನ್ ಎಂಬುವವರಿಗೆ ಆನ್‌ಲೈನ್ ವಂಚಕರು ₹82ಸಾವಿರ ವಂಚಿಸಿದ್ದಾರೆ. ನಗರದ ಸಿಇಎನ್ ಪೊಲೀಸ್ ಠಾಣೆಯಲ್ಲಿ ಈ ಬಗ್ಗೆ ದೂರು ದಾಖಲಾಗಿದೆ.

'ನನ್ನ ಮೊಬೈಲ್ ನಂಬರ್‌ಗೆ ಕೆವೈಸಿ ಅಪ್‌ಡೇಟ್ ಆಗದ ಕಾರಣ ನಿಮ್ಮ ಖಾತೆ ಬ್ಲಾಕ್ ಆಗಿದೆ ಎಂದು ಸಂದೇಶ ಬಂದಿತು. ಆ ಸಂದೇಶದಲ್ಲಿ ಸಂಪರ್ಕಿಸುವತೆ ಒಂದು ಸಂಖ್ಯೆಯೂ ಇತ್ತು. ಆ ನಂಬರ್‌ಗೆ ಕರೆ ಮಾಡಿದಾಗ ನಿಮ್ಮ ಖಾತೆಗೆ ಕೆವೈಸಿ ಅಪ್‌ಡೇಟ್ ಮಾಡದೆ ಇರುವುದರಿಂದ ಅಕೌಂಟ್ ಬ್ಲಾಕ್ ಆಗಿದೆ. ನಿಮಗೆ ಒಟಿಪಿ ಕಳುಹಿಸುತ್ತೇನೆ. ಅದನ್ನು ಹೇಳಿ ನಾನು ಕೆವೈಸಿ ಅಪ್‌ಡೇಟ್ ಮಾಡುತ್ತೇನೆ’ ಎಂದು ಹೇಳಿದರು.

'ಅವರು ಬ್ಯಾಂಕ್ ಅಧಿಕಾರಿಗಳು ಇರಬಹುದು ಎಂದು ನಂಬಿ ಅವರಿಗೆ ಒಟಿಪಿ ನಂಬರ್ ಹೇಳಿದೆ. ನನ್ನ ಪತ್ನಿ ಖಾತೆ ವಿವರಗಳನ್ನು ಕೇಳಿದರು. ನನ್ನ ಬೇರೆ ಬೇರೆ ಬ್ಯಾಂಕ್‌ಗಳ ಖಾತೆಗಳ ವಿವರ ಸಹ ನೀಡಿದೆ. ನಾನು ಅವರಿಗೆ ಒಟಿಪಿ ತಿಳಿಸಿದ ಕೂಡಲೇ ನನ್ನ ಖಾತೆಯಿಂದ ₹ 82,000 ಕಡಿತವಾಗಿದೆ’ ಎಂದು ಶ್ರೀನಿವಾಸನ್ ತಿಳಿಸಿದ್ದಾರೆ.



‘2ಡಿ ಕಲರ್ ಡಾಪ್ಲರ್ ಎಕೊ ಕಾರ್ಡಿಯೋಗ್ರಾಫಿ’ ಯಂತ್ರದ ನೆರವಿನಿಂದ ವ್ಯಕ್ತಿಯೊಬ್ಬರಿಗೆ ಹೃದಯದ ಪರೀಕ್ಷೆ ನಡೆಸಲಾಯಿತು. ಶರಣ ಪ್ರಕಾಶ್ ಪಾಟೀಲ, ಡಾ.ಸಿ.ಎನ್. ಮಂಜುನಾಥ್, ಸಿಐಸಿಐ ಫೌಂಡೇಶನ್‌ನ ಮುಖ್ಯಸ್ಥ ಬಿ.ಕೆ. ವೆಂಕಟೇಶ್, ಗಿರೀಶ್, ಪ್ರಮೋದ್, ಸುಮತಿ, ರಾಜೇಶ್ ಮತ್ತು ಶ್ರುತಿಕರ ಇದ್ದಾರೆ

ಪೊಲೀಸ್ ಸಿಬ್ಬಂದಿಗೆ ಚೂರಿ ಇರಿತ

ಬೆಂಗಳೂರು: ಎಚ್.ಕೆ.ಪಿ ದರ್ಗಾದ ಬಳಿ ಆರೋಪಿಯನ್ನು ಬಂಧಿಸಲು ತೆರಳಿದ್ದ ಸದಾಶಿವನಗರ ಪೊಲೀಸ್ ಠಾಣೆ ಹೆಡ್‌ಕಾನ್‌ಸ್ಟೆಬಲ್‌ಗೆ ಚಾಕು ವಿನಿಂದ ಇರಿದು ಕೊಲೆಗೆ ಯತ್ನಿಸಲಾಗಿದೆ.

ಹೆಡ್‌ಕಾನ್‌ಸ್ಟೆಬಲ್ ಸೈಯದ್ ಸಮೀವುಲ್ಲಾ ಅವರು ಹಲ್ಲೆಗೆ ಒಳಗಾಗಿದ್ದು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

‘ಹಲವು ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿದ್ದ ಹಸನ್ ಖಾನ್ ಎಂಬಾತ ಶಿವಾಜಿನಗರದ ಸರಕು ಸಾಗಣೆ ಆಟೊ ನಿಲ್ದಾಣದ ಬಳಿ ನಿಂತಿದ್ದ. ಖಚಿತ ಮಾಹಿತಿ ಮೇರೆಗೆ ಆತನನ್ನು ಬಂಧಿಸಲು ಕಾನ್‌ಸ್ಟೆಬಲ್ ತೆರಳಿದ್ದರು. ಆಗ ಅವರನ್ನು ಚಾಕುವಿನಿಂದ ಇರಿದು ಪರಾರಿಯಾಗಲು ಆರೋಪಿ ಯತ್ನಿಸಿದ್ದ’ ಎಂದು ಮೂಲಗಳು ಹೇಳಿವೆ.

‘ಸ್ಥಳೀಯರ ನೆರವಿನಿಂದ ಅವರನ್ನು ಆಸ್ಪತ್ರೆ ದಾಖಲಿಸಲಾಗಿದೆ. ಕೈಗೆ ಗಾಯವಾಗಿದೆ. ಕಾನ್‌ಸ್ಟೆಬಲ್ ಚೇತರಿಸಿಕೊಳ್ಳುತ್ತಿದ್ದಾರೆ. ಬಳಿಕ, ಮತ್ತೊಂದು ಪೊಲೀಸ್ ತಂಡ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಿದೆ’ ಎಂದು ಮೂಲಗಳು ತಿಳಿಸಿವೆ.

ಮಣಿಪಾಲ್ ಆಸ್ಪತ್ರೆಯಿಂದ ಸ್ತನ ಕ್ಯಾನ್ಸರ್ ಜಾಗೃತಿ ಮಾಸ

ಕ್ಯಾನ್ಸರ್ ವಿರುದ್ಧ ಜಯಿಸಲು ಮಾನಸಿಕ ಶಕ್ತಿಯೂ ಅಗತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕ್ಯಾನ್ಸರ್ ಕಾಯಿಲೆಯನ್ನು ಎದುರಿಸಲು ಔಷಧ ಹಾಗೂ ಚಿಕಿತ್ಸೆಯ ಜತೆಗೆ ಮಾನಸಿಕ ಶಕ್ತಿಯೂ ಅಗತ್ಯ’ ಎಂದು ಸ್ತನ ಕ್ಯಾನ್ಸರ್ ಗೆದ್ದ ಮಹಿಳೆಯರು ತಮ್ಮ ಮನದಾಳ ಹಂಚಿಕೊಂಡರು.

ಸ್ತನ ಕ್ಯಾನ್ಸರ್ ಜಾಗೃತಿ ಮಾಸದ ಪ್ರಯುಕ್ತ ಹಳೆ ವಿಮಾನ ನಿಲ್ದಾಣ ರಸ್ತೆಯಲ್ಲಿರುವ ಮಣಿಪಾಲ್ ಆಸ್ಪತ್ರೆ ಬುಧವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಸ್ತನ ಕ್ಯಾನ್ಸರ್ ಗೆದ್ದವರು ಹಾಗೂ ಅವರನ್ನು ಆರೈಕೆ ಮಾಡಿದವರನ್ನು ಗೌರವಿಸಲಾಯಿತು. ಕ್ಯಾನ್ಸರ್ ಜಯಿಸಿದ ಬಗೆಯನ್ನು ವಿವರಿಸಿದ ಡಾ. ಮೀರಾ ಕಿಶನ್, ‘ಕಳೆದ ಏಪ್ರಿಲ್ ತಿಂಗಳಲ್ಲಿ ಕ್ಯಾನ್ಸರ್ ಗಡ್ಡೆ ಪತ್ತೆಯಾಯಿತು. ಬಳಿಕ ಅಗತ್ಯ ಚಿಕಿತ್ಸೆಯ ಜತೆಗೆ ಪತಿ ಡಾ. ರೂಪ್ ಕಿಶನ್ ನನಗೆ ಧೈರ್ಯ ತುಂಬಿದರು. ಸೂಕ್ತ ಸಮಯಕ್ಕೆ ಚಿಕಿತ್ಸೆ ದೊರೆತಿದ್ದರಿಂದ ಚೇತರಿಸಿಕೊಳ್ಳಲು ಸಾಧ್ಯವಾಯಿತು. ಕಾಯಿಲೆಯ ಲಕ್ಷಣಗಳು ಗೋಚರಿಸಿದಾಗ ಮಹಿಳೆಯರು ಸ್ವಯಂಪ್ರೇರಿತರಾಗಿ ಆಸ್ಪತ್ರೆಗೆ ತೆರಳಿ, ತಪಾಸಣೆ ಮಾಡಿಸಿಕೊಳ್ಳಬೇಕು’ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಡಾ.ಪೂನಂ ಪಾಟೀಲ (ಎಡದಿಂದ ಎರಡನೆಯವರು) ಅವರು ಸ್ವಾತಿ ಸುರಮ್ಯ (ಬಲಗಡೆಯವರು) ಅವರನ್ನು ಹಾಗೂ ಡಾ. ಶಬ್ಬೀರ್ ಜವೇರಿ ಅವರು ಡಾ.ರೂಪ್ ಕಿಶನ್ ಅವರನ್ನು ಅಭಿನಂದಿಸಿದರು ಪ್ರಜಾವಾಣಿ ಚಿತ್ರ

ಸ್ವಾತಿ ಸುರಮ್ಯ, ‘ಈ ಕಾಯಿಲೆ ವಿರುದ್ಧ ಹೋರಾಡಿ, ಜಯಿಸಿದ್ದೇನೆ. ಶೀಘ್ರ ಚೇತರಿಕೆಗೆ ವೈದ್ಯರು ನಿಗದಿಪಡಿಸಿದ ಚಿಕಿತ್ಸಾ ಕ್ರಮ, ಔಷಧಗಳ ಸೇವನೆ ಅಗತ್ಯ. ರೋಗದ ಬಗ್ಗೆ ಅನಗತ್ಯವಾಗಿ ಭಯಕ್ಕೆ ಒಳಗಾಗಬಾರದು’ ಎಂದು ಹೇಳಿದರು.

ಆಸ್ಪತ್ರೆಯ ವೈದ್ಯಕೀಯ ಗಂಥಿ ವಿಜ್ಞಾನದ ಸಲಹೆಗಾರ್ತಿ ಡಾ. ಪೂನಂ ಪಾಟೀಲ, ‘ಸ್ತನ ಕ್ಯಾನ್ಸರ್ ಇತ್ತೀಚಿಗೆ ಹೆಚ್ಚಳವಾಗುತ್ತಿವೆ. ಈ ಕಾಯಿಲೆಯನ್ನು ಬೇಗ ಪತ್ತೆ ಮಾಡಿ, ಚಿಕಿತ್ಸೆ ಒದಗಿಸಿದಲ್ಲಿ ಗುಣಪಡಿಸಲು ಸಾಧ್ಯ. ಮಹಿಳೆಯರು ತಮ್ಮ ಆರೋಗ್ಯ ಕಡೆಗಣಿಸುತ್ತಾರೆ. ಇದರಿಂದ ಜೀವಕ್ಕೆ ಅಪಾಯವಾಗುವ ಸಾಧ್ಯತೆ ಇರುತ್ತದೆ’ ಎಂದರು.

ಸರ್ಜಿಕಲ್ ಆಂಕೊಲಜಿ ವಿಭಾಗದ ಮುಖ್ಯಸ್ಥ ಡಾ. ಶಬ್ಬೀರ್ ಜವೇರಿ, ‘ಕ್ಯಾನ್ಸರ್ ತಡೆಗೆ ಜನರಲ್ಲಿ ರೋಗದ ಬಗ್ಗೆ ಅರಿವು ಮೂಡಿಸಬೇಕ’ ಎಂದರು.

‘ಜಯದೇವ ಆಸ್ಪತ್ರೆ ದೇಶಕ್ಕೆ ಮಾದರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯು ದೇಶಕ್ಕೆ ಮಾದರಿಯಾಗಿದೆ. ಇದರಿಂದಾಗಿ ಇಲ್ಲಿಗೆ ಬರುವ ರೋಗಿಗಳ ಸಂಖ್ಯೆ ಹೆಚ್ಚಳವಾಗುತ್ತಿದ್ದು, ವೈದ್ಯರು ಹಾಗೂ ಸಿಬ್ಬಂದಿ ಮೇಲೆ ಒತ್ತಡ ಹೆಚ್ಚಾಗಿದೆ’ ಎಂದು ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ್ ಪಾಟೀಲ ತಿಳಿಸಿದರು.

ಐಸಿಐಸಿಐ ಫೌಂಡೇಶನ್ ನಗರದಲ್ಲಿ ಬುಧವಾರ ₹ 70 ಲಕ್ಷ ಬೆಲೆಯ ‘2ಡಿ ಕಲರ್ ಡಾಪ್ಲರ್ ಎಕೊ ಕಾರ್ಡಿಯೋಗ್ರಾಫಿ’ ಉಪಕರಣವನ್ನು ದೇಣಿಗೆಯಾಗಿ ಸಂಸ್ಥೆಗೆ ನೀಡಿತು.

ಈ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಸಂಸ್ಥೆಗೆ ಹೆಚ್ಚಿನ ಸಂಖ್ಯೆಯಲ್ಲಿ ರೋಗಿಗಳು ಬರುತ್ತಿದ್ದರೂ ಸಿಬ್ಬಂದಿ ಉತ್ತಮವಾಗಿ ನಿರ್ವಹಿಸುತ್ತಿದ್ದಾರೆ. ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿಯಡಿ (ಸಿಎಸ್‌ಆರ್) ಸಂಸ್ಥೆಗೆ ನೀಡಲಾದ ವೈದ್ಯಕೀಯ ಉಪಕರಣಗಳು ಸದುಪಯೋಗವಾಗುತ್ತವೆ ಎಂಬ ವಿಶ್ವಾಸವಿದೆ. ಕಲಬುರಗಿಯಲ್ಲಿ ಸಂಸ್ಥೆಯ ಶಾಖೆ ನಿರ್ಮಾಣವಾಗುತ್ತಿದ್ದು, ಇದು ಕಲ್ಯಾಣ ಕರ್ನಾಟಕ ಭಾಗದ ಜನರಿಗೆ ವರದಾನವಾಗಲಿದೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್, ‘ಆಸ್ಪತ್ರೆಯಲ್ಲಿ ಪ್ರತಿನಿತ್ಯ 800 ರಿಂದ 1 ಸಾವಿರ ಜನರಿಗೆ ‘2ಡಿ ಎಕೊ’ ಪರೀಕ್ಷೆ ನಡೆಸಲಾಗುತ್ತಿದೆ. ಕಳೆದ ವರ್ಷ ಮೂರು ಲಕ್ಷ ಜನರಿಗೆ ಇದೇ ಪರೀಕ್ಷೆ ನಡೆಸಲಾಗಿದ್ದು, ಇದು ಜಾಗತಿಕ ದಾಖಲೆಯಾಗಿದೆ. ಆಸ್ಪತ್ರೆಗೆ ಬರುವ ಹೃದ್ರೋಗಿಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಹೀಗಾಗಿ, ದಾನಿಗಳ ನೀಡುವ ವೈದ್ಯಕೀಯ ಸಲಕರಣೆಗಳು ಸದುಪಯೋಗ ಆಗಲಿವೆ. ಬಡ ಹಾಗೂ ನಿರ್ಗತಿಕ ಹೃದ್ರೋಗಿಗಳಿಗೆ ಕಡಿಮೆ ದರದಲ್ಲಿ ಚಿಕಿತ್ಸೆ ಒದಗಿಸಲಾಗುವುದು’ ಎಂದು ತಿಳಿಸಿದರು.

ಬೆಂಗಳೂರು ಗ್ರಾಮಾಂತರ ಜಿ. ಪಂ., ಖಾದಿ – ಗ್ರಾಮೋದ್ಯೋಗ ಇಲಾಖೆಯಿಂದ ನಿರ್ಮಾಣ

ದಸರಾ ಸ್ತಬ್ಧಚಿತ್ರಕ್ಕೆ 'ಶಿವಗಂಗೆ' ಆಯ್ಕೆ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ಮೈಸೂರಿನಲ್ಲಿ ಅ. 24 ರಂದು ನಡೆಯುವ ದಸರಾ ಜಂಬೂ ಸವಾರಿ ಉತ್ಸವಕ್ಕೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕು ಸೋಂಪುರ ಹೋಬಳಿಯ ಶಿವಗಂಗೆ ಕ್ಷೇತ್ರದ ಇತಿಹಾಸ ಸಾರುವಂತಹ ಸ್ತಬ್ಧಚಿತ್ರ ಆಯ್ಕೆಯಾಗಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿ ಹಾಗೂ ಖಾದಿ ಮತ್ತು ಗ್ರಾಮೋದ್ಯೋಗ ಇಲಾಖೆಯ ವತಿಯಿಂದ ಈ ಸ್ತಬ್ಧಚಿತ್ರವನ್ನು ನಿರ್ಮಿಸಲಾಗುತ್ತಿದೆ.

ಸ್ತಬ್ಧಚಿತ್ರದಲ್ಲಿ ಮೊದಲಿಗೆ ಅಸೀನವಾಗಿರುವ ನಂದಿ, ಅದರ ಹಿಂದೆ ಶಿವ ಪಾರ್ವತಿಯ ಮೂರ್ತಿಗಳಿವೆ. ನಂತರ ಹೊನ್ನಮ್ಮದೇವಿ, ಗಂಗಾಧರೇಶ್ವರ ಸ್ವಾಮಿ ದೇಗುಲ ಇರಲಿದೆ. ಬೆಟ್ಟದ ನಡುವಿರುವ ಗೋಪುರಗಳು, ಬೆಟ್ಟದ ತುದಿಯಲ್ಲಿರುವ ಬಸವಣ್ಣನ ವಿಗ್ರಹ, ಕುದುರೆ ಮೆಲೆ ಹೊರಟಿರುವ ನಾಡಪ್ರಭು ಕೆಂಪೇಗೌಡರ ಚಿತ್ರ, ಸುತ್ತಮುತ್ತಲ ಬೆಟ್ಟದ ವಿಹಂಗಮ ನೋಟ, ಕೊನೆಯಲ್ಲಿ ನಂದಿ ಆಸೀನವಾಗಿರುವ ಪ್ರವೇಶದ್ವಾರದ ಚಿತ್ರ ಇರಲಿದೆ..

ದಸರಾ ಉತ್ಸವ ಸಮಿತಿ ಸ್ತಬ್ಧಚಿತ್ರಕ್ಕಾಗಿ ಎರಡು ತಿಂಗಳ ಹಿಂದೆ ಸಲಹೆ ಸೂಚನೆ ಆಹ್ವಾನಿಸಲಾಗಿತ್ತು. ಅದರಂತೆ ಜಿಲ್ಲೆಯಲ್ಲಿ ಎಂಟಕ್ಕೂ ಹೆಚ್ಚು ತಾಣಗಳ ಬಗ್ಗೆ ಸಲಹೆಗಳು ಬಂದಿದ್ದವು. ನೆಲಮಂಗಲದ ಶಿವಗಂಗೆ, ದೊಡ್ಡಬಳ್ಳಾಪುರದ ಘಾಟಿ ಸುಬ್ರಹ್ಮಣ್ಯ, ಹುಲುಕುಡಿ ಬೆಟ್ಟ, ದೇವನಹಳ್ಳಿಯ ಕೊಯಿರಾ, ಮಾಕಳಿ ದುರ್ಗ, ದೇವನಹಳ್ಳಿ ಕೋಟೆ ಪ್ರಮುಖವಾಗಿದ್ದವು. ಇದರಲ್ಲಿ ಶಿವಗಂಗೆ ಕ್ಷೇತ್ರ ಸ್ತಬ್ಧಚಿತ್ರಕ ಈ ವರ್ಷ ದಸರೆಯಲ್ಲಿ ಪಾಲ್ಗೊಳ್ಳುವ ಅದೃಷ್ಟ ಲಭಿಸಿದೆ.

ಹಿಂದೆ ದೆಹಲಿಯಲ್ಲಿ ನಡೆಯುವ ಗಣರಾಜ್ಯೋತ್ಸವದಲ್ಲಿ ಶಿವಗಂಗೆ ಕ್ಷೇತ್ರ ಸ್ತಬ್ಧಚಿತ್ರಕ್ಕಾಗಿ ಆಯ್ಕೆಯಾಗಿತ್ತು. ಇದೀಗ ನಮ್ಮ ನಾಡಹಬ್ಬ ದಸರಾ ಉತ್ಸವಕ್ಕೆ ಶಿವಗಂಗೆ ಕ್ಷೇತ್ರ ಆಯ್ಕೆಯಾಗಿರುವುದು ಹೆಮ್ಮೆ ಎನಿಸುತ್ತದೆ ಎಂದು ಶಿವಗಂಗೆ ದೇವಾಲಯದ ಪ್ರಧಾನ ಅರ್ಚಕ ರಾಜು ದೀಕ್ಷಿತ್ ಸಂತಸ ವ್ಯಕ್ತಪಡಿಸಿದ್ದಾರೆ.

> ಮೈಸೂರಿನಲ್ಲಿ ಸ್ತಬ್ಧಚಿತ್ರ ತಯಾರಿ ನಡೆದಿದೆ. ಶಿವಗಂಗೆ ಪರಿಚಯ, ಗತಕಾಲದ ಇತಿಹಾಸ ಅನಾವರಣಗೊಳಿಸುವ ಅವಕಾಶ ಲಭಿಸಿದೆ
>
> **ಮಹಮದ್ ರಫೀಕ್,** ಉಪನಿರ್ದೇಶಕ, ಖಾದಿ ಮತ್ತು ಗ್ರಾಮೋದ್ಯೋಗ ಇಲಾಖೆ

> ಸ್ತಬ್ಧಚಿತ್ರ ಪ್ರದರ್ಶನಕ್ಕೆ ಶಿವಗಂಗೆ ಆಯ್ಕೆಯಾಗಿರುವುದು ಸಂತಸ ತಂದಿದೆ. ಕ್ಷೇತ್ರದ ಇತಿಹಾಸ ಪ್ರಸಿದ್ಧ ತಾಣಗಳು ಮುಂದಿನ ದಿನಗಳಲ್ಲಿ ಪ್ರವರ್ಧಮಾನಕ್ಕೆ ಬರಲಿ.
>
> **ಎನ್.ಶ್ರೀನಿವಾಸ್,** ನೆಲಮಂಗಲ ಶಾಸಕ

ನಾಡಹಬ್ಬದ ಸ್ತಬ್ಧಚಿತ್ರ ಪ್ರದರ್ಶನಕ್ಕೆ ಆಯ್ಕೆಯಾಗಿರುವ ಶಿವಗಂಗೆ ಕ್ಷೇತ್ರದ ಮಾದರಿ

ಗಾಂಜಾ ಮಾರಾಟ: ಆರೋಪಿ ಬಂಧನ

ದಾಬಸ್ ಪೇಟೆ: ನೆಲಮಂಗಲ ತಾಲ್ಲೂಕು, ಸೋಂಪುರ ಹೋಬಳಿ ಶಿವಗಂಗೆಯ ಶಾರದಾ ಕ್ರಾಸ್‌ನ ಅರಳಿಕಟ್ಟೆ ಹತ್ತಿರ ಗಾಂಜಾ ಮಾರಾಟ ಮಾಡುತ್ತಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. 2.1 ಕೆ.ಜಿ. ಗಾಂಜಾ ವಶಪಡಿಸಿಕೊಂಡಿದ್ದಾರೆ.

ಸೋಂಪುರ ಹೋಬಳಿ, ಶಿವಾನಂದ ನಗರ ಗ್ರಾಮದ ನಿವಾಸಿ ಹರ್ಷ (19) ಬಂಧಿತ ಆರೋಪಿ. ‘ಉತ್ತರ ಭಾರತದಿಂದ ರೈಲುಗಳಲ್ಲಿ ಬರುವ ಹಿಂದಿ ಭಾಷಿಗರು ಚಿಕ್ಕಬಾಣಾವರ ರೈಲು ನಿಲ್ದಾಣದಲ್ಲಿ ನಮಗೆ ಗಾಂಜಾ ಮಾರಾಟ ಮಾಡುತ್ತಾರೆ. ಸ್ನೇಹಿತ ಹರ್ಷಿ ಮತ್ತು ನಾನು ಅದನ್ನು ಗುಡೆಮಾರನಹಳ್ಳಿ, ಕುದೂರು, ಬಾಣವಾಡಿ, ಶಿವಗಂಗೆ ಭಾಗಗಳಲ್ಲಿ ಹಾಗೂ ದಾಬಸ್ ಪೇಟೆ ಕೈಗಾರಿಕಾ ಪ್ರದೇಶ ಲಾರಿ ಪಾರ್ಕಿಂಗ್‌ಗಳಲ್ಲಿ ಮಾರಾಟ ಮಾಡುತ್ತಿದ್ದೆವು’ ಎಂದು ವಿಚಾರಣೆ ವೇಳೆ ಆರೋಪಿ ಬಾಯಿ ಬಿಟ್ಟಿರುವುದಾಗಿ ಪೊಲೀಸರು ಮಾಹಿತಿ ನೀಡಿದ್ದಾರೆ.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ ನಡೆದ ದೇಸಿ ಸಮ್ಮೇಳನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ

ಪ್ರತಿರೋಧಕ ಶಕ್ತಿಯುಳ್ಳ ತಳಿ ಅಗತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹವಾಮಾನ ವೈಪರೀತ್ಯದಿಂದಾಗಿ ರಾಜ್ಯ ನಿರಂತರವಾಗಿ ಅತಿವೃಷ್ಟಿ-ಅನಾವೃಷ್ಟಿಗೆ ತುತ್ತಾಗುತ್ತಿದ್ದು, ವಾತಾವರಣ ಬದಲಾವಣೆಗೆ ಹೊಂದಿಕೊಂಡು ಬೆಳೆಯುವ ತಳಿಗಳು ಮತ್ತು ತಂತ್ರಜ್ಞಾನಗಳನ್ನು ಕೃಷಿ ವಿಜ್ಞಾನಿಗಳು ಅಭಿವೃದ್ಧಿಪಡಿಸಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಲಹೆ ನೀಡಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಬುಧವಾರ ನಡೆದ 'ದೇಸಿ ಸಮ್ಮೇಳನ ಮತ್ತು ಬೇಕಿಂಗ್ ಮೌಲ್ಯವರ್ಧನಾ ಸಂಸ್ಥೆಯ' ನೂತನ ಕಟ್ಟಡ ಉದ್ಘಾಟಿಸಿ ಅವರು ಮಾತನಾಡಿದರು.

'ಕಡಿಮೆ ಮಳೆ ಹಾಗೂ ಕಡಿಮೆ ನೀರಿನಲ್ಲಿ ಬೆಳೆಯುವಂತಹ ತಳಿಗಳನ್ನು ವಿಜ್ಞಾನಿಗಳು ಅಭಿವೃದ್ಧಿಪಡಿಸಬೇಕು. ಹವಾಮಾನ ವೈಪರೀತ್ಯದಿಂದ ಬೆಳೆಗಳನ್ನು ರಕ್ಷಿಸಿಕೊಳ್ಳುವುದು ಹೇಗೆ ಎಂಬುದರ ಬಗ್ಗೆ ಕೃಷಿ ವಿಶ್ವವಿದ್ಯಾಲಯಗಳು ಹೆಚ್ಚು ಸಂಶೋಧನೆಗಳನ್ನು ನಡೆಸಬೇಕಾದ ಅಗತ್ಯವಿದೆ' ಎಂದು ಸಿದ್ದರಾಮಯ್ಯ ತಿಳಿಸಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಬುಧವಾರ ನಡೆದ ದೇಸಿ ಸಮ್ಮೇಳನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಿದರು. (ಎಡದಿಂದ) ಕಂದಾಯ ಸಚಿವ ಕೃಷ್ಣ ಬೈರೇಗೌಡ, ಶಾಸಕ ಶರತ್ ಬಚ್ಚೇಗೌಡ, ಕೃಷಿ ಸಚಿವ ಎನ್. ಚಲುವರಾಯಸ್ವಾಮಿ, ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ್ ಇದ್ದಾರೆ ಪ್ರಜಾವಾಣಿ ಚಿತ್ರ

'ಪ್ರಯೋಗಾಲಯಗಳಲ್ಲಿ ನಡೆಯುವ ಸಂಶೋಧನೆಗಳು ಕೃಷಿಕರ ಜಮೀನಿನ ವರೆಗೂ ತಲುಪಬೇಕಾಗಿದೆ. ರೈತರಿಗೆ ಯಾವ ರೀತಿಯಲ್ಲಿ ಈ ಸಂಶೋಧನೆಗಳು ಅನುಕೂಲವಾಗಿವೆ ಎಂಬುದು ತಿಳಿದಾಗ ಮಾತ್ರ ಸುಸ್ಥಿರ ಕೃಷಿ ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಕೃಷಿ ವಿಶ್ವವಿದ್ಯಾಲಯಗಳು 'ಲ್ಯಾಬ್ ಟು ಲ್ಯಾಂಡ್-ಲ್ಯಾಂಡ್ ಟು ಲ್ಯಾಬ್' ಪರಿಕಲ್ಪನೆ ಯಲ್ಲಿ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಬೇಕಾಗಿದೆ' ಎಂದು ಸಿಎಂ ಸಲಹೆ ನೀಡಿದರು.

'ಹೆಚ್ಚುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಆಹಾರ ಉತ್ಪಾದನೆ ಹೆಚ್ಚಿಸುವಲ್ಲಿ ಕೃಷಿ ವಿಶ್ವವಿದ್ಯಾಲಯಗಳ ಪಾತ್ರ ಬಹಳ ಮುಖ್ಯವಾಗಿದೆ. ಹಸಿರು ಕ್ರಾಂತಿಯ ಬಳಿಕ ಭಾರತವು ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಸಾಧಿಸಿತು. ದೇಶದಲ್ಲಿ ಶೇ 54ರಷ್ಟು ಮಂದಿ ಮಾತ್ರ ಕೃಷಿ ಮಾಡುತ್ತಿದ್ದಾರೆ. ಆದ್ದರಿಂದ, ಕೃಷಿ ಕ್ಷೇತ್ರಕ್ಕೆ ಹೆಚ್ಚು ಪ್ರೋತ್ಸಾಹ ನೀಡದಬೇಕಾಗಿದೆ. ಆಗ ಮಾತ್ರ ಆಹಾರ ಉತ್ಪಾದನಾ ಪ್ರಮಾಣವು ಹೆಚ್ಚಿಸಬಹುದು' ಎಂದು ತಿಳಿಸಿದರು.

'ಕೃಷಿ ಕ್ಷೇತ್ರಕ್ಕೆ ಸಂಬಂಧಸಿದಂತೆ ಸಂಶೋಧನೆ ಮತ್ತು ವಿಸ್ತರಣಾ ಕಾರ್ಯಗಳಿಗೆ ನಮ್ಮ ಸರ್ಕಾರದ ವತಿಯಿಂದ ಸಂಪೂರ್ಣವಾದ ಸಹಕಾರ ನೀಡಲಾಗುವುದು' ಎಂದು ಕಾರ್ಯಕ್ರಮದಲ್ಲಿ ಅವರು ಭರವಸೆ ನೀಡಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಹೊರತಂದಿರುವ 'ಕೃಷಿ ಬೆಳೆಗಳ ಸುಧಾರಿತ ಬೇಸಾಯ ಪದ್ಧತಿಗಳು' ಎಂಬ ಪುಸ್ತಕ ಹಾಗೂ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ ನವೆಂಬರ್ 17ರಿಂದ 20ರವರೆಗೆ ನಡೆಯಲಿರುವ ಕೃಷಿ ಮೇಳದ ಲಾಂಛನವನ್ನು ಇದೇ ವೇಳೆ ಬಿಡುಗಡೆಗೊಳಿಸಲಾಯಿತು.

ಕಂದಾಯ ಸಚಿವ ಕೃಷ್ಣಬೈರೇಗೌಡ, ಕೃಷಿ ಸಚಿವ ಎನ್.ಚಲುವರಾಯಸ್ವಾಮಿ, ಶಾಸಕರಾದ ಶರತ್ ಬಚ್ಚೇಗೌಡ, ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ.ಸುರೇಶ್, ಮ್ಯಾನೇಜ್ ಸಂಸ್ಥೆಯ ಮಹಾ ನಿರ್ದೇಶಕ ಪಿ. ಚಂದ್ರಶೇಖರ ಸೇರಿದಂತೆ ಹಲವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಗ್ರಾಮೀಣ ರಸ್ತೆ ಅಭಿವೃದ್ಧಿ ಪ್ರಸ್ತಾವ ಸಲ್ಲಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 7,100 ಕಿ.ಮೀ. ಉದ್ದದ ಗ್ರಾಮೀಣ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಪ್ರಸ್ತಾವ ಸಲ್ಲಿಸುವಂತೆ ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯ ಅಧಿಕಾರಿಗಳಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಸೂಚನೆ ನೀಡಿದರು.

ಇಲಾಖೆಯ ವಿವಿಧ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆಯನ್ನು ಬುಧವಾರ ನಡೆಸಿದ ಸಚಿವರು, ಗ್ರಾಮೀಣ ರಸ್ತೆಗಳ ಸ್ಥಿತಿಗತಿ ಕುರಿತು ಮಾಹಿತಿ ಪಡೆದರು. ಪ್ರಸ್ತುತ 7,100 ಕಿ.ಮೀ. ಉದ್ದದ ಗ್ರಾಮೀಣ ರಸ್ತೆಗಳನ್ನು ಅಭಿವೃದ್ಧಿಪಡಿಸಬೇಕಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ಈ ಸಂಬಂಧ ವಿಸ್ತೃತವಾದ ಪ್ರಸ್ತಾವ ಸಲ್ಲಿಸಿ, ಅನುಮೋದನೆ ಪಡೆಯುವಂತೆ ಸಚಿವರು ಸೂಚಿಸಿದರು.

ರಾಜ್ಯದ ವಿವಿಧೆಡೆ ಕಳಪೆ ಕಾಮಗಾರಿ ನಡೆಸಿರುವ ಆರು ಮಂದಿ ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿಸುವಂತೆಯೂ ಸಚಿವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಕಟ್ಟಡಕ್ಕೆ ಅನುದಾನ: ಸ್ವಂತ ಕಟ್ಟಡವಿಲ್ಲದ ಗ್ರಾಮ ಪಂಚಾಯಿತಿಗಳಿಗೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ₹ 20 ಲಕ್ಷ ಅನುದಾನ ಒದಗಿಸಲಾಗುವುದು. ಅದನ್ನು ಬಳಸಿಕೊಂಡು ಕಟ್ಟಡ ನಿರ್ಮಾಣ ಮಾಡಬೇಕು ಎಂದು ತಿಳಿಸಿದರು.

ಆಯಾ ಗ್ರಾಮ ಪಂಚಾಯಿತಿಯ ಸದಸ್ಯರ ಸಂಖ್ಯೆಗೆ ಅನುಗುಣವಾಗಿ ಕಟ್ಟಡ ನಿರ್ಮಾಣ ಮಾಡಬೇಕು. ಭವಿಷ್ಯದ ದಿನಗಳಿಗೆ ಅನುಕೂಲವಾಗುವಂತೆ ಕಟ್ಟಡದ ವಿನ್ಯಾಸ ಮಾಡಬೇಕು ಎಂದರು.

ಗೋಮಾಳ ಜಮೀನುಗಳಲ್ಲಿ ಉದ್ಯೋಗ ಖಾತರಿ ಯೋಜನೆಯಡಿ ಗಿಡಗಳನ್ನು ನೆಟ್ಟು, ಪೋಷಿಸಬೇಕು. ಶುದ್ಧ ನೀರಿನ ಘಟಕಗಳ ನಿರ್ವಹಣೆ ಕೆಲಸವನ್ನು ಪರಿಣಿತ ಸಂಸ್ಥೆಗಳಿಗೆ ವಹಿಸಲು ಕ್ರಮ ಕೈಗೊಳ್ಳಬೇಕು ಎಂದು ನಿರ್ದೇಶನ ನೀಡಿದರು.

ಗಾಂಧಿ ಕೃಷಿ ವಿಶ್ವವಿದ್ಯಾಲಯದ ಕೃಷಿ ಸೂಕ್ಷ್ಮ ಜೀವಶಾಸ್ತ್ರ ವಿಭಾಗದ ಸಾಧನೆ

'ಜೈವಿಕ ಸಿರಿ' ಗೊಬ್ಬರ ಅಭಿವೃದ್ಧಿ

• ಖಲೀಲಅಹ್ಮದ ಶೇಖ

ಬೆಂಗಳೂರು: ಗಾಂಧಿ ಕೃಷಿ ವಿಶ್ವವಿದ್ಯಾಲಯದ ಕೃಷಿ ಸೂಕ್ಷ್ಮ ಜೀವಶಾಸ್ತ್ರ ವಿಭಾಗದಿಂದ ಮೆಕ್ಕೆಜೋಳದ ದಿಂಡಿನ ಪುಡಿಯಿಂದ 'ಜೈವಿಕ ಸಿರಿ' ಎಂಬ ಗೊಬ್ಬರವನ್ನು ಅಭಿವೃದ್ಧಿಪಡಿಸಲಾಗಿದೆ.

ವಿಶ್ವ ಬ್ಯಾಂಕ್ ಹಾಗೂ ರಾಷ್ಟ್ರೀಯ ಕೃಷಿ ಉನ್ನತ ಶಿಕ್ಷಣ ಯೋಜನೆಯ (ಎನ್‌ಎಎಚ್‌ಇಪಿ) ಧನ ಸಹಾಯದಿಂದ 'ವೇಸ್ಟ್ ಟು ವೆಲ್ತ್' ಯೋಜನೆ ಅಡಿಯಲ್ಲಿ ಈ ಗೊಬ್ಬರ ತಯಾರಿಸಲಾಗಿದೆ. ಕೃಷಿ ವಿಶ್ವವಿದ್ಯಾಲಯದಲ್ಲಿ ಬುಧವಾರ ನಡೆದ ದೇಸಿ ಸಮ್ಮೇಳನದಲ್ಲಿ 'ಜೈವಿಕ ಸಿರಿ' ಗೊಬ್ಬರ ರೈತರ ಗಮನ ಸೆಳೆಯಿತು.

'ರಾಗಿ, ಭತ್ತ, ತೊಗರಿ, ಕಡ್ಲೆ, ಜೋಳ, ಹತ್ತಿ ಸೇರಿದಂತೆ ಅಡಿಕೆ, ತೆಂಗು, ರಬ್ಬರ್, ಶುಂಠಿ ಬೆಳೆಯಲ್ಲಿ ಉತ್ತಮ ಇಳುವರಿ ಪಡೆಯಲು ಜೈವಿಕ ಸಿರಿ ಗೊಬ್ಬರ ನೆರವಾಗಲಿದೆ. ಇದರ ಬಳಕೆಯಿಂದ ರಾಸಾಯನಿಕ ಗೊಬ್ಬರದ ಅವಲಂಬನೆ ಕಡಿಮೆ ಮಾಡಬಹುದು. ಜತೆಗೆ ಶೇ 10 ರಿಂದ 30ರಷ್ಟು ಇಳುವರಿಯೂ ಸುಧಾರಿಸುತ್ತದೆ' ಎಂದು ಕೃಷಿ ಸೂಕ್ಷ್ಮ ಜೀವವಿಜ್ಞಾನ ವಿಭಾಗದ ಪ್ರಾಧ್ಯಾಪಕ ಹಾಗೂ ಪ್ರಧಾನ ಸಂಶೋಧಕ ಎನ್. ಉಮಾಶಂಕರ್ ಮಾಹಿತಿ ನೀಡಿದರು.

ಮೆಕ್ಕೆಜೋಳದ ದಿಂಡಿನ ಪುಡಿಯಿಂದ ತಯಾರಿಸಲಾದ ಜೈವಿಕ ಸಿರಿ ಗೊಬ್ಬರ

'ಈ ಗೊಬ್ಬರ, ಭೂಮಿಯಲ್ಲಿ ಬಳಕೆ ಆಗದೇ ಉಳಿದಿರುವ ರಂಜಕ ಮತ್ತು ಪೊಟ್ಯಾಶನ್ನು ಕರಗಿಸಿ ಗಿಡಗಳಿಗೆ ಒದಗಿಸುತ್ತದೆ. ಮಣ್ಣಿನ ತೇವಾಂಶವನ್ನು ಕಾಪಾಡುತ್ತದೆ. ಹನಿ ನೀರಾವರಿ ಪದ್ಧತಿಯ ಮೂಲಕ ಇದನ್ನು ಬೆಳೆಗಳಿಗೆ ಒದಗಿಸಬಹುದು' ಎಂದು ವಿವರಿಸಿದರು.

'ಜೈವಿಕ ಸಿರಿ ಗೊಬ್ಬರ ಬಳಕೆಯಿಂದ ಶೇ 25ರಷ್ಟು ರಾಸಾಯನಿಕ ಗೊಬ್ಬರ ಬಳಕೆ ಕಡಿಮೆಯಾಗಲಿದೆ. ಇದು ಬೀಜಗಳಲ್ಲಿನ ಮೊಳಕೆ ಒಡೆಯುವ ಶಕ್ತಿಯನ್ನು ವೃದ್ಧಿಸುತ್ತದೆ. ಬೆಳೆ ಇಳುವರಿ ಹೆಚ್ಚಳಕ್ಕೆ ನೆರವಾಗುತ್ತದೆ. ಮಣ್ಣಿನ ಫಲವತ್ತತೆ ಸುಧಾರಿಸುತ್ತದೆ' ಎಂದು ಅವರು ವಿವರಿಸಿದರು.

'ಮುಂದಿನ ದಿನಗಳಲ್ಲಿ ಜೈವಿಕ ಸಿರಿ ಗೊಬ್ಬರವನ್ನು ಪುಡಿ ಹಾಗೂ ದ್ರವ ರೂಪದಲ್ಲಿ ಮಾರುಕಟ್ಟೆ ಬಿಡುಗಡೆ ಮಾಡಲಾಗುತ್ತದೆ' ಎಂದರು

ಪುಡಿ ರೂಪದ ಜೈವಿಕ ಸಿರಿ ಬಳಕೆ ವಿಧಾನಗಳು

ಬೀಜೋಪಚಾರ: 10–20 ಗ್ರಾಂ ಜೈವಿಕ ಸಿರಿ ಪುಡಿಯನ್ನು 100 ಮಿ.ಲೀ ಬೆಲ್ಲದ ಪಾಕದೊಂದಿಗೆ ಬೆರೆಸಿ ದ್ರವ ತಯಾರಿಸಿಕೊಂಡು ಸಣ್ಣ ಗಾತ್ರದ ಬೀಜಗಳಿಗೆ ಲೇಪಿಸಿಕೊಳ್ಳಬೇಕು. ಸಂಸ್ಕರಿಸಿದ ಬೀಜಗಳನ್ನು 30 ನಿಮಿಷ ನೆರಳಿನಲ್ಲಿ ಒಣಗಿಸಿಕೊಂಡು 24 ಗಂಟೆಯೊಳಗೆ ಬಿತ್ತನೆ ಮಾಡಬೇಕು.

ಸಸ್ಯ ಬೇರುಗಳಿಗೆ: 1ಕೆ.ಜಿ 'ಜೈವಿಕ ಸಿರಿ' ಪುಡಿಯನ್ನು 10 ಲೀಟರ್ ನೀರಿಗೆ ಬೆರೆಸಿ ದ್ರಾವಣ ಮಾಡಿಕೊಳ್ಳಬೇಕು. ಇದರಲ್ಲಿ ಪೈರಿನ ಬೇರನ್ನು 30 ನಿಮಿಷ ನೆನೆಸಿ ನಂತರ ನಾಟಿ ಮಾಡಬೇಕು. ನರ್ಸರಿಗಳಲ್ಲಿ 1 ಕೆ.ಜಿ. ಜೈವಿಕ ಸಿರಿ ಗೊಬ್ಬರವನ್ನು 1 ಟನ್ ಕೋಕೋಪಿಟ್ ಜೊತೆ ಬೆರೆಸಿಕೊಂಡು ಬಳಕೆ ಮಾಡಬಹುದು.

ಮಣ್ಣಿಗೆ ಸೇರಿಸುವ ವಿಧಾನ: ಒಂದು ಎಕರೆಗೆ 4 ರಿಂದ 5 ಕೆ.ಜಿ. ಜೈವಿಕ ಸಿರಿ ಗೊಬ್ಬರವನ್ನು 1 ಟನ್ ಕೊಟ್ಟಿಗೆ ಗೊಬ್ಬರ, 200 ಕೆ.ಜಿ. ಸಾವಯವ ಗೊಬ್ಬರ, 200 ಕೆ.ಜಿ. ಎರೆಹುಳು ಗೊಬ್ಬರದೊಂದಿಗೆ ಬೆರೆಸಿ ಭೂಮಿ ಸಿದ್ಧತೆಯ ವೇಳೆ ಮಣ್ಣಿಗೆ ಸೇರಿಸಬಹುದು ಎಂದು ಎನ್. ಉಮಾಶಂಕರ್ ವಿವರಿಸಿದರು.

'ಬಿಜೆಪಿಯವರದ್ದು ಸುಳ್ಳ ಮಳ್ಳ ಪಟಾಲಂ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಜೆಪಿಯವರು ಮಗುವನ್ನು ಚಿವುಟಿ ಆಡಿಸುತ್ತಾರೆ. ಅವರದ್ದು ಸುಳ್ಳ ಮಳ್ಳ ಪಟಾಲಂ. ಆದರೆ, ಸತ್ಯ ಹರಿಶ್ಚಂದ್ರ ರೀತಿ ಪೋಸ್ ಕೊಡುತ್ತಾರೆ' ಎಂದು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ವಾಗ್ದಾಳಿ ನಡೆಸಿದರು.

ರಾಮಲಿಂಗಾ ರೆಡ್ಡಿ

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ಐಟಿ ದಾಳಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೆಸರನ್ನು ಬಿಜೆಪಿಯವರು ಹೇಳುತ್ತಾರೆ. ಅವರಿಗೂ ಐಟಿ ದಾಳಿಗೂ ಏನು ಸಂಬಂಧ ಇದೆ' ಎಂದು ಪ್ರಶ್ನೆ ಮಾಡಿದರು.

'ಗುತ್ತಿಗೆದಾರರ ಮನೆಯಲ್ಲಿ ಸಿಕ್ಕಿದ ಹಣ ಬಿಜೆಪಿಯ ಶೇ 40 ಕಮಿಷನ್ ಇರಬೇಕು. ಗುತ್ತಿಗೆದಾರರು ಬಿಜೆಪಿಗೂ ಕಮಿಷನ್ ಕೊಟ್ಟು, ನಮಗೂ ಕಮಿಷನ್ ಕೊಡುತ್ತಾರಾ? ಬಿಜೆಪಿಯವರು ಕಲೆಕ್ಷನ್ ಮಾಸ್ಟರ್‌ಗಳು. ಕರ್ನಾಟಕವನ್ನು ಎಟಿಎಂ ಮಾಡಿದ್ದೇ ಬಿಜೆಪಿಯವರು' ಎಂದು ಆರೋಪಿಸಿದರು.

'ಡಿ.ಕೆ. ಶಿವಕುಮಾರ್ ತಿಹಾರ್ ಜೈಲಿಗೆ ಹೋಗುತ್ತಾರೆ' ಎಂಬ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ನಳಿನ್ ಕುಮಾರ್ ಕಟೀಲ್ ಅವರನ್ನು ಬಿಜೆಪಿಯಲ್ಲೇ ಯಾರೂ ಲೆಕ್ಕಕ್ಕೆ ಇಟ್ಟಿಲ್ಲ. ಅವರ ಹೇಳಿಕೆಗಳ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳಬಾರದು' ಎಂದು ರಾಮಲಿಂಗಾ ರೆಡ್ಡಿ ವ್ಯಂಗ್ಯವಾಡಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷರ ಬದಲಾವಣೆ ಕುರಿತು ಪ್ರತಿಕ್ರಿಯಿಸಿದ ಸಚಿವ ರಾಮಲಿಂಗಾ ರೆಡ್ಡಿ, 'ರಾಹುಲ್ ಗಾಂಧಿ ಅವರನ್ನು ಈ ಹಿಂದೆ ಭೇಟಿ ಮಾಡಿದ್ದಾಗ ಕಾರ್ಯಾಧ್ಯಕ್ಷರನ್ನು ಬದಲಿಸುವಂತೆ ಹೇಳಿದ್ದೆ. ಕಾರ್ಯಾಧ್ಯಕ್ಷ ಸ್ಥಾನ ಬಿಟ್ಟು ಕೊಡಲು ನಾನು ಸಿದ್ಧನಿದ್ದೇನೆ. ಎಸ್‌ಟಿ ಸಮುದಾಯಕ್ಕೂ ಒಂದು ಕಾರ್ಯಾಧ್ಯಕ್ಷ ಸ್ಥಾನ ನೀಡಲಿ ಬಿಡಿ' ಎಂದು ಹೇಳಿದರು.

EXAM DH ಪ್ರಜಾವಾಣಿ MASTERMIND™

ಮತ್ತಷ್ಟು 'ಪ್ರಚಲಿತ'ಕ್ಕಾಗಿ..

ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರಚಲಿತ ವಿದ್ಯಮಾನಗಳು ಸೇರಿದಂತೆ ನಾಗರಿಕ ಸೇವಾ ಪರೀಕ್ಷೆಗಳಿಗೆ ಪೂರಕವಾದ ಲೇಖನ, ವಿಡಿಯೊಗಳಿಗಾಗಿ ಪ್ರಜಾವಾಣಿ- ಡೆಕ್ಕನ್‌ಹೆರಾಲ್ಡ್ ಎಕ್ಸಾಮ್ 'ಮಾಸ್ಟರ್‌ಮೈಂಡ್' ಇ-ಪೇಪರ್‌ಗೆ ಚಂದಾದಾರರಾಗಿ. ಚಂದಕ್ಕಾಗಿ ಪಕ್ಕದಲ್ಲಿರುವ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ.

ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ

ಭಾರತ- ತಾಂಜಾನಿಯ ಸಂಬಂಧಗಳು

ತಾಂಜಾನಿಯಾದ ಅಧ್ಯಕ್ಷೆ ಸಮಿಯಾ ಸುಲುಹು ಹಸನ್ ಅವರು ಈಚೆಗೆ ರಾಷ್ಟ್ರಪತಿ ಭವನದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿಯಾದರು

ಸುದ್ದಿಯಲ್ಲಿರುವ ಕಾರಣ?

ನವದೆಹಲಿಯಲ್ಲಿ ಭಾರತ ತಾಂಜಾನಿಯ ಹೂಡಿಕೆ ವೇದಿಕೆಯ ಸಮಾವೇಶವನ್ನು ಆಯೋಜಿಸಲಾಗಿತ್ತು. ತಾಂಜಾನಿಯಾದ ಅಧ್ಯಕ್ಷೆ ಸಮಿಯಾ ಸುಲುಹು ಹಸನ್ ಅವರು ಭಾರತಕ್ಕೆ ಭೇಟಿ ನೀಡಿದರು ಮತ್ತು ಭಾರತ ಮತ್ತು ತಾಂಜಾನಿಯ ರಾಷ್ಟ್ರಗಳು ದ್ವಿಪಕ್ಷೀಯ ಸಂಬಂಧಗಳನ್ನು ಕಾರ್ಯ ತಂತ್ರದ ಸಹಭಾಗಿತ್ವಕ್ಕೆ ಬದಲಿಸಿಕೊಂಡಿತು.

ತೆಗೆದುಕೊಂಡ ಪ್ರಮುಖ ನಿರ್ಧಾರಗಳು

ಎರಡೂ ರಾಷ್ಟ್ರಗಳು ವಿವಿಧ ವಲಯಗಳಲ್ಲಿ ಸಹಕಾರವನ್ನು ಮತ್ತಷ್ಟು ಸಬಲೀಕರಣಗೊಳಿಸಲು 6 ಒಪ್ಪಂದಗಳಿಗೆ ಸಹಿ ಹಾಕಿವೆ. ಡಿಜಿಟಲ್ ವಲಯ, ಸಾಂಸ್ಕೃತಿಕ ವಲಯ, ಕ್ರೀಡಾ ವಲಯ, ಸಮುದ್ರಯಾನ ಕೈಗಾರಿಕೆಗಳು, ಪರಸ್ಪರ ಮಾಹಿತಿಯ ಹಂಚಿಕೆ ಮತ್ತು ಶ್ವೇತ ಹಡಗುಯಾನ ವಲಯದಲ್ಲಿ ಜಂಟಿಯಾಗಿ ಕಾರ್ಯನಿರ್ವಹಿಸಲು ಮುಂದಾಗಿವೆ.

ಶ್ವೇತ ಹಡಗು ಯಾನ ಒಪ್ಪಂದ

ಸಮುದ್ರದಲ್ಲಿ ಮಿಲಿಟರಿಯೇತರ ವಾಣಿಜ್ಯ ವಾಹನಗಳು ಸರಕು ಸಾಮಗ್ರಿಗಳನ್ನು ಹೊತ್ತು ಸಂಚರಿಸುತ್ತವೆ. ಇವುಗಳಿಗೆ ಸಂಬಂಧಿಸಿದಂತೆ ಎರಡು ರಾಷ್ಟ್ರಗಳ ನಡುವೆ ಮಾಹಿತಿಯನ್ನು ಸಂಪೂರ್ಣವಾಗಿ ಹಂಚಿಕೊಳ್ಳಲಾಗುತ್ತದೆ.

ಹಡಗು ಯಾನ ವಲಯದಲ್ಲಿ ಹಡಗುಗಳನ್ನು ಮೂರು ವರ್ಣಗಳಾಗಿ ವಿಂಗಡಿಸಲಾಗುತ್ತದೆ. ಶ್ವೇತ ವರ್ಣದ ಹಡಗುಗಳು ಎಂದರೆ ವಾಣಿಜ್ಯ ಹಡಗುಗಳು, ಬೂದು ಬಣ್ಣದ ಹಡಗುಗಳು ಎಂದರೆ ಮಿಲಿಟರಿ ಹಡಗುಗಳು ಮತ್ತು ಕಪ್ಪುವರ್ಣದ ಹಡಗುಗಳು ಎಂದರೆ ಅಕ್ರಮವಾಗಿ ಸಂಚರಿಸುತ್ತಿರುವ ಹಡಗುಗಳು ಎಂದು ವರ್ಗೀಕರಿಸಲಾಗುತ್ತದೆ.

ಸರಕುಗಳ ಸಾಗಣಿಕೆಗೆ ಸಂಬಂಧಿಸಿದಂತೆ ವಾಣಿಜ್ಯ ಸ್ವರೂಪದ ಹಡಗುಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಮುಕ್ತವಾಗಿ ಸಂಚರಿಸುವ ಅವಕಾಶವನ್ನು ಹೊಂದಿರುತ್ತವೆ. ಇವುಗಳಿಗೆ ಸಂಬಂಧಿಸಿದಂತೆ ಪರಸ್ಪರ ಮಾಹಿತಿಯನ್ನು ಒದಗಿಸುವ ನಿಟ್ಟಿನಲ್ಲಿ ಎರಡು ರಾಷ್ಟ್ರಗಳು ಸಹಮತವನ್ನು ಸೂಚಿಸಿದೆ.

ವ್ಯಾಪಾರಿ ವಲಯದಲ್ಲಿ ಎರಡು ರಾಷ್ಟ್ರಗಳ ನಡುವಿನ ಮುಕ್ತ ವ್ಯಾಪಾರವನ್ನು ಉತ್ತೇಜಿಸುವ ನಿಟ್ಟಿನಲ್ಲಿ ಭಾರತೀಯ ರೂಪಾಯಿ ಮತ್ತು ತಾಂಜಾನಿಯಾದ ಶಿಲ್ಲಿಂಗ್‌ನಲ್ಲಿ ರಫ್ತು ಮತ್ತು ಆಮದನ್ನು ನಡೆಸಲು ಎರಡು ರಾಷ್ಟ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಲ ಬ್ಯಾಂಕುಗಳಿಗೆ ಅಧಿಕೃತವಾಗಿ ಒಪ್ಪಿಗೆಯನ್ನು ನೀಡಲು ಭಾರತ ಮತ್ತು ತಾಂಜಾನಿಯ ಒಪ್ಪಿಕೊಂಡಿದೆ.

ರಕ್ಷಣಾ ವಲಯದಲ್ಲಿ ಐದು ವರ್ಷಗಳ ಅಧಿಕೃತ ಕಾರ್ಯಸೂಚಿಯನ್ನು ಜಾರಿಗೆ ತಂದಿದ್ದು ಎರಡು ರಾಷ್ಟ್ರಗಳ ನಡುವಿನ ಮಿಲಿಟರಿ ತರಬೇತಿ, ಸಮುದ್ರಯಾನ ಸಮನ್ವಯತೆ, ಸಾಮರ್ಥ್ಯ ಅಭಿವೃದ್ಧಿ ರಕ್ಷಣಾ ವಲಯದ ಉತ್ಪನ್ನಗಳ ಉತ್ಪಾದನೆಗೆ ಸಂಬಂಧಿಸಿದಂತೆ ಜಂಟಿಯಾಗಿ ಕಾರ್ಯನಿರ್ವಹಿಸಲು ಎರಡು ರಾಷ್ಟ್ರಗಳು ಮುಂದಾಗಿವೆ.

ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯ ತಾಂಜಾನಿಯಾದ ಅಧ್ಯಕ್ಷರಾದ ಸಮಿಯಾ ಸುಲುಹು ಹಸನ್ ಅವರಿಗೆ ಗೌರವ ಡಾಕ್ಟರೇಟ್ ಪದವಿಯನ್ನು ನೀಡಿ ಗೌರವಿಸಿತು. ಎರಡು ರಾಷ್ಟ್ರಗಳ ನಡುವೆ ಆರ್ಥಿಕ ಮತ್ತು ರಾಜತಾಂತ್ರಿಕ ಸಹಭಾಗಿತ್ವ, ಪ್ರಾದೇಶಿಕ ಸಮನ್ವಯತೆ ಮತ್ತು ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವ ನಿಟ್ಟಿನಲ್ಲಿ ಪ್ರಮುಖ ಪಾತ್ರವನ್ನು ಇವರು ವಹಿಸಿದ್ದರು. ಈ ಕಾರಣಕ್ಕಾಗಿ ಇವರಿಗೆ ಗೌರವ ಡಾಕ್ಟರೇಟ್ ಪದವಿಯನ್ನು ನೀಡಿ ಸನ್ಮಾನಿಸಲಾಯಿತು.

ತಾಂಜಾನಿಯ ಸಂಬಂಧಿತ ಮಾಹಿತಿ

ಪೂರ್ವ ಆಫ್ರಿಕಾದ ಅತಿದೊಡ್ಡ ರಾಷ್ಟ್ರ ಮತ್ತು ಅತಿ ಹೆಚ್ಚು ನೆರೆಹೊರೆ ರಾಷ್ಟ್ರಗಳನ್ನು ಹೊಂದಿರುವ ಪ್ರಪಂಚದ 10 ರಾಷ್ಟ್ರಗಳಲ್ಲಿ ತಾಂಜಾನಿಯಾ ಕೂಡ ಒಂದಾಗಿದ್ದು, ಎಂಟು ರಾಷ್ಟ್ರಗಳೊಂದಿಗೆ ತನ್ನ ಗಡಿರೇಖೆಯನ್ನು ಹಂಚಿಕೊಂಡಿದೆ. ತಾಂಜಾನಿಯಾದೊಂದಿಗೆ ಗಡಿರೇಖೆ ಹೊಂದಿರುವ ರಾಷ್ಟ್ರಗಳು- ಉಗಾಂಡ, ಕೀನ್ಯಾ, ರವಾಂಡ, ಬುರುಂಡಿ, ಜಾಂಬಿಯ, ಮಲಾವಿ, ಮಾಜಾಂಬಿಕ್ ಮತ್ತು ಡೆಮಾಕ್ರೆಟಿಕ್ ರಿಪಬ್ಲಿಕ್ ಆಫ್ ಕಾಂಗೋ. ತಾಂಜಾನಿಯಾದ ರಾಜಧಾನಿ ದಾರ್-ಎಸ್-ಸಲಾಂ ಆದರೆ ಶಾಸಕಾಂಗದ ರಾಜಧಾನಿಯಾಗಿ ದೊಡೋಮ ಕಾರ್ಯನಿರ್ವಹಿಸುತ್ತದೆ. ತಾಂಜಾನಿಯಾದ ಉತ್ತರ ಭಾಗದಲ್ಲಿ ವಿಕ್ಟೋರಿಯಾ ಸರೋವರ, ಪಶ್ಚಿಮ ಭಾಗದಲ್ಲಿ ಟಾಂಗಾನಿಕ ಸರೋವರ ಮತ್ತು ದಕ್ಷಿಣ ಭಾಗದಲ್ಲಿ ನ್ಯಾಸ ಸರೋವರದಿಂದ ಆವೃತವಾಗಿದ್ದು ಪೂರ್ವಭಾಗದಲ್ಲಿ ಹಿಂದೂ ಮಹಾಸಾಗರ ದಿಂದ ಆವೃತವಾಗಿದೆ.

ತಾಂಜಾನಿಯಾಗೆ ಭಾರತದ ಪ್ರಮುಖ ರಫ್ತುಗಳು: ಔಷಧ ಉತ್ಪನ್ನಗಳು, ಯಂತ್ರೋಪಕರಣ, ಅಣು ಸ್ಥಾವರ, ವಿದ್ಯುನ್ಮಾನ ಉಪಕರಣಗಳು, ಸಕ್ಕರೆ ಮತ್ತು ಸಿಹಿ ತಿನಿಸುಗಳು. ಭಾರತಕ್ಕೆ ತಾಂಜಾನಿಯಾ ರಫ್ತುಗಳು- ಚಿನ್ನದ ಅದಿರು, ಗೋಡಂಬಿ, ಏಲಕ್ಕಿ ಮತ್ತು ಇತರೆ ಉತ್ಪನ್ನಗಳನ್ನು ರಫ್ತು ಮಾಡುತ್ತದೆ.

ಭಾರತದ ಕೊಡುಗೆಗಳು

ತಾಂಜಾನಿಯಾದ, ಜಂಜಿಬಾರ್ ನಲ್ಲಿ ಭಾರತದ ಐ.ಐ.ಟಿ. ಮದ್ರಾಸ್ ಶೈಕ್ಷಣಿಕ ಸಂಸ್ಥೆಯು ತನ್ನ ಮೊಟ್ಟ ಮೊದಲ ಸಾಗರೋತ್ತರ ಶೈಕ್ಷಣಿಕ ಸಂಸ್ಥೆಯನ್ನು ಸ್ಥಾಪಿಸಿದೆ.

2023 ರಲ್ಲಿ ಭಾರತ ಸರ್ಕಾರ 10 ಅಂಬುಲೆನ್ಸ್‌ಗಳನ್ನು ತಾಂಜಾನಿಯಾಗೆ ಉಡುಗೊರೆಯಾಗಿ ನೀಡಿತು.

2018,2020 ಮತ್ತು 2021 ರಲ್ಲಿ ಭಾರತ ತಾಂಜಾನಿಯಾಗೆ ಅವಶ್ಯಕ ಔಷಧಿಗಳನ್ನು ಉಡುಗೊರೆಯಾಗಿ ನೀಡಿದೆ.

ತಾಂಜಾನಿಯಾದಲ್ಲಿ ಭಾರತ ಸರ್ಕಾರದಿಂದ ಮಾಹಿತಿ ತಂತ್ರಜ್ಞಾನ ಮತ್ತು ಸಂವಹನ ತಂತ್ರಜ್ಞಾನದ ಎರಡು ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು ಈ ಸ್ಥಳದಲ್ಲಿ ಭಾರತದಲ್ಲಿನ ಸೂಪರ್ ಕಂಪ್ಯೂಟರ್ 'ಪರಂ' ಅನ್ನು ಅನುಷ್ಠಾನಗೊಳಿಸಿದೆ.

ತಾಂಜಾನಿಯಾದ ದ್ವಿತೀಯ ಹಂತದ ಶಿಕ್ಷಣ ಸಂಸ್ಥೆಗಳಿಗೆ ಗಣಿತ ಮತ್ತು ವಿಜ್ಞಾನದ ಎನ್.ಸಿ.ಇ.ಆರ್.ಟಿ ಪುಸ್ತಕಗಳನ್ನು ಉಡುಗೊರೆಯಾಗಿ ನೀಡಿದೆ.

ಕ್ಯಾನ್ಸರ್ ಆಸ್ಪತ್ರೆಯನ್ನು ತಾಂಜಾನಿಯಾದಲ್ಲಿ ಭಾರತ ಸರ್ಕಾರ 2016ರಲ್ಲಿ ನಿರ್ಮಿಸಿದೆ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ENGLISH

ಎಸ್ಎಸ್ಎಲ್‌ಸಿ – ಕನ್ನಡ ಮಾಧ್ಯಮ

Second Language ENGLISH

Unit-2 PROSE

There's a Girl by the Tracks!

11) Baleshwar felt that people of Mumbai were afraid. What were they afraid of, according to his opinion?

Answer: According to Baleshwar Mumbai people were afraid of getting trapped in court and police by helping people injured in an accident.

12) The Dalai Lama says, "Love and Compassion are the true religions to me. But to develop this, we do not need to believe in any religion," Does this relate to the lesson "There is a Girl by the Tracks". How? Discuss with your friends.

Answer: Sage Dalai Lama's words are very true in relation to the lesson "There is a Girl by the Tracks". Let us see the key characters in this lesson. Roma, Baleshwar, tempo driver and the doctor. Baleshwar, tempo driver and the doctor help Roma beyond call their normal duty, even when they did not know the religion of Roma, they even did not know her! For, all of them love and compassion was true religion. Hence, Baleshwar impulsively pulls emergency stop chain, rushes to help Roma when co passenger do not respond to his request to help her, jumps out from running train, carry her for a long distance without his slippers over bitumen and tracks, tries to stop innumerable vehicles in vain, finds hospital better than cop. Similarly a tempo driver stops his vehicle and carries Roma to hospital and leaves the place without taking even a thanks. The doctor seeing Roma's injury admits her to ICU without any paper work for a quick treatment. It is love and compassion of these three gentlemen that Roma survives.

Enrich your vocabulary

Task 1: Verbs related to different actions are given below. Pick them and put them in their respective columns. Note that some words may fit into more than one column. Refer to a dictionary if necessary.

Tell, grab, pray, squeeze, glance, hurtle, observe, chat, snatch, plead, peep, utter, had beg, shove, talk, clutch, implore, rush. Stare, hold, appeal, dash, gaze, articulate, run

Words related to

Observing	Moving	Holding	Speaking	Requesting
1	1	1	1	1
2	2	2	2	2
3	3	3	3	3
4	4	4	4	4
5	5	5	5	5
6	6	6	6	6

Ans:-

Enrich your vocabulary

Observing	Moving	Holding	Speaking	Requesting
Glance	Rush	Grab	Tell	Pray
Peep	*Dash*	*Snatch*	*Chat*	*Plead*
Stare	*Run*	*Had*	*Talk*	*Beg*
Gaze	*Hurtle*	*Clutch*	*Utter*	*Appeal*
	Shove	*Squeeze*	*Talk*	*Implore*
		Hold	*Articulate*	

Task-2: Use the above words meaningfully to fill in the blanks in the following sentences. You can change the form of the word if required.

1. Five of us ……... ourselves into the back seats.
Answer: squeezed

2. English people love to……... about the weather.
Answer: chat

3. Arun …... Shaila close and wiped away her tears.
Answer: held

4. I haven't ………………...to Steve about all this.
Answer: talked

5. All club members have been ………..to attend the annual meeting.
Answer: appealed

6. Sudha ………………. over her shoulder.
Answer: glanced

7. The thief has ……… away her purse and ran.
Answer: snatched

8. Would you mind going to ……..………. the kids from school?
Answer: Bring

9. Veena …………………..…..at me in disbelief.
Answer: stared

10. Many people are unable to ……….. the unhappiness they feel.
Answer: Utter

Look at these sentences used in the text, as also the phrases underlined.

*. 'Who can I call?' asked Baleshwar fearing she would black out once more. (para - 13)

* A nurse helped him to take the woman in. (Para-12)

* Dinesh was wrapping up his day's work when his phone rang. (Para - 14)

Look at the underlined words. Their meanings are different from the ordinary meanings of each separate word. For example **black out** means lose consciousness, **take the woman in** means **admit the woman** and **wrapping up** means **closing the business**.

Task 3: A paragraph is given below based on the text. Some words are underlined. Substitute these words with the phrases and idioms making use of the clues given in brackets with necessary changes or additions.

Baleshwar Mishra was a bold young man. Even when his life was at risk (face-to-face……death), he never had a second thought. Rather he determined (make….mind) to save the life of the girl. He was doing all he could, while others stood watching him silently (tongue tie). None supported (back…..up) except a tempo truck driver. After a while, he carried the girl to a hospital and forced (arm twist) the duty doctor to admit the girl.

What can we make out from this incident? Some people like Baleshwar remain undisturbed (keep cool) in moments of crisis.

Listen and comprehend

Task -1 : Listen carefully to the reading of the following passage and take notes by drawing and filling information in the flow-chart. If required, the teacher will read the passage twice. *(Contd……)*

ಇಂದಿನಿಂದ ಅಮೋಘ ಪ್ರಾರಂಭ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ಎಸ್ಸೆಸ್ಸೆಲ್ಸಿ-ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

II PUC BIOLOGY

REPRODUCTION

Human Reproduction

4. Mention some of the differences between Morula and Blastocyst.

Ans:- Differences between Morula & Blastocyst

Morula	*Blastocyst*
1. It is a solid ball of cells called blastomeres.	It is a hollow ball of cells due to development of a blastocoel.
2. All the cells are similar.	There are atleast two types of cells, trophoblast and inner cell mass.
3. All the cells are nearly rounded.	Some cells are flat while others are rounded.
4. Zona pellucida forms a tight covering around the morula.	Zona pollucida stretched and liable to break.
5. Morula is early stage in embryo development.	It is later stage in embryo development.
6. The size is the same as that of egg.	The size is larger.
7. Divisions are nearly synchronous	Synchrony is absent in division of cells.

5. Mention some of the differences between Blastula and Gastrula.

Ans:- Differences between Blastula & Gastrula

Blastula	*Gastrula*
1. It is early stage of embryo.	It is later stage of embryo.
2. It contains a cavity called blastocoel.	It contains a cavity called archenteron.
3. The embryo is single layered.	The embryo comes to have three layers.
4. There are no cell movements.	A lot of cell movements occur in gastrula stage.

6. What is Chorion? What are its functions?

Ans:- Chorion is the outermost foetal membrane which is formed by the outer layer of trophoblast. It forms villi and other foetal parts of placenta.

The functions of Chorion are –

(a) It forms the foetal part of placenta.

(b) It provides attachment to foetus.

(c) Foetus obtains nutrients from the mother through chorionic structures.

(d) Excretory materials of the foetus are transferred to mother's blood through chorion.

(e) It is the site of exchange of gases between foetus and the mother.

7. What is Amnion? What are its functions?

Ans:- Amnion is the innermost foetal membrane which is formed by the inner layer of trophoblast. It lies immediately around the embryo. It encloses a cavity called amniotic cavity. The cavity is filled with a clear fluid called the amniotic fluid.

The functions of Amnion are –

(a) Amniotic fluid surrounds the embryo. It protects the embryo from any injury by functioning as shock absorber.

(b) Amniotic fluid regulates pressure and temperature around the embryo.

(c) It prevents desiccation of the embryo.

(d) It allows for growth and movement of the foetus.

(e) Amniotic fluid can be taken out with the help of a needle and studied for foetal cells so as to know the genetic defects, if any.

8. What is Allantois?

Ans:- Allantois is a membrane lined small sac which develops from embryonic gut close to yolk sac. It forms blood vessels for the placenta. Because of it, human placenta is called chorioallantoic.

9. What is Yolk Sac?

Ans:- Yolk Sac is a membrane lined sac which develops from the embryonic gut. The sac contains yolk in egg laying animals. It is non-functional in mammals where yolk is not stored. It contains a clear fluid which is believed to help in the synthesis of blood corpuscles in the early embryo before the function is taken up by liver. It shrinks afterwards.

Multiple Choice questions:-

1. Role of placenta is to
A) Provide nutrition to developing embryo
B) Protect embryo from shock
C) Act as storage organ
D) Convey nerve impulses

2. In mammals, failure of testis to descend into the scrotum is known as
A) Paedogenesis
B) Castration
C) Cryptrochidism
D) Impotency

3. Gastrulation involves the differentiation of
A) Ectoderm and endoderm
B) Ectoderm, endoderm & mesoderm
C) Ectoderm and mesoderm
D) Mesoderm and endoderm

4. Eutherian placenta is derived from
A) Allantois B) Amnion
C) Chorion and allantois
D) Yolk sac *(Contd…)*

ಗುತ್ತಿಗೆದಾರರ ಮನೆಯಲ್ಲಿ ಸಿಕ್ಕ ಹಣ ಯಾರದ್ದು? ಮುಂದುವರಿದ ಆರೋಪ, ಪ್ರತ್ಯಾರೋಪ

‘ಕಟೀಲ್, ಕುಮಾರಸ್ವಾಮಿ ಜಡ್ಜ್ ಅಲ್ಲ’

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಹಾಗೂ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಕುಮಾರ ಅವರೇನು ಜಡ್ಜ್‌ಗಳಲ್ಲ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಡಿ.ಕೆ ಶಿವಕುಮಾರ್

‘ಗುತ್ತಿಗೆದಾರರ ಮನೆಯಲ್ಲಿ ಸಿಕ್ಕ ಹಣದಲ್ಲಿ ಡಿ.ಕೆ.ಶಿವಕುಮಾರ ಅವರ ಪಾಲೂ ಇದೆ. ಅವರು ಮತ್ತೆ ಜೈಲಿಗೆ ಹೋಗುವರು ಎಂದು ನಳಿನ್‌ಕುಮಾರ್ ಕಟೀಲ್, ಕುಮಾರಸ್ವಾಮಿ ಆರೋಪಿಸಿದ್ದಕ್ಕೆ ಅವರು ಹೀಗೆ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

‘ಸಿ.ಟಿ. ರವಿ ಅವರಿಗೆ ಅವರ ಪಕ್ಷದವರೇ ‘ಲೂಟಿ ರವಿ’ ಎಂಬ ಹೆಸರು ಕೊಟ್ಟಿದ್ದಾರೆ. ಅವರ ಪಕ್ಷದವರೇ ಏನೆಲ್ಲಾ ಹೇಳಿದ್ದಾರೆ ಎಂಬ ದಾಖಲೆ ನನ್ನ ಬಳಿ ಇದೆ. ಇದಕ್ಕೆ ಸಮಯ ಬಂದಾಗ ಉತ್ತರಿಸುವೆ’ ಎಂದು ತಿಳಿಸಿದರು.

ಆಪರೇಷನ್ ಮಾಡಬೇಕು: ಬೆಂಗಳೂರು: ‘ಬಿಜೆಪಿ ಮತ್ತು ಜೆಡಿಎಸ್‌ನವರು ಹತಾಶೆಯ ಅಂತಿಮ ಸ್ಥಿತಿ ತಲುಪಿದ್ದಾರೆ’ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಬಿಜೆಪಿ ಮತ್ತು ಜೆಡಿಎಸ್ ನಾಯಕರ ಆರೋಪದ ಬಗ್ಗೆ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಶಿವಕುಮಾರ್, ‘ಅವರಿಗೆ (ಬಿಜೆಪಿ, ಜೆಡಿಎಸ್) ವೈದ್ಯರುಗಳೇ ಮೇಜರ್ ಆಪರೇಷನ್ ಮಾಡಬೇಕು’ ಎಂದು ವ್ಯಂಗ್ಯವಾಡಿದರು.

ಜಗದೀಶ ಶೆಟ್ಟರ್ ಮತ್ತು ರಮೇಶ ಜಾರಕಿಹೊಳಿ ಭೇಟಿ ಮಾಡಿರುವ ವಿಚಾರವಾಗಿ ಕೇಳಿದ ಪ್ರಶ್ನೆಗೆ, ‘ಎಲ್ಲದರಲ್ಲೂ ಅನುಮಾನಪಡಲು ಆಗಲ್ಲ. ತಮ್ಮ ಶಕ್ತಿ ಏನಿದೆ ಎಂದು ಜಗದೀಶ ಶೆಟ್ಟರ್ ತೋರಿಸಿದ್ದಾರೆ. ಈ ಬಗ್ಗೆ ನಾನೇನು ಹೆಚ್ಚು ಮಾತನಾಡುವುದಿಲ್ಲ’ ಎಂದರು.

‘ಸರ್ಕಾರ ಬೀಳಿಸಲು ಬಿಜೆಪಿಯ ತಂಡವೊಂದು ಕೆಲಸ ಮಾಡುತ್ತಿದೆ’ ಎನ್ನುವ ಬಗ್ಗೆ ಗಮನಸೆಳೆದಾಗ, ‘ಎಲ್ಲ ನನಗೆ ಗೊತ್ತಿದೆ. ಯಾವ ಶಾಸಕರನ್ನು, ಯಾರು ಯಾವಾಗ ಭೇಟಿ ಮಾಡಿದರು, ಮಾಡುತ್ತಿದ್ದಾರೆ ಎಂದು ಸಂಬಂಧಪಟ್ಟವರೇ ನನಗೆ ಮತ್ತು ಮುಖ್ಯಮಂತ್ರಿಗೆ ಮಾಹಿತಿ ನೀಡುತ್ತಿದ್ದಾರೆ’ ಎಂದರು.

‘ಬಿಜೆಪಿಯವರು ಏನು ಆಮಿಷಗಳನ್ನು ಒಡ್ಡುತ್ತಿದ್ದಾರೆ ಎನ್ನುವುದನ್ನೂ ಹೇಳಿದ್ದಾರೆ. ನಮ್ಮ ಬಳಿ ಎಲ್ಲ ಮಾಹಿತಿಗಳಿವೆ. ಯಾರನ್ನೆಲ್ಲ ಭೇಟಿಯಾಗಿದ್ದಾರೆ ಎಂಬುದನ್ನು ಅಧಿವೇಶನದಲ್ಲಿ ಹೇಳಿಸುತ್ತೇನೆ’ ಎಂದರು.

‘ಡಿ.ಕೆ ಅಲ್ಲ, ಕೇಡಿ ಶಿವಕುಮಾರ್’

ಚಿಕ್ಕಮಗಳೂರು: ‘ಸಿ.ಟಿ. ರವಿ ಬದಲಿಗೆ ಲೂಟಿ ರವಿ ಎಂದು ಲೇವಡಿ ಮಾಡುವ ಡಿ.ಕೆ.ಶಿವಕುಮಾರ್ ಅವರನ್ನು ಕೇಡಿ ಶಿವಕುಮಾರ್ ಎಂದು ಕರೆಯಬಹುದಲ್ಲವೇ’ ಎಂದು ಮಾಜಿ ಸಚಿವ ಸಿ.ಟಿ. ರವಿ ಪ್ರಶ್ನಿಸಿದರು. ‘ಉಪಮುಖ್ಯಮಂತ್ರಿ ಸ್ಥಾನದಲ್ಲಿ ಇರುವವರು ಕೇಡಿ ರೀತಿ ನಡೆದುಕೊಳ್ಳಬಾರದು. ಇದು ಒಳ್ಳೆಯ ಲಕ್ಷಣ ಅಲ್ಲ. ಪಕ್ಷಕ್ಕೂ, ರಾಜ್ಯಕ್ಕೂ ಒಳ್ಳೆಯದಲ್ಲ’ ಎಂದು ಬುಧವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

ಸಿ.ಟಿ ರವಿ

‘ಐಟಿ ದಾಳಿಯಲ್ಲಿ ಸಿಕ್ಕಿರುವುದು ಕಾಂಗ್ರೆಸ್ ಬೇನಾಮಿ ಹಣ ಎನ್ನುವ ಮಾಹಿತಿ ನಮಗಿದೆ. ನಂಬರ್ ಒನ್ ಮತ್ತು ಎರಡನೇ ಸ್ಥಾನದಲ್ಲಿ ಇರುವವರೇ ಸಂಗ್ರಹಿಸಿರುವ ಹಣ ಎಂಬುದು ನಮಗಿರುವ ಮಾಹಿತಿ. ಇದು ನಮ್ಮ ಆರೋಪವಾಗಿದ್ದು, ನಿರಾಕರಿಸುವ ಅಧಿಕಾರ ಡಿ.ಕೆ. ಶಿವಕುಮಾರ್ ಅವರಿಗೆ ಇದೆ. ಅದನ್ನು ಬಿಟ್ಟು ಕುಮಾರಸ್ವಾಮಿ ಅವರನ್ನು ನಕಲಿಸ್ವಾಮಿ, ಅಶ್ವತ್ಥನಾರಾಯಣ ಅವರನ್ನು ನವರಂಗಿ ನಾರಾಯಣ, ನನ್ನನ್ನು ಸಿ.ಟಿ. ರವಿ ಬದಲು ಲೂಟಿ ಎಂದು ಕರೆಯುವುದು ಸರಿಯಲ್ಲ’ ಎಂದರು.

‘ಡಿಕೆ, ಬೈರತಿ, ಯತೀಂದ್ರರಿಂದ ಹಣ ಸಂಗ್ರಹ’

ಬೆಂಗಳೂರು: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಶಿವಾನಂದ ಪಾಟೀಲ, ಬೈರತಿ ಸುರೇಶ್ ಮತ್ತು ಮಾಜಿ ಶಾಸಕ ಯತೀಂದ್ರ ಸಿದ್ದರಾಮಯ್ಯ ಅವರು ಹಣ ಸಂಗ್ರಹಿಸುವುದರಲ್ಲಿ ನಿರತರಾಗಿದ್ದಾರೆ. ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಹಣ ಸಂಗ್ರಹ ನಡೆಯುತ್ತಿದ್ದು, ಈ ಕುರಿತು ಸಿಬಿಐ ಮತ್ತು ಇಡಿ ತನಿಖೆ ನಡೆಸಬೇಕು ಎಂದು ಬಿಜೆಪಿ ರಾಜ್ಯ ಘಟಕದ ಪ್ರಧಾನ-ಕಾರ್ಯದರ್ಶಿ ಎನ್.ರವಿಕುಮಾರ್ ಒತ್ತಾಯಿಸಿದ್ದಾರೆ. ಬಿಜೆಪಿ ಕಚೇರಿಯಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ರಾಜ್ಯದಲ್ಲಿ ನಡೆದ ಐಟಿ ದಾಳಿ ಸಂದರ್ಭದಲ್ಲಿ ₹94 ಕೋಟಿ ನಗದು ಮತ್ತು ₹8 ಕೋಟಿ ಚಿನ್ನಾಭರಣ ವಶಪಡಿಸಿಕೊಂಡಿದ್ದಾರೆ. ಸುಮಾರು ₹1,000 ಕೋಟಿ ಸಂಗ್ರಹಿಸಲು ಮುಂದಾಗಿರುವ ಮಾಹಿತಿ ಇದೆ. ಆದ್ದರಿಂದ ಸಿಬಿಐ ಮತ್ತು ಇಡಿ ತನಿಖೆ ಅಗತ್ಯ ಎಂದರು.

‘ಪಂಚ ರಾಜ್ಯಗಳಿಗೆ ಹಣದ ಭಾಗ್ಯ’

ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ನೇತೃತ್ವದ ಸರ್ಕಾರ ತಮಿಳುನಾಡಿಗೆ ನೀರಿನ ಭಾಗ್ಯ, ಪಂಚರಾಜ್ಯಗಳಿಗೆ ಹಣದ ಭಾಗ್ಯ ಮತ್ತು ಕರ್ನಾಟಕದ ಜನರಿಗೆ ಕತ್ತಲ ಭಾಗ್ಯ ನೀಡಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ವ್ಯಂಗ್ಯವಾಡಿದ್ದಾರೆ. ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಮಧ್ಯೆ ಅಧಿಕಾರದ ಕಾದಾಟದ ಪರಿಣಾಮ ಸಿದ್ದರಾ ಮಯ್ಯ ಅವರನ್ನು ಮನೆಗೆ ಕಳಿಸಲು ಶಿವಕುಮಾರ್, ಡಿ.ಕೆ.ಶಿವಕುಮಾರ್ ಅವರನ್ನು ಜೈಲಿಗೆ ಕಳಿಸಲು ಸಿದ್ದರಾಮಯ್ಯ ಪ್ರಯತ್ನ ನಡೆಸಿದ್ದಾರೆ. ಈ ಕಾದಾಟದಲ್ಲಿ ಕರ್ನಾಟಕ ಬಡವಾಗಿದೆ ಎಂದು ಹೇಳಿದರು.

ನಳಿನ್‌ಕುಮಾರ್ ಕಟೀಲ್

‘ಕಪ್ಪು ಹಣದ ಖಜಾನೆ ಮೇಲೆ ದಾಳಿ’

‘ಕಪ್ಪು ಹಣದ ಖಜಾನೆ ಇರುವಲ್ಲಿ ದಾಳಿ ನಡೆಸದೇ ಬಡವರ ಮನೆ ಶೋಧಿಸಲಾದೀತೇ’ ಎಂದು ಬಿಜೆಪಿ ಶಾಸಕ ಹಾಗೂ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಪ್ರಶ್ನಿಸಿದ್ದಾರೆ.

ಈ ಕುರಿತು ‘ಎಕ್ಸ್’ ಮಾಡಿರುವ ಅವರು, ‘ಕಲಾವಿದರ ಸಂಭಾವನೆಯಿಂದಲೂ ಕಮಿಷನ್ ವಸೂಲಿ ದಂಧೆಗಿಳಿದಿರುವ ನಿಮ್ಮ ಸರ್ಕಾರದ ಆಡಳಿತದ ಹೀನಾಯ ಭ್ರಷ್ಟ ಮುಖ ಜನರ ಮುಂದೆ ತೆರೆದುಕೊಂಡಿದೆ’ ಎಂದು ಕಿಡಿಕಾರಿದ್ದಾರೆ.

‘ಸದ್ಯದ ಬೆಳವಣಿಗೆಗಳನ್ನು ಗಮನಿಸಿದರೆ ‘ಲಂಚ ಭಾಗ್ಯ’ ಯೋಜನೆ ನಿಮ್ಮ ಮುಂದಿನ ಹೆಜ್ಜೆ. ಪರ್ಸೆಂಟೇಜ್ ನಿಗದಿ ನಿಮ್ಮ ಮುಂದಿನ ಗುರಿ ಎಂಬುದು ಖಾತ್ರಿ ಆಗುತ್ತಿದೆ. ರಾಜ್ಯದಲ್ಲಿ ನಡೆದ ಆದಾಯ ತೆರಿಗೆ ಶೋಧ ಕಾರ್ಯವನ್ನು ಮುಖ್ಯಮಂತ್ರಿ ಸ್ಥಾನದಲ್ಲಿರುವ ನೀವು ಸ್ವಾಗತಿಸಬೇಕಿತ್ತು. ದಾಳಿಗೊಳಗಾದ ಉದ್ಯಮಿಗಳು, ಗುತ್ತಿಗೆದಾರರ ವಕ್ತಾರರಂತೆ ಮಾತನಾಡುತ್ತಿದ್ದೀರಿ’ ಎಂದು ಸಿದ್ದರಾಮಯ್ಯ ಅವರನ್ನು ಉದ್ದೇಶಿಸಿ ಹೇಳಿದ್ದಾರೆ.

ಸಿ.ಎಂ. ಇಬ್ರಾಹಿಂ ಉಚ್ಚಾಟನೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಡಿಎಸ್ ರಾಜ್ಯ ಪರಿಷತ್‌ನ ತುರ್ತು ಸಭೆಯನ್ನು ಗುರುವಾರ ಕರೆದಿದ್ದು, ಬಿಜೆಪಿ ಜತೆಗಿನ ಮೈತ್ರಿಯನ್ನು ವಿರೋಧಿಸಿ ನಿರಂತರ ವಾಗ್ದಾಳಿ ನಡೆಸುತ್ತಿರುವ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಅವರನ್ನು ಉಚ್ಚಾಟಿಸುವ ನಿರ್ಣಯ ಕೈಗೊಳ್ಳುವ ಸಾಧ್ಯತೆ ಇದೆ.

ತುರ್ತುಸಭೆಗೆ ಹಾಜರಾಗುವಂತೆ ಜೆಡಿಎಸ್‌ನ ರಾಜ್ಯ ಪರಿಷತ್‌ನ ಮಹಾಪ್ರಧಾನ ಕಾರ್ಯದರ್ಶಿ ಎಸ್. ಎಲ್. ಭೋಜೇಗೌಡ ಅವರು ಪರಿಷತ್‌ನ ಸದಸ್ಯರಿಗೆ ಆಹ್ವಾನ ನೀಡಿದ್ದಾರೆ. ಹಾಲಿ ಮತ್ತು ಮಾಜಿ ಶಾಸಕರು, ವಿಧಾನ ಪರಿಷತ್‌ನ ಹಾಲಿ ಮತ್ತು ಮಾಜಿ ಸದಸ್ಯರು, ಮಾಜಿ ಸಚಿವರು, ಸಂಸದರು ಮತ್ತು ಮಾಜಿ ಸಂಸದರು, ಪಕ್ಷದ ಜಿಲ್ಲಾ ಘಟಕಗಳ ಅಧ್ಯಕ್ಷರು ಹಾಗೂ ತಾಲ್ಲೂಕು ಮಟ್ಟದಿಂದ ಪರಿಷತ್ ಸದಸ್ಯರಾಗಿ ಚುನಾಯಿತರಾದವರಿಗೆ ಆಹ್ವಾನ ನೀಡಲಾಗಿದೆ ಎಂದು ಜೆಡಿಎಸ್ ಮೂಲಗಳು ತಿಳಿಸಿವೆ.

ಸಿ.ಎಂ ಇಬ್ರಾಹಿಂ

ಪಕ್ಷದ ಪ್ರಧಾನ ಕಚೇರಿಯಲ್ಲಿ ನಡೆಯಲಿರುವ ಸಭೆಯಲ್ಲಿ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಮತ್ತು ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಕೂಡ ಭಾಗವಹಿಸಲಿದ್ದಾರೆ. ಪಕ್ಷದಲ್ಲಿನ ಇತ್ತೀಚಿನ ಬೆಳವಣಿಗೆಗಳ ಕುರಿತು ಚರ್ಚೆಗೆ ಕಾರ್ಯಸೂಚಿ ಸಿದ್ಧಪಡಿಸಲಾಗಿದೆ.

एनएमडीसी NMDC
NMDC Limited
(A Government of India Enterprise)
'Khanij Bhavan', 10-3-311/A, Castle Hills, Masab Tank, Hyderabad - 500028.
Corporate Identity Number (CIN) - L13100TG1958GOI001674

Corrigendum No. 6, Dated : 14-10-2023
CONTRACTS DEPARTMENT

NMDC Limited is issuing this press notification regarding the modification (as indicated in Corrigendum No. 6 Dated 14-10-2023) in the **eligibility / qualification requirements** of following live tender;
Tender Enquiry No.: HO(Contracts)/SBPTD/SP-II/Pkg-I/944, Dated: 07-08-2023.
MSTC Tender Event No.: NMDC/HO/35/23-24/ET/343
Description of work : Design, Engineering, Manufacture, Supply, Erection, Testing and Commissioning of new 7 MTPA Iron ore Screening & Beneficiation Plant - II (SP-II) along with Design, Engineering & Construction of Tailing Dam at Donimalai Complex, Bellary, Karnataka on Turnkey basis.
The detailed **Corrigendum No.6**, Tender documents and other Corrigendum of above tender can be viewed and / or downloaded from NMDC website **https://nmdcportals.nmdc.co.in/nmdctender**, Central Public Procurement portal **http://www.eprocure.gov.in/epublish/app** and MSTC portal **https://www.mstcecommerce.com/eprochome/nmdc/buyer_login.jsp** till **30-10-2023.**
For further clarifications, the prospective bidders can send their queries in the email: **contracts@nmdc.co.in** and **Souvik.G@dastur.com**
Executive Director (Works)

एनएमडीसी NMDC
NMDC Limited
(A Govt. of India Enterprise)
'Khanij Bhavan', 10-3-311/A, Castle Hills, Masab Tank, Hyderabad-500028
CIN:L13100TG1958GOI001674.
CONTRACTS DEPARTMENT
Tender Enquiry No.: HO (Contracts) / FAS & AS / Mines / 942/186 Dated: 19-10-2023
NMDC Limited, A “NAVARATNA” Public Sector Company under Ministry of Steel, Govt. of India, invites **online bids** through **MSTC Portal** from experienced, reputed and competent **domestic bidders** for the work of **“Design, Engineering, Supply, Erection, Testing and Commissioning of Fully Automated Sampling and Analysis Systems on Turnkey basis for Iron Ore mines at Kirandul, Bacheli and Donimalai Complexes of NMDC Ltd.”**
The detailed NIT and Bid documents can be viewed and / or downloaded from **19-10-2023** to **18-11-2023** from following website links:
1. NMDC website - **https://nmdcportals.nmdc.co.in/nmdctender**
2. Central Public Procurement Portal (CPP PORTAL) **http://www.eprocure.gov.in/epublish/app** and
3. MSTC portal - **https://www.mstcecommerce.com/eprochome/nmdc/buyer_login.jsp** and search NMDC **Tender Event No. NMDC/HO/36/23-24/ET/344.** For further help refer to 'vendor guide' given in MSTC website.
The bidders are requested to submit their bids online through MSTC portal only. The details of submission of bid through online are given in NIT. The Bidders on regular basis are required to visit the NMDC's website / CPP Portal / MSTC website for corrigendum, if any, at a future date.
For further clarification, the following can be contacted:
CGM (Project, Contract & Steel), NMDC Limited, Hyderabad
Tel No. +91-040-23533536, email: contracts@nmdc.co.in
Executive Director (Works)

ಕೊಡಗು ಜಿಲ್ಲೆಯ ತಲಕಾವೇರಿಯಲ್ಲಿ ಬುಧವಾರ ನಸುಕಿನಲ್ಲಿ ತೀರ್ಥೋದ್ಭವವಾಗುತ್ತಿದ್ದಂತೆ ಭಕ್ತರು ತೀರ್ಥವನ್ನು ತುಂಬಿಸಿಕೊಳ್ಳಲು ಕೊಡಗಳೊಂದಿಗೆ ಬ್ಯಾರಿಕೇಡ್ ದಾಟಲು ಯತ್ನಿಸಿದರು

ತಲಕಾವೇರಿಯಲ್ಲಿ ತೀರ್ಥೋದ್ಭವ

• ಕೆ.ಎಸ್.ಗಿರೀಶ

ಮಡಿಕೇರಿ: ಹಿಮವೇ ಹೊದ್ದು ನಿಂತಿದ್ದ ಬ್ರಹ್ಮಗಿರಿ ಶ್ರೇಣಿಯ ತಲಕಾವೇರಿಯಲ್ಲಿ ಬುಧವಾರ ನಸುಕಿನ 1.26ಕ್ಕೆ, ಕನ್ನಡ ನಾಡಿನ ಜೀವನದಿ ಕಾವೇರಿಯ ತೀರ್ಥೋದ್ಭವವಾಯಿತು.

ಥರಗುಟ್ಟುವಷ್ಟು ಚಳಿಯ ನಡುವೆಯೇ ‘ಉಕ್ಕಿ ಬಾ ತಾಯಿ ಉಕ್ಕಿ ಬಾ’ ಎಂಬ ಘೋಷಣೆ ಮುಗಿಲು ಮುಟ್ಟಿತ್ತು. ತುಲಾಸಂಕ್ರಮಣದ ಈ ವಿದ್ಯಮಾನವನ್ನು ಕಣ್ತುಂಬಿಕೊಳ್ಳಲು ಸಾವಿರಾರು ಭಕ್ತರು ಎಲ್ಲೆಡೆಯಿಂದ ಬಂದು ನೆರೆದಿದ್ದರು.

‘ಬ್ರಹ್ಮಕುಂಡಿಕೆಯಿಂದ ಕಾವೇರಿ ತಾಯಿ ಉಕ್ಕಿದಳು’ ಎಂದು ಅರ್ಚಕರು ಸುತ್ತಲೂ ಸೇರಿದ್ದ ಅಪಾರ ಭಕ್ತರ ಮೇಲೆ ತೀರ್ಥವನ್ನು ಪ್ರೋಕ್ಷಿಸುತ್ತಿದ್ದಂತೆ ನೂರಾರು ಭಕ್ತರು ಬ್ಯಾರಿಕೇಡ್‌ಗಳನ್ನು ತೆಗೆದು ಬ್ರಹ್ಮಕುಂಡಿಕೆ ಸಮೀಪದ ಪುಷ್ಕರಣಿಗೆ ನುಗ್ಗಿದರು. ಕೊಡಗಳು, ಕ್ಯಾನ್‌ಗಳಲ್ಲಿ ಪವಿತ್ರ ತೀರ್ಥವನ್ನು ತುಂಬಿಸಿಕೊಳ್ಳಲು ಮುಗಿಬಿದ್ದರು. ಗಂಟೆಗಟ್ಟಲೆ ಕಾಲ ಇಲ್ಲಿ ನೂಕುನುಗ್ಗಲು ಏರ್ಪಟ್ಟಿತ್ತು.

ಇದಕ್ಕೂ ಮುನ್ನ, ಕಾವೇರಿ ಮಾತೆಯ ಹಾಡುಗಳನ್ನು ಹಾಡುತ್ತ ಭಾಗಮಂಡಲದಿಂದ ತಲಕಾವೇರಿಯವರೆಗೆ ಕಾಲ್ನಡಿಗೆಯಲ್ಲೇ ಸಾವಿರಾರು ಮಂದಿ ಬಂದಿದ್ದು ವಿಶೇಷವಾಗಿತ್ತು. ನಟಿ ಹರ್ಷಿಕಾ ಪೂಣಚ್ಚ ಹಾಗೂ ಭುವನ್ ಪೊನ್ನಣ್ಣ ದಂಪತಿ ಕೂಡ ನಡೆದು ಬಂದರು.

ತೀರ್ಥೋದ್ಭವಕ್ಕೂ ಮುನ್ನ ಗಣ್ಯರು ಹಾಗೂ ಪತ್ರಕರ್ತರಿಗಾಗಿ ಮೀಸಲಿದ್ದ ಪ್ರವೇಶದ್ವಾರದಲ್ಲಿ ಭಕ್ತರ ಗುಂಪೊಂದು ಪೊಲೀಸರೊಂದಿಗೆ ವಾಗ್ವಾದ ನಡೆಸಿ, ಬ್ಯಾರಿಕೇಡ್ ತೆಗೆದು ನೇರ ಒಳಗೆ ನುಗ್ಗಿತು. ಪೊಲೀಸರೂ ಅಸಹಾಯಕರಾಗಿ ನಿಂತಿದ್ದರು.

ತೀರ್ಥೋದ್ಭವದ ಬಳಿಕವೂ ತಲಕಾವೇರಿಗೆ ಅಪಾರ ಸಂಖ್ಯೆ ಭಕ್ತರು ಭೇಟಿ ನೀಡಿದರು. ಇಲ್ಲಿಗೆ ಸಮೀಪದ ಬಲಮುರಿಯಲ್ಲೂ ಬುಧವಾರ ಸಂಭ್ರಮದ ಕಾವೇರಿ ಜಾತ್ರೆ ನೆರವೇರಿತು.

ಪಂಪ್‌ವೆಲ್ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಮಂಗಳೂರು: ನಗರದ ಮಂಗಳಾದೇವಿ ದೇವಸ್ಥಾನದ ನವರಾತ್ರಿ ಉತ್ಸವದ ಜಾತ್ರಾ ಮಳಿಗೆಗಳಲ್ಲಿ ಕೇಸರಿ ಧ್ವಜವನ್ನು ಕಟ್ಟಿರುವ ಪ್ರಕರಣ ಸಂಬಂಧ ವಿಶ್ವ ಹಿಂದೂ ಪರಿಷತ್‌ನ ದಕ್ಷಿಣ ಪ್ರಾಂತದ ಸಹ ಕಾರ್ಯದರ್ಶಿ ಶರಣ್ ಪಂಪ್‌ವೆಲ್ ಹಾಗೂ ಇತರರ ವಿರುದ್ಧ ಇಲ್ಲಿಯ ದಕ್ಷಿಣ ಠಾಣೆಯಲ್ಲಿ ಬುಧವಾರ ಎಫ್‌ಐಆರ್ ದಾಖಲಾಗಿದೆ.

ಶರಣ್ ಪಂಪ್‌ವೆಲ್

‘ಶರಣ್ ಪಂಪ್‌ವೆಲ್ ತಮ್ಮ ಬೆಂಬಲಿಗರೊಂದಿಗೆ ಮಂಗಳಾದೇವಿ ದೇವಸ್ಥಾನದ ವಠಾರದಲ್ಲಿರುವ ಹಿಂದೂ ವ್ಯಕ್ತಿಗಳ ಮಾರಾಟ ಮಳಿಗೆಗಳ ಮೇಲೆ ಕೇಸರಿ ಧ್ವಜವನ್ನು ಕಟ್ಟಿದ್ದು, ಎಲ್ಲಾ ಹಿಂದೂಗಳೂ ತಮಗೆ ಬೇಕಾದ ಅಗತ್ಯ ಸಾಮಗ್ರಿಗಳನ್ನು ಹಿಂದೂ ಸಮುದಾಯದ ವ್ಯಾಪಾರಸ್ಥರಲ್ಲಿ ಮಾತ್ರ ಪಡೆದುಕೊಳ್ಳಬೇಕು ಎಂದು ಪತ್ರಿಕಾ ಹೇಳಿಕೆ ನೀಡಿದ್ದಾರೆ. ತನ್ಮೂಲಕ ಕೋಮು ಸಾಮರಸ್ಯಕ್ಕೆ ಧಕ್ಕೆ ಉಂಟು ಮಾಡಿದ್ದಾರೆ ಎಂದು ದಕ್ಷಿಣ ಪೊಲೀಸ್ ಠಾಣೆಯ ಪಿ.ಎಸ್.ಐ ಮನೋಹರ್ ಪ್ರಸಾದ್ ದೂರು ನೀಡಿದ್ದಾರೆ. ಅದರ ಆಧಾರದಲ್ಲಿ ಭಾರತೀಯ ದಂಡ ಸಂಹಿತೆಯ ಸೆಕ್ಷನ್ 153 ಎ (ಎರಡು ಕೋಮುಗಳ ನಡುವೆ ದ್ವೇಷ ಹುಟ್ಟಿಸುವುದು) ಅಡಿ ಶರಣ್ ಪಂಪ್‌ವೆಲ್ ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಾಗಿದೆ’ ಎಂದು ನಗರ ಪೊಲೀಸ್ ಕಮಿಷನರ್ ಅನುಪಮ್ ಅಗರ್ವಾಲ್ ತಿಳಿಸಿದ್ದಾರೆ.

ಡಿಸಿಎಂ ಸ್ವಾಗತಕ್ಕೆ ಬಾರದ ಬೆಳಗಾವಿ ‘ಕೈ’ ಶಾಸಕರು

ಪ್ರಜಾವಾಣಿ ವಾರ್ತೆ

ಬೆಳಗಾವಿ: ಜಿಲ್ಲೆಗೆ ಬುಧವಾರ ಭೇಟಿ ನೀಡಿದ್ದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರ ಸ್ವಾಗತಕ್ಕೆ ಜಿಲ್ಲೆಯ ಯಾವೊಬ್ಬ ಸಚಿವ, ಶಾಸಕರೂ ಹಾಜರಿರಲಿಲ್ಲ. ವಿಧಾನ ಪರಿಷತ್ ಸದಸ್ಯ ಪ್ರಕಾಶ ಹುಕ್ಕೇರಿ ಮಾತ್ರ ಸಾಂಬ್ರಾ ವಿಮಾನ ನಿಲ್ದಾಣಕ್ಕೆ ಬಂದರು.

‘ನಿಮ್ಮನ್ನು ಸ್ವಾಗತಿಸಲು ಯಾವುದೇ ಶಾಸಕರು ಏಕೆ ಬಂದಿಲ್ಲ’ ಎಂಬ ಪ್ರಶ್ನೆ ಹುಕ್ಕೇರಿಯಲ್ಲಿ ಡಿ.ಕೆ.ಶಿವಕುಮಾರ ಅವರಿಗೆ ಎದುರಾಯಿತು. ಇದರಿಂದ ಬೇಸರಗೊಂಡ ಅವರು, ‘ಯಾರೋ ಅವನು ಬರೀ ತರ್ಲೆ ಪ್ರಶ್ನೆ ಕೇಳುತ್ತಾನೆ’ ಎಂದು ಸಿಡಿಮಿಡಿಗೊಂಡರು.

‘ಇದು ನನ್ನ ಖಾಸಗಿ ಕಾರ್ಯಕ್ರಮ. ನಿನ್ನೆ ರಾತ್ರಿಯಷ್ಟೇ ಬೆಳಗಾವಿಗೆ ಬರಲು ನಿರ್ಧರಿಸಿದೆ. ನಮ್ಮ ಶಾಸಕರು ಅವರವರ ಕೆಲಸದಲ್ಲಿದ್ದಾರೆ. ಹೀಗಾಗಿ ಯಾರೂ ಬಂದಿಲ್ಲ. ಇದು ಭಿನ್ನ ಮತವಲ್ಲ’ ಎಂದು ಪ್ರತಿಕ್ರಿಯಿಸಿದರು.

‘ಸಚಿವ ಸತೀಶ ಜಾರಕಿಹೊಳಿ ಸೇರಿ ಎಲ್ಲ 136 ಶಾಸಕರೂ ಒಗ್ಗಟ್ಟಾಗಿದ್ದೇವೆ. ಯಾರೂ ಬಂಡಾಯ ಎದ್ದಿಲ್ಲ. ಜಾರಕಿಹೊಳಿ ಅವರು ಬೆಂಗಳೂರಿನಲ್ಲಿದ್ದರೆ, ಸಚಿವೆ ಲಕ್ಷ್ಮೀ ಹೆಬ್ಬಾಳಕರ ಭದ್ರಾವತಿಗೆ ತಮ್ಮ ಮೊಮ್ಮಗಳ ನಾಮಕರಣಕ್ಕೆ ಹೋಗಿದ್ದಾರೆ. ಶಾಸಕ ಮಹಾಂತೇಶ ಕೌಜಲಗಿ ಅವರ ಆರೋಗ್ಯ ಸರಿ ಇಲ್ಲ. ಕೆಲ ಶಾಸಕರು ಮೈಸೂರು ಪ್ರವಾಸದಲ್ಲಿದ್ದಾರೆ. ಗೊಂದಲ ಬೇಡ’ ಎಂದರು.

ಜಿಲ್ಲಾ ಘಟಕದ ಅಧ್ಯಕ್ಷರೂ ಗೈರು: ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ವಿನಯ ನಾವಲಗಟ್ಟಿ ಕೂಡ ಗೈರಾಗಿದ್ದದ್ದು ತೀವ್ರ ಚರ್ಚೆಗೆ ಗ್ರಾಸವಾಯಿತು. ಮಧ್ಯಾಹ್ನ ಹುಕ್ಕೇರಿ ಪಟ್ಟಣದಲ್ಲಿ ಕೂಡ ಡಿ.ಕೆ. ಶಿವಕುಮಾರ್ ಅವರು ನಡೆಸಿದ ಕಾರ್ಯಕರ್ತರ ಸಭೆಗೂ ಯಾವುದೇ ಶಾಸಕ ಹಾಜರಾಗಲಿಲ್ಲ.

‘ಜಿಲ್ಲೆಯ ರಾಜಕಾರಣದಲ್ಲಿ ಡಿ.ಕೆ. ಶಿವಕುಮಾರ ಅವರ ಹಸ್ತಕ್ಷೇಪದಿಂದ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಮುನಿಸಿಕೊಂಡಿದ್ದಾರೆ’ ಎಂಬ ಮಾತು ಜಿಲ್ಲೆಯಲ್ಲಿ ಜೋರಾಗಿದೆ.

ಲಾರಿ ಹರಿದು ನಾಲ್ವರು ಸಾವು

ಪ್ರಜಾವಾಣಿ ವಾರ್ತೆ

ವಿಜಯಪುರ: ನಗರದ ಹೊರವಲಯದ ಸೋಲಾಪುರ-ಚಿತ್ರದುರ್ಗ ರಾಷ್ಟ್ರೀಯ ಹೆದ್ದಾರಿ 52ರ ವಿಜಯಪುರ ಟೋಲ್ ನಾಕಾ ಬಳಿ ಮಂಗಳವಾರ ತಡ ರಾತ್ರಿ ಕಂಟೇನರ್ ಲಾರಿ ಹರಿದು ನಾಲ್ವರು ಯುವಕರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ವಿಜಯಪುರ ವಜ್ರಹನುಮಾನ ನಗರದ ಪ್ರವೀಣ ಪಾಟೀಲ(31), ಶಿವಾನಂದ ಚೌಧರಿ (24), ಈರಣ್ಣ ಕೋಲ್ಹಾರ(26) ಮತ್ತು ಸುನೀಲ ಖಾನಾಪೂರ (26) ಮೃತರು ಎಂದು ಗ್ರಾಮೀಣ ಠಾಣೆಯ ಪೊಲೀಸರು ತಿಳಿಸಿದ್ದಾರೆ.

ವಿಜಯಪುರದಿಂದ ಆಲಮಟ್ಟಿಯತ್ತ ವೇಗವಾಗಿ ಹೊರಟಿದ್ದ ಲಾರಿಯು ಹೆದ್ದಾರಿ ಪಕ್ಕದಲ್ಲಿ ಎರಡು ಬೈಕ್‌ಗಳಲ್ಲಿ ಮಾತನಾಡುತ್ತ ನಿಂತಿದ್ದ ನಾಲ್ವರ ಮೇಲೆ ಹರಿಯಿತು’ ಎಂದು ಅವರು ತಿಳಿಸಿದ್ದಾರೆ.

ಸಚಿವರ ಕಾಲಡಿ ನೋಟಿನ ರಾಶಿ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮಾರಂಭವೊಂದರಲ್ಲಿ ಜವಳಿ, ಸಕ್ಕರೆ ಮತ್ತು ಕಬ್ಬು ಅಭಿವೃದ್ಧಿ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲರ ಕಾಲಡಿಯಲ್ಲಿ ನೋಟುಗಳ ರಾಶಿ ಬಿದ್ದಿರುವ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

ನೆರೆಯ ತೆಲಂಗಾಣ ರಾಜ್ಯದಲ್ಲಿ ನಡೆದ ಮದುವೆ ಸಮಾರಂಭದಲ್ಲಿ ನೋಟುಗಳನ್ನು ತೂರಿರುವ ಸಂದರ್ಭದಲ್ಲಿ ಸಚಿವರೂ ಉಪಸ್ಥಿತರಿದ್ದರು. ಈ ವಿಡಿಯೊ ಹಂಚಿಕೊಂಡಿರುವ ವಿರೋಧ ಪಕ್ಷಗಳ ಕಾರ್ಯಕರ್ತರು ಹಾಗೂ ಸಾರ್ವಜನಿಕರು ಶಿವಾನಂದ ಪಾಟೀಲರ ವಿರುದ್ಧ ಸಾಮಾಜಿಕ ಮಾಧ್ಯಮಗಳಲ್ಲಿ ಟೀಕಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯೆ ನೀಡಿರುವ ಸಚಿವರು, ‘ತೆಲಂಗಾಣದಲ್ಲಿ ನಡೆದ ಮದುವೆ ಸಮಾರಂಭದಲ್ಲಿ ಪಾಲ್ಗೊಂಡಿದ್ದೆ. ನಾನೊಬ್ಬನೇ ಅಲ್ಲಿರಲಿಲ್ಲ. ಸಚಿವರಾದ ಜಮೀರ್ ಅಹಮ್ಮದ್ ಖಾನ್, ರಹೀಂ ಖಾನ್ ಕೂಡ ಇದ್ದರು. ನನ್ನ ವಿಡಿಯೊ ಹಂಚಿಕೊಂಡು ಟೀಕಿಸಲಾಗುತ್ತಿದೆ’ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

‘ಕಾರ್ಯಕ್ರಮದ ಆಯೋಜಕರು ಹಾಗೆ ಮಾಡಿದ್ದಾರೆ. ನಾನು ಅಲ್ಲಿ ಅತಿಥಿಯಾಗಿದ್ದೆ. ಅವರ ಸಂಸ್ಕೃತಿಯನ್ನು ಬದಲಿಸಲು ನನಗೆ ಸಾಧ್ಯವೆ? ಸ್ನೇಹಿತರ ಮಗನ ಮದುವೆಗೆ ನಾನು ಹೋಗಲೇಬಾರದಾ’ ಎಂದು ಪ್ರಶ್ನಿಸಿದ್ದಾರೆ.

ಶಿವಾನಂದ ಪಾಟೀಲ ವಜಾಕ್ಕೆ ಆಗ್ರಹ

ನವದೆಹಲಿ (ಪಿಟಿಐ): ತೆಲಂಗಾಣದಲ್ಲಿ ಮದುವೆಯೊಂದರಲ್ಲಿ ಸಚಿವ ಶಿವಾನಂದ ಪಾಟೀಲ ಅವರಿಗೆ ನೋಟುಗಳ ಮಳೆಗರೆದ ಕುರಿತ ವಿಷಯ ಪ್ರಸ್ತಾಪಿಸಿದ ಬಿಜೆಪಿ ವಕ್ತಾರ ಗೌರವ ಭಾಟಿಯಾ, ಕಾಂಗ್ರೆಸ್ ಪಕ್ಷ ಭ್ರಷ್ಟಾಚಾರದ ಹಣ ಬಳಸಿಕೊಂಡು ಪ್ರಜಾಪ್ರಭುತ್ವ ಮತ್ತು ಚುನಾವಣೆಗಳನ್ನು ಅಪವಿತ್ರಗೊಳಿಸುತ್ತಿದೆ ಎಂದು ಆರೋಪಿಸಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ ವಿಡಿಯೊದಲ್ಲಿರುವುದು ತಾವೇ ಎಂದು ಪಾಟೀಲ ಒಪ್ಪಿಕೊಂಡಿದ್ದಾರೆ . ಆದರೆ ಕಾಂಗ್ರೆಸ್ ಯಾವುದೇ ಪ್ರತಿಕ್ರಿಯೆ ನೀಡಿಲ್ಲ ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ.

ಇಂತಹ ‘ಭ್ರಷ್ಟ’ ಸಚಿವರ ಮುಂದುವರಿಕೆ ಪ್ರಜಾಪ್ರಭುತ್ವಕ್ಕೆ ಅಪಾಯವಾಗಿರುವುದರಿಂದ ಅವರನ್ನು ಕೂಡಲೇ ವಜಾಗೊಳಿಸಬೇಕು ಪ್ರಾಮಾಣಿಕ ಪ್ರಧಾನಿ ನಾಯಕತ್ವದಲ್ಲಿ ಬಿಜೆಪಿ ಜನರಿಗೆ ಸೇವೆ ಸಲ್ಲಿಸುತ್ತಿದ್ದರೆ, ಮತ್ತೊಂದೆಡೆ ಭಾರಿ ಭ್ರಷ್ಟ ಕಾಂಗ್ರೆಸ್ ಇದೆ. ಭ್ರಷ್ಟಾಚಾರ ಕಾಂಗ್ರೆಸ್ ಡಿಎನ್‌ಎಯಲ್ಲಿದೆ ಎಂದು ಅವರು ಆರೋಪಿಸಿದ್ದಾರೆ.

ಪ್ರಾಧಿಕಾರದ ಅಧ್ಯಕ್ಷ ಸ್ಥಾನ ತಿರಸ್ಕರಿಸಿದ ಬಿ.ಆರ್ ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸ್ಥಾನ ವಹಿಸಿಕೊಳ್ಳುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ನೀಡಿದ ಆಹ್ವಾನವನ್ನು ಆಳಂದ ಕ್ಷೇತ್ರದ ಕಾಂಗ್ರೆಸ್ ಶಾಸಕ ಬಿ.ಆರ್. ಪಾಟೀಲ ತಿರಸ್ಕರಿಸಿದ್ದಾರೆ.

ರಾಜ್ಯ ಸರ್ಕಾರದ ನಡೆಯ ವಿರುದ್ಧ ಆರಂಭದಿಂದಲೂ ಅಸಮಾಧಾನ ವ್ಯಕ್ತಪಡಿಸುತ್ತಲೇ ಬಂದಿರುವ ಪಾಟೀಲರಿಗೆ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸ್ಥಾನ ನೀಡಿ ಸಮಾಧಾನಪಡಿಸಲು ಸಿದ್ದರಾಮಯ್ಯ ಮುಂದಾಗಿದ್ದರು ಎನ್ನಲಾಗಿದೆ. ಆದರೆ, 'ನನಗೆ ಆ ಸ್ಥಾನ ಬೇಡ’ ಎಂದು ಪಾಟೀಲರು ನೇರವಾಗಿ ಮುಖ್ಯಮಂತ್ರಿ ಅವರಿಗೇ ಹೇಳಿದ್ದಾರೆ ಎಂದು ಮೂಲಗಳು ಹೇಳಿವೆ.

35 ವರ್ಷಗಳ ಬಳಿಕ ಆಳಂದ ಕ್ಷೇತ್ರದಲ್ಲಿ ಮೊದಲ ಬಾರಿಗೆ ಕಾಂಗ್ರೆಸ್ ಗೆದ್ದಿದೆ. ಪಾಟೀಲರನ್ನು ಸಚಿವರನ್ನಾಗಿ ಮಾಡ ಬೇಕೆಂಬ ಕೂಗು ಕ್ಷೇತ್ರದಲ್ಲಿದೆ. ಆದರೆ, ಸೂಕ್ತ ಸ್ಥಾನಮಾನ ಸಿಗದೇ ಇರುವುದರಿಂದ ಸಿದ್ದರಾಮಯ್ಯ ವಿರುದ್ಧ ಪಾಟೀಲರು ಮುನಿಸಿಕೊಂಡಿದ್ದಾರೆ. ರಾಜ್ಯ ಯೋಜನಾ ಮಂಡಳಿಯ (ಈಗ ರಾಜ್ಯ ಪರಿವರ್ತನಾ ಸಂಸ್ಥೆ) ಉಪಾಧ್ಯಕ್ಷ ಸ್ಥಾನ ನೀಡುವುದಾದರೆ ಒಪ್ಪಿಕೊಳ್ಳಲು ಪಾಟೀಲರು ಸಿದ್ಧರಿದ್ದರು. ಈ ಬಗ್ಗೆ ಮುಖ್ಯಮಂತ್ರಿ ಬಳಿಯೂ ಹೇಳಿಕೊಂಡಿದ್ದರು ಎಂದು ಗೊತ್ತಾಗಿದೆ. ಆದರೆ, ಆ ಸ್ಥಾನವನ್ನು ಶಾಸಕ ಬಸವರಾಜ ರಾಯರಡ್ಡಿ ಅವರಿಗೆ ನೀಡಲು ಮುಖ್ಯಮಂತ್ರಿ ಒಲವು ಹೊಂದಿದ್ದರು. ಅಲ್ಲದೆ, ಈ ಬಗ್ಗೆ ಪಾಟೀಲರ ಬಳಿಯೂ ಹೇಳಿಕೊಂಡಿದ್ದರು. ಆದರೆ, ಆ ಸ್ಥಾನ ವಹಿಸಿಕೊಳ್ಳಲು ರಾಯರಡ್ಡಿ ತಯಾರಾಗಲಿಲ್ಲ ಎನ್ನಲಾಗಿದೆ.

ಬಿ.ಆರ್. ಪಾಟೀಲ

ಬಾಕಿ ಅನುದಾನ ಬಿಡುಗಡೆಗೆ ಆರ್ಥಿಕ ಇಲಾಖೆ ಅನುಮತಿ

ಪ್ರಜಾವಾಣಿ ವಾರ್ತೆ

ಹಾವೇರಿ: ನಗರದಲ್ಲಿ ಈ ವರ್ಷ ಜನವರಿ 6ರಿಂದ 8ರವರೆಗೆ ನಡೆದ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸಂಬಂಧಿಸಿದ ₹4.66 ಕೋಟಿ ಹೆಚ್ಚುವರಿ ಅನುದಾನವನ್ನು ಮಂಜೂರು ಮಾಡಲು ಆರ್ಥಿಕ ಇಲಾಖೆ ಒಪ್ಪಿಗೆ ನೀಡಿದೆ.

ಈ ಹೆಚ್ಚುವರಿ ಅನುದಾನವನ್ನು 2023–24ನೇ ಸಾಲಿನ ಪೂರಕ ಅಂದಾಜುಗಳಲ್ಲಿ ಒದಗಿಸಲಾಗುವುದು ಎಂದು ತಿಳಿಸಲಾಗಿದೆ.

ಹಾವೇರಿ ಸಾಹಿತ್ಯ ಸಮ್ಮೇಳನಕ್ಕೆ ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ₹20 ಕೋಟಿ ಅನುದಾನ ಬಿಡುಗಡೆ ಮಾಡಿದ್ದರು. ಇದು ಕಳೆದ 85 ಸಮ್ಮೇಳನಗಳಿಗೆ ನೀಡಿದ್ದ ಅನುದಾನದಲ್ಲೇ ಗರಿಷ್ಠ. ಆದರೆ, ಈ ಮೊತ್ತವನ್ನೂ ಮೀರಿ ₹5 ಕೋಟಿ ಹೆಚ್ಚುವರಿಯಾಗಿ ಖರ್ಚು ಮಾಡಲಾಗಿತ್ತು.

₹5 ಕೋಟಿ ಹೆಚ್ಚುವರಿ ಅನುದಾನವನ್ನು ಬಿಡುಗಡೆ ಮಾಡುವಂತೆ ಜಿಲ್ಲಾಡಳಿತ ಸರ್ಕಾರಕ್ಕೆ 2023ರ ಫೆಬ್ರುವರಿಯಲ್ಲಿ ಪ್ರಸ್ತಾವ ಕಳುಹಿಸಿತ್ತು. ಆದರೆ, ಆರ್ಥಿಕ ಇಲಾಖೆ ಜುಲೈ ತಿಂಗಳಲ್ಲಿ ಈ ಪ್ರಸ್ತಾವ ತಿರಸ್ಕರಿಸಿತ್ತು. ಇದರಿಂದ ಸಮ್ಮೇಳನಕ್ಕೆ ಶ್ರಮಿಸಿದ ಕೆಲ ಕಲಾವಿದರು, ಗುತ್ತಿಗೆದಾರರಿಗೆ ಹಣ ಸಿಕ್ಕಿರಲಿಲ್ಲ.

‘ಹಾವೇರಿ ಜಿಲ್ಲಾಡಳಿತಕ್ಕೆ ಕರ್ನಾಟಕ ರಾಜ್ಯ ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ (ಕೆಎಸ್‌ಎಂಸಿಎ) ಸಲ್ಲಿಸಿದ್ದ ನಾಲ್ಕು ಬಿಲ್‌ಗಳಲ್ಲಿ ಮೂರು ಬಿಲ್‌ಗಳಿಗೆ ಹಣ ಪಾವತಿ ಮಾಡಲಾಗಿತ್ತು. ಹೆಚ್ಚುವರಿ ಅನುದಾನ ಬಿಡುಗಡೆಯಾದ ತಕ್ಷಣ ಬಾಕಿ ಬಿಲ್ ವಿಲೇವಾರಿ ಮಾಡುತ್ತೇವೆ’ ಎಂದು ಜಿಲ್ಲಾಧಿಕಾರಿ ರಘುನಂದನ ಮೂರ್ತಿ ತಿಳಿಸಿದರು. ಹಣ ಸಿಗದೆ ಕಲಾವಿದರು, ಗುತ್ತಿಗೆದಾರರು ಪರದಾಡುತ್ತಿರುವ ಬಗ್ಗೆ ‘ಪ್ರಜಾವಾಣಿ’ಯಲ್ಲಿ ವಿಶೇಷ ವರದಿ ಪ್ರಕಟವಾಗಿತ್ತು.

ರಾಹುಲ್‌ಗೆ ರಾಜಕೀಯದ ಜ್ಞಾನವಿಲ್ಲ: ಬಿಸ್ವಾ

ಗುವಾಹಟಿ (ಪಿಟಿಐ): ವಂಶಪಾರಂಪರ್ಯ ರಾಜಕೀಯ ಬಗ್ಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಹೇಳಿಕೆಗೆ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ವಾಗ್ದಾಳಿ ನಡೆಸಿದ್ದು, ಅವರು ರಾಜಕೀಯದ ಬಗ್ಗೆ ಯಾವುದೇ ಜ್ಞಾನವಿಲ್ಲದ 'ಅನಕ್ಷರಸ್ಥ ಮಗು' ಎಂದು ಬಣ್ಣಿಸಿದ್ದಾರೆ.

ಮಿಜೋರಾಂನಲ್ಲಿ ಮಂಗಳವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಪುತ್ರ ಬಿಸಿಸಿಐನಲ್ಲಿ ಹೊಂದಿರುವ ಸ್ಥಾನ ಕುರಿತು ರಾಹುಲ್ ಗಾಂಧಿ ಉಲ್ಲೇಖಿಸಿದ್ದರು.

'ಶಾ ಅವರ ಮಗ ಬಿಜೆಪಿಯಲ್ಲಿಲ್ಲ. ಆದರೆ, ರಾಹುಲ್ ಅವರ ತಾಯಿ, ತಂದೆ, ಅಜ್ಜ, ಸಹೋದರಿ, ಸಹೋದರ ಎಲ್ಲರೂ ರಾಜಕೀಯದಲ್ಲಿದ್ದು, ಪಕ್ಷ ನಿಯಂತ್ರಿಸುತ್ತಿದ್ದಾರೆ. ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಬಿಜೆಪಿಯ ಒಂದು ವಿಭಾಗ ಎಂದು ರಾಹುಲ್ ಭಾವಿಸಿದ್ದಾರೆ. ಅವರ ಬಗ್ಗೆ ನನ್ನನ್ನು ಹೆಚ್ಚು ಕೇಳಬೇಡಿ' ಎಂದು ಶರ್ಮಾ ಸುದ್ದಿಗಾರರಿಗೆ ತಿಳಿಸಿದರು.

'ಉತ್ತರ ಪ್ರದೇಶದಲ್ಲಿ ಶಾಸಕರಾಗಿರುವ ರಾಜನಾಥ್ ಸಿಂಗ್ ಅವರ ಮಗನನ್ನು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿಗೆ ಹೋಲಿಸಬಹುದೇ? ಅವರು ಬಿಜೆಪಿಯನ್ನು ನಿಯಂತ್ರಿಸುತ್ತಾರೆಯೇ? ರಾಹುಲ್ ಮೊದಲು ಹೊಸಬರಿಗೆ ಅವಕಾಶ ನೀಡಬೇಕು. ನಂತರ ವಂಶಪಾರಂಪರ್ಯ ರಾಜಕೀಯದ ಬಗ್ಗೆ ಮಾತನಾಡಬೇಕು ಎಂದು ತಿರುಗೇಟು ನೀಡಿದರು.

ಕೆಸಿಆರ್ ವಿರುದ್ಧ ನಡೆಯದ ಸಿಬಿಐ, ಇ.ಡಿ ತನಿಖೆ: ರಾಹುಲ್ ಗಾಂಧಿ ಆರೋಪ

ಬಿಆರ್‌ಎಸ್–ಕಾಂಗ್ರೆಸ್ ನಡುವೆ ಸ್ಪರ್ಧೆ

ಮುಖ್ಯಾಂಶಗಳು
- ಬಿಆರ್‌ಎಸ್ ಬಿಜೆಪಿಯ 'ಬಿ' ಟೀಂ
- ಬಿಜೆಪಿಯೊಂದಿಗೆ ರಾಜಿ ಇಲ್ಲ
- ಜಾತಿಗಣತಿ ನಡೆಸಲು ಆಗ್ರಹ

ಮುಲುಗು (ತೆಲಂಗಾಣ) (ಪಿಟಿಐ): ಆಡಳಿತಾರೂಢ ಬಿಆರ್‌ಎಸ್ ಹಾಗೂ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಹಾಗೂ ಬಿಆರ್‌ಎಸ್ ನಡುವೆ ನೇರ ಹಣಾಹಣಿ ನಡೆಯಲಿದೆ ಎಂದು ಹೇಳಿದ್ದಾರೆ.

ಸಹೋದರಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರೊಂದಿಗೆ ಬುಧವಾರ ಬಸ್ ಯಾತ್ರೆ ವಿಜಯಭೇರಿಗೆ ಚಾಲನೆ ನೀಡಿದ ನಂತರ ಸಾರ್ವಜನಿಕ ಸಭೆ ಉದ್ದೇಶಿಸಿ ಮಾತನಾಡಿದರು.

ಚುನಾವಣೆಯಲ್ಲಿ ಬಿಆರ್‌ಎಸ್ ಗೆಲ್ಲಬೇಕೆಂದು ಬಿಜೆಪಿ ಬಯಸುತ್ತದೆ. ಬಿಜೆಪಿ, ಬಿಆರ್‌ಎಸ್ ಮತ್ತು ಅಸಾದುದ್ದೀನ್ ಓವೈಸಿ ನೇತೃತ್ವದ ಎಐಎಂಐಎಂ ಕಾಂಗ್ರೆಸ್ ಸೋಲಿಸುವ ಪ್ರಯತ್ನದಲ್ಲಿ ಒಟ್ಟಾಗಿ ಕೆಲಸ ಮಾಡುತ್ತಿವೆ. ತೆಲಂಗಾಣ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಬಿಆರ್‌ಎಸ್ ನಡುವೆ ಸ್ಪರ್ಧೆ ಇದೆ. ಈಗಾಗಲೇ ನಾವು ಬಿಜೆಪಿ ಸೋಲಿಸಿದ್ದೇವೆ. ಬಿಜೆಪಿ ಮತ್ತು ಬಿಆರ್‌ಎಸ್ ನಡುವೆ ಒಳ ಒಪ್ಪಂದವಿದೆ ಎಂದು ಆರೋಪಿಸಿದರು.

'ತೆಲಂಗಾಣ ಮುಖ್ಯಮಂತ್ರಿ ವಿರುದ್ಧ ಸಿಬಿಐ, ಇ.ಡಿ ಅಥವಾ ಐ.ಟಿ ತನಿಖೆ ನಡೆದಿಲ್ಲ. ನನ್ನ ವಿರುದ್ಧ 24 ಪ್ರಕರಣಗಳು ದಾಖಲಾಗಿವೆ. ಸಂಸತ್ ಸದಸ್ಯತ್ವ ಸ್ಥಾನದಿಂದ ನನ್ನನ್ನು ಅನರ್ಹಗೊಳಿಸಲಾಯಿತು. ತೆಲಂಗಾಣ ಮುಖ್ಯಮಂತ್ರಿ ಹೊರತುಪಡಿಸಿ ವಿರೋಧ ಪಕ್ಷದ ಎಲ್ಲ ನಾಯಕರ ವಿರುದ್ಧವೂ ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದು ಹೇಳಿದ ಅವರು, ಬಿಆರ್‌ಎಸ್‌ಗೆ ಮತ ಹಾಕಿದರೆ ಅದು ಬಿಜೆಪಿಗೆ ಹೋಗುತ್ತದೆ' ಎಂದರು.

> **ಚಂದ್ರಶೇಖರ ರಾವ್ ಸರ್ಕಾರ ಪ್ರತಿ ಕುಟುಂಬಕ್ಕೆ ಉದ್ಯೋಗ ನೀಡುವ ಭರವಸೆ ಉಳಿಸಿಕೊಳ್ಳಲು ವಿಫಲವಾಗಿದೆ. ಇದರಿಂದ 40 ಲಕ್ಷ ಯುವಜನ ನಿರುದ್ಯೋಗಿಗಳಾಗಿದ್ದಾರೆ**
> **ಪ್ರಿಯಾಂಕಾ ಗಾಂಧಿ,** ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

'ತೆಲಂಗಾಣ ಮುಖ್ಯಮಂತ್ರಿಯನ್ನು ನಿಯಂತ್ರಿಸಬಹುದು ಮತ್ತು ಅಗತ್ಯವಿದ್ದಾಗ ಬಿಗಿಗೊಳಿಸಬಹುದು ಎಂದು ಬಿಜೆಪಿಗೆ ತಿಳಿದಿದೆ. ತೆಲಂಗಾಣದಲ್ಲಿ ಬಿಜೆಪಿಯ 'ಬಿ' ಟೀಂ ಆಗಿರುವ ಬಿಆರ್‌ಎಸ್ ಸೋಲಿಸಲು ಕಾಂಗ್ರೆಸ್‌ಗೆ ಮತ ನೀಡಿ' ಎಂದು ಮನವಿ ಮಾಡಿದರು. ಪ್ರಿಯಾಂಕಾ ಗಾಂಧಿ ಮಾತನಾಡಿದರು. ಇದಕ್ಕೂ ಮುನ್ನ ಐತಿಹಾಸಿಕ ರಾಮಪ್ಪ ದೇವಸ್ಥಾನದಲ್ಲಿ ಪ್ರಾರ್ಥನೆ ಸಲ್ಲಿಸಿದರು.

ತೆಲಂಗಾಣದ ಮುಲುಗು ಜಿಲ್ಲೆಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಹಾಗೂ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಬುಧವಾರ ವಿಜಯಭೇರಿ ಯಾತ್ರೆಗೆ ಚಾಲನೆ ನೀಡಿದರು –ಪಿಟಿಐ ಚಿತ್ರ

'ರಾಹುಲ್ ಅಂಕಾಪುರ ಚಿಕನ್ ಸವಿಯಲಿ'

ಹೈದರಾಬಾದ್ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು 'ಚುನಾವಣಾ ಗಾಂಧಿ' ಎಂದು ಕರೆದಿರುವ ಬಿಆರ್‌ಎಸ್ ನಾಯಕಿ ಕೆ.ಕವಿತಾ, ಪ್ರವಾಸಿಗರಾಗಿ ತೆಲಂಗಾಣಕ್ಕೆ ಬಂದು ಸ್ಥಳೀಯ ಭಕ್ಷ್ಯ 'ಅಂಕಾಪುರ ಚಿಕನ್' ಸವಿದು ಹೋಗಬಹುದು ಎಂದು ಹೇಳಿದ್ದಾರೆ.

ಬೋಧದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೂರು ದಿನಗಳ ಬಸ್ ಯಾತ್ರೆ ವೇಳೆ ನಿಜಾಮಾಬಾದ್‌ಗೆ ಭೇಟಿ ನೀಡಲಿರುವ ರಾಹುಲ್, 'ವಿಲಕ್ಷಣ' ಮಾತುಗಳಿಂದ ಜನರಲ್ಲಿ ಭಿನ್ನಾಭಿಪ್ರಾಯ ಸೃಷ್ಟಿಸದಂತೆ ಕೋರಿರುವುದಾಗಿ ತಿಳಿಸಿದರು.

ರಾಹುಲ್ ಗಾಂಧಿ ತೆಲಂಗಾಣಕ್ಕೆ ಏಕೆ ಬರುತ್ತಿದ್ದಾರೆ ಎಂದು ಪ್ರಶ್ನಿಸಿದ ಕವಿತಾ, 'ರಾಜ್ಯದ ರೈತರು ಅಥವಾ ವಿದ್ಯಾರ್ಥಿಗಳಿಗೆ ಕಾಂಗ್ರೆಸ್ ಏನನ್ನೂ ಮಾಡಿಲ್ಲ ಮತ್ತು ತೆಲಂಗಾಣ ಅಭಿವೃದ್ಧಿಯ ಭಾಗವಾಗಿಲ್ಲ. ತೆಲಂಗಾಣದಲ್ಲಿ ನಿಮಗೆ ಸ್ಥಾನವಿಲ್ಲ. ಅದಕ್ಕಾಗಿಯೇ ನಿಮ್ಮನ್ನು ಚುನಾವಣಾ ಗಾಂಧಿ ಎಂದು ಕರೆಯಲು ಬಯಸುತ್ತೇನೆ' ಎಂದರು.

ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ ಕವಿತಾ, ಈ ಹಿಂದೆ ಪಕ್ಷವು ಮುಖ್ಯಮಂತ್ರಿಗಳನ್ನು ಬದಲಾಯಿಸಲು ಬಯಸಿದಾಗಲೆಲ್ಲಾ ರಾಜ್ಯಗಳಲ್ಲಿ ಕೋಮು ಗಲಭೆಗಳು ಭುಗಿಲೆದ್ದವು. ಇಲ್ಲಿಗೆ ಬಂದು ಹಿಂದೂಗಳು ಮತ್ತು ಮುಸ್ಲಿಮರ ಬಗ್ಗೆ ವಿಲಕ್ಷಣ ಪದ ಬಳಸಿ, ವಾತಾವರಣ ಹಾಳು ಮಾಡಬೇಡಿ. ತೆಲಂಗಾಣ ಶಾಂತಿಯುತವಾಗಿದೆ ಎಂದು ತಿಳಿಸಿದರು.

ಚುನಾವಣಾ ಕಣದ ಸುತ್ತ

ರಾಜಸ್ಥಾನ: ಅಭ್ಯರ್ಥಿಗಳ ಆಯ್ಕೆ ಚರ್ಚೆ

ನವದೆಹಲಿ (ಪಿಟಿಐ): ರಾಜಸ್ಥಾನ ವಿಧಾನಸಭಾ ಚುನಾವಣೆಗೆ ಸಂಭಾವ್ಯ ಅಭ್ಯರ್ಥಿಗಳ ಬಗ್ಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಧ್ಯಕ್ಷತೆಯಲ್ಲಿ ಚರ್ಚೆ ನಡೆಸಲಾಯಿತು.

ಐದು ವರ್ಷಗಳಲ್ಲಿ ರಾಜ್ಯದಲ್ಲಿ ಉತ್ತಮ ಆಡಳಿತದ ಹಿನ್ನೆಲೆಯಲ್ಲಿ ಪಕ್ಷವು ಅಧಿಕಾರಕ್ಕೆ ಮರಳಲಿದೆ ಎಂಬ ವಿಶ್ವಾಸವನ್ನು ಖರ್ಗೆ ವ್ಯಕ್ತಪಡಿಸಿದರು.

ನಾಯಕರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್, ಎಐಸಿಸಿ ರಾಜ್ಯ ಉಸ್ತುವಾರಿ ಸುಖ್ಜಿಂದರ್ ರಾಂಧವ, ರಾಜಸ್ಥಾನ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಗೋವಿಂದ್, ಸ್ಕ್ರೀನಿಂಗ್ (ಪರಿಶೀಲನಾ) ಸಮಿತಿ ಮುಖ್ಯಸ್ಥ ಗೌರವ್ ಗೊಗೊಯ್ ಸಭೆಯಲ್ಲಿ ಭಾಗವಹಿಸಿದ್ದರು.

₹5.5 ಕೋಟಿ ಮೌಲ್ಯದ ವಸ್ತು ಜಪ್ತಿ

ರಾಯಪುರ (ಪಿಟಿಐ): ಛತ್ತೀಸಗಢದಲ್ಲಿ ₹5.5 ಕೋಟಿಗೂ ಅಧಿಕ ಮೌಲ್ಯದ ದಾಖಲೆಯಿಲ್ಲದ ನಗದು, ಮದ್ಯ ಮತ್ತು ಇತರ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಮುಖ್ಯ ಚುನಾವಣಾ ಅಧಿಕಾರಿ (ಸಿಇಒ) ಕಚೇರಿ ತಿಳಿಸಿದೆ.

₹85 ಲಕ್ಷ ನಗದು, ₹37.57 ಲಕ್ಷ ಮೌಲ್ಯದ ಮದ್ಯ, ₹61.57 ಲಕ್ಷ ಮೌಲ್ಯದ 1,838 ಕೆ.ಜಿ ಮಾದಕ ದ್ರವ್ಯ, ₹1.7 ಕೋಟಿ ಮೌಲ್ಯದ 63 ಕೆ.ಜಿ ಆಭರಣ ಮತ್ತು ₹2.03 ಕೋಟಿ ಮೌಲ್ಯದ ಇತರ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಿಜೋರಾಂ: 21 ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಿದ ಬಿಜೆಪಿ

ನವದೆಹಲಿ(ಪಿಟಿಐ): ಮಿಜೋರಾಂನ 21 ವಿಧಾನಸಭಾ ಸ್ಥಾನಗಳಿಗೆ ಬುಧವಾರ ಬಿಜೆಪಿ ಅಭ್ಯರ್ಥಿಗಳ ಹೆಸರನ್ನು ಬಿಡುಗಡೆ ಮಾಡಿದೆ.

ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ಒಳಗೊಂಡ ಬಿಜೆಪಿ ಕೇಂದ್ರ ಚುನಾವಣಾ ಸಮಿತಿಯು ಅಭ್ಯರ್ಥಿಗಳ ಪಟ್ಟಿಯನ್ನು ಅಖೈರುಗೊಳಿಸಿದೆ.

ಛತ್ತೀಸಗಢ ವಿಧಾನಸಭೆಗೆ ಮುಂದಿನ ತಿಂಗಳು ನಡೆಯುವ ಚುನಾವಣೆಗೆ ಒಂದೇ ವಿಧಾನಸಭಾ ಕ್ಷೇತ್ರಕ್ಕೆ ಬಿಜೆಪಿ ಬುಧವಾರ ಅಭ್ಯರ್ಥಿ ಘೋಷಿಸಿದೆ.

ಮೂರನೇ ಪಟ್ಟಿಯಲ್ಲಿ ಕಬೀರಧಾಮ್ ಜಿಲ್ಲೆಯ ಪಂಡರಿಯಾದಿಂದ ಮಹಿಳಾ ಘಟಕದ ಕಾರ್ಯದರ್ಶಿ ಭಾವನಾ ಬೋಹ್ರಾ ಅವರನ್ನು ಕಣಕ್ಕಿಳಿಸಲಾಗಿದೆ. ಇದರೊಂದಿಗೆ ಪಕ್ಷವು ಒಟ್ಟು 90 ವಿಧಾನಸಭಾ ಕ್ಷೇತ್ರಗಳ ಪೈಕಿ 86 ಸ್ಥಾನಗಳಿಗೆ ಅಭ್ಯರ್ಥಿಗಳನ್ನು ಘೋಷಿಸಿದೆ ಎಂದು ಪಕ್ಷದ ಮುಖಂಡರೊಬ್ಬರು ತಿಳಿಸಿದ್ದಾರೆ.

ಎರಡನೇ ಹಂತದಲ್ಲಿ ನಡೆಯುವ ಉಳಿದ ನಾಲ್ಕು ಸ್ಥಾನಗಳಿಗೆ ಅಭ್ಯರ್ಥಿಗಳನ್ನು ಇನ್ನೂ ಘೋಷಿಸಲಾಗಿಲ್ಲ.

ತೆಲಂಗಾಣ: ಜನಸೇನಾ ಜತೆ ಬಿಜೆಪಿ ಚುನಾವಣಾ ಪೂರ್ವ ಮೈತ್ರಿ ಸಾಧ್ಯತೆ?

ಹೈದರಾಬಾದ್ (ಪಿಟಿಐ): ವಿಧಾನಸಭಾ ಚುನಾವಣಾ ಪೂರ್ವ ಮೈತ್ರಿ ಕುರಿತು ತೆಲಂಗಾಣ ಬಿಜೆಪಿ ಘಟಕದ ಅಧ್ಯಕ್ಷ ಜಿ.ಕಿಶನ್ ರೆಡ್ಡಿ ಹಾಗೂ ರಾಜ್ಯಸಭಾ ಸದಸ್ಯ ಕೆ.ಲಕ್ಷ್ಮಣ್ ಅವರು, ಜನಸೇನಾ ಪಕ್ಷದ ಸಂಸ್ಥಾಪಕ, ನಟ ಪವನ್ ಕಲ್ಯಾಣ್ ಅವರೊಂದಿಗೆ ಬುಧವಾರ ಚರ್ಚಿಸಿದರು.

ಚುನಾವಣಾ ಪೂರ್ವ ಮೈತ್ರಿ ಬಗ್ಗೆ ಒಂದು ಅಥವಾ ಎರಡು ದಿನಗಳಲ್ಲಿ ಸ್ಪಷ್ಟತೆ ಸಿಗಲಿದೆ. ತೆಲಂಗಾಣದಲ್ಲಿ ಕನಿಷ್ಠ 30 ಸ್ಥಾನಗಳಲ್ಲಿ ಸ್ಪರ್ಧಿಸುವಂತೆ ತಮ್ಮ ಪಕ್ಷದ ಕಾರ್ಯಕರ್ತರಿಂದ ಒತ್ತಡವಿದೆ ಎಂಬುದನ್ನು ಬಿಜೆಪಿ ನಾಯಕರಿಗೆ ತಿಳಿಸಲಾಗಿದೆ ಎಂದು ಪವನ್ ಕಲ್ಯಾಣ್ ಹೇಳಿದ್ದಾರೆ.

2014ರ ವಿಧಾನಸಭಾ ಚುನಾವಣೆಯಲ್ಲಿ ಜನಸೇನಾವು ಬಿಜೆಪಿ ಮತ್ತು ತೆಲುಗು ದೇಶಂ ಅಭ್ಯರ್ಥಿಗಳ ಗೆಲುವಿಗಾಗಿ ಕೆಲಸ ಮಾಡಿತ್ತು. ಬಿಜೆಪಿ ನಾಯಕರ ಮನವಿ ಬಳಿಕ ಪವನ್ ಕಲ್ಯಾಣ್ ನೇತೃತ್ವದ ಪಕ್ಷವು ಗ್ರೇಟರ್ ಹೈದರಾಬಾದ್ ಮುನ್ಸಿಪಲ್ ಕಾರ್ಪೊರೇಷನ್‌ಗಳಲ್ಲಿ ಸ್ಪರ್ಧಿಸಲಿಲ್ಲ ಎಂದು ಪ್ರಕಟಣೆ ತಿಳಿಸಿದೆ.

25 ಶಾಸಕರಿಗೆ 'ಕೈ' ಟಿಕೆಟ್

ರಾಯಪುರ(ಪಿಟಿಐ): ಛತ್ತೀಸಗಢ ವಿಧಾನಸಭೆ ಚುನಾವಣೆಗೆ 53 ಅಭ್ಯರ್ಥಿಗಳ ಎರಡನೇ ಪಟ್ಟಿಯನ್ನು ಕಾಂಗ್ರೆಸ್ ಬುಧವಾರ ಬಿಡುಗಡೆ ಮಾಡಿದೆ.

25 ಶಾಸಕರಿಗೆ ಮತ್ತೆ ಟಿಕೆಟ್ ನೀಡಲಾಗಿದ್ದು, ಹತ್ತು ಶಾಸಕರಿಗೆ ಟಿಕೆಟ್ ನಿರಾಕರಿಸಲಾಗಿದೆ. 22 ಹೊಸ ಮುಖಗಳನ್ನು ಕಣಕ್ಕೆ ಇಳಿಸಲು ನಿರ್ಧರಿಸಲಾಗಿದೆ. 90 ಕ್ಷೇತ್ರಗಳ ಪೈಕಿ 83 ಸ್ಥಾನಗಳಿಗೆ ಟಿಕೆಟ್ ಘೋಷಿಸಿದಂತಾಗಿದೆ.

'ನಿಂದನೆ ಸ್ವೀಕರಿಸಲೂ ಪವರ್ ಆಫ್ ಅಟಾರ್ನಿ'

ಭೋಪಾಲ್ (ಪಿಟಿಐ): 'ತಮ್ಮ ಪರವಾಗಿ ನಿಂದನೆ ಸ್ವೀಕರಿಸಲೂ ಕಾಂಗ್ರೆಸ್‌ನ ರಾಜ್ಯಸಭೆ ಸಂಸದ ದಿಗ್ವಿಜಯ್ ಸಿಂಗ್ ಅವರಿಗೆ ಕಮಲ್‌ನಾಥ್ ಅವರು ಪವರ್ ಆಫ್ ಅಟಾರ್ನಿ ನೀಡಿರುವಂತಿದೆ' ಎಂದು ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ಬುಧವಾರ ವ್ಯಂಗ್ಯವಾಡಿದ್ದಾರೆ.

'ಪಕ್ಷದ ಮುಖಂಡ ವೀರೇಂದ್ರ ರಘುವಂಶಿಗೆ ಟಿಕೆಟ್ ಕೊಡುವ ವಿಚಾರವನ್ನು ದಿಗ್ವಿಜಯ್ ಮತ್ತು ಅವರ ಮಗನಿಗೆ ಬಿಟ್ಟಿದ್ದೇನೆ. ಟಿಕೆಟ್ ಹಂಚಿಕೆ ವಿಚಾರದಲ್ಲಿ ಆಗಿರುವ ಗೊಂದಲ ಕುರಿತು ದಿಗ್ವಿಜಯ್ ಬಳಿ ಅವರ ಬಟ್ಟೆ ಹರಿದು ಕೇಳಿ' ಎಂದು ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಕಮಲ್‌ನಾಥ್ ಅವರು ರಘುವಂಶಿ ಬೆಂಬಲಿಗರಿಗೆ ಹೇಳುತ್ತಿರುವ ವಿಡಿಯೊ ಈಗ ಬಹಿರಂಗವಾಗಿದೆ.

> **ಅಸಭ್ಯವಾಗಿ ಮಾತನಾಡುವ ಕಾಂಗ್ರೆಸ್ ನಾಯಕರು ಅಧಿಕಾರಕ್ಕೇರಿದರೆ ಮಧ್ಯಪ್ರದೇಶದ ಜನತೆಯ ಸ್ಥಿತಿ ಏನಾಗಬಹುದು? ಅದಕ್ಕೆ ಜನರು ಅವಕಾಶ ನೀಡಲ್ಲ**
> **ಜ್ಯೋತಿರಾದಿತ್ಯ ಸಿಂದಿಯಾ,** ಕೇಂದ್ರ ಸಚಿವ

ಮಧ್ಯಪ್ರದೇಶ ಚುನಾವಣೆ ಸನ್ನಿಹಿತವಾಗುತ್ತಿದ್ದಂತೆ ದಿಗ್ವಿಜಯ್ ಸಿಂಗ್ ಮತ್ತು ಕಮಲ್‌ನಾಥ್ ಮಧ್ಯೆ ಬಿರುಕು ಮೂಡುತ್ತಿದೆ ಎಂಬ ಮಾತುಗಳು ಕೇಳಿಬರುತ್ತಿರುವ ನಡುವೆಯೇ ಶಿವರಾಜ್ ಸಿಂಗ್ ಅವರು ಹೀಗೆ ಹೇಳಿದ್ದಾರೆ.

'ದಿಗ್ವಿಜಯ್ ಮೇಲೆ ಪ್ರೀತಿ ಇರುವುದರಿಂದ ಅವರಿಗೆ ಪವರ್ ಆಫ್ ಅಟಾರ್ನಿ ನೀಡಿದ್ದೆ ಎಂದು ಕಮಲ್‌ನಾಥ್ ಹೇಳಿದ್ದರು. ಬಯ್ಯಿಸಿಕೊಳ್ಳುವ ವಿಚಾರದಲ್ಲೂ ಅದು ಅನ್ವಯವಾಗಿದೆ. ಹಾಗಾಗಿ ಪವರ್ ಆಫ್ ಅಟಾರ್ನಿ ಈಗಲೂ ಮುಂದುವರೆದಿದೆ' ಎಂದಿದ್ದಾರೆ.

ರಾಜ್ಯದಲ್ಲಿ ಕಾಂಗ್ರೆಸ್ 2018ರಲ್ಲಿ ಸರ್ಕಾರ ರಚಿಸಿದ್ದ ವೇಳೆ ಆಡಳಿತ ನಡೆಸಲು ದಿಗ್ವಿಜಯ್ ಸಿಂಗ್ ಅವರಿಗೆ ಕಮಲ್‌ನಾಥ್ ಅವರು ಪವರ್ ಆಫ್ ಅಟಾರ್ನಿ ನೀಡಿದ್ದರು.

ಛತ್ತೀಸಗಢ: 2ನೇ ಹಂತದ ಚುನಾವಣೆ ಮುಂದೂಡಲು ಬಿಜೆಪಿ ಮನವಿ

ರಾಯಪುರ (ಪಿಟಿಐ): ನವೆಂಬರ್ 17ರಿಂದ 20ರ ವರೆಗೆ ದೇಶದ ಉತ್ತರ ಭಾಗದ ರಾಜ್ಯಗಳಲ್ಲಿ ಛಠ್ ಉತ್ಸವ ನಡೆಯುವ ಕಾರಣಕ್ಕಾಗಿ ಛತ್ತೀಸಗಢ ವಿಧಾನಸಭೆ ಚುನಾವಣೆಯ ಎರಡನೇ ಹಂತದ ಮತದಾನವನ್ನು ಮುಂದೂಡುವಂತೆ ಬಿಜೆಪಿ ಉಪಾಧ್ಯಕ್ಷ ರಮಣ್ ಸಿಂಗ್ ಅವರು ಬುಧವಾರ ಚುನಾವಣಾ ಆಯೋಗವನ್ನು ಒತ್ತಾಯಿಸಿದ್ದಾರೆ.

ನವೆಂಬರ್ 17ರಂದು ಎರಡನೇ ಹಂತದ ಮತದಾನ ನಡೆಯಲಿದೆ. ಈ ಹಿನ್ನೆಲೆಯಲ್ಲಿ ರಮಣ್ ಸಿಂಗ್ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಎರಡನೇ ಹಂತದ ಮತದಾನ ಮುಂದೂಡಬೇಕೆಂದು ಆಯೋಗಕ್ಕೆ ಮನವಿ ಮಾಡುತ್ತೇನೆ. ಹೀಗೆ ಮಾಡುವುದರಿಂದ ಹೆಚ್ಚು ಜನರು ಚುನಾವಣಾ ಪ್ರಕ್ರಿಯೆಯಲ್ಲಿ ಪಾಲ್ಗೊಂಡು ಅವರ ಹಕ್ಕು ಚಲಾಯಿಸಲು ಸಾಧ್ಯವಾಗುತ್ತದೆ' ಎಂದು ಮನವಿ ಮಾಡಿದ್ದಾರೆ.

ಛತ್ತೀಸಗಢ ಎಎಪಿ ಕೂಡಾ ಇದೇ ರೀತಿ ಮನವಿ ಮಾಡಿದೆ. ಬಿಹಾರ, ಪೂರ್ವ ಉತ್ತರ ಪ್ರದೇಶದಿಂದ ರಾಜ್ಯದ ರಾಯಪುರ, ಬಿಲಾಸ್‌ಪುರ, ಭಿಲಾಯಿ ಮತ್ತಿತರ ನಗರಗಳಿಗೆ ಬಂದು ನೆಲೆಸಿರುವವರು ಪ್ರತಿವರ್ಷ ಹಬ್ಬವನ್ನು ಅದ್ದೂರಿಯಾಗಿ ಆಚರಿಸುತ್ತಾರೆ.

ಆಸ್ಪತ್ರೆ ದಾಳಿ ಇಸ್ರೇಲ್ ಕೃತ್ಯವಲ್ಲ: ಬೈಡನ್

ಅರಬ್, ಮುಸ್ಲಿಂ ರಾಷ್ಟ್ರಗಳಲ್ಲಿ ರ್‍ಯಾಲಿ • ಹಮಾಸ್ ವಿರುದ್ಧ ಒಂದಾಗಲು ನೆತನ್ಯಾಹು ಕರೆ

ಟೆಲ್ ಅವೀವ್ (ಎಎಫ್‌ಪಿ/ಎಪಿ): ಯುದ್ಧ ಕಾಲದಲ್ಲಿ ಇಸ್ರೇಲ್‌ಗೆ ಬೆಂಬಲ ಸೂಚಿಸಲು ಇಲ್ಲಿಗೆ ಬಂದಿರುವ ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರು, ಪ್ಯಾಲೆಸ್ಟೀನ್ ಪರ ಬಂಡುಕೋರರೇ ಗಾಜಾದ ಅಲ್‌–ಅಹ್ಲಿ ಅರಬ್ ಆಸ್ಪತ್ರೆಯ ಮೇಲೆ ದಾಳಿ ಮಾಡಿದ್ದಾರೆ ಎಂಬ ಮಾತಿಗೆ ದನಿಗೂಡಿಸಿದ್ದಾರೆ.

ಆಸ್ಪತ್ರೆ ಮೇಲಿನ ದಾಳಿಗೆ ಇಸ್ರೇಲ್ ಕಾರಣ ಎಂದು ಅರಬ್ ರಾಷ್ಟ್ರಗಳು ಹೇಳಿವೆ. ಈ ದಾಳಿಯನ್ನು ಖಂಡಿಸಿ ಈಜಿಪ್ಟ್‌ನಿಂದ ಆರಂಭಿಸಿ ಪಾಕಿಸ್ತಾನದವರೆಗೆ ಮುಸ್ಲಿಂ ದೇಶಗಳಲ್ಲಿ ರ್‍ಯಾಲಿಗಳು ನಡೆದಿವೆ. ಲೆಬನಾನ್‌ನ ಹಿಜ್ಬುಲ್ಲಾ ಸಂಘಟನೆಯು 'ಕ್ರೋಧ ದಿನ'ಕ್ಕೆ ಕರೆ ನೀಡಿದೆ.

ಆದರೆ ಬೈಡನ್ ಅವರು, 'ಗಾಜಾದ ಆಸ್ಪತ್ರೆಯ ಮೇಲೆ ಮಂಗಳವಾರ ನಡೆದ ದಾಳಿಯಿಂದಾಗಿ ನನಗೆ ಆಘಾತವಾಗಿದೆ, ಬೇಸರವೂ ಆಗಿದೆ. ನಾನು ಕಂಡಿರುವ ಅಂಶಗಳನ್ನು ಆಧರಿಸಿ ಹೇಳುವುದಾದರೆ, ನೀವು (ಇಸ್ರೇಲ್) ಈ ದಾಳಿಯನ್ನು ನಡೆಸಿದಂತೆ ಕಾಣುತ್ತಿಲ್ಲ. ಇನ್ನೊಬ್ಬರು ಇದನ್ನು ಮಾಡಿರುವಂತಿದೆ' ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಜೊತೆಗಿನ ಸಭೆಯ ಆರಂಭದಲ್ಲಿ ಹೇಳಿದ್ದಾರೆ.

ಇಸ್ರೇಲ್‌ಗೆ ಬುಧವಾರ ಭೇಟಿ ನೀಡಿದ ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರನ್ನು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಸ್ವಾಗತಿಸಿದರು –ಎಎಫ್‌ಪಿ ಚಿತ್ರ

ಹಮಾಸ್ ಬಂಡುಕೋರರ ಆಡಳಿತವಿರುವ ಗಾಜಾದಲ್ಲಿನ ಆಸ್ಪತ್ರೆಯ ಮೇಲೆ ನಡೆದ ದಾಳಿಯು ನೂರಾರು ಮಂದಿಯ ಸಾವಿಗೆ ಕಾರಣವಾಗಿದೆ.

'ಹಮಾಸ್ ಸಂಘಟನೆಯು ಪ್ಯಾಲೆಸ್ಟೀನ್ ನಾಗರಿಕರನ್ನು ಪ್ರತಿನಿಧಿಸುವುದಿಲ್ಲ. ಈ ಸಂಘಟನೆಯು ಅವರ ಪಾಲಿಗೆ ನೋವನ್ನು ಮಾತ್ರ ತಂದಿತ್ತಿದೆ' ಎಂಬುದನ್ನು ನಾವು ನೆನಪಿನಲ್ಲಿ ಇರಿಸಿಕೊಳ್ಳಬೇಕು ಎಂದು ಬೈಡನ್ ಹೇಳಿದ್ದಾರೆ. 'ಈ ಸಂಘರ್ಷದ ನಡುವೆ ಸಿಲುಕಿರುವ ಅಮಾಯಕ ಪ್ಯಾಲೆಸ್ಟೀನ್ ಜನರಿಗೆ ಜೀವ ರಕ್ಷಣೆಗೆ ಬೇಕಿರುವ ವ್ಯವಸ್ಥೆ ಲಭ್ಯವಾಗುವಂತೆ ನೋಡಿಕೊಳ್ಳಬೇಕು ಎಂದು ನಾನು ನೆತನ್ಯಾಹು ಅವರಿಗೆ ಹೇಳುತ್ತಿದ್ದೇನೆ' ಎಂದು ಬೈಡನ್ ತಿಳಿಸಿದ್ದಾರೆ.

ಹಮಾಸ್ ವಿರುದ್ಧ ಇಡೀ ಜಗತ್ತು ಒಂದಾಗಬೇಕು ಎಂದು ನೆತನ್ಯಾಹು ಅವರು ಕರೆ ನೀಡಿದ್ದಾರೆ. 'ನಾಜಿಗಳನ್ನು ಸೋಲಿಸಲು, ಐಎಸ್‌ಐಎಸ್ ಸೋಲಿಸಲು ನಾಗರಿಕ ಜಗತ್ತು ಒಂದಾಗಿ ನಿಂತ ರೀತಿಯಲ್ಲಿ ಹಮಾಸ್ ಸೋಲಿಸಲು ಕೂಡ ನಾಗರಿಕ ಜಗತ್ತು ಒಂದಾಗಿ ನಿಲ್ಲಬೇಕು' ಎಂದು ನೆತನ್ಯಾಹು ಒತ್ತಾಯಿಸಿದ್ದಾರೆ.

> **ಇಸ್ರೇಲ್‌ಗೆ ಭೇಟಿ ನೀಡುವುದು ನನಗೆ ಹೆಮ್ಮೆಯ ಸಂಗತಿ. ಇಸ್ರೇಲ್‌ನ ಜನರ ಧೈರ್ಯ, ಬದ್ಧತೆ ಮತ್ತು ಶೌರ್ಯವು ನಿಬ್ಬೆರಗಾಗಿಸುವಂಥದ್ದು**
> **ಜೋ ಬೈಡನ್,** ಅಮೆರಿಕದ ಅಧ್ಯಕ್ಷ

ಸಭೆ ರದ್ದು: ಜೋರ್ಡನ್ ರಾಜ ಎರಡನೆಯ ಅಬ್ದುಲ್ಲಾ, ಪ್ಯಾಲೆಸ್ಟೀನ್ ಅಧ್ಯಕ್ಷ ಮಹಮದ್ ಅಬ್ಬಾಸ್ ಮತ್ತು ಈಜಿಪ್ಟ್ ಅಧ್ಯಕ್ಷ ಅಬ್ದೆಲ್ ಫತಾ ಅಲ್‌–ಸಿಸಿ ಜೊತೆ ಬೈಡನ್ ಅವರು ನಡೆಸಬೇಕಿದ್ದ ಸಭೆಯು ಆಸ್ಪತ್ರೆಯ ಮೇಲಿನ ದಾಳಿಯ ಪರಿಣಾಮವಾಗಿ ರದ್ದಾಗಿದೆ.

ಅಕ್ಟೋಬರ್ 7ರ ನಂತರದಲ್ಲಿ, ಗಾಜಾ ನಗರದ ಹೆಚ್ಚಿನ ಪ್ರದೇಶಗಳು ಇಸ್ರೇಲ್ ದಾಳಿಯಿಂದಾಗಿ ಧ್ವಂಸಗೊಂಡಿವೆ. 'ಗಾಜಾದಲ್ಲಿನ ಪರಿಸ್ಥಿತಿಯು ನಿಯಂತ್ರಣ ಮೀರಿಹೋಗುತ್ತಿದೆ. ಎಲ್ಲ ಬದಿಗಳಲ್ಲಿಯೂ ಹಿಂಸಾಚಾರ ನಿಲ್ಲಬೇಕಿದೆ' ಎಂದು ವಿಶ್ವ ಆರೋಗ್ಯ ಸಂಸ್ಥೆಯ ಮುಖ್ಯಸ್ಥ ಟೆಡ್ರೊಸ್ ಅಧನೊಮ್ ಘೆಬ್ರೆಯೆಸಸ್ ಹೇಳಿದ್ದಾರೆ.

ದಾಳಿಗೆ ವಿಶ್ವಸಂಸ್ಥೆ ಖಂಡನೆ

ವಿಶ್ವಸಂಸ್ಥೆ (ಪಿಟಿಐ): ಗಾಜಾದ ಆಸ್ಪತ್ರೆಯ ಮೇಲಿನ ದಾಳಿಯನ್ನು ವಿಶ್ವಸಂಸ್ಥೆ ಖಂಡಿಸಿದೆ. ಈ ಕೃತ್ಯವು ಅಂತರರಾಷ್ಟ್ರೀಯ ಕಾನೂನುಗಳಿಗೆ ವಿರುದ್ಧ ಎಂದು ಅದು ಹೇಳಿದೆ. ಕೃತ್ಯಕ್ಕೆ ಕಾರಣರಾದವರಿಂದ ವಿವರಣೆ ಪಡೆಯಬೇಕು ಎಂದು ಅದು ಹೇಳಿದೆ.

'ಆಸ್ಪತ್ರೆಗಳು ಹಾಗೂ ವೈದ್ಯಕೀಯ ಸಿಬ್ಬಂದಿಗೆ ಅಂತರರಾಷ್ಟ್ರೀಯ ಕಾನೂನಿನ ಅಡಿ ರಕ್ಷಣೆ ಇದೆ' ಎಂದು ವಿಶ್ವಸಂಸ್ಥೆಯ ಮಹಾ ಪ್ರಧಾನ ಕಾರ್ಯದರ್ಶಿ ಆ್ಯಂಟೊನಿಯೊ ಗುಟೆರಸ್ ಹೇಳಿದ್ದಾರೆ.

ಮೋದಿ ಖಂಡನೆ: 'ಗಾಜಾದ ಆಸ್ಪತ್ರೆಯಲ್ಲಿ ಜನ ಪ್ರಾಣ ಕಳೆದುಕೊಂಡ ದುರ್ಘಟನೆಯನ್ನು ಕೇಳಿ ಆಘಾತವಾಯಿತು... ಸಂಘರ್ಷದಲ್ಲಿ ನಾಗರಿಕರು ಪ್ರಾಣ ಕಳೆದುಕೊಳ್ಳುತ್ತಿರುವುದು ಗಂಭೀರ ವಿಚಾರ. ಈ ದಾಳಿಯಲ್ಲಿ ಭಾಗಿಯಾದವರನ್ನು ಉತ್ತರದಾಯಿ ಆಗಿಸಬೇಕು' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಬ್ರೆಜಿಲ್‌ನ ಖಂಡನಾ ನಿರ್ಣಯ ತಿರಸ್ಕೃತ

ವಿಶ್ವಸಂಸ್ಥೆ (ಎಪಿಎಫ್): 'ಇಸ್ರೇಲ್ ಮೇಲೆ ಹಮಾಸ್ ಬಂಡುಕೋರರು ನಡೆಸಿರುವ ಹೇಯ ದಾಳಿ'ಗಳನ್ನು ಖಂಡಿಸುವಂತೆ ಬ್ರೆಜಿಲ್ ಮಂಡಿಸಿದ್ದ ನಿರ್ಣಯವನ್ನು ವಿಶ್ವಸಂಸ್ಥೆ ಭದ್ರತಾ ಮಂಡಳಿಯು (ಯುಎನ್‌ಎಸ್‌ಪಿ) ಬುಧವಾರ ತಿರಸ್ಕರಿಸಿದೆ.

ಮಂಡಳಿಯ 15 ಸದಸ್ಯರಲ್ಲಿ 12 ಸದಸ್ಯರು ಗೊತ್ತುವಳಿ ಪರ ಮತ ಚಲಾಯಿಸಿದ್ದರು. ರಷ್ಯಾ ಮತ್ತು ಅಮೆರಿಕ ಮತ ಚಲಾಯಿಸುವುದರಿಂದ ದೂರ ಉಳಿದವು.

ಯುಎನ್‌ಎಸ್‌ಪಿಯ ಐದು ಶಾಶ್ವತ ಸದಸ್ಯ ದೇಶಗಳಲ್ಲಿ ಅಮೆರಿಕವು ಒಂದು. ಅಮೆರಿಕ ಮತ ನೀಡದ ಕಾರಣ ಗೊತ್ತುವಳಿ ತಿರಸ್ಕೃತಗೊಂಡಿದೆ.

ಭೀಕರತೆ ನೆನೆದ ವೈದ್ಯರು

ಗಾಜಾ (ರಾಯಿಟರ್ಸ್): ಸಂಘರ್ಷ ಪೀಡಿತ ಗಾಜಾ ಪ್ರದೇಶದಲ್ಲಿರುವ ಅಲ್ ಅಹ್ಲಿ ಅರಬ್ ಆಸ್ಪತ್ರೆಗೆ 100 ವರ್ಷಗಳ ಇತಿಹಾಸವಿದೆ. ಎಲ್ಲಾ ಧರ್ಮಗಳನ್ನೂ ಈ ಆಸ್ಪತ್ರೆಯಲ್ಲಿ ಸಮಾನವಾಗಿ ಕಾಣಲಾಗುತ್ತಿತ್ತು. ರೋಗಿಗಳಿಗಾಗಿ ಚರ್ಚ್ ಮತ್ತು ಮಸೀದಿ ಎರಡನ್ನೂ ಇಲ್ಲಿ ನಿರ್ಮಿಸಲಾಗಿತ್ತು. ಶಾಂತಿಯ ನೆಲೆಯಾಗಿದ್ದ ಆಸ್ಪತ್ರೆ ಮೇಲೆ ದಾಳಿ ನಡೆಸಲಾಗಿದೆ ಎಂದು ಆಸ್ಪತ್ರೆಯ ವೈದ್ಯ ಇಬ್ರಾಹಿಂ ಅಲ್‌–ನಖ ಅವರು ಶೆಲ್ ದಾಳಿ ಕುರಿತು ವಿಷಾದ ವ್ಯಕ್ತಪಡಿಸಿದರು.

'ಶೆಲ್ ದಾಳಿ ಎಂದರೇನು ಎಂದು ನಮಗೆ ತಿಳಿದಿರಲಿಲ್ಲ.ಆದರೆ, ಅದರ ಪರಿಣಾಮವನ್ನು ಈಗ ನೋಡುತ್ತಿದ್ದೇವೆ' ಎಂದರು.

ಈ ಸ್ಥಳವು ಮಕ್ಕಳಿಗೆ, ಮಹಿಳೆಯರಿಗೆ ಸುರಕ್ಷಿತ ಸ್ಥಳವಾಗಿತ್ತು. ಈಗ ಆಸ್ಪತ್ರೆಯ ಗೋಡೆಗಳು ಮತ್ತು ನೆಲದ ಮೇಲೆ ರಕ್ತ ಚೆಲ್ಲಿದೆ ಎಂದರು.

'ಒಂದು ಶಸ್ತ್ರಚಿಕಿತ್ಸೆಯನ್ನು ಆಗಷ್ಟೇ ಮುಗಿಸಿದ್ದೆ. ಭಾರಿ ಸ್ಫೋಟವೊಂದರ ಸದ್ದು ಕೇಳಿಸಿತು. ಕ್ಷಣಮಾತ್ರದಲ್ಲಿ ನಮ್ಮ ವಿಭಾಗವು ಸಹಾಯಕ್ಕಾಗಿ ಆಕ್ರಂದಿಸುತ್ತಿದ್ದ ಜನರಿಂದ ತುಂಬಿಹೋಯಿತು' ಎಂದು ಆಸ್ಪತ್ರೆಯ ಮೂಳೆತಜ್ಞ ಫಾದೆಲ್ ನಯಿಮ್ ಸ್ಫೋಟದ ಕ್ಷಣವನ್ನು ನೆನೆದರು.

ಹಲವರು ಆಸ್ಪತ್ರೆಯೊಳಗೇ ಮೃತಪಟ್ಟರು. ಗಾಯಗೊಂಡ ಹಲವರಿಗೆ ಚಿಕಿತ್ಸೆ ನೀಡಿದೆವು. ಗಾಯಾಳುಗಳು ಅಧಿಕ ಸಂಖ್ಯೆಯಲ್ಲಿ ಇದ್ದ ಕಾರಣ ಎಲ್ಲರಿಗೂ ಕೂಡಲೇ ಚಿಕಿತ್ಸೆ ನೀಡಲು ಸಾಧ್ಯವಾಗಲಿಲ್ಲ. ರೋಗಿಗಳ ಛಿದ್ರವಾದ ದೇಹಗಳು ಆಸ್ಪತ್ರೆ ತುಂಬಾ ಬಿದ್ದಿದ್ದವು ಎಂದು ಹೇಳಿದರು.

ಗಾಜಾದ ಆಸ್ಪತ್ರೆ ಮೇಲೆ ಇಸ್ರೇಲ್ ದಾಳಿ ನಡೆಸಿದ್ದನ್ನು ಖಂಡಿಸಿ ಪ್ಯಾಲೆಸ್ಟೀನಿಯನ್ನರು ಬುಧವಾರ ಹೆಬ್ರಾನ್ ನಗರದಲ್ಲಿ ಪ್ರತಿಭಟನೆ ನಡೆಸಿದರು. ಆ ವೇಳೆ ಪ್ರತಿಭಟನನಿರತರೊಬ್ಬರು ಇಸ್ರೇಲ್ ಪಡೆಯತ್ತ ಬೆಂಕಿ ಹಚ್ಚಿದ ಟಯರ್ ದೂಡಿದರು –ಎಎಫ್‌ಪಿ ಚಿತ್ರ

ಹಿಜ್ಬುಲ್ಲಾ ಹಿಂದಿಗಿಂತ ಪ್ರಬಲ: ಎಚ್ಚರಿಕೆ

ಬೈರೂತ್ (ರಾಯಿಟರ್ಸ್): 'ಹಿಜ್ಬುಲ್ಲಾ ಈಗ ಹಿಂದಿಗಿಂತ ಸಾವಿರ ಪಟ್ಟು ಬಲಶಾಲಿಯಾಗಿದೆ' ಎಂದು ಲೆಬನಾನ್‌ನ ಹಿಜ್ಬುಲ್ಲಾ ಬಂಡುಕೋರ ಪಡೆಯ ಅಧಿಕಾರಿ ಹಶೇಮ್ ಸಫೀದ್ದೀನ್ ಬುಧವಾರ ಎಚ್ಚರಿಕೆ ನೀಡಿದ್ದಾರೆ.

ತಮ್ಮ ಬೆಂಬಲಿಗರನ್ನು ಉದ್ದೇಶಿಸಿ ಭಾಷಣ ಮಾಡಿದ ಅವರು, 'ಅಮೆರಿಕ ಅಧ್ಯಕ್ಷ ಜೋ ಬೈಡೆನ್, ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಮತ್ತು ಯುರೋಪಿಯನ್ನರು ಇನ್ನು ಮುಂದೆ ಜಾಗರೂಕತೆಯಿಂದ ಇರಬೇಕು. ನಮ್ಮ ಪ್ರತಿರೋಧದ ವಿಚಾರವಾಗಿ ನೀವು ಮೂಗುತೂರಿಸಿದರೆ ಅದಕ್ಕೆ ತಕ್ಕ ಪ್ರತಿಕ್ರಿಯೆ ನೀಡಲಾಗುತ್ತದೆ' ಎಂದಿದ್ದಾರೆ.

ಹಮಾಸ್ ಬಂಡುಕೋರರಿಗೆ ಬೆಂಬಲ ಸೂಚಿಸಿರುವ ಹಿಜ್ಬುಲ್ಲಾ ಪಡೆಯು ಲೆಬನಾನ್ ಗಡಿಯಲ್ಲಿ ಇಸ್ರೇಲ್ ಸೇನೆ ಜೊತೆ ಸಂಘರ್ಷಕ್ಕಿಳಿದಿದೆ. ಲೆಬನಾನ್ ಮತ್ತು ಹಮಾಸ್‌ಗೆ ಬೆಂಬಲ ನೀಡದಂತೆ ಅಮೆರಿಕವು ಇರಾನ್‌ಗೆ ಎಚ್ಚರಿಕೆ ನೀಡಿತ್ತು. ಈ ಬೆನ್ನಲ್ಲೇ ಹಶೇಮ್ ಹೀಗೆ ಹೇಳಿದ್ದಾರೆ.

ವೃದ್ಧ ದಂಪತಿ ರಕ್ಷಿಸಿದ ಕೇರಳದ 'ಸೂಪರ್ ವಿಮೆನ್'

ತಿರುವನಂತಪುರ (ಪಿಟಿಐ): ಇಸ್ರೇಲ್‌ನಲ್ಲಿ ಆರೈಕೆದಾರ ವೃತ್ತಿಯಲ್ಲಿದ್ದ ಕೇರಳ ಮೂಲದ ಇಬ್ಬರು ಮಹಿಳೆಯರು ಹಮಾಸ್ ಬಂಡುಕೋರರ ದಾಳಿಯಿಂದ ವೃದ್ಧ ದಂಪತಿಯನ್ನು ರಕ್ಷಿಸಿದ್ದಾರೆ. ಅವರನ್ನು 'ಭಾರತದ ಸೂಪರ್ ವಿಮೆನ್' ಎಂದು ಇಸ್ರೇಲ್‌ನ ಭಾರತೀಯ ರಾಯಭಾರ ಕಚೇರಿ ಕರೆದಿದೆ.

ಸಬಿತಾ ಮತ್ತು ಮೀರಾ ಮೋಹನನ್ ಈ ಪ್ರಶಂಸೆಗೆ ಪಾತ್ರರಾಗಿರುವ ಮಹಿಳೆಯರು.

ಇಸ್ರೇಲ್ ಮೇಲೆ ಹಮಾಸ್ ದಾಳಿ ನಡೆಸಿದ ಮೊದಲ ದಿನವಾದ ಅಕ್ಟೋಬರ್ 7ರಂದು ದಂಪತಿ ರಕ್ಷಿಸಲು ತಾವು ನಡೆಸಿದ ಹೋರಾಟವನ್ನು ವಿವರಿಸಿ ಅವರು ವಿಡಿಯೊ ಮಾಡಿದ್ದರು. ಆ ವಿಡಿಯೊವನ್ನು ರಾಯಭಾರ ಕಚೇರಿಯು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದೆ.

'ಆ ದಿನ ಬೆಳಿಗ್ಗೆ ಸುಮಾರು 6.30ಕ್ಕೆ ಸೈರನ್‌ಗಳು ಮೊಳಗಿದವು. ನಾವು ವೃದ್ಧ ದಂಪತಿಯನ್ನು ಸುರಕ್ಷತಾ ಕೊಠಡಿಗೆ ಕರೆದುಕೊಂಡು ಹೋದೆವು. ಬಳಿಕ ದಂಪತಿ ಮಗಳಿಂದ ಕರೆ ಬಂದಿತು. ಗಾಜ ಪಟ್ಟಿಗೆ ಹೊಂದಿಕೊಂಡಿರುವ ನಿರ್ ಒಝ್ ಕಿಬ್ಬುಟ್ಜ್‌ನಲ್ಲಿ ಪರಿಸ್ಥಿತಿ ಹತೋಟಿ ಮೀರಿದೆ. ಮನೆಯ ಎಲ್ಲಾ ಬಾಗಿಲುಗಳನ್ನು ಭದ್ರವಾಗಿ ಮುಚ್ಚಿ ಎಂದು ಅವರು ಹೇಳಿದರು. ಹಾಗೆಯೇ ಮಾಡಿದೆವು. ಅದಾದ ಕೆಲ ನಿಮಿಷಗಳಲ್ಲೇ ಉಗ್ರರು ಬಾಗಿಲುಗಳನ್ನು ಮುರಿದು ಮನೆಯೊಳಗೆ ಬಂದರು. ಮನೆಯೊಳಗೆ ಗುಂಡು ಹಾರಿಸಿದರು ಮತ್ತು ಗಾಜುಗಳನ್ನು ಒಡೆದರು. ದಂಪತಿ ಮಗಳಿಗೆ ಪುನಃ ಕರೆ ಮಾಡಿ, ಏನು ಮಾಡಬೇಕು ಎಂದು ಕೇಳಿದೆವು. ಸುರಕ್ಷತಾ ಕೋಣೆ ಬಾಗಿಲಿನ ಹಿಡಿಕೆಯನ್ನು ಗಟ್ಟಿಯಾಗಿ ಹಿಡಿದಿರುವಂತೆ ಅವರು ನಮಗೆ ಹೇಳಿದರು' ಎಂದು ಸಬಿತಾ ವಿವರಿಸಿದ್ದಾರೆ.

'ಸುಮಾರು ನಾಲ್ಕುವರೆ ತಾಸು ಬಾಗಿಲ ಹಿಡಿಕೆಯನ್ನು ಗಟ್ಟಿಯಾಗಿ ಹಿಡಿದಿದ್ದೆವು. ಆ ವೇಳೆ ಉಗ್ರರು ಗುಂಡಿನ ಮಳೆಗರೆದರು, ಬಾಗಿಲು ಮುರಿಯಲು ಯತ್ನಿಸಿದರು. ಬಾಗಿಲು ತೆರೆಯುವಂತೆ ಬೆದರಿಕೆ ಒಡ್ಡಿದರು. ಆದರೂ ಅಲ್ಲಿಂದ ನಾವು ಕದಲಲಿಲ್ಲ' ಎಂದಿದ್ದಾರೆ.



ಮಂಗಳವಾರ ದಾಳಿಗೊಳಗಾದ ಗಾಜಾದ ಅಲ್ ಅಹ್ಲಿ ಅರಬ್ ಆಸ್ಪತ್ರೆ ಆವರಣದ ವೈಮಾನಿಕ ನೋಟ –ಎಎಫ್‌ಪಿ ಚಿತ್ರ

ಆಸ್ಪತ್ರೆ ಮೇಲೆ ದಾಳಿ: ಸತ್ತವರೆಷ್ಟು?

ಟೆಲ್ ಅವೀವ್ (ರಾಯಿಟರ್ಸ್, ಎಎಫ್‌ಪಿ): ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರು ಇಸ್ರೇಲ್‌ಗೆ ಭೇಟಿ ನೀಡುವ ಕೆಲವೇ ಗಂಟೆಗಳ ಮೊದಲು ಗಾಜಾದಲ್ಲಿನ ಆಸ್ಪತ್ರೆಯೊಂದರ ಮೇಲೆ ನಡೆದ ದಾಳಿಯಲ್ಲಿ 471 ಮಂದಿ ಪ್ಯಾಲೆಸ್ಟೀನ್ ನಾಗರಿಕರು ಮೃತಪಟ್ಟಿದ್ದಾರೆ. ಈ ದಾಳಿ ಹಾಗೂ ನಂತರದ ಬೆಳವಣಿಗೆಗಳ ಕುರಿತು ಯಾರು, ಏನು ಹೇಳಿದರು ಎಂಬ ಸಂಕ್ಷಿಪ್ತ ವಿವರ ಇಲ್ಲಿದೆ.

• ದಾಳಿ ಯಾರಿಂದ?: ದಾಳಿಗೆ ಯಾರು ಕಾರಣ ಎಂಬ ವಿಚಾರದಲ್ಲಿ ಇಸ್ರೇಲ್ ಹಾಗೂ ಪ್ಯಾಲೆಸ್ಟೀನ್ ನಾಗರಿಕರ ನಡುವೆ ಆರೋಪ–ಪ್ರತ್ಯಾರೋಪ ನಡೆದಿದೆ. ದಾಳಿ ನಡೆಸಿದ್ದು ಇಸ್ರೇಲ್ ಎಂದು ಪ್ಯಾಲೆಸ್ಟೀನ್ ನಾಗರಿಕರು ಹೇಳಿದ್ದಾರೆ. ದಾಳಿಗೆ ಬಂಡುಕೋರರೇ ಹೊಣೆ ಎಂದು ಇಸ್ರೇಲ್ ಹೇಳಿದೆ.

ಹಮಾಸ್ ಬಂಡುಕೋರ ಸಂಘಟನೆಯ ಜೊತೆ ನಂಟು ಹೊಂದಿರುವ ಇಸ್ಲಾಮಿಕ್ ಜಿಹಾದ್ ಸಂಘಟನೆಯು ಈ ದಾಳಿಯಲ್ಲಿ ತನ್ನ ಪಾತ್ರವಿಲ್ಲ ಎಂದು ತಿಳಿಸಿದೆ. 'ಈ ದಾಳಿಗೆ ಅಮೆರಿಕವೇ ಕಾರಣ. ಏಕೆಂದರೆ, ಅಮೆರಿಕವು ಇಸ್ರೇಲ್‌ನ ಆಕ್ರಮಣಕಾರಿ ವರ್ತನೆಗಳಿಗೆ ರಕ್ಷಣೆ ನೀಡುತ್ತಿದೆ' ಎಂದು ಹಮಾಸ್ ಆರೋಪಿಸಿದೆ.

ಇಸ್ಲಾಮಿಕ್ ಜಿಹಾದ್ ಸಂಘಟನೆಯ ರಾಕೆಟ್ ಗುರಿ ತಪ್ಪಿ ಆಸ್ಪತ್ರೆಯ ಮೇಲೆ ಬಿದ್ದಿದೆ ಎಂದು ಇಸ್ರೇಲ್ ದೂರಿದೆ. ಹಲವು ಮೂಲಗಳಿಂದ ಸಂಗ್ರಹಿಸಿರುವ ಗುಪ್ತಚರ ಮಾಹಿತಿಯು, ಇದು ಇಸ್ಲಾಮಿಕ್ ಜಿಹಾದ್ ಸಂಘಟನೆಯ ಕೃತ್ಯ ಎಂದು ಹೇಳುತ್ತಿದೆ ಎಂಬುದು ಇಸ್ರೇಲ್‌ನ ವಿವರಣೆ. ವಾಯುದಾಳಿಯಿಂದ ಆಗುವ ಕುಳಿ ಈ ಆಸ್ಪತ್ರೆಯಲ್ಲಿ ಇಲ್ಲ, ಮೃತಪಟ್ಟವರ ಸಂಖ್ಯೆಯನ್ನು ಹಮಾಸ್ ಉತ್ಪ್ರೇಕ್ಷೆ ಮಾಡಿ ಹೇಳುತ್ತಿದೆ ಎಂದೂ ಇಸ್ರೇಲ್ ಹೇಳಿದೆ.

• ಮೃತಪಟ್ಟವರು ಎಷ್ಟು?: ಆರಂಭಿಕ ವರದಿಗಳ ಪ್ರಕಾರ ದಾಳಿಯಿಂದಾಗಿ 500 ಜನ ಮೃತಪಟ್ಟಿದ್ದಾರೆ. ಕನಿಷ್ಠ 471ಮಂದಿ ಮೃತಪಟ್ಟಿದ್ದಾರೆ ಎಂದು ಗಾಜಾ ಆರೋಗ್ಯ ಸಚಿವಾಲಯ ಹೇಳಿದೆ.

• ಪ್ರತಿಕ್ರಿಯೆ ಹೇಗಿದೆ?: ಯುಎಇ, ಬಹ್ರೇನ್, ಈಜಿಪ್ಟ್, ಮೊರೊಕ್ಕೊ, ಜೋರ್ಡನ್ ಈ ದಾಳಿಗೆ ಇಸ್ರೇಲ್ ಕಾರಣ ಎಂದಿವೆ. ಇಸ್ರೇಲ್ ಬಗ್ಗೆ ಖಂಡನೆ ವ್ಯಕ್ತಪಡಿಸಿವೆ. ಅಮೆರಿಕವು ದಾಳಿಯನ್ನು ಖಂಡಿಸಿದೆ. ಆದರೆ ಇದನ್ನು ನಡೆಸಿದ್ದು ಇಸ್ರೇಲ್ ಅಲ್ಲ ಎಂದಿದೆ. ದಾಳಿ ನಡೆಸಿದವರು ಯಾರು ಎಂಬುದು ಮೊದಲು ಸ್ಪಷ್ಟವಾಗಲಿ ಎಂದು ಬ್ರಿಟನ್ ಹೇಳಿದೆ.

• ಆಸ್ಪತ್ರೆ ಕುರಿತು: ಅಲ್ ಅಹ್ಲಿ ಅರಬ್ ಆಸ್ಪತ್ರೆ ಸ್ಥಾಪನೆಯಾಗಿದ್ದು 1882ರಲ್ಲಿ. ಇದನ್ನು ನಡೆಸುತ್ತಿರುವುದು ಆಂಗ್ಲಿಕನ್ ಚರ್ಚ್. 'ಜಗತ್ತಿನಲ್ಲಿ ಅತ್ಯಂತ ಹೆಚ್ಚು ಸಂಘರ್ಷಕ್ಕೆ ಒಳಗಾಗಿರುವ ಪ್ರದೇಶವೊಂದರಲ್ಲಿ ಇರುವ ಶಾಂತಿಯ ಧಾಮ' ಎಂದು ಈ ಆಸ್ಪತ್ರೆ ತನ್ನ ವೆಬ್‌ಸೈಟ್‌ನಲ್ಲಿ ಹೇಳಿಕೊಂಡಿದೆ.

• ದಾಳಿ ನಡೆದಾಗ ಎಷ್ಟು ಜನ ಇದ್ದರು?: ಆಸ್ಪತ್ರೆಯಲ್ಲಿನ ಬೆಡ್‌ಗಳ ಸಂಖ್ಯೆ ಸೀಮಿತ. ಆದರೆ, ಇಸ್ರೇಲ್‌ನ ವಾಯುದಾಳಿಯಿಂದ ತಪ್ಪಿಸಿಕೊಳ್ಳಲು ಹಲವರು ಆಸ್ಪತ್ರೆಗಳಲ್ಲಿ ಆಶ್ರಯ ಪಡೆಯುತ್ತಿದ್ದಾರೆ. ಹಾಗೆಯೇ, ದಾಳಿಯಲ್ಲಿ ಗಾಯಗೊಂಡು ಆಸ್ಪತ್ರೆಗೆ ಬರುವವರು ಸಂಖ್ಯೆಯೂ ಹೆಚ್ಚಾಗಿದೆ. ದಾಳಿ ನಡೆದ ಸಂದರ್ಭದಲ್ಲಿ ಆಸ್ಪತ್ರೆಯಲ್ಲಿ ಮೂರು ಸಾವಿರಕ್ಕೂ ಹೆಚ್ಚು ಮಂದಿ ಇದ್ದರು ಎಂದು ವೈದ್ಯರೊಬ್ಬರು ತಿಳಿಸಿದ್ದಾರೆ.

ಕಾವೇರಿ: ಪ್ರಧಾನಿ ಮಧ್ಯಪ್ರವೇಶಕ್ಕೆ ಕರವೇ ಆಗ್ರಹ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾವೇರಿ ಜಲವಿವಾದ ಬಗೆಹರಿಸಲು ಪ್ರಧಾನಿ ನರೇಂದ್ರ ಮೋದಿ ಮಧ್ಯಸ್ಥಿಕೆ ವಹಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆಯ (ಟಿ.ಎ.ನಾರಾಯಣ ಗೌಡ ಬಣ) ಕಾರ್ಯಕರ್ತರು ಜಂತರ್ ಮಂತರ್‌ನಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.

ಕರ್ನಾಟಕದಲ್ಲಿ ಈ ವರ್ಷ ತೀವ್ರ ಬರ ಕಾಣಿಸಿಕೊಂಡಿದೆ. ತಮಿಳುನಾಡಿಗೆ ಕಾವೇರಿ ನೀರು ಬಿಡದಂತಹ ಸ್ಥಿತಿ ನಿರ್ಮಾಣವಾಗಿದೆ. ಸಂಕಷ್ಟ ಸೂತ್ರ ರೂಪಿಸಲು ಪ್ರಧಾನಿ ಅಧ್ಯಕ್ಷತೆಯಲ್ಲಿ ನಾಲ್ಕು ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ಕರೆಯಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಬಳಿಕ ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಹಾಗೂ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಅವರಿಗೆ ಕರವೇ ಮುಖಂಡರು ಮನವಿ ಸಲ್ಲಿಸಿದರು. ನಂತರ ಪ್ರಧಾನಿ ಕಾರ್ಯಾಲಯ ಮತ್ತು ರಾಷ್ಟ್ರಪತಿಯವರ ಕಾರ್ಯಾಲಯಕ್ಕೆ ಮನವಿ ನೀಡಿದರು.

ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ನಾರಾಯಣ ಗೌಡ, 'ಈಗ ಸಂಕಷ್ಟದ ಕಾಲ. ಇಂತಹ ಸಂದರ್ಭದಲ್ಲಿ ಸಂಕಷ್ಟ ಸೂತ್ರ ಜಾರಿ ಮಾಡಬೇಕು. ಬಿಕ್ಕಟ್ಟು ಬಗೆಹರಿಸಲು ಪ್ರಧಾನಿ ಅವರು ಮಧ್ಯಸ್ಥಿಕೆ ವಹಿಸಬೇಕು. ಕಾವೇರಿ ಜಲವಿವಾದಕ್ಕೆ ಶಾಶ್ವತ ಪರಿಹಾರ ಕಂಡುಹಿಡಿಯುವ ಕೆಲಸ ಆಗಬೇಕು' ಎಂದು ಆಗ್ರಹಿಸಿದರು.

'ಮೇಕೆದಾಟು ಯೋಜನೆಗೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಬೇಕು ಎಂದು ಆಗ್ರಹಿಸಿದ್ದೇವೆ. ಮೇಕೆದಾಟು ಜಲಾಶಯ ನಿರ್ಮಾಣವಾದರೆ ಕಾವೇರಿ ವಿವಾದ ಬಗೆಹರಿಯಲಿದೆ. ಎರಡೂ ರಾಜ್ಯಗಳ ಮುಖ್ಯಮಂತ್ರಿಗಳು ಒಪ್ಪಿದರೆ ಮೇಕೆದಾಟು ಯೋಜನೆಗೆ ಅನುಮೋದನೆ ನೀಡುವುದಾಗಿ ಶೆಖಾವತ್ ಭರವಸೆ ನೀಡಿದ್ದಾರೆ' ಎಂದರು.

'ಕಾವೇರಿ ಜಲವಿವಾದಕ್ಕೆ ಸಂಬಂಧಿಸಿದಂತೆ ಪ್ರಧಾನಿ ಅವರನ್ನು ಭೇಟಿ ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪ್ರಧಾನಿ ಕಾರ್ಯಾಲಯ ಕಾಲಾವಕಾಶ ನೀಡಿಲ್ಲ. ಈ ಮೂಲಕ ಏಳು ಕೋಟಿ ಕನ್ನಡಿಗರಿಗೆ ಅವಮಾನ ಮಾಡಿದೆ' ಎಂದು ಅವರು ದೂರಿದರು.

ಮನವಿ ಸ್ವೀಕರಿಸಿದ ಪ್ರಲ್ಹಾದ ಜೋಶಿ ಮಾತನಾಡಿ, 'ಸಂಕಷ್ಟ ಸೂತ್ರದ ಬಗ್ಗೆ ಕೆಲವು ವಿವರಗಳನ್ನು ಎರಡು ರಾಜ್ಯಗಳಿಂದ ಕೇಂದ್ರ ಸರ್ಕಾರ ಕೇಳಿತ್ತು. ಎರಡೂ ರಾಜ್ಯಗಳು ಮಾಹಿತಿ ನೀಡಿವೆ. ಸಂಕಷ್ಟ ಸೂತ್ರ ರೂಪಿಸುವ ಸಂಬಂಧ ಕೇಂದ್ರ ಸರ್ಕಾರ ಈಗಾಗಲೇ ಕಾರ್ಯ ಪ್ರವೃತ್ತವಾಗಿದೆ' ಎಂದರು.

'ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಎರಡೂ ರಾಜ್ಯಗಳು ಒಪ್ಪಬೇಕು. ಇಬ್ಬರು ಮುಖ್ಯಮಂತ್ರಿಗಳು ಪರಸ್ಪರ ಚರ್ಚೆ ನಡೆಸಬೇಕು. ಅವರಿಬ್ಬರು ತಾತ್ವಿಕ ಒಪ್ಪಿಗೆ ನೀಡಿದರೆ ಮುಂದಿನ ವಿಚಾರವನ್ನು ಕೇಂದ್ರ ಸರ್ಕಾರ ನೋಡಿಕೊಳ್ಳಲಿದೆ' ಎಂದರು.

ಅರವಿಂದ ಹೆಚ್ಚುವರಿ ಸಾಲಿಸಿಟರ್ ಜನರಲ್

ನವದೆಹಲಿ: ಕರ್ನಾಟಕ ಹೈಕೋರ್ಟ್ ಅನ್ನು ಪ್ರತಿನಿಧಿಸಲು ಹಿರಿಯ ವಕೀಲ ಕೂಳೂರು ಅರವಿಂದ ಕಾಮತ್ ಅವರನ್ನು ಹೆಚ್ಚುವರಿ ಸಾಲಿಸಿಟರ್ ಜನರಲ್ ಆಗಿ ನೇಮಿಸಿ ಕೇಂದ್ರ ಸರ್ಕಾರ ಅಧಿಸೂಚನೆ ಹೊರಡಿಸಿದೆ. ಅವರ ಅಧಿಕಾರದ ಅವಧಿ ಮೂರು ವರ್ಷಗಳು.

ಆರತಿ ಕೃಷ್ಣ ಉಪಾಧ್ಯಕ್ಷೆ

ಬೆಂಗಳೂರು: ಕಾಂಗ್ರೆಸ್ ಮುಖಂಡರಾದ ಆರತಿ ಕೃಷ್ಣ ಅವರನ್ನು ರಾಜ್ಯ ಸರ್ಕಾರದ ಅನಿವಾಸಿ ಭಾರತೀಯರ ಕೋಶದ ಉಪಾಧ್ಯಕ್ಷರನ್ನಾಗಿ ನೇಮಿಸಿದ್ದು, ಸಂಪುಟ ದರ್ಜೆ ಸಚಿವರ ಸ್ಥಾನಮಾನ ನೀಡಲಾಗಿದೆ.

ಆರತಿ ಕೃಷ್ಣ

ವಿದೇಶಗಳಲ್ಲಿ ನೆಲೆಸಿರುವ ಕನ್ನಡಿಗರ ಜತೆ ಸಂಪರ್ಕ ಸಾಧಿಸುವುದು, ಅವರಿಂದ ರಾಜ್ಯದ ಅಭಿವೃದ್ಧಿಗೆ ನೆರವು ಪಡೆಯುವುದು, ಅವರ ಕುಂದುಕೊರತೆಗಳ ನಿವಾರಣೆಯ ಕೆಲಸವನ್ನು ಅನಿವಾಸಿ ಭಾರತೀಯರ ಕೋಶವು ಮಾಡಲಿದೆ. ಆರತಿ ಅವರು ಹಿಂದೆಯೂ ಒಂದು ಅವಧಿಗೆ ಈ ಕೋಶದ ಉಪಾಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದರು.

ಹಿರಿಯ ವಕೀಲ ಎ.ಜಿ.ಶಿವಣ್ಣ ನಿಧನ

ಬೆಂಗಳೂರು: ಕರ್ನಾಟಕ ಹೈಕೋರ್ಟ್‌ನ ಹಿರಿಯ ವಕೀಲ ಅಳಶೆಟ್ಟಿಕೆರೆ ಗಂಗಣ್ಣ ಶಿವಣ್ಣ ಬುಧವಾರ ನಸುಕಿನಲ್ಲಿ ಹೃದಯಾಘಾತದಿಂದ ನಿಧನರಾದರು.



ಎ.ಜಿ.ಶಿವಣ್ಣ

ಅವರಿಗೆ 68 ವರ್ಷವಾಗಿತ್ತು. ಪತ್ನಿ, ಇಬ್ಬರು ಪುತ್ರಿಯರು ಮತ್ತು ಹೈಕೋರ್ಟ್ ವಕೀಲರೂ ಆದ ಪುತ್ರ ಅಮರ್ ಅವರನ್ನು ಅಗಲಿದ್ದಾರೆ.

ಈ ಹಿಂದೆ ಹೆಚ್ಚುವರಿ ಅಡ್ವೊಕೇಟ್ ಜನರಲ್ ಆಗಿ ಸೇವೆ ಸಲ್ಲಿಸಿದ್ದರು. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಸಂಚಾಲಕರು ಹಾಗೂ ಬೆಂಗಳೂರು ವಕೀಲರ ಸಂಘದ ಮಾಜಿ ಪ್ರಧಾನ ಕಾರ್ಯದರ್ಶಿಯೂ ಶಿವಣ್ಣ ಕಾರ್ಯ ನಿರ್ವಹಿಸಿದ್ದರು.

'ಸಹೋದ್ಯೋಗಿಗಳ ಜೊತೆ ಮಹಾರಾಷ್ಟ್ರದ ಸತಾರ ಜಿಲ್ಲೆಯಲ್ಲಿರುವ ಪುಣ್ಯಕ್ಷೇತ್ರ ಮಹಾಬಲೇಶ್ವರಕ್ಕೆ ತೆರಳಿದ್ದರು. ಬುಧವಾರ ಬೆಳಗಿನ ಜಾವ 3 ರಿಂದ 4 ಗಂಟೆ ವೇಳೆಯಲ್ಲಿ ತೀವ್ರ ಹೃದಯಾಘಾತಕ್ಕೆ ಈಡಾಗಿ ಮೃತಪಟ್ಟಿದ್ದಾರೆ. ಅಂತ್ಯಸಂಸ್ಕಾರ ಗುರುವಾರ (ಅ.19) ಬೆಳಗ್ಗೆ 11 ಗಂಟೆಗೆ ಹೆಬ್ಬೂರು ಹೋಬಳಿಯ ಕುಣಿಗಲ್ ರಸ್ತೆಯ ಕೋಡಿ ಮುದ್ದನಹಳ್ಳಿ ತೋಟದಲ್ಲಿ ನೆರವೇರಲಿದೆ' ಎಂದು ಅಮರ್ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ತುಮಕೂರಿನ ವಿದ್ಯೋದಯ ಕಾನೂನು ಕಾಲೇಜಿನಲ್ಲಿ ಕಾನೂನು ಪದವಿ ಪೂರೈಸಿದ್ದ ಶಿವಣ್ಣ ಲೇಖಕರೂ ಆಗಿದ್ದರು. ಭೂ ಸುಧಾರಣೆ ಸಂಬಂಧಿತ ಕಾನೂನುಗಳಲ್ಲಿ ಹೆಚ್ಚಿನ ಪರಿಣತಿ ಹೊಂದಿದ್ದರು.

'ಪಹಣಿ ಪತ್ರಿಕೆ ಮತ್ತು ಗೇಣಿ (ಸಾಗುವಳಿ) ಪತ್ರಗಳ ಕಾನೂನಿನ ಒಂದು ಪರಿಚಯ', 'ಕಾಮೆಂಟರಿ ಆನ್ ಲ್ಯಾಂಡ್ ರೆವಿನ್ಯೂ ಆ್ಯಕ್ಟ್', 'ಕರ್ನಾಟಕ ಲ್ಯಾಂಡ್ ಗ್ರ್ಯಾಬಿಂಗ್ ಆ್ಯಕ್ಟ್', 'ಕರ್ನಾಟಕ ಕೋರ್ಟ್ ಫೀ ಆ್ಯಕ್ಟ್', 'ಕನ್ವರ್ಷನ್ ಆಫ್ ಅಗ್ರಿಕಲ್ಚರ್ ಲ್ಯಾಂಡ್' ಮತ್ತು 'ರೈಟ್ಸ್ ಆಫ್ ಅಕ್ಯೂಸ್ಡ್' ಸೇರಿದಂತೆ ಹಲವು ಕಾನೂನು ಸಂಬಂಧಿತ ಪುಸ್ತಕಗಳನ್ನು ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ರಚಿಸಿದ್ದಾರೆ. ಇವರ ಪುಸ್ತಕಗಳನ್ನು 'ಕರ್ನಾಟಕ ಲಾ ಪಬ್ಲಿಷರ್ಸ್' ಪ್ರಕಟಿಸಿದೆ.

ಸಹಕಾರ ಸಂಘಗಳ ಚುನಾವಣಾ ಅಧಿಕಾರಿಯಾಗಿಯೂ ಜನಪ್ರಿಯರಾಗಿದ್ದ ಶಿವಣ್ಣ, ಬೆಂಗಳೂರು ವಕೀಲರ ಸಂಘ, ಮಹಿಳಾ ವಕೀಲರ ಸಂಘ, ನ್ಯಾಯಮಿತ್ರ ಸಹಕಾರ ಬ್ಯಾಂಕ್‌ಗಳ ಚುನಾವಣಾ ಪ್ರಕ್ರಿಯೆಯಲ್ಲಿನ ಹಲವು ಸುಧಾರಣೆಗೆ ಕಾರಣಕರ್ತರಾಗಿದ್ದರು. ಸಂಪರ್ಕಕ್ಕೆ ಅಮರ್: 90083-67403.

ಕರ್ನಾಟಕ ಸರ್ಕಾರ
(ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ.

EE/RWSS/Dvn/SMG/TE/JJM/Kppp-Proc/2023-24/1095 Date : 13.10.2023

ಟೆಂಡರ್ ಪ್ರಕಟಣೆ (ಕೆಪಿಪಿಪಿ-ಪ್ರೊಕ್ಯೂರ್‌ಮೆಂಟ್ ಮೂಲಕ)

ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕ ಅಧಿನಿಯಮ 2000ರ ಪ್ರಕಾರ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ ವ್ಯಾಪ್ತಿಯಲ್ಲಿ ಜಲಜೀವನ್ ಮಿಷನ್ ಯೋಜನೆಯಡಿಯಲ್ಲಿ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಟೆಂಡರ್ ಆಹ್ವಾನಿಸಲಾಗಿರುತ್ತದೆ. **ಇಂಡೆಂಟ್ ಸಂಖ್ಯೆ : (1) 750 (2) 752 (3) 755 (4) 758 (5) 761 (6) 762 (7) 766 (8) 792 (9) 790 (10) 794**

ಟೆಂಡರ್ ವಿವರಗಳು, ಷರತ್ತುಗಳು ಮತ್ತು ತಿದ್ದುಪಡಿಗಳು ಅಥವಾ ಬದಲಾವಣೆಗಳು **https: //www.kppp.karnataka.gov.in** ಜಾಲತಾಣದಲ್ಲಿ ಲಭ್ಯವಿದ್ದು, ಅರ್ಹ ಗುತ್ತಿಗೆದಾರರು/ಬಿಡ್ಡುದಾರರು ಅಗತ್ಯ ದಾಖಲೆಗಳನ್ನು ಮತ್ತು ತಮ್ಮ ಬಿಡ್ ಅನ್ನು ಸದರಿ ಜಾಲತಾಣದಲ್ಲಿಯೇ ಸಲ್ಲಿಸುವುದು. **ಟೆಂಡರ್‌ನ ಕೆಲವು ಷರತ್ತುಗಳು** (1) ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : **23.10.2023 ರ ಸಂಜೆ 5.30** (2) ದ್ವಿಲಕೋಟೆಯ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **25.10.2023 ರ ಬೆಳಿಗ್ಗೆ 11.30** (3) ದ್ವಿಲಕೋಟೆಯ ಆರ್ಥಿಕ ಬಿಡ್ ತೆರೆಯುವ ದಿನಾಂಕ : **27.10.2023 ರ ಬೆಳಿಗ್ಗೆ 11.30** (4) ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿಪಡಿಸಿದ ಕಾಲಾವಧಿ : **ದ್ವಿ ಲಕೋಟೆ 6 ತಿಂಗಳು (180 ದಿನಗಳು).**

ಸಹಿ/- ಕಾರ್ಯಪಾಲಕ ಇಂಜಿನಿಯರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ.

ವಾ.ಸಾ.ಸಂ.ಇ./ಶಿ/ನಂ.86-10
ಝೇಂಕಾರ್/2023-24

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ ರಾಯಚೂರು
ಫೋನ ನಂ:08532-226020 ಪ್ಯಾಕ್ಸ್ 08532-250021 dhoraichur@gmail.com

ಸಂಖ್ಯೆ:ಜಿಆಕುಕರಾ/ಅಭಿವೃದ್ಧಿ/2023-24 ದಿನಾಂಕ: 16-10-2023

ಪತ್ರಿಕಾ ಪ್ರಕಟಣೆ

2023-24 ನೇ ಸಾಲಿಗೆ ರಾಯಚೂರು ಜಿಲ್ಲೆಯ ಆರೋಗ್ಯ ಇಲಾಖೆಯ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ವ್ಯಾಪ್ತಿಯಲ್ಲಿನ ಸಮುದಾಯ/ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ 97 ಗ್ರೂಪ್ "ಡಿ", 03 ಕಾವಲುಗಾರರು, 10 ಗಣಕ ಯಂತ್ರ ಸಹಾಯಕರು, 21 ಕಿರಿಯ ವೈದ್ಯಕೀಯ ಪ್ರಯೋಗ ಶಾಲಾ ತಾಂತ್ರಿಕ ಅಧಿಕಾರಿಗಳು, 21 ಫಾರ್ಮಸಿ ಅಧಿಕಾರಿ, 6 ಶುಶ್ರೂಷಕ ಅಧಿಕಾರಿ ಹಾಗೂ 22 ವಾಹನ ಚಾಲಕರನ್ನು ಕರೆದ ಇ-ಟೆಂಡರನ ಪ್ರಕಟಣೆ

1) ಟೆಂಡರ್ ಪ್ರಕಟಣೆ ದಿನಾಂಕ: 18-10-2023, **2) ಟೆಂಡರ್ ಅಂದಾಜು ಒಟ್ಟು ಮೊತ್ತ:** 4,86,32,016 **3) ಆನ್‌ಲೈನ್‌ನಲ್ಲಿ ಟೆಂಡರ್ ಫಾರಂಗಳನ್ನು ಡೌನ್‌ಲೋಡ್ ಮಾಡುವ ದಿನಾಂಕ ಮತ್ತು ಟೆಂಡರ್ ಅನ್ನು ಇ-Procurement Portal** ಮುಖಾಂತರ ಸಲ್ಲಿಸಲು **ಕೊನೆಯ ದಿನಾಂಕ:** 18-10-2023 ರ ಬೆಳಿಗ್ಗೆ 11.00 ರಿಂದ 04-11-2023 ಅಪರಾಹ್ನ 5:30 ಗಂಟೆಯವರೆಗೆ **4) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ:** 07-11-2023 ಬೆಳಿಗ್ಗೆ 11.00 ಗಂಟೆಗೆ **5) ತಾಂತ್ರಿಕ ಲಕೋಟೆಯ ದಾಖಲೆಗಳ ಪರಿಶೀಲನೆ:** ತಿಳಿಸಲಾಗುವುದು **6) ಹಣಕಾಸಿನ ಲಕೋಟೆಯನ್ನು ತೆರೆಯುವ ದಿನಾಂಕ:** ತಿಳಿಸಲಾಗುವುದು **7) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ:** ರೂ. 7,29,480/- (ರೂ. ಏಳು ಲಕ್ಷ ಇಪ್ಪತ್ತೊಂಬತ್ತು ಸಾವಿರದ ನಾಲ್ಕು ನೂರ ಎಂಬತ್ತು ಮಾತ್ರ) **8) E-Procurement Portal Processing Fees:** E-Procurement Portal ನಲ್ಲಿ ನಿಗದಿಪಡಿಸಿರುವಂತೆ **9) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ ರಜಾ ದಿನಗಳನ್ನು ಹೊರತುಪಡಿಸಿ:** ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ, ಏಕ್ ಮೀನಾರ್ ಮಸೀದಿ ಹತ್ತಿರ, ರಾಯಚೂರು ಜಿಲ್ಲೆ 08532-226020

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು
ರಾಯಚೂರು.

DIP/RCR/182/KSMC&A/Job No.179/2023-24

ಕರ್ನಾಟಕ ಸರ್ಕಾರ
ಶಾಲಾ ಶಿಕ್ಷಣ ಇಲಾಖೆ
ಆಯುಕ್ತರ ಕಛೇರಿ, ಕೇಂದ್ರೀಕೃತ ದಾಖಲಾತಿ ಘಟಕ, ಕೆ.ಜಿ.ರಸ್ತೆ, ಬೆಂಗಳೂರು-560009.

ಸಂಖ್ಯೆ: ಸಿ.ಎ.ಸಿ-3/GPTR-2022/WA.No: 305/2023.ತೀ.ಅ-2023-24 ದಿನಾಂಕ: 19/10/2023

2022ರ ಪದವೀಧರ ಪ್ರಾಥಮಿಕ ಶಿಕ್ಷಕ (6 ರಿಂದ 8 ನೇ ತರಗತಿ)
ನೇಮಕಾತಿ ಕೌನ್ಸಿಲಿಂಗ್ ಪ್ರಕ್ರಿಯೆಯ ಪ್ರಕಟಣೆ

"ಪದವೀಧರ ಪ್ರಾಥಮಿಕ ಶಿಕ್ಷಕ (6 ರಿಂದ 8ನೇ ತರಗತಿ) ನೇಮಕಾತಿ-2022"ರ ನೇಮಕಾತಿಗೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅಪೀಲು ಸಂಖ್ಯೆ: WA.No.305/2023 ರಲ್ಲಿ ದಿನಾಂಕ: 12/10/2023ರ ವಿಭಾಗೀಯ ಪೀಠದ ತೀರ್ಪಿನಂತೆ ದಿನಾಂಕ: 08/03/2023 ರಂದು ಪ್ರಕಟಿತ 1:1 ಮುಖ್ಯ ಆಯ್ಕೆ ಪಟ್ಟಿಯಲ್ಲಿನ ಕೌನ್ಸಿಲಿಂಗ್‌ಗೆ ಅರ್ಹ ಅಭ್ಯರ್ಥಿಗಳ ವಿವರಗಳನ್ನು ದಿನಾಂಕ: 19/10/2023 ರಂದು ಶಾಲಾ ಶಿಕ್ಷಣ ಇಲಾಖೆಯ ವೆಬ್‌ಸೈಟ್ **https://schooleducation.karnataka.gov.in** ನಲ್ಲಿ ಪ್ರಕಟಿಸಲಾಗುವುದು. ಸದರಿ ಪಟ್ಟಿಯಲ್ಲಿನ ಅಭ್ಯರ್ಥಿಗಳಿಗೆ ಕ್ರಮವಾಗಿ ಗಣಿತ ಮತ್ತು ವಿಜ್ಞಾನ, ಸಮಾಜ ವಿಜ್ಞಾನ, ಜೀವವಿಜ್ಞಾನ ಮತ್ತು ಆಂಗ್ಲಭಾಷಾ ಹುದ್ದೆಗಳಿಗೆ ಸ್ಥಳನಿಯುಕ್ತಿ ಕೌನ್ಸಿಲಿಂಗ್‌ನ್ನು **ದಿನಾಂಕ: 21/10/2023 ರಿಂದ ಬೆಳಿಗ್ಗೆ 10.30 ಗಂಟೆಯಿಂದ ರಾಜ್ಯದ (371ಜೆ ಗೆ ಸಂಬಂಧಿಸಿದಂತೆ ನ್ಯಾಯಾಲಯ ಪ್ರಕರಣಗಳು ಬಾಕಿ ಇರುವ ಕಲ್ಯಾಣ ಕರ್ನಾಟಕ ವ್ಯಾಪ್ತಿಯ ಜಿಲ್ಲೆಗಳನ್ನು ಹೊರತುಪಡಿಸಿ ಮತ್ತು ಬಿ.ಬಿ.ಎಂ.ಪಿ ವ್ಯಾಪ್ತಿಯ 8% ಹುದ್ದೆಗಳಿಗೆ ಸಂಬಂಧಿಸಿದಂತೆ ಜಿಲ್ಲೆಗಳಾದ ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲೆಗಳನ್ನು ಹೊರತುಪಡಿಸಿ)** ಜಿಲ್ಲೆಗಳಲ್ಲಿನ ಆಯಾ ಜಿಲ್ಲಾ ನೇಮಕಾತಿ ಪ್ರಾಧಿಕಾರಿಯವರಾದ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರ ಕಛೇರಿಯಲ್ಲಿ ನಡೆಸಲಾಗುವುದು. ಆದ್ದರಿಂದ ಅಭ್ಯರ್ಥಿಗಳು ಇಲಾಖಾ ವೆಬ್‌ಸೈಟ್‌ನಲ್ಲಿರುವಂತೆ ಎಲ್ಲಾ ಅಗತ್ಯ ವಿವರಗಳನ್ನು ಪಡೆದುಕೊಂಡು ಸಕಾಲದಲ್ಲಿ ಕೌನ್ಸಿಲಿಂಗ್ ಸ್ಥಳದಲ್ಲಿ ಭಾವಚಿತ್ರವಿರುವ ಗುರುತಿನ ಚೀಟಿ ಮತ್ತು ನೇಮಕಾತಿಗೆ ಸಂಬಂಧಪಟ್ಟಂತೆ ಅಗತ್ಯ ದಾಖಲೆಗಳೊಂದಿಗೆ ಕಡ್ಡಾಯವಾಗಿ ಹಾಜರಾಗುವುದು. ಹೆಚ್ಚಿನ ವಿವರಗಳಿಗೆ ಆಯಾ ಜಿಲ್ಲಾ **ಉಪನಿರ್ದೇಶಕರು(ಆಡಳಿತ), ಶಾಲಾ ಶಿಕ್ಷಣ ಇಲಾಖೆಯ ಕಛೇರಿಯನ್ನು** ಸಂಪರ್ಕಿಸುವುದು.

ಸಹಿ/- ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ

DIPR/CP/YC/2023-24

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ,
(ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)
3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು-560001.

ಚರಾಸ್ತಿಯ ವಸ್ತುಗಳ ಇ-ಹರಾಜಿಗೆ ಆಹ್ವಾನ /ಸೂಚನೆ

Pursuant to attachment of movable properties by the Government under the provisions of the Karnataka Protection of Interest of Depositors in Financial Establishments Act, 2004(KPIDFE Act) and pursuant to the absolute attachment order by the Hon'ble Special Court the Special Officer & Competent Authority(under KPIDFE-IMA and other Scam), is issuing notice for e-auction of the movables attached through e-auction on **'as is where is and whatever there is basis'.**
"SPLOCA" hereby invites bids from the intending bidders along with a bid deposit as mentioned in the table below as Earnest Money for MOVABLE ITEMS- to be paid through DD drawn in favor of **"Special Officer and Competent Authority (EMD)"** or through RTGS/ NEFT to the Account number **41506340119, IFSC Code: SBIN0040277 STATE BANK OF INDIA, VIDHANA SOUDHA Branch.**

Short description of the Movable items

ಕ್ರ. ಸಂ.	ಐಟಂ ವಿವರಗಳು	ಮೀಸಲು ಬೆಲೆ (ರೂ.)	ಇ.ಎಂ.ಡಿ (ರೂ.)	ಬಿಡ್ ಹೆಚ್ಚಳ ಮೊತ್ತ (ರೂ.)
1	Furniture & Fixtures	51,87,551/-	6,00,000/- (Rs. Six lakhs only)	25,000/-
2	Electrical & Electronics	51,80,821/-		25,000/-
3	Personal Computers and Peripherals	12,83,357/-		6,000/-
4	Miscellaneous	6,95,855/-		3,000/-

ಬಿಡ್ ದಾಖಲೆಗಳು ಮತ್ತು ಇಎಂಡಿ ಸಲ್ಲಿಸಲು ಕೊನೆಯ ದಿನಾಂಕ : 16ನೇ ನವೆಂಬರ್ 2023, ಸಂಜೆ 5.00 ಗಂಟೆಯವರೆಗೆ.
ಪರಿಶೀಲನೆಯ ದಿನಾಂಕ ಮತ್ತು ಸಮಯ : 20ನೇ ನವೆಂಬರ್ 2023, ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 2.00 ಗಂಟೆಯವರೆಗೆ, ಸ್ಥಳ: ಐಎಂಎ ಜ್ಯುವೆಲ್ಸ್ ಬಿಲ್ಡಿಂಗ್, ನಂ.5 ಲೇಡಿ ಕರ್ಜನ್ ರಸ್ತೆ, ಶಿವಾಜಿನಗರ, ಬೆಂಗಳೂರು.
ಪ್ರಿ-ಬಿಡ್ ಮೀಟಿಂಗ್ ದಿನಾಂಕ ಮತ್ತು ಸಮಯ : 21ನೇ ನವೆಂಬರ್ 2023, ಮಧ್ಯಾಹ್ನ 3.00 ರಿಂದ 4.00 ಗಂಟೆಯವರೆಗೆ, ಸ್ಥಳ: ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿರವರ ಕಛೇರಿ, 3ನೇ ಮಹಡಿ. ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಟವರ್ಸ್, ಬೆಂಗಳೂರು-01.
ಇ-ಹರಾಜಿನ ದಿನಾಂಕ ಮತ್ತು ಸಮಯ : 23ನೇ ನವೆಂಬರ್ 2023 ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 1.00 ಗಂಟೆಯವರೆಗೆ.

For Registration & Online Auction, you can login to: **https://www.bankeauctions.com.** The interested bidders who require auction related information can contact Joint Secretary, Office of the Special Officer & Competent Authority, 3rd Floor, Podium Block, Visveswariah Towers, Dr.Ambedkar Veedhi, Bengaluru-560 001, e-mail ID: **splocaeauction@gmail.com** or Contact Mob. No. 8217203930.

ಸ್ಥಳ: ಬೆಂಗಳೂರು
ದಿನಾಂಕ: 18.10.2023

ಸಹಿ/-
ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ
(ಐ.ಎಂ.ಎ ಮತ್ತು ಇತರೆ ವಂಚನೆ ಪ್ರಕರಣಗಳು), ಬೆಂಗಳೂರು, ಕರ್ನಾಟಕ

DIPR/CP/1764/Zen/2023-24

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ,
ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು-23,

ಸಂಖ್ಯೆ: ಡಿಪಿಎನ್(13)ಸಿಆರ್-23/2017-18 ದಿನಾಂಕ: 11-10-2023

ಪತ್ರಿಕಾ ಪ್ರಕಟಣೆ

ಶ್ರೀ ಬಿ.ಟಿ. ವಿನಯಕುಮಾರ, ನೇತ್ರಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ ಶಂಕ್ರಿಪುರ, ಬ್ಯಾಡಗಿ ತಾಲ್ಲೂಕು, ಹಾವೇರಿ ಜಿಲ್ಲೆ ಆದ ನೀವು 02-05-2016 ರಿಂದ ಇವರೆಗೂ ಸರ್ಕಾರಿ ಸೇವೆಗೆ ಅನಧಿಕೃತ ಗೈರು ಹಾಜರಾಗಿ ಉಳಿದಿದ್ದು, ನಿಮ್ಮ ಗೈರು ಹಾಜರಿಗೆ ಸಂಬಂಧಿಸಿದ ವ್ಯವಹಾರಿಕ ಪತ್ರಗಳನ್ನು ನಿಮ್ಮ ಖಾಯಂ ವಿಳಾಸಕ್ಕೆ ನೊಂದಾಯಿಸಿ ಅಂಚೆ ಮೂಲಕ ಕಳುಹಿಸಲಾಗಿದ್ದು, ನಿಮ್ಮ ಖಾಯಂ ವಿಳಾಸದಲ್ಲಿ ನೀವು ಲಭ್ಯವಿಲ್ಲವೆಂದು ವರದಿ ನೀಡಲಾಗಿರುತ್ತದೆ. ಇದರಿಂದಾಗಿ ನಿಮ್ಮ ಗೈರು ಹಾಜರಿಯ ಆರೋಪದ ಬಗ್ಗೆ ಮುಂದಿನ ನಿಯಮಾನುಸಾರ ಕ್ರಮ ತೆಗೆದುಕೊಳ್ಳಲು ಸಾಧ್ಯವಾಗಿಲ್ಲ. ಹಾಗೂ ನಿಮ್ಮಿಂದ ಸೂಕ್ತ ಸಮಜಾಯಿಷಿ ಸ್ವೀಕೃತವಾಗಿರುವುದಿಲ್ಲ. ಇದರಿಂದಾಗಿ ನೀವು ಯಾವುದೇ ಮನವಿಯನ್ನು ಸಲ್ಲಿಸದೆ ಕರ್ತವ್ಯಕ್ಕೆ ಹಾಜರಾಗದೆ ಉಳಿದಿರುವ ನಿಮ್ಮ ವಿರುದ್ಧದ ಆರೋಪದ ಬಗ್ಗೆ ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮದ ಪ್ರಕಾರ ಕರ್ತವ್ಯದಿಂದ ಏಕೆ ವಜಾಗೊಳಿಸಬಾರದು ಎಂಬ ಬಗ್ಗೆ ಸೂಕ್ತ ವಿವರಣೆಯನ್ನು ಈ ಪ್ರಕಟಣೆ ಹೊರಡಿಸಿದ 15 ದಿನದೊಳಗಾಗಿ ಸಲ್ಲಿಸಲು ಸೂಚಿಸಿದೆ. ತಪ್ಪಿದಲ್ಲಿ ನಿಮ್ಮ ಅಹವಾಲು ಏನು ಇಲ್ಲವೆಂದು ಭಾವಿಸಿ ಮುಂದಿನ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುವುದೆಂದು ಈ ಮೂಲಕ ತಿಳಿಯಪಡಿಸಿದೆ.

ಸಹಿ/- ನಿರ್ದೇಶಕರು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.

DIPR/CP/RO1746/AAPL/2023-24

ಬೆಂಗಳೂರು ಉತ್ತರ ವಿಶ್ವವಿದ್ಯಾಲಯ
ಶ್ರೀ ದೇವರಾಜ ಅರಸ್ ಬಡಾವಣೆ, ಟಮಕ, ಕೋಲಾರ-563 103.
ದೂರವಾಣಿ:+9181522 43152/53
Email:bnuregistrar@karnataka.gov.in
website:www.bnu.karnataka.gov.in
ದಿನಾಂಕ: 13.10.2023

ಇ-ಟೆಂಡರ್ ಅಧಿಸೂಚನೆ

ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ, ಇಲ್ಲಿಗೆ (1) ಹೊರಗುತ್ತಿಗೆಯ ಮೂಲಕ ಭದ್ರತಾ ಸಿಬ್ಬಂದಿ ಮತ್ತು ಸ್ವಚ್ಛತಾ ಸಿಬ್ಬಂದಿ ಸೇವೆಯನ್ನು ಪಡೆಯುವ ಬಗ್ಗೆ. ಟೆಂಡರ್ ನಂ: **BNU/2023-24/SE005.** (2) ಪ.ಜಾ/ಪ.ಪಂ ಪುರುಷ ಮತ್ತು ಮಹಿಳಾ ವಿದ್ಯಾರ್ಥಿ ನಿಲಯಕ್ಕೆ ಆಹಾರ/ದಿನಸಿ ಸಾಮಾಗ್ರಿಗಳನ್ನು ಸರಬರಾಜು ಮಾಡುವ ಬಗ್ಗೆ. ಟೆಂಡರ್ ನಂ: **BNU/2023-24/IND0010.** ಒದಗಿಸುವ ಕುರಿತು ಕರ್ನಾಟಕ ಪಾರದರ್ಶಕ ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಕಾಯ್ದೆಯಡಿಯಲ್ಲಿ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಇಲಾಖೆಯಲ್ಲಿ ನೋಂದಾಯಿತ ಹೆಸರಾಂತ ಸಂಸ್ಥೆಗಳಿಂದ ಟೆಂಡರ್‌ನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. ಟೆಂಡರ್ ದಾಖಲೆಗಳನ್ನು **ದಿನಾಂಕ: 13.10.2023 ರಿಂದ ಕರ್ನಾಟಕ (http://kppp.karnataka.gov.in)**ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಯನ್ನು ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಿ ಪಡೆಯಬಹುದು.

ಸಹಿ/- ಕುಲಸಚಿವರು
ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ,ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:170/ಕೆಎಸ್‌ಎಂ.ಸಿ.ಎ/2023-24

ಸಂಜಯ ಗಾಂಧಿ ಅಪಘಾತ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಭೈರಸಂದ್ರ, ಜಯನಗರ ಪೂರ್ವ, ಬೆಂಗಳೂರು - 560 011.
ದೂ: 080-26564516,26562500, ಗ್ರಾಮ್ಸ್:SITO ಫ್ಯಾಕ್ಸ್:26565222
ಇ-ಮೇಲ್: sitodirector@gmail.com

ಸಂಖ್ಯೆ: SGITO/e-Auction/FD/21/2023-24 ದಿನಾಂಕ: 18.10.2023

ಇ-ಆಕ್ಷನ್ ಪ್ರಕಟಣೆ

ಮಂಡಳಿಯ ಹೆಚ್ಚುವರಿ ಸುಂಕದ ಮೊತ್ತವನ್ನು 1 ವರ್ಷದ ಅವಧಿಗೆ ನಿಶ್ಚಿತ ಠೇವಣಿ/Non Callable ನಲ್ಲಿ ತೊಡಗಿಸಲು ಇ-ಟೆಂಡರ್ ಮೂಲಕ ಬಡ್ಡಿ ದರಗಳನ್ನು ಆಹ್ವಾನಿಸುವ ಬಗ್ಗೆ.

ಮಂಡಳಿಯ ಹೆಚ್ಚುವರಿ ಸುಂಕದ ಅಂದಾಜು ಮೊತ್ತ **ರೂ.17.50 ಕೋಟಿ (ರೂಪಾಯಿ ಹದಿನೇಳು ಕೋಟಿ ಐವತ್ತು ಲಕ್ಷಗಳು ಮಾತ್ರ)** ಒಂದು ವರ್ಷದ ಅವಧಿಗೆ ನಿಶ್ಚಿತ ಠೇವಣಿ / **Non Callable** ನಲ್ಲಿ ತೊಡಗಿಸಲು ಇ-ಆಕ್ಷನ್ ಬಿಡ್ಡಿಂಗ್ ವ್ಯವಸ್ಥೆ ಮಾದರಿಯಲ್ಲಿ ಕೆಪಿಪಿಪಿ ಪೋರ್ಟಲ್ ಕರ್ನಾಟಕ ಸರ್ಕಾರ ಇದರಲ್ಲಿ ಅರ್ಹ ರಾಷ್ಟ್ರೀಕೃತ ಬ್ಯಾಂಕ್‌ಗಳ ಪ್ರಾದೇಶಿಕ/ವಲಯ ಮುಖ್ಯ ಕಚೇರಿಗಳಿಂದ ಸ್ಪರ್ಧಾತ್ಮಕ ಬಡ್ಡಿ ದರವನ್ನು ಆಹ್ವಾನಿಸಲಾಗಿದೆ.

ಸದರಿ ಇ-ಆಕ್ಷನ್ ಅನ್ನು ವಿದ್ಯುನ್ಮಾನ ಮೂಲಕವಾಗಿ ಇ-ಪ್ರೊಕ್ಯೂರ್-ಮೆಂಟ್ ಪೋರ್ಟಲ್‌ನಲ್ಲಿ (https://kppp.karnataka.gov.in/) ಸಲ್ಲಿಸುವುದು. ದಾಖಲಾತಿಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 31.10.2023 ಸಂಜೆ 4:00 ರೊಳಗಾಗಿ. ಹೆಚ್ಚಿನ ವಿವರಗಳಿಗಾಗಿ ಮುಖ್ಯ ಆಡಳಿತಾಧಿಕಾರಿಗಳನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/-
ಮುಖ್ಯ ಆಡಳಿತಾಧಿಕಾರಿ,
ಸಗಾಅಚಿಸಂ

ವಾ.ಸಾ.ಸಂ.ಇ/ಬೆಂ.ನಗರ/1753/2023-24

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೊರೇಷನ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಉದ್ಯಮ)
ಟಿ.ಟಿ.ಎಂ.ಸಿ, 'ಎ' ಬ್ಲಾಕ್, 5ನೇ ಮಹಡಿ, ಬಿಎಂಟಿಸಿ ಕಟ್ಟಡ, ಕೆ.ಹೆಚ್.ರಸ್ತೆ,
ಶಾಂತಿ ನಗರ, ಬೆಂಗಳೂರು-560 027, ದೂರವಾಣಿ: 080 22278813/14/15/16
ಫ್ಯಾಕ್ಸ್ : 080-22213172 ಇ-ಮೇಲ್ : enquiries.ksmcl@gmail.com
ವೆಬ್‌ಸೈಟ್ : www.ksmc.karnataka.gov.in

ಸಂಖ್ಯೆ: 92/KSMCL/MEDICAL/MSH/2023-24/2146 ದಿನಾಂಕ: 19/10/2023

ಆಸಕ್ತಿಯ ಅಭಿವ್ಯಕ್ತಿಗೆ (EoI) ಆಹ್ವಾನ

ಕೆಎಸ್‌ಎಂಸಿಎಲ್ ಕಂಪನಿಯ ಉದ್ಯೋಗಿಗಳಿಗೆ ಮತ್ತು ಅವರ ಅವಲಂಬಿತರಿಗೆ CGHS ದರದಲ್ಲಿ ಆರೋಗ್ಯ ತಪಾಸಣೆ ಮತ್ತು ವಿವಿಧ ರೋಗಗಳ ಚಿಕಿತ್ಸೆಗಾಗಿ ಸೇವೆಗಳನ್ನು ಒದಗಿಸಲು ಆಸಕ್ತಿಯುಳ್ಳ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗಳಿಂದ ಆಸಕ್ತಿ ವ್ಯಕ್ತಪಡಿಸುವಿಕೆಯನ್ನು (EoI) ಆಹ್ವಾನಿಸಲಾಗಿದೆ.

ವೇಳಾಪಟ್ಟಿ

ಇಓಐ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	09/11/2023, 17.00 ಗಂಟೆಯವರೆಗೆ.
ಇಓಐ ತೆರೆಯುವ ದಿನಾಂಕ ಮತ್ತು ಸಮಯ	10/11/2023, 11.00 ಗಂಟೆಗೆ

ಇಓಐ ಆಹ್ವಾನ ದಾಖಲಾತಿಗಳನ್ನು ಕೆಎಸ್‌ಎಮ್‌ಸಿಎಲ್ ಜಾಲತಾಣ https://ksmc.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ e-mail: enquiries.ksmcl@gmail.com ಮೂಲಕ ಸಂಪರ್ಕಿಸಬಹುದಾಗಿದೆ.

ಸಹಿ/-
ಪ್ರಧಾನ ವ್ಯವಸ್ಥಾಪಕರು (ಆಡಳಿತ & ಜಾಗೃತ)

ವಾ.ಸಾ.ಸಂ.ಇ/ವಾಪ್ರ/1761/ಆಕಾರ್/2023-24

ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.
ನಂ:ದಾಮಪಾ:ಕಾಅ1.ಇ.ಟೆಂಡರ್:19:2023-24 ದಿನಾಂಕ: 10-10-2023

ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮುಖಾಂತರ)

2023-24 ನೇ ಸಾಲಿನ ಎಸ್.ಎಫ್.ಸಿ. ಮುಕ್ತನಿಧಿಯ ಶೇಕಡ 24.10 (ಎಸ್.ಸಿ.ಎಸ್.ಪಿ.) - 05 ಕಾಮಗಾರಿ,2023-24 ನೇ ಸಾಲಿನ ಎಸ್.ಎಫ್.ಸಿ. ಮುಕ್ತನಿಧಿಯ ಶೇಕಡ 24.10 (ಟಿ.ಎಸ್.ಪಿ.) - 02 ಕಾಮಗಾರಿ, 2023-24 ನೇ ಸಾಲಿನ ಎಸ್.ಎಫ್.ಸಿ. ಮುಕ್ತನಿಧಿಯ ಶೇಕಡ 7.25 - 01 ಕಾಮಗಾರಿ, 2023-24 ನೇ ಸಾಲಿನ ಎಸ್.ಎಫ್.ಸಿ. ಮುಕ್ತನಿಧಿ - 21 ಕಾಮಗಾರಿ, 2023-24 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿಯ ಶೇಕಡ 24.10 (ಎಸ್.ಸಿ.ಎಸ್.ಪಿ.) - 01 ಕಾಮಗಾರಿ, 2023-24 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿಯ ಶೇಕಡ 24.10 (ಟಿ.ಎಸ್.ಪಿ.) - 01 ಕಾಮಗಾರಿ, 2023-24 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿಯ ಶೇಕಡ 7.25 -01 ಕಾಮಗಾರಿ, 2022-23 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ - 01 ಕಾಮಗಾರಿ ಒಟ್ಟು 34 ಕಾಮಗಾರಿಗಳಿಗೆ ಕೆಪಿಪಿಪಿ ಪೋರ್ಟಲ್ ಮುಖಾಂತರ ಸಿಂಗಲ್/ಡಬಲ್ ಕವರ್ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು, ಅರ್ಹ ಗುತ್ತಿಗೆದಾರರು/ಏಜನ್ಸಿದಾರರು/ ಸರಬರಾಜುದಾರರು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ವೆಬ್ ಸೈಟ್ https://kppp.karnataka.gov.in ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಮಹಾನಗರ ಪಾಲಿಕೆಯ ಕಛೇರಿಯ ವೆಬ್ ಸೈಟ್ www.davanagerecity.mrc.gov.in ರಲ್ಲಿ ಹಾಗೂ ಕೆಪಿಪಿಪಿ ಸಹಾಯಕ ದೂರವಾಣಿ ಸಂಖ್ಯೆ: +91-8046010000 +91-8068948777 ರಿಂದ ಮಾಹಿತಿ ಪಡೆಯಬಹುದು.

ಕೆ.ಪಿ.ಪಿ.ಪಿ.ಯಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ: 21-10-2023
ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ & ವೇಳೆ: 04-11-2023 ಸಮಯ : 16.30 ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ: 04-11-2023 ಸಮಯ : 17.00 ಟೆಂಡರ್/ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 06-11-2023 ಸಮಯ : 11.00

ವಾಸಾಇ/ದಾವಣಗೆರೆ/295/
ಕೆಎಸ್‌ಎಂಸಿಎ/2023-24

ಸಹಿ/- ಕಾರ್ಯಪಾಲಕ ಅಭಿಯಂತರರು (ಸಿವಿಲ್)
ಮಹಾನಗರ ಪಾಲಿಕೆ, ದಾವಣಗೆರೆ

ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ
ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು
ದೂರವಾಣಿ: +91-8431186388, ಇ-ಮೇಲ್: sabvmcri@gmail.com

ಸಂಖ್ಯೆ: ಎಸ್‌ಎಬಿವಿಎಂಸಿಆರ್‌ಐ/ಇ-ಟೆಂಡರ್/ಡಯಟ್/04/2023-24 ದಿನಾಂಕ: 17-10-2023

ಟೆಂಡರ್ ಅಧಿಸೂಚನೆ

ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಅಧೀನದಲ್ಲಿ ಬರುವ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯ ಒಳರೋಗಿಗಳಿಗೆ ಪಥ್ಯಹಾರ ನೀಡಲು Diet Article ಗಳನ್ನು ಖರೀದಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ನಿಯಮಗಳು 2000 ರಂತೆ ಮೊಹರಾದ ಇ-ಟೆಂಡರ್‌ಗಳನ್ನು ಅರ್ಹ ಆಸಕ್ತ ಸಂಸ್ಥೆಗಳಿಂದ ಆಹ್ವಾನಿಸಲಾಗಿದೆ.

ಟೆಂಡರ್ ಫಾರಂ, ಇ.ಎಂ.ಡಿ ವಿವರ ಮತ್ತು ಷರತ್ತು ಮುಂತಾದ ವಿವರಗಳನ್ನು ವೆಬ್‌ಸೈಟ್: **www.kppp.karnataka.gov.in** ನಲ್ಲಿ ವೀಕ್ಷಿಸಿ ಟೆಂಡರ್‌ಗಳನ್ನು ಸಲ್ಲಿಸಬಹುದು ಹಾಗೂ ಹಿಂದಿರುಗಿಸದ ಟೆಂಡರ್ ಪ್ರೋಸೆಸ್ಸಿಂಗ್ ಮೊತ್ತ **ರೂ. 5,000/-** ಗಳ ಡಿ.ಡಿ.ಯನ್ನು **ನಿರ್ದೇಶಕರು ಹಾಗೂ ಡೀನ್, ಶ್ರೀಅಬಿವಾವೈಮಸಂಸಂ, ಬೆಂಗಳೂರು** ಇವರ ಹೆಸರಿನಲ್ಲಿ ಪಡೆದು ಸಲ್ಲಿಸತಕ್ಕದ್ದು ಮತ್ತು ಅದರ ರಸೀದಿಯನ್ನು ಈ ಟೆಂಡರ್‌ನಲ್ಲಿ ಲಗತ್ತಿಸುವುದು. ಆಸಕ್ತಿಯುಳ್ಳ ಟೆಂಡರ್‌ದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸತಕ್ಕದ್ದು. ನೋಂದಾವಣಿಗೆ ಅಗತ್ಯವಾದ ವಿವರಗಳನ್ನು ವೆಬ್‌ಸೈಟ್‌ನಲ್ಲಿ ನೋಡಬಹುದು. ಹೆಚ್ಚಿನ ವಿವರಗಳಿಗಾಗಿ ಇ-ಮೇಲ್: **sabvmcri@gmail.com** ಮತ್ತು ದೂರವಾಣಿ ಸಂಖ್ಯೆ: **+91-8431186388** ನ್ನು ಸಂಪರ್ಕಿಸಬಹುದು.

1) ಟೆಂಡರ್ ದಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಳ್ಳಲು ಆರಂಭಿಸುವ ದಿನಾಂಕ: **20-10-2023 ರಿಂದ.** 2) ಟೆಂಡರ್ ಬಗ್ಗೆ ಪ್ರಶ್ನಾವಳಿಗಳಿಗೆ ಕೊನೆಯ ದಿನಾಂಕ: **27-10-2023 ರಂದು ಸಂಜೆ 4.00 ಗಂಟೆವರೆಗೆ.** 3) ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **06-11-2023 ರಂದು ಸಂಜೆ 4.00 ಗಂಟೆವರೆಗೆ.** 4) ಮಾದರಿಯನ್ನು ಸಲ್ಲಿಸಲು ಕೊನೆಯ ದಿನಾಂಕ: **20-10-2023 ರಿಂದ 04-11-2023 ರಂದು ಬೆಳಿಗ್ಗೆ 10.00 ರಿಂದ ಸಂಜೆ 4.00 ಗಂಟೆವರೆಗೆ,** ಸ್ಥಳ: **ಶ್ರೀಅಬಿವಾವೈಮಸಂಸಂ, ಶಿವಾಜಿನಗರ, ಬೆಂಗಳೂರು - 560001.** 5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **08-11-2023 ರಂದು ಬೆಳಿಗ್ಗೆ 10.30 ಗಂಟೆಗೆ.** 6) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **09-11-2023 ರಂದು ಬೆಳಿಗ್ಗೆ 11.30 ಗಂಟೆಗೆ.** ಈ ವಿಷಯದಲ್ಲಿ ಯಾವುದೇ ಹೆಚ್ಚಿನ ಮಾಹಿತಿ ಬೇಕಾದ ಪಕ್ಷದಲ್ಲಿ ಕೆಲಸದ ದಿನಗಳಲ್ಲಿ ಈ ಸಂಸ್ಥೆಯ ನಿರ್ದೇಶಕರು ಹಾಗೂ ಡೀನ್ / ಸಹಾಯಕ ಆಡಳಿತಾಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ.

ಸಹಿ/- ನಿರ್ದೇಶಕರು ಹಾಗೂ ಡೀನ್
ಶ್ರೀ.ಅ.ಬಿ.ವಾ.ವೈ.ಮ.ಸಂ.ಸಂ., ಬೆಂಗಳೂರು.

ವಾಸಾಸಂಇ/ವಾ.ಪ್ರ/1755/ಅಡ್ವರ್ಟೋರ್/2023-24

ನಗರಸಭಾ ಕಾರ್ಯಾಲಯ, ತಿಪಟೂರು
ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ, ದೂ: 08134-250785, E-mail:itstaff_ulb_tiptur@yahoo.co.in, www.tipturcity.mrc.gov.in

ನಂ.ನ.ಸ.ತಿ/ತಾಂಶಾ/ಸಿ.ಆರ್/84/2023-24 ದಿನಾಂಕ: 12.10.2023

ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆಯ ಆದ್ಯಾದೇಶ 1999 - 2000ರ ನಿಯಮಗಳಂತೆ ನಗರಸಭೆಯ ವಿವಿದ ಅನುದಾನದಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಲೋಕೋಪಯೋಗಿ/ ವಿದ್ಯುತ್ ಪರಿವೀಕ್ಷಕರ/ ಕಾರ್ಮಿಕ ಇಲಾಖೆಯಲ್ಲಿ ನೊಂದಾಯಿಸಿರುವ ಅರ್ಹ ದರ್ಜೆಯ ಗುತ್ತಿಗೆದಾರರು/ ಕಾರ್ಮಿಕ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು KPPP Portal ವೆಬ್‌ಸೈಟ್‌ನಲ್ಲಿ (https://kppp.karnataka.gov.in) ಟೆಂಡರ್‌ಗಳನ್ನು ಸಲ್ಲಿಸಬಹುದು. (ಹೆಚ್ಚಿನ ಮಾಹಿತಿಗಳ ಅಗತ್ಯವಿದ್ದಲ್ಲಿ ಕಛೇರಿಯಿಂದ ಪಡೆಯಬಹುದು)

KPPP Portal ವೆಬ್‌ಸೈಟ್

ಕ್ರ. ಸಂ	ಇಂಡಟ್ ನಂಬರ್	ಅಂದಾಜು ಮೊತ್ತ ರೂ.ಲಕ್ಷ	ಇ.ಎಂ.ಡಿ ರೂಗಳಲ್ಲಿ	ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ	ಟೆಂಡರ್ ತೆರೆಯುವ ಕಡೆಯ ದಿನಾಂಕ
1	DMA/2023-24/OW/WORK_ INDENT 4339	3,75,000/-	9,400/-	27.10.2023	31.10.2023
2	DMA/2023-24/OW/WORK_INDENT4614 (SC)	5,69,000/-	7,113/-	27.10.2023	31.10.2023
3	DMA/2023-24/OW/WORK_INDENT4629 (SC)	10,00,000/-	12,500/-	27.10.2023	31.10.2023
4	DMA/2023-24/OW/WORK_INDENT5000 (SC)	10,00,000/-	12,500/-	27.10.2023	31.10.2023
5	DMA/2023-24/OW/WORK_INDENT4837 (SC)	42,50,000/-	42,500/-	27.10.2023	31.10.2023
6	DMA/2023-24/OW/WORK_INDENT4620 (ST)	8,09,000/-	10,113/-	27.10.2023	31.10.2023
7	DMA/2023-24/OW/WORK_INDENT4625 (ST)	9,50,000/-	11,875/-	27.10.2023	31.10.2023
8	DMA/2023-24/OW/WORK_INDENT4618	10,00,000/-	25,000/-	27.10.2023	31.10.2023
9	DMA/2023-24/OW/WORK_INDENT4622	3,00,000/-	7,500/-	27.10.2023	31.10.2023
10	DMA/2023-24/OW/WORK_INDENT4626	3,50,000/-	8,750/-	27.10.2023	31.10.2023
11	DMA/2023-24/OW/WORK_INDENT4627	10,00,000/-	25,000/-	27.10.2023	31.10.2023
12	DMA/2023-24/OW/WORK_INDENT4628	10,00,000/-	25,000/-	27.10.2023	31.10.2023
13	DMA/2023-24/OW/WORK_INDENT4630	10,00,000/-	25,000/-	27.10.2023	31.10.2023
14	DMA/2023-24/OW/WORK_INDENT4904	25,00,000/-	50,000/-	27.10.2023	31.10.2023
15	DMA/2023-24/OW/WORK_INDENT4658	10,00,000/-	25,000/-	27.10.2023	31.10.2023
16	DMA/2023-24/OW/WORK_INDENT4661	8,12,000/-	20,300/-	27.10.2023	31.10.2023
17	DMA/2023-24/OW/WORK_INDENT4668	8,80,000/-	22,000/-	27.10.2023	31.10.2023
18	DMA/2023-24/OW/WORK_INDENT4731	5,00,000/-	12,500/-	27.10.2023	31.10.2023
19	DMA/2023-24/OW/WORK_INDENT4740	7,00,000/-	17,500/-	27.10.2023	31.10.2023
20	DMA/2023-24/OW/WORK_INDENT4764	6,84,000/-	17,100/-	27.10.2023	31.10.2023
21	DMA/2023-24/OW/WORK_INDENT4762	5,28,000/-	13,200/-	27.10.2023	31.10.2023
22	DMA/2023-24/OW/WORK_INDENT5016	10,00,000/-	25,000/-	27.10.2023	31.10.2023
23	DMA/2023-24/OW/WORK_INDENT5023	3,77,000/-	9,425/-	27.10.2023	31.10.2023
24	DMA/2023-24/SE1095	15,00,000/-	37,500/-	27.10.2023	31.10.2023
25	DMA/2023-24/OW/WORK_INDENT1186/Call-2	3,77,84,000/-	4,81,000/-	26.10.2023	02.11.2023
26	DMA/2023-24/SE1002	1,10,00,000/-	2,00,000/-	27.11.2023	01.12.2023
27	ತಿಪಟೂರು ನಗರಸಭೆಗೆ ಘನತ್ಯಾಜ್ಯ ಸಂಸ್ಕರಣೆಗೆ ಸ್ಕ್ರೀನಿಂಗ್ ಯಂತ್ರೋಪಕರಣ ಖರೀದಿ ಮಾಡುವುದು	1,59,95,000/-	2,40,000/-	28.11.2023	01.12.2023

ಸಹಿ/- ಪೌರಾಯುಕ್ತರು, ನಗರಸಭೆ,
ತಿಪಟೂರು.

DIPR/TUM/251/KSMCA/2023-24



ಸುಭಾಷಿತ

ಯಾರು ಪ್ರಪಂಚದ ಸುಖವನ್ನು ಹೆಚ್ಚಿಸಲು ಯತ್ನಿಸುತ್ತಾರೋ ಅವರು ತಮ್ಮ ಸುಖವನ್ನೂ ಹೆಚ್ಚಿಸಿಕೊಳ್ಳುತ್ತಾರೆ.

-ಶಿವರಾಮ ಕಾರಂತ

ಚುನಾವಣಾ ಬಾಂಡ್ ವ್ಯವಸ್ಥೆ ಸಲ್ಲ ಇದು ಪ್ರಜಾತಂತ್ರಕ್ಕೆ ಅಪಾಯಕಾರಿ

ಚುನಾವಣಾ ಬಾಂಡ್ ಯೋಜನೆಗೆ ಸಂಬಂಧಿಸಿದ ಅರ್ಜಿಗಳ ಬಗ್ಗೆ ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠವು ವಿಚಾರಣೆ ನಡೆಸಲಿದೆ. ರಾಜಕೀಯ ಪಕ್ಷಗಳಿಗೆ ಅನಾಮಧೇಯವಾಗಿ, ಗೋಪ್ಯವಾಗಿ ದೇಣಿಗೆ ನೀಡುವ ಈ ಅಪಾಯಕಾರಿ ವ್ಯವಸ್ಥೆಯ ವಿಚಾರದಲ್ಲಿ ತ್ವರಿತವಾಗಿ ತೀರ್ಮಾನವೊಂದು ಆಗಬಹುದು, ಚುನಾವಣಾ ಬಾಂಡ್ ವ್ಯವಸ್ಥೆಯು ಕೊನೆಗೊಳ್ಳಬಹುದು ಎಂಬ ಆಶಾಭಾವನೆಯು ಇದರಿಂದಾಗಿ ಮೂಡಿದೆ. ಈ ವ್ಯವಸ್ಥೆಯನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳು ಐದು ವರ್ಷಗಳಿಗಿಂತ ಹೆಚ್ಚಿನ ಅವಧಿಯಿಂದ ಇತ್ಯರ್ಥವಾಗದೇ ಉಳಿದಿವೆ. ಈಗ ಐವರು ನ್ಯಾಯಮೂರ್ತಿಗಳು ಇರುವ ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠವು ಅಕ್ಟೋಬರ್ 31ರಿಂದ ಈ ಅರ್ಜಿಗಳನ್ನು ವಿಚಾರಣೆಗೆ ಎತ್ತಿಕೊಳ್ಳುವ ನಿರೀಕ್ಷೆ ಇದೆ. ಪ್ರಾಥಮಿಕ ಹಂತದ ವಾದಗಳನ್ನು ಮಂಡಿಸಿ ಆಗಿರುವ ಕಾರಣ, ಅಂತಿಮ ವಿಚಾರಣೆ ನಡೆಯಲಿದೆ ಎಂದು ಕೋರ್ಟ್ ಹೇಳಿದೆ. 'ನಾವು ಪ್ರಕರಣದ ಬಗ್ಗೆ ತೀರ್ಮಾನ ಕೊಡಲು ಇಲ್ಲಿದ್ದೇವೆ' ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ಅವರು ಕಳೆದ ವಾರ ಹೇಳಿದ್ದಾರೆ. ಅಂದರೆ, ಚುನಾವಣಾ ಬಾಂಡ್‌ಗಳ ವಿಚಾರವಾಗಿ ಅಂತಿಮ ತೀರ್ಮಾನವೊಂದು ಪ್ರಕಟವಾಗಬಹುದು. ಐದು ರಾಜ್ಯಗಳ ವಿಧಾನಸಭೆಗಳಿಗೆ ಮುಂದಿನ ತಿಂಗಳು ಚುನಾವಣೆ ನಡೆಯಲಿದೆ. 28ನೇ ಸುತ್ತಿನ ಚುನಾವಣಾ ಬಾಂಡ್‌ಗಳ ಮಾರಾಟವು ಈ ತಿಂಗಳು ಪೂರ್ಣಗೊಂಡಿದೆ. ಮುಂದಿನ ವರ್ಷ ನಡೆಯಲಿರುವ ಲೋಕಸಭಾ ಚುನಾವಣೆಗೂ ಮೊದಲು ತೀರ್ಮಾನ ಆಗಬೇಕು ಎಂದು ಚುನಾವಣಾ ಬಾಂಡ್ ಯೋಜನೆ ಕುರಿತು ಅರ್ಜಿ ಸಲ್ಲಿಸಿರುವವರು ಮನವಿ ಮಾಡಿದ್ದಾರೆ. ಪ್ರಕರಣದ ಮಹತ್ವವನ್ನು ಗುರುತಿಸಿ, ವಿಚಾರಣೆಯಲ್ಲಿ ವಿಳಂಬವಾಗದಂತೆ ನೋಡಿಕೊಳ್ಳಲು ನಿರ್ಧರಿಸಿರುವ ಸಿಜೆಐ ಕ್ರಮವು ಸ್ವಾಗತಾರ್ಹ.

ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡುತ್ತಿರುವವರು ಯಾರು ಎಂಬುದನ್ನು ತಿಳಿದುಕೊಳ್ಳುವ ಹಕ್ಕು ಪ್ರಜೆಗಳಿಗೆ ಇರಬೇಕು

ಚುನಾವಣಾ ಬಾಂಡ್ ಯೋಜನೆಯಲ್ಲಿ ಹಲವು ಸಮಸ್ಯೆಗಳಿವೆ. ಈ ಯೋಜನೆಗೆ ಸಂಬಂಧಿಸಿದ ಎರಡು ಪ್ರಮುಖ ವಿಚಾರಗಳ ಬಗ್ಗೆ ಕೋರ್ಟ್ ಗಮನ ನೀಡಬೇಕು ಎಂದು ಅರ್ಜಿದಾರರು ಮನವಿ ಮಾಡಿದ್ದಾರೆ. ಈ ಎರಡು ವಿಚಾರಗಳಲ್ಲಿ ಒಂದನೆಯದು, ಅನಾಮಧೇಯವಾಗಿ ದೇಣಿಗೆ ನೀಡುವುದಕ್ಕೆ ಇರುವ ಅವಕಾಶ; ಎರಡನೆಯದು, ರಾಜಕೀಯ ಪಕ್ಷಗಳಿಗೆ ಬರುವ ದೇಣಿಗೆಯ ಬಗ್ಗೆ ಮಾಹಿತಿ ಪಡೆಯಲು ಪ್ರಜೆಗಳು ಹೊಂದಿರುವ ಹಕ್ಕಿನ ಉಲ್ಲಂಘನೆಗೆ ಸಂಬಂಧಿಸಿದೆ. ಈ ಎರಡು ವಿಷಯಗಳು ಸಂವಿಧಾನದ 14, 19 ಮತ್ತು 21ನೇ ವಿಧಿಗಳ ಉಲ್ಲಂಘನೆಗೆ ಸಂಬಂಧಿಸಿವೆ. ಯೋಜನೆಯ ಆರಂಭದಿಂದಲೂ ಇದರ ಬಗ್ಗೆ ಹಲವು ಪ್ರಶ್ನೆಗಳು ಇವೆ. ಈ ಯೋಜನೆಯು ರಾಜಕೀಯ ಪಕ್ಷಗಳಿಗೆ ಬ್ಯಾಂಕಿಂಗ್ ವ್ಯವಸ್ಥೆಯ ಮೂಲಕ ದೇಣಿಗೆ ಲಭ್ಯವಾಗುವಂತೆ ಮಾಡುತ್ತದೆ. ಆದರೆ, ಇಲ್ಲಿ ದೇಣಿಗೆ ನೀಡುತ್ತಿರುವ ವ್ಯಕ್ತಿ ಯಾರೆಂಬುದು ಗೊತ್ತಾಗುವುದೇ ಇಲ್ಲ. ಅನಾಮಧೇಯರಾಗಿ ಇದ್ದುಕೊಂಡು ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡುವುದನ್ನು ಕಾನೂನುಬದ್ಧಗೊಳಿಸುವುದು ಭ್ರಷ್ಟಾಚಾರಕ್ಕೆ ನೆರವು ಒದಗಿಸುವುದಕ್ಕೆ ಹಾಗೂ ಭ್ರಷ್ಟಾಚಾರವನ್ನು ಸಕ್ರಮಗೊಳಿಸುವುದಕ್ಕೆ ಸಮ. ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡುತ್ತಿರುವವರು ಯಾರು ಎಂಬುದನ್ನು ತಿಳಿದುಕೊಳ್ಳುವ ಹಕ್ಕು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಪ್ರಜೆಗಳಿಗೆ ಇರಬೇಕು. ಏಕೆಂದರೆ ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡುವ ಮೂಲಕ, ಆ ಪಕ್ಷಗಳ ನೀತಿ–ನಿಲುವುಗಳ ಮೇಲೆ ಪ್ರಭಾವ ಬೀರುವ ಅವಕಾಶವೂ ಇರುತ್ತದೆ. ಚುನಾವಣಾ ಬಾಂಡ್‌ಗಳ ಮೂಲಕ ನೀಡಲಾಗಿರುವ ದೇಣಿಗೆಗಳಲ್ಲಿ ಶೇಕಡ 95ರಷ್ಟಕ್ಕಿಂತ ಹೆಚ್ಚಿನವು ₹1 ಕೋಟಿ ಹಾಗೂ ಅದಕ್ಕೂ ಹೆಚ್ಚಿನ ಮೊತ್ತದ್ದಾಗಿವೆ. ಅಂದರೆ ಈ ಮೊತ್ತವನ್ನು ಪಕ್ಷಗಳಿಗೆ ದೇಣಿಗೆಯಾಗಿ ನೀಡಿದ್ದು ಕಾರ್ಪೊರೇಟ್ ಸಂಸ್ಥೆಗಳಾಗಿರಬಹುದು ಅಥವಾ ಶ್ರೀಮಂತ ವ್ಯಕ್ತಿಗಳಾಗಿರಬಹುದು. ಬಾಂಡ್‌ಗಳು ಹಣದ ಅಕ್ರಮ ವರ್ಗಾವಣೆಗೆ ನೆರವಾಗಬಹುದು ಎಂಬ ಕಳವಳವೂ ವ್ಯಕ್ತವಾಗಿದೆ. ಆದರೆ ಈ ಕಳವಳಕ್ಕೆ ಆಧಾರವಿಲ್ಲ ಎಂದು ಸರ್ಕಾರ ಹೇಳಿದೆ. ಹಣದ ಅಕ್ರಮ ವರ್ಗಾವಣೆಯನ್ನು ತಡೆಯುವುದೇ ಈ ಯೋಜನೆಯ ಉದ್ದೇಶ ಎಂದು ಅದು ಹೇಳಿಕೊಂಡಿದೆ.

ಬಾಂಡ್ ಮೂಲಕ ಆಗಿರುವ ದೇಣಿಗೆಗಳಲ್ಲಿ ಅತಿಹೆಚ್ಚಿನ ಪಾಲು ಹೋಗಿರುವುದು ಬಿಜೆಪಿಗೆ. ರಾಜಕೀಯ ಪಕ್ಷಗಳಿಗೆ ನೀಡುವ ದೇಣಿಗೆಯ ವಿಚಾರದಲ್ಲಿ ಆಡಳಿತಾರೂಢರಿಗೆ ಹೆಚ್ಚಿನ ಅನುಕೂಲಗಳು ಇರುತ್ತವೆ ಎಂಬುದು ನಿಜ. ಆದರೆ ಆ ಅನುಕೂಲವನ್ನು ಸಾಂಸ್ಥಿಕವಾಗಿಸಬಾರದು. ಈ ಯೋಜನೆಯಲ್ಲಿ ದೇಣಿಗೆಯನ್ನು ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಮೂಲಕ ನೀಡಲಾಗುವ ಕಾರಣ, ದೇಣಿಗೆ ನೀಡಿದವರ ವಿವರಗಳನ್ನು ಪಡೆಯುವ ಅವಕಾಶ ಸರ್ಕಾರಕ್ಕೆ ಇರುತ್ತದೆ. ಇದನ್ನು ಬಳಸಿ ಸರ್ಕಾರವು ವಿರೋಧ ಪಕ್ಷಗಳಿಗೆ ದೇಣಿಗೆ ಸಿಗದಂತೆ ಮಾಡಬಹುದು. ಈ ಎಲ್ಲ ಕಾರಣಗಳಿಂದಾಗಿ ಚುನಾವಣಾ ಬಾಂಡ್ ವ್ಯವಸ್ಥೆಯು ರಾಜಕೀಯ ಪಕ್ಷಗಳ ನಡುವೆ ಅಸಮತೋಲನ ಸೃಷ್ಟಿಸುತ್ತದೆ. ಅಷ್ಟೇ ಅಲ್ಲ, ಇದು ನಮ್ಮ ಪ್ರಜಾತಂತ್ರ ವ್ಯವಸ್ಥೆಗೆ ಅಪಾಯಕಾರಿಯೂ ಹೌದು.

ದಿನದ ಟ್ವೀಟ್

ಯಾವ ಕಾಲದಲ್ಲಿ ಇದ್ದೇವೆ?!

ತನ್ನ ಗಂಡನಿಗಾಗಿ ಅಡುಗೆ ಮಾಡುವ ಕೌಶಲ ಪತ್ನಿಗೆ ಇಲ್ಲದಿದ್ದರೆ ಅದು ಕ್ರೌರ್ಯ ಎನಿಸಿಕೊಳ್ಳದು ಎಂದು ಕೇರಳ ಹೈಕೋರ್ಟ್ ಹೇಳಿದೆ. ಇಂತಹ ಸುದ್ದಿಗಳಿಂದಾಗಿ, ನಾವು 2023ರಲ್ಲಿ ಇದ್ದೇವೆ ಎಂಬುದನ್ನು ಅರಗಿಸಿಕೊಳ್ಳುವುದೇ ಕಷ್ಟವಾಗುತ್ತದೆ. ಜನಸಂಖ್ಯೆಯ ಬಹುಭಾಗ– ಮತ್ತು ನಮ್ಮ ವ್ಯವಸ್ಥೆಗಳು ಹಾಗೂ ಸಂಸ್ಥೆಗಳು– ಎಷ್ಟೋ ವರ್ಷಗಳ ಹಿಂದೆಯೇ ಇತ್ಯರ್ಥವಾಗಬೇಕಿದ್ದ ವಿಷಯಗಳತ್ತಲೇ ಗಿರಕಿ ಹೊಡೆಯುತ್ತಿವೆ.

ಅಶ್ವಿನ್ ಮಹೇಶ್, ನಗರ ಯೋಜನಾ ತಜ್ಞ

ಕಿಡಿನುಡಿ

ಆಸ್ಪತ್ರೆಯ ಮೇಲೆ ಬಾಂಬ್ ಹಾಕುವುದನ್ನು ನೀವು ಸಮರ್ಥಿಸಬಹುದಾದರೆ, ಮನುಷ್ಯ ಎಂದು ಕರೆಸಿಕೊಳ್ಳುವ ಅರ್ಹತೆಯೇ ನಿಮಗೆ ಇರುವುದಿಲ್ಲ.

(ಗಾಜಾ ನಗರದಲ್ಲಿನ ಆಸ್ಪತ್ರೆಯೊಂದರ ಮೇಲೆ ನಡೆದಿರುವ ಬಾಂಬ್ ದಾಳಿಗೆ ಪ್ರತಿಕ್ರಿಯೆ) **ಅಲಿಂಡಾ ಮೆರ್ರಿ ಜಾನ್**

25 ವರ್ಷಗಳ ಹಿಂದೆ

ಸೋಮವಾರ, 19-10-1998

- **ರಾಜ್ಯ ನೆರೆ ಪರಿಹಾರಕ್ಕೆ ರೂ. 50 ಕೋಟಿ ನೆರವು**

ಹೈದರಾಬಾದ್, ಅ. 18 (ಪಿಟಿಐ)– ಅತಿವೃಷ್ಟಿ ಪರಿಹಾರ ಕಾರ್ಯಗಳಿಗಾಗಿ ಆಂಧ್ರಪ್ರದೇಶಕ್ಕೆ ರೂ 200 ಕೋಟಿ ಹಾಗೂ ಕರ್ನಾಟಕಕ್ಕೆ ರೂ 50 ಕೋಟಿ ಕೇಂದ್ರ ನೆರವನ್ನು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಇಂದು ಇಲ್ಲಿ ಪ್ರಕಟಿಸಿದರು.

ಅವರು ಇಂದು ಆಂಧ್ರಪ್ರದೇಶ ಹಾಗೂ ಕರ್ನಾಟಕದಲ್ಲಿನ ಅತಿವೃಷ್ಟಿ ಹಾಗೂ ಪ್ರವಾಹಪೀಡಿತ ಪ್ರದೇಶಗಳ ವೈಮಾನಿಕ ಸಮೀಕ್ಷೆ ನಡೆಸಿದರು.

ಪಕ್ಷಪಾತ: 'ಆಂಧ್ರಪ್ರದೇಶಕ್ಕೆ 200 ಕೋಟಿ ಕೊಟ್ಟು ಕರ್ನಾಟಕಕ್ಕೆ 50 ಕೋಟಿ ನೀಡಿರುವುದು ಪಕ್ಷಪಾತವಲ್ಲವೇ?' ಎಂಬ ಪತ್ರಕರ್ತರ ಪ್ರಶ್ನೆಗೆ 'ಇದು ಪ್ರಾರಂಭದ ಕಂತು ಮಾತ್ರ. ಕೇಂದ್ರ ತಂಡದ ವರದಿಯ ನಂತರ ಮತ್ತಷ್ಟು ನೆರವು ನೀಡುವ ಬಗ್ಗೆ ಪರಿಶೀಲಿಸಲಾಗುವುದು' ಎಂದರು.

- **ದಳ ಪುನರ್ ಸಂಘಟನೆಗೆ ದೇವೇಗೌಡ ಪಣ**

ಬೆಂಗಳೂರು, ಅ. 18– 'ಅಲ್ಪಸಂಖ್ಯಾತರಿಗೆ ಮತ್ತು ಹಿಂದುಳಿದ ವರ್ಗದವರಿಗೆ ರಾಜಕೀಯ ಶಕ್ತಿ ನೀಡಿರುವ ಜನತಾ ದಳವನ್ನು ಯಾವುದೇ ಕಾರಣಕ್ಕೂ ಕ್ಷೀಣಿಸಲು ಬಿಡುವುದಿಲ್ಲ, ಡಿಸೆಂಬರ್‌ನಿಂದ ರಾಜ್ಯದ ಎಲ್ಲ ತಾಲ್ಲೂಕುಗಳಲ್ಲಿ ಪ್ರವಾಸ ಮಾಡಿ ಪಕ್ಷವನ್ನು ಇನ್ನಷ್ಟು ಶಕ್ತಿಯುತವಾಗಿ ಸಂಘಟಿಸುತ್ತೇನೆ' ಎಂದು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರು ಇಂದು ಇಲ್ಲಿ ಸಹಸ್ರಾರು ಕಾರ್ಯಕರ್ತರ ಮುಂದೆ ಪಣ ತೊಟ್ಟರು.

50 ವರ್ಷಗಳ ಹಿಂದೆ

ಶುಕ್ರವಾರ, 19-10-1973

- **ಸೀಮೆಎಣ್ಣೆ, ಪೆಟ್ರೋಲ್‌ಗೆ ಪಡಿತರ?**

ನವದೆಹಲಿ, ಅ. 18 – ಪೆಟ್ರೋಲ್ ಮತ್ತು ಸೀಮೆಎಣ್ಣೆ ಬಳಕೆ ಮೇಲೆ ನಿರ್ಬಂಧ ಹೇರುವ ಸಾಧ್ಯತೆ ಇದೆ.

ಪೆಟ್ರೋಲ್ ಮತ್ತು ಸೀಮೆಎಣ್ಣೆ ಪಡಿತರ ಜಾರಿಗೆ ತರುವ ಮೂಲಕ ನಿರ್ಬಂಧ ಹೇರುವ ಬಗ್ಗೆ ಕೇಂದ್ರ ಸರ್ಕಾರ ರಾಜ್ಯಗಳ ಜೊತೆ ಸಮಾಲೋಚನೆ ನಡೆಸಿದೆ.

ಕೆಲವು ರಾಜ್ಯಗಳು ಪೆಟ್ರೋಲ್, ಸೀಮೆ ಎಣ್ಣೆಯನ್ನು ಪಡಿತರದ ಮೂಲಕ ವಿತರಿಸುವುದಕ್ಕೆ ವಿರೋಧ ವ್ಯಕ್ತಪಡಿಸಿದ್ದರೆ, ಇನ್ನು ಕೆಲವು ಅದರ ಪರ ಅಭಿಪ್ರಾಯ ವ್ಯಕ್ತಪಡಿಸಿವೆ. ಪಡಿತರದ ಮೂಲಕ ಹಂಚಲು ಆಡಳಿತ ತೊಂದರೆಗಳಿವೆಯೆಂದು ಕೆಲವು ರಾಜ್ಯಗಳ ವಾದ.

ಕೀಲೆಣ್ಣೆಗಳ ಬೆಲೆ ಏರಿಕೆ: ಎಲ್ಲ ಬಗೆಯ ಕೀಲೆಣ್ಣೆಗಳ ಬೆಲೆಯನ್ನು ಟಿನ್‌ಗೆ 75 ರೂ.ಗಳಷ್ಟು ಏರಿಸಲು ಕೇಂದ್ರ ಸರ್ಕಾರ ಇಂದು ನಿರ್ಧರಿಸಿರುವುದಾಗಿ ಗೊತ್ತಾಗಿದೆ.

- **ಅಕ್ರಮವಾಗಿ ಕಟ್ಟಿದ ಮನೆಗಳನ್ನು ಕೆಡವಲು ಗುಂಪಿನಿಂದ ತಡೆ; ಪೊಲೀಸರೊಡನೆ ಘರ್ಷಣೆ**

ಬೆಂಗಳೂರು, ಅ. 18– ಅಕ್ರಮವಾಗಿ ಕಟ್ಟಿರುವುದೆನ್ನಲಾದ ಮನೆಗಳನ್ನು ಕೆಡವಿಹಾಕಲು ನಗರಾಭಿವೃದ್ಧಿ ಮಂಡಳಿ ಇಂದು ಬೆಳಿಗ್ಗೆ ರಾಜಾಜಿನಗರದ ಶಿವನಹಳ್ಳಿಗೆ ಹೋದಾಗ, ಅವರನ್ನು ತಡೆಗಟ್ಟಿದ ಜನರ ಗುಂಪೊಂದು ಜೊತೆಯಲ್ಲಿದ್ದ ಪೊಲೀಸರ ಮೇಲೆ ಕಲ್ಲುಗಳನ್ನು ತೂರಿತು.

ಕಲ್ಲು ತೂರಾಟದಿಂದ ಆರು ಮಂದಿ ಅಧಿಕಾರಿಗಳೂ ಸೇರಿ 24 ಮಂದಿ ಪೊಲೀಸರು ಗಾಯಗೊಂಡರು.

ಪಟಾಕಿ ತಯಾರಿಕೆಯ ಹಿಂದಿನ ರೌರವ ವಾಸ್ತವವನ್ನೊಮ್ಮೆ ಅವಲೋಕಿಸಿದಾಗ...

ಶಿವಕಾಶಿ: ಸಡಗರದ ಹಿಂದಿನ ಸಂಕಟ

ವಿಶ್ಲೇಷಣೆ

ಟಿ.ಎನ್. ವಾಸುದೇವಮೂರ್ತಿ

ತಮಿಳುನಾಡಿನ ಮುತ್ಸದ್ದಿಯೂ ಮುಖ್ಯಮಂತ್ರಿಯೂ ಆಗಿದ್ದ ಕೆ.ಕಾಮರಾಜ್ ಅವರಿಗೆ ಬಾಲ್ಯದ ಶಾಲಾಶಿಕ್ಷಣವನ್ನು ಪೂರ್ಣಗೊಳಿಸಲಾಗಲಿಲ್ಲ. ಅವರ ಈ ಕೊರತೆ ತಮಿಳುನಾಡಿನ ಪಾಲಿಗೆ ಒಂದು ಅನುಗ್ರಹವಾಗಿ ಪರಿಣಮಿಸಿತು. ಆರಂಭಿಕ ಬಾಲ್ಯ ಶಿಕ್ಷಣದ ಮಹತ್ವವನ್ನು ಚೆನ್ನಾಗಿ ಅರಿತಿದ್ದ ಕಾಮರಾಜ್, ಮುಖ್ಯಮಂತ್ರಿಯಾದ ಮೇಲೆ ತಮಿಳುನಾಡಿನಾದ್ಯಂತ ಸಾವಿರಾರು ಶಾಲೆಗಳನ್ನು ಸ್ಥಾಪಿಸಿದರು. ಕಾಲ್ನಡಿಗೆಯಲ್ಲಿ ಶಾಲೆಗೆ ಹೋಗುವ ಯಾವ ಮಗುವಿಗೂ ಶಾಲೆ ಮೂರು ಕಿ.ಮೀ.ಗಿಂತ ಹೆಚ್ಚು ದೂರ ಇರಕೂಡದು ಎಂದು ಶಿಕ್ಷಣ ಇಲಾಖೆಗೆ ಸೂಚಿಸಿದರು. ಒಂದರಿಂದ ಹತ್ತನೇ ತರಗತಿಯವರೆಗೆ ಪ್ರತಿಯೊಬ್ಬರಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣದ ನೀತಿಯನ್ನು ಪರಿಣಾಮಕಾರಿಯಾಗಿ ಜಾರಿಗೆ ತಂದರು.

ಬಡಮಕ್ಕಳು ಒಪ್ಪೊತ್ತಿನ ಊಟಕ್ಕಾಗಿ ಶಾಲೆ ತೊರೆದು ಕೂಲಿಗೆ ಹೋಗುತ್ತಾರೆ ಎಂಬುದನ್ನು ಅರಿತಿದ್ದ ಅವರು ಮಧ್ಯಾಹ್ನದ ಬಿಸಿಯೂಟ ಯೋಜನೆ ಜಾರಿಗೊಳಿಸಿದರು. ಭಾರತಕ್ಕೆ ಪ್ರಥಮ ಬಾರಿಗೆ ಈ ಯೋಜನೆಯನ್ನು ಪರಿಚಯಿಸಿದ ಹೆಗ್ಗಳಿಕೆ ಕಾಮರಾಜ್ ಅವರದು. ಪಟಾಕಿ ತಯಾರಿಕೆಗೆ ಹೆಸರಾಗಿರುವ ಶಿವಕಾಶಿಯು ಕಾಮರಾಜ್ ಅವರ ತವರು ಜಿಲ್ಲೆ ವಿರುದು ನಗರದ ವ್ಯಾಪ್ತಿಗೆ ಒಳಪಟ್ಟಿದೆ. ಇಂತಹ ಶಿವಕಾಶಿಯ ಮಕ್ಕಳಲ್ಲಿ ಅನೇಕರು ಇಂದು ಶಾಲಾಶಿಕ್ಷಣದಿಂದ ವಂಚಿತರಾಗಿದ್ದಾರೆ, ದಿನಗೂಲಿ ಮಾಡುತ್ತಿದ್ದಾರೆ.

ಹಾಗೆ ನೋಡಿದರೆ, ಕೃಷಿ ಪ್ರಧಾನ ದೇಶವಾದ ಭಾರತದಲ್ಲಿ ಮಕ್ಕಳಿಂದ ಕೆಲಸ ಮಾಡಿಸಿಕೊಳ್ಳುವುದು ಸರ್ವೇಸಾಮಾನ್ಯ. ಆದರೆ ನಾಲ್ಕೈದು ವರ್ಷದ ಮಕ್ಕಳು ಅಪಾಯಕಾರಿ ರಾಸಾಯನಿಕಗಳನ್ನು ಹೊರಸೂಸುವ ಫ್ಯಾಕ್ಟರಿಗಳಲ್ಲಿ ದುಡಿಯುವುದು, ಆಟ-ಪಾಠಗಳಿಲ್ಲದೇ ದಿನದ ಹತ್ತು-ಹದಿನೈದು ಗಂಟೆಗಳನ್ನು ದುಡಿಮೆಯಲ್ಲಿ ಕಳೆಯುವುದು ನಿಜವಾಗಿಯೂ ಆಘಾತಕಾರಿ ಸಂಗತಿ. ಶಿವಕಾಶಿಯಲ್ಲಿ ಈ ಪರಿಪಾಟವು ಹಲವು ದಶಕಗಳಿಂದಲೂ ಮುಂದುವರಿದುಕೊಂಡು ಬಂದಿದೆ.

ಅರವತ್ತರ ದಶಕದಲ್ಲಿ ಶಿವಕಾಶಿ ತೀವ್ರವಾದ ಕ್ಷಾಮದಿಂದ ತತ್ತರಿಸಿತು. ಜನ ನಿರುದ್ಯೋಗಿಗಳಾದರು, ರೈತಾಪಿ ವರ್ಗ ಗುಳೆ ಹೋಗಲಾರಂಭಿಸಿತು. ಆಗ ಉದ್ಯಮಶೀಲ ಪ್ರವೃತ್ತಿಯುಳ್ಳ ಒಂದಿಷ್ಟು ಯುವಕರು ಅಲ್ಲಿ ಪಟಾಕಿ ಉದ್ಯಮವನ್ನು ಪ್ರಾರಂಭಿಸಿದರು. ಎಷ್ಟಾದರೂ ಪಟಾಕಿ ತಯಾರಿಕೆಗೆ ತೇವಾಂಶಭರಿತ ಹವಾಮಾನಕ್ಕಿಂತ ಶಿವಕಾಶಿಯಂತಹ ಬರಪೀಡಿತವಾದ ಬಿಸಿಲಿನ ವಾತಾವರಣವೇ ಸೂಕ್ತ. ಅಂದು ಅಲ್ಲಿ ಪ್ರಾರಂಭವಾದ ಪಟಾಕಿ ಉದ್ಯಮ ಇಂದಿನವರೆಗೂ ಯಶಸ್ವಿಯಾಗಿ ಬೆಳೆಯುತ್ತಾ ಬಂದಿದೆ.

ಅಂದು ಶಿವಕಾಶಿಯನ್ನು ಆವರಿಸಿದ ಕ್ಷಾಮವು ಉದ್ಯಮಿಗಳು ಮತ್ತು ರಾಜಕಾರಣಿಗಳಿಗೆ ಸುಗ್ಗಿಯಾಗಿ ಪರಿಣಮಿಸಿತು. ಇಂದು ಶಿವಕಾಶಿಯು ಪಟಾಕಿ ಉದ್ಯಮದ ಕಾಶಿ ಎನಿಸಿದೆ. ದೇಶದ ಶೇ 90ರಷ್ಟು ಪಟಾಕಿಗಳು ಮತ್ತು ಶೇ 80ರಷ್ಟು ಬೆಂಕಿಪೊಟ್ಟಣಗಳು ಶಿವಕಾಶಿಯಲ್ಲಿ ತಯಾರಾಗುತ್ತವೆ. ಅಲ್ಲಿ 2.6 ಲಕ್ಷ ಮಂದಿ ಪಟಾಕಿ ಕಾರ್ಖಾನೆಗಳಲ್ಲಿ ದಿನಗೂಲಿಗಳಾಗಿ ದುಡಿಯುತ್ತಿದ್ದಾರೆ ಎಂಬ ವರದಿಗಳಿವೆ. ದಿನಗೂಲಿಗಳ ಪೈಕಿ ಶೇ 50ಕ್ಕೂ ಹೆಚ್ಚು ಪಾಲು ಬಾಲಕಾರ್ಮಿಕರದ್ದು. ಇವರಲ್ಲಿ ಶೇ 90ರಷ್ಟು ಮಂದಿ ಹೆಣ್ಣುಮಕ್ಕಳಾಗಿದ್ದು, ಹೆಚ್ಚಿನ ಬಾಲಕಾರ್ಮಿಕರು ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದಾರೆ.

ಕೇಂದ್ರ ಸರ್ಕಾರವು 1986ರಲ್ಲೇ ಬಾಲಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆಯನ್ನು ಜಾರಿಗೆ ತಂದಿದೆ. ಹಾಗಿದ್ದೂ ಈ ಊರಿನಲ್ಲಿ ಈ ಅನಿಷ್ಟ ಪದ್ಧತಿ ಇಂದಿಗೂ ರಾಜಾರೋಷವಾಗಿ ಮುಂದುವರಿದಿದೆ. ಶಿವಕಾಶಿಯಂತಹ ಸಣ್ಣ ಪಟ್ಟಣದಲ್ಲಿ ವಾರ್ಷಿಕ ವಹಿವಾಟು ಸಾವಿರಾರು ಕೋಟಿ ತಲುಪಿರುವಾಗ, ಉದ್ಯಮಿಗಳು ಮತ್ತು ರಾಜಕಾರಣಿಗಳ ಮನೆಬಾಗಿಲಿಗೆ ನಿರಂತರವಾಗಿ ಹಣದ ಹೊಳೆ ಹರಿದುಬರುತ್ತಿರುವಾಗ, ಕಡತದೊಳಗಿರುವ ಕಾಯ್ದೆಯನ್ನು ಉಲ್ಲಂಘಿಸುವುದು, ಉಲ್ಲಂಘಿಸಿಯೂ ನುಣುಚಿಕೊಳ್ಳುವುದು ಕಷ್ಟದ ಕೆಲಸವೇ? ದಲ್ಲಾಳಿಗಳು ಎಗ್ಗಿಲ್ಲದೇ ಮಕ್ಕಳ ಕೈಲಿ 10ರಿಂದ 15 ಗಂಟೆಗಳ ಕಾಲ ದುಡಿಸಿಕೊಳ್ಳುತ್ತಿದ್ದಾರೆ. ಕಚ್ಚಾ ಸಾಮಗ್ರಿಗಳನ್ನು ಕೊಟ್ಟು, ಮನೆಯಿಂದಲೇ ಕೆಲಸ ಮಾಡಿಸಿಕೊಂಡು ದಿನಗೂಲಿಯ ಹೆಸರಲ್ಲಿ ಪುಡಿಗಾಸನ್ನು ನೀಡುತ್ತಿದ್ದಾರೆ ಎಂಬ ಗಂಭೀರ ಆರೋಪವಿದೆ.

ಪಟಾಕಿ ಉದ್ಯಮದಿಂದಾಗಿ ಶಿವಕಾಶಿಯಲ್ಲಿ ಶೇ 100ರಷ್ಟು ಉದ್ಯೋಗ ಸೃಷ್ಟಿಯಾಗಿದೆ, ಈ ಉದ್ಯಮ ಇರದೇ ಹೋಗಿದ್ದರೆ, ಕೃಷಿ ಚಟುವಟಿಕೆ ಇಲ್ಲದ ಕಾರಣ ಇಡೀ ಊರು ಹಸಿವಿನಿಂದ ಸಾಯಬೇಕಾಗುತ್ತಿತ್ತು ಎಂಬುದು ಅಲ್ಲಿನ ಕೆಲವರ ಸಮರ್ಥನೆ. ಆದರೆ, ಇವರಾರೂ ಜನಪರವಾಗಿ ಯೋಚಿಸುವವರಲ್ಲ. ಹಾಗೆ ಯೋಚಿಸುವವರಾಗಿದ್ದರೆ ಬಾಲಕಾರ್ಮಿಕ ಪದ್ಧತಿಯನ್ನು ಹೀಗೆ ಅನುಮೋದಿಸುತ್ತಿರಲಿಲ್ಲ.

'ಮಕ್ಕಳನ್ನು ಉದ್ಯೋಗಕ್ಕೆ ಸೇರಿಸಿಕೊಳ್ಳುವುದು, ಅವರು ಬೆಳೆದು ದೊಡ್ಡವರಾದ ಕೂಡಲೇ ಅವರನ್ನು ಕೆಲಸದಿಂದ ತೆಗೆದುಹಾಕುವುದು ಇಲ್ಲಿ ಮಾಮೂಲು. ಏಕೆಂದರೆ, ದೊಡ್ಡವರಾದ ಮೇಲೆ ಅವರು ಕಾರ್ಮಿಕ ಕಾನೂನಿನ ಜಾರಿಗೆ ಒತ್ತಾಯಿಸುತ್ತಾರೆ, ನ್ಯಾಯಯುತ ಹಕ್ಕು, ಸೌಲಭ್ಯಗಳಿಗಾಗಿ ಆಗ್ರಹಿಸುತ್ತಾರೆ. ಶಿವಕಾಶಿಯಲ್ಲಿ ಪ್ರೌಢವಯಸ್ಕರಾದ ಪುರುಷರ್ಯಾರೂ ಪಟಾಕಿ ಫ್ಯಾಕ್ಟರಿಯಲ್ಲಿ ಕೆಲಸ ಮಾಡುವುದಿಲ್ಲ. ಕ್ವಾರಿ ಕೆಲಸ ಮಾಡುತ್ತಾರೆ, ಇಲ್ಲವೇ ಗುಳೆ ಹೋಗುತ್ತಾರೆ' ಎಂದು ಬಾಲಕಾರ್ಮಿಕ ಪದ್ಧತಿಯ ವಿರುದ್ಧ ಚಳವಳಿ ನಡೆಸುತ್ತಿರುವ ಪ್ರಭಾಕರನ್ ಹೇಳುತ್ತಾರೆ. ತಮಿಳುನಾಡಿನ ಇತರ ಗ್ರಾಮಗಳ ಮಕ್ಕಳ ಸ್ಥಿತಿಗತಿಗೂ ನಿರ್ದಿಷ್ಟವಾಗಿ ಶಿವಕಾಶಿಯ ಮಕ್ಕಳ ಸ್ಥಿತಿಗತಿಗೂ ಇರುವ ವ್ಯತ್ಯಾಸವನ್ನು ಗಮನಿಸಿದರೆ ವಸ್ತುಸ್ಥಿತಿ ತಿಳಿಯುತ್ತದೆ. ಶಿವಕಾಶಿಯಲ್ಲಿ ಮಕ್ಕಳು ಆಟವಾಡುವುದು ಕಾಣಸಿಗುವುದಿಲ್ಲ. ಮುಂಜಾನೆ ತಮ್ಮ ಮಕ್ಕಳನ್ನು ಕೂಲಿಗೆ ಕರೆದೊಯ್ಯುವ ಅಲ್ಲಿಯ ತಾಯ್ತಂದೆಯರು ಹಾಗೆ ಆಟವಾಡಲು ಆಸ್ಪದವನ್ನೇ ನೀಡುವುದಿಲ್ಲ ಎನ್ನುತ್ತಾರೆ.

ಹಿಂದೆಲ್ಲ ಹಿರಿಯ ತಲೆಮಾರಿನವರು ತಮ್ಮ ವಿವೇಕ, ಕೌಶಲ ಮತ್ತು ಜೀವನಾನುಭವಗಳನ್ನು ಕಿರಿಯ ತಲೆಮಾರಿನವರಿಗೆ ಧಾರೆ ಎರೆಯುತ್ತಿದ್ದರು. ಆದರೆ ಒಂದು ಪ್ರದೇಶದ ಸಾವಿರಾರು ಮಂದಿ ಹೀಗೆ ಹಲವು ದಶಕಗಳವರೆಗೆ ಒಂದೇ ನಮೂನೆಯ ಕೆಲಸ ಮಾಡುತ್ತಿದ್ದರೆ ಅವರ ಅಂತರಂಗ ವಿಕಾಸವಾಗುವುದು ಹೇಗೆ? ಅವರ ಮನಸ್ಸುಗಳು ಅರಳುವ ಬಗೆ ಹೇಗೆ? ಭೂತ, ವರ್ತಮಾನ, ಭವಿಷ್ಯದ ವ್ಯತ್ಯಾಸಗಳೇ ಅಳಿಸಿಹೋದ ಏಕರೂಪಿ ಯಂತ್ರಮಯ ಜೀವನಪದ್ಧತಿಯಲ್ಲಿ ಯಾರು ಯಾರಿಗೆ ಏನನ್ನು ಧಾರೆ ಎರೆಯಬಲ್ಲರು?

ನಿಯಮಗಳನ್ನು ಗಾಳಿಗೆ ತೂರಿ ಉದ್ಯಮ– ವ್ಯಾಪಾರ ನಡೆಸುವಲ್ಲಿ ಭ್ರಷ್ಟತನ, ಅಕ್ರಮ ವಹಿವಾಟುಗಳು ಇದ್ದೇ ಇರುತ್ತವೆ. ಇದಕ್ಕೆ ಶಿವಕಾಶಿಯೂ ಹೊರತಲ್ಲ. ಅನಧಿಕೃತ ಗೋದಾಮುಗಳ ನಿರ್ಮಾಣ, ಮಿತಿಮೀರಿ ಸಿಡಿಮದ್ದುಗಳ ದಾಸ್ತಾನು, ಅವೈಜ್ಞಾನಿಕ ರೀತಿಯಲ್ಲಿ ಪಟಾಕಿ ತಯಾರಿಕಾ ಘಟಕಗಳ ನಿರ್ಮಾಣದಂಥ ಕಾರಣಗಳಿಂದ ಅಲ್ಲಿ ಪದೇಪದೇ ಅಗ್ನಿ ದುರಂತಗಳು ಸಂಭವಿಸುತ್ತಿವೆ. ಅಗ್ನಿ ಅವಘಡಗಳಿಗೆ 1990ರಲ್ಲಿ 90 ಮಂದಿ, 2009ರಲ್ಲಿ 40 ಮಂದಿ, 2011ರಲ್ಲಿ 12 ಮಂದಿ, 2012ರಲ್ಲಿ 80 ಮಂದಿ ಬಲಿಯಾಗಿದ್ದಾರೆ. ಮೊನ್ನೆ ಮಂಗಳವಾರ ಸಹ ಅಗ್ನಿ ದುರಂತದಲ್ಲಿ 13 ಮಂದಿ ಸುಟ್ಟು ಕರಕಲಾಗಿದ್ದಾರೆ.

ಮಕ್ಕಳು ಗಂಟೆಗಟ್ಟಲೆ ಕೂತಲ್ಲೇ ಕೂತು ಕೆಲಸ ಮಾಡುವುದರಿಂದ ಬೆನ್ನುನೋವು, ಕುತ್ತಿಗೆ ನೋವು, ಸುಟ್ಟಗಾಯ, ಕ್ಷಯ, ಅಪೌಷ್ಟಿಕತೆ, ಜೀರ್ಣಾಂಗ ಸಮಸ್ಯೆಗಳು, ಚರ್ಮರೋಗ, ಉಸಿರಾಟದ ತೊಂದರೆಯಂತಹ ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ (ಎಕ್ಸ್‌ಪ್ಲಾಯ್ಟೆಡ್ ಚೈಲ್ಡ್, ಲೇ: ಟಿ.ಎನ್. ಕಿಚ್ಲು, ಎಂ.ಡಿ.ಪಬ್ಲಿಕೇಷನ್, ನವದೆಹಲಿ).

ಮಕ್ಕಳ ಬಾಲ್ಯವನ್ನು ನುಂಗಿ ನೊಣೆಯುತ್ತಿರುವ ಇಂತಹ ಅಮಾನವೀಯ ಕಸುಬನ್ನು ಪ್ರವರ್ಧಿಸುತ್ತಿರುವ ಶಿವಕಾಶಿಯನ್ನು, ಅದು ಸದಾ ಕ್ರಿಯಾಶೀಲವಾಗಿರುತ್ತದೆ ಎಂಬ ಕಾರಣಕ್ಕೆ, 'ಕುಟ್ಟಿ ಜಪಾನ್' (ಮಿನಿ ಜಪಾನ್) ಎಂದು ಬಣ್ಣಿಸಲಾಗುತ್ತದೆ. ವಿಜ್ಞಾನ, ತಂತ್ರಜ್ಞಾನ, ಶಿಕ್ಷಣ, ಸಾಮಾಜಿಕ ಆರೋಗ್ಯ, ಸುಭಿಕ್ಷ ಜೀವನಪದ್ಧತಿಗಳಿಗೆ ಹೆಸರುವಾಸಿಯಾದ ಜಪಾನ್‌ನಂತಹ ಶ್ರೀಮಂತ ದೇಶವನ್ನು ಹಸುಗೂಸುಗಳ ಪಾಲಿನ ನರಕವಾಗಿರುವ ಶಿವಕಾಶಿಗೆ ಹೋಲಿಸುವುದು ಕುಚೋದ್ಯವಲ್ಲವೇ?

ನಾವು ನಮ್ಮ ರಾಜಕಾರಣಿಗಳನ್ನು ಮೆರೆಸುವಾಗ, ಚುನಾವಣಾ ಫಲಿತಾಂಶ ಬಂದಾಗ, ಕ್ರಿಕೆಟ್ ಮ್ಯಾಚ್‌ನಲ್ಲಿ ಗೆದ್ದಾಗ, ಇಷ್ಟದೈವದ ಮೆರವಣಿಗೆ ಮಾಡುವಾಗ, ದೀಪಾವಳಿ ಹಬ್ಬವನ್ನು ಆಚರಿಸುವಾಗ ಪಟಾಕಿ, ಬಾಣ ಬಿರುಸುಗಳನ್ನು ಸಿಡಿಸಿ ಸಂಭ್ರಮಿಸುತ್ತೇವೆ. ಹಾಗೆ ಸಂಭ್ರಮಿಸುವ ಮುನ್ನ ಪಟಾಕಿ ಉತ್ಪಾದನೆಯ ಹಿಂದಿರುವ ಈ ರೌರವ ವಾಸ್ತವವನ್ನೊಮ್ಮೆ ಅವಲೋಕಿಸೋಣ.

ಲೇಖಕ: ಸಹಪ್ರಾಧ್ಯಾಪಕ
ಆದಿಚುಂಚನಗಿರಿ ವಿಶ್ವವಿದ್ಯಾಲಯ

ಚುರುಮುರಿ

ಮೈತ್ರಿ ಆಟ!

• ಗುರು ಪಿ.ಎಸ್.

'ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯಾ ತಂದೆ, ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯಾ ತಂದೆ, ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯಾ ತಂದೆ...'

ಬಸವಣ್ಣನವರ ವಚನವನ್ನು ಭಾವತುಂಬಿ ಹೇಳುತ್ತಿದ್ದರು ಸಾಹೇಬ್ರು.

'ಯಾವುದೋ ನೋವಲ್ಲಿ ವಚನ ಹೇಳ್ತಿರೋ ಹಾಗಿದೆಯಲ್ಲ ಸರ್' ಕಿಚಾಯಿಸಿದ ಪಿ.ಎ. ವಿಜಿ.

'ನಾನ್ಯಾರು? ಪಕ್ಷದ ರಾಜ್ಯ ಘಟಕದ ಅಧ್ಯಕ್ಷ. ನಾನು ವಿರೋಧಿಸಿಕೊಂಡು ಬಂದ ಪಕ್ಷದ ಜೊತೆಗೇ ಮೈತ್ರಿ ಮಾಡ್ಕೊಂಡು ಬರೋಣ ಬನ್ನಿ ಅಂತ ದೆಹಲಿಗೆ ಕರೆದರೆ ಹೇಗೆ ಹೋಗಲಿ? ಅದಕ್ಕೇ ನನ್ನನ್ನ ಹೆಳವನ ಮಾಡಿಬಿಡು ಅಂತ ದೇವರಲ್ಲಿ ಕೇಳಿಕೊಳ್ತಿದೀನಿ'.

'ನೀವಿಲ್ಲದೆ ಮೈತ್ರಿ ಆಗುತ್ತಾ ಸರ್?'

'ಆಗಲ್ಲ, ಆಗಬಾರದು, ಆದರೂ ಆಗಿದೆ. ಅದಕ್ಕೇ ಅದನ್ನ ನೋಡೋಕಾಗದೆ ಕುರುಡನನ್ನಾಗಿ ಮಾಡು ಅಂತ ಪ್ರಾರ್ಥಿಸ್ತಿದೀನಿ'.

'ಯಾವ ಅಧ್ಯಕ್ಷರೀ, ಅವರ ಮಾತಿಗೆ ಯಾಕ್ರೀ ಮಹತ್ವ ಕೊಡ್ತೀರಿ ಅಂತ ನಿಮ್ಮ ನಾಯಕರೇ ಹೇಳ್ತಿದಾರಲ್ಲ ಸರ್'.

'ಅದಕ್ಕೇ ಕಿವುಡನಾಗ್ತಿದೀನಿ'.

'ಆದರೂ ಸರ್, ನಿಮ್ಮ ಪಕ್ಷಕ್ಕೆ ನೀವೇ ಒರಿಜಿನಲ್ ಅಧ್ಯಕ್ಷರಲ್ವ ಸರ್?'

'ಹೌದೌದು, ನಾನೇ ಒರಿಜಿನಲ್'.

'ನಿಮ್ ಒರಿಜಿನಲ್ ಪಾರ್ಟಿ ಮುಂದಿನ ಎಲೆಕ್ಷನ್‌ನಲ್ಲಿ ಯಾರ ವಿರುದ್ಧ ಹೋರಾಡುತ್ತೆ ಸರ್?'

'ಇವರ ವಿರುದ್ಧ'.

'ನಿಮ್ಮ ಪಾರ್ಟಿಯ ದೊಡ್ಡ ನಾಯಕರು ಇವರೊಂದಿಗೆ ಮೈತ್ರಿ ಮಾಡ್ಕೊಂಡಿದಾರಲ್ಲ'.

'ಹೌದಲ್ವ, ಹಾಗಾದರೆ ಅವರ ವಿರುದ್ಧ'.

'ಅವರ ಒಕ್ಕೂಟಕ್ಕೆ ನನ್ನ ಬೆಂಬಲ ಅಂತ ನೀವೇ ಹೇಳಿದೀರಲ್ಲ'.

'ಥೋ ಹೋಗಪ್ಪ. ಒಲಿಂಪಿಕ್ಸ್‌ನಲ್ಲಿ ಫೈಟ್ ಮಾಡ್ತೀನಿ ಬಿಡು'.

'ಯಾವ ಆಟ?'

'ಮೈತ್ರಿ ಆಟ. ಮುಂದಿನ ಒಲಿಂಪಿಕ್ಸ್‌ಗೆ ಹೊಸದಾಗಿ ಸೇರಿಸಿದ್ದಾರೆ. ಅದರಲ್ಲಿ ನಮ್ ಪಾರ್ಟಿಗೆ ಮೆಡಲ್ ಗ್ಯಾರಂಟಿ'.

'ಓಹ್ ಸೂಪರ್. ಟ್ಯಾಗ್‌ಲೈನ್ ಏನು ಸರ್?'

'ಆಡೋಣ ಬಾ, ಕೆಡಿಸೋಣ ಬಾ'.

ಸಂಗತ

ಕಲಿಕೆ: ಗುಂಪು ತಾರತಮ್ಯ ಏಕೆ?

ವಿದ್ಯಾರ್ಥಿಗಳ ಕಲಿಕೆಯ ಮಟ್ಟಕ್ಕೆ ಅನುಗುಣವಾಗಿ ಗುಂಪುಗಳನ್ನು ಮಾಡುವ ವಿಷಯದಲ್ಲಿ ಶಿಕ್ಷಕರು ಒಂದಷ್ಟು ಸೂಕ್ಷ್ಮ ಸಂವೇದನೆಯನ್ನು ತೋರಬೇಕಾಗುತ್ತದೆ

• ಎಚ್.ಬಿ. ಚಂದ್ರಶೇಖರ್

ಕೆಲ ದಿನಗಳ ಹಿಂದೆ ಪ್ರೌಢಶಾಲೆಯ ಭೇಟಿಯಲ್ಲಿ, ಹತ್ತನೇ ತರಗತಿಯ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸುತ್ತಿದ್ದಾಗ ತಿಳಿದುಬಂದ ವಿಷಯವೊಂದು ಚಿಂತನೆಗೆ ಹಚ್ಚುವಂತಿತ್ತು. ತರಗತಿಯಲ್ಲಿ ಬುದ್ಧಿವಂತ ವಿದ್ಯಾರ್ಥಿಗಳನ್ನು 'ಎ' ಗುಂಪು, ಅವರಿಗಿಂತ ಕಡಿಮೆ ಬುದ್ಧಿವಂತರನ್ನು 'ಬಿ' ಗುಂಪು ಹಾಗೂ ಅತಿಕಡಿಮೆ ಬುದ್ಧಿವಂತರನ್ನು 'ಸಿ' ಗುಂಪು ಎಂದು ವರ್ಗೀಕರಿಸಿ, ಅವರ ಕಲಿಕಾ ಮಟ್ಟ ಸುಧಾರಣೆಗೆ ಒಂದಷ್ಟು ಕ್ರಮಗಳನ್ನು ತೆಗೆದುಕೊಳ್ಳಲಾಗಿತ್ತು.

ಶಿಕ್ಷಕರೊಂದಿಗೆ ಮಾತನಾಡಿದಾಗ, 'ನಾವು ವರ್ಗೀಕರಣ ಮಾಡಿರುವುದು ಅವರಿಗೆ ತಿಳಿಯದು ಹಾಗೂ ಕಡಿಮೆ ಬುದ್ಧಿವಂತ ವಿದ್ಯಾರ್ಥಿಗಳನ್ನು 'ಸಿ' ಗುಂಪು ಎಂದು ವರ್ಗೀಕರಿಸುವುದರಿಂದ ಅವರಿಗೇನೂ ಬೇಸರವಿಲ್ಲ' ಎಂದರು. ಶಿಕ್ಷಕರನ್ನು ತರಗತಿಯಾಚೆ ಕಳುಹಿಸಿ ವಿದ್ಯಾರ್ಥಿಗಳೊಂದಿಗೆ ಖಾಸಗಿಯಾಗಿ ಮಾತನಾಡಿದಾಗ, ತಾವು ಯಾವ ಗುಂಪು ಎಂಬ ಬಗ್ಗೆ ತಮಗೆ ಮಾಹಿತಿ ಇರುವುದಾಗಿ ಅವರು ತಿಳಿಸಿದರು. ತಾವು ಓದಿನಲ್ಲಿ ಹಿಂದಿರುವ ಅಂಶದ ಆಧಾರದ ಮೇಲೆ ಪ್ರತ್ಯೇಕ ಗುಂಪು ಮಾಡಿರುವುದು ಎಲ್ಲರಿಗೂ ತಿಳಿದಿರುವುದರಿಂದ, ತಮ್ಮನ್ನು ಬುದ್ಧಿವಂತ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ನೋಡುವ ರೀತಿ ಬೇಸರ, ನೋವು ತರಿಸುತ್ತಿದೆ ಎಂದು 'ಸಿ' ಗುಂಪಿನವರು ಹೇಳಿದರು. ಈ ರೀತಿಯ ವರ್ಗೀಕರಣದಿಂದ ಆಗುವ ಅಪಾಯದ ಬಗ್ಗೆ ಶಿಕ್ಷಕರ ಸಭೆಯಲ್ಲಿ ಮನವರಿಕೆ ಮಾಡಿಕೊಡಲು ಯತ್ನಿಸಲಾಯಿತು.

ಶಿಕ್ಷಕರನ್ನು ಸಹ ಬೋಧನಾ ಗುಣಮಟ್ಟದ ಆಧಾರದ ಮೇಲೆ 'ಎ', 'ಬಿ', 'ಸಿ' ಎಂದು ವರ್ಗೀಕರಣ ಮಾಡಬಹುದಲ್ಲವೇ? ಅದಕ್ಕೆ ತಮ್ಮ ಒಪ್ಪಿಗೆ ಇದೆಯೇ ಎಂದು ಶಿಕ್ಷಕರನ್ನು ಕೇಳಿದಾಗ, ಹಾಗೆ ಮಾಡಿದರೆ ತಮಗೆ ಬೇಸರವಾಗುತ್ತದೆ ಎಂಬ ಉತ್ತರ ಎಲ್ಲರಿಂದಲೂ ಬಂದಿತು. ಒಂದಷ್ಟು ಚಿಂತನೆಯ ನಂತರ ಶಿಕ್ಷಕರು ಈ ಬಗೆಯ ವರ್ಗೀಕರಣದಿಂದ ಮಕ್ಕಳಿಗೂ ಬೇಸರವಾಗುತ್ತದೆ ಎಂಬುದನ್ನು ಒಪ್ಪಿಕೊಂಡರು.

ಈ ಕುರಿತು ಇನ್ನಷ್ಟು ವ್ಯಾಪಕವಾಗಿ ಪರಿಶೀಲಿಸಿದಾಗ, ರಾಜ್ಯದ ಹೆಚ್ಚಿನ ಪ್ರೌಢಶಾಲೆಗಳಲ್ಲಿ ಅಂಕಗಳ ಆಧಾರದ ಮೇಲೆ ಹತ್ತನೇ ತರಗತಿಯ ವಿದ್ಯಾರ್ಥಿಗಳನ್ನು 'ಎ', 'ಬಿ', 'ಸಿ' ಎಂದು ವರ್ಗೀಕರಣ ಮಾಡುತ್ತಿರುವುದು ತಿಳಿದುಬಂದಿತು. ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಆಧರಿಸಿ ಗುಂಪುಗಳನ್ನು ಮಾಡಿ ಸುಧಾರಣೆಗೆ ಕ್ರಮ ಕೈಗೊಳ್ಳುವ ವಿಧಾನ ಕೆಲವು ದೇಶಗಳ ಶಾಲೆಗಳಲ್ಲಿ ಜಾರಿಯಲ್ಲಿದೆ. ಇನ್ನು ಕೆಲವು ಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳಲ್ಲಿ, ನಿಧಾನ ಕಲಿಕೆಯವರನ್ನೆಲ್ಲಾ ಸೇರಿಸಿ ಪ್ರತ್ಯೇಕ ತರಗತಿಗಳನ್ನಾಗಿಸಿ ಕಲಿಸುತ್ತಿದ್ದಾರೆ. ತಮ್ಮನ್ನು 'ಸಿ' ಗುಂಪಿನಲ್ಲಿಟ್ಟು ಕಲಿಸುತ್ತಿದ್ದ ಕಾರಣ ತಮ್ಮ ಬಗ್ಗೆ ತೋರುತ್ತಿದ್ದ ತಾತ್ಸಾರ, ತರತಮದಿಂದ ತಮಗೆ ಉಂಟಾಗುತ್ತಿದ್ದ ನೋವನ್ನು ಅನೇಕರು ನನ್ನ ಬಳಿ ಹಂಚಿಕೊಂಡಿದ್ದಾರೆ.

ಸಾಮರ್ಥ್ಯ ಆಧಾರಿತ ಗುಂಪುಗಳನ್ನು ಮಾಡಿ ಕಲಿಸುವ ಬಗ್ಗೆ ತಜ್ಞರಲ್ಲಿಯೂ ಪರ-ವಿರೋಧದ ಅಭಿಪ್ರಾಯಗಳಿವೆ. ವಿಷಯವನ್ನು ಗ್ರಹಿಸಿ, ಕಲಿತು, ನೆನಪಿನಲ್ಲಿ ಇಟ್ಟುಕೊಳ್ಳುವ ಸಾಮರ್ಥ್ಯ ನಿಧಾನ ಕಲಿಕೆಯ ವಿದ್ಯಾರ್ಥಿಗಳಲ್ಲಿ ಕಡಿಮೆ ಇರುವುದರಿಂದ, ಅವರಿಗೆ ವಿಷಯಗಳನ್ನು ನಿಧಾನವಾಗಿ ಪುನರಾವರ್ತಿಸಿ ತಿಳಿಸಿ ಕಲಿಸುವ ಅಗತ್ಯ ಇರುತ್ತದೆ; ಹೀಗಾಗಿ, ಅವರನ್ನು ಪ್ರತ್ಯೇಕ ಗುಂಪು ಅಥವಾ ತರಗತಿ ಮಾಡಿ ಕಲಿಸುವುದು ಪರಿಣಾಮಕಾರಿ ಎಂಬುದು ಪರ ಇರುವವರ ವಾದವಾಗಿದೆ. ಕಡಿಮೆ ಸಾಮರ್ಥ್ಯದ ವಿದ್ಯಾರ್ಥಿಗಳನ್ನು ಪ್ರತ್ಯೇಕಿಸಿ ಕಲಿಸುವುದರಿಂದ ಅವರಿಗೆ ತಾರತಮ್ಯ ಎಸಗಿದಂತೆ ಆಗುವುದಲ್ಲದೆ ಮಾನಸಿಕ ಆಘಾತ, ನೋವು ಉಂಟಾಗುತ್ತದೆ, ಈ ಕಾರಣದಿಂದ ಈ ರೀತಿ ಪ್ರತ್ಯೇಕ ಗುಂಪು ಮಾಡುವುದು ಸಲ್ಲದು ಎಂಬುದು ಈ ವಿಷಯದ ವಿರೋಧ ಇರುವವರ ವಾದವಾಗಿದೆ.

ನಮ್ಮ ಬಗ್ಗೆ ಇತರರು ಹೊಂದಿರಬಹುದಾದ ನಂಬಿಕೆ ಅಥವಾ ನಿರೀಕ್ಷೆಗಳು ನಮ್ಮ ವರ್ತನೆಗಳನ್ನು ನಿಧಾನವಾಗಿ ಪ್ರಭಾವಿಸುತ್ತಾ ಹೋಗಿ, ಅಂತಹ ನಂಬಿಕೆಗಳನ್ನು ಕೆಲ ಕಾಲದ ನಂತರ ನಾವು ನಿಜವಾಗಿಸುವ ಸಾಧ್ಯತೆ ಇದೆ. ಇದನ್ನು ಸೆಲ್ಫ್ ಫುಲ್‌ಫಿಲ್ಲಿಂಗ್ ಪ್ರೊಫೆಸಿ ಎನ್ನಲಾಗುತ್ತದೆ. ಈ ಕಾರಣದಿಂದ ಪೋಷಕರು ತಮ್ಮ ಮಕ್ಕಳ ಬಗ್ಗೆ, ಶಿಕ್ಷಕರು ತಮ್ಮ ವಿದ್ಯಾರ್ಥಿಗಳ ಬಗ್ಗೆ, ಮಾಲೀಕರು ಅವರ ಉದ್ಯೋಗಿಗಳ ಬಗ್ಗೆ ಹೊಂದುವ ನಂಬಿಕೆ ಅಥವಾ ನಿರೀಕ್ಷೆಗಳು ಉತ್ತಮವಾಗಿ ಇರುವಂತೆ ನೋಡಿಕೊಳ್ಳುವುದು ಪ್ರಮುಖವಾದ ಅಂಶ.

1968ರಲ್ಲಿ ರೊಸೆಂಥಲ್ ಮತ್ತು ಜಾಕೊಬ್‌ಸೆನ್ ಎಂಬ ತಜ್ಞರು, ಅಮೆರಿಕದ ಪ್ರಾಥಮಿಕ ಶಾಲೆಯೊಂದರ ತರಗತಿಯ ವಿದ್ಯಾರ್ಥಿಗಳಿಗೆ ಬುದ್ಧಿಶಕ್ತಿ ಪರೀಕ್ಷೆ ಕೈಗೊಳ್ಳುತ್ತಾರೆ. ಕೆಲವು ನಿರ್ದಿಷ್ಟ ವಿದ್ಯಾರ್ಥಿಗಳನ್ನು ಹೆಸರಿಸಿ, ಈ ವಿದ್ಯಾರ್ಥಿಗಳು ಅತ್ಯುತ್ತಮ ಬುದ್ಧಿಶಕ್ತಿ ಉಳ್ಳವರೆಂದು ತಿಳಿಸುತ್ತಾರೆ. ಕೆಲ ತಿಂಗಳ ನಂತರ ಶಿಕ್ಷಕರು ಕೈಗೊಂಡ ಪರೀಕ್ಷೆಯಲ್ಲಿ, ಬುದ್ಧಿವಂತರು ಎನ್ನಲಾಗಿದ್ದ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿರುತ್ತಾರೆ. ಅವರಿಗೆ ಶಿಕ್ಷಕರು ಇತರ ವಿದ್ಯಾರ್ಥಿಗಳಿಗಿಂತಲೂ ವಿಶೇಷ ಗಮನ, ಆದ್ಯತೆ, ಅವಕಾಶ ನೀಡಿದ್ದರಿಂದ ಉತ್ತಮ ಸಾಧನೆ ಮಾಡಿರುತ್ತಾರೆ.

ವಿದ್ಯಾರ್ಥಿಗಳ ಕಲಿಕೆಯ ಮಟ್ಟಕ್ಕೆ ಅನುಗುಣವಾಗಿ ಗುಂಪುಗಳನ್ನು ಮಾಡಿ, ವಿಶೇಷ ಕ್ರಮಗಳನ್ನು ತೆಗೆದುಕೊಳ್ಳುವ ವಿಷಯದಲ್ಲಿ ಶಿಕ್ಷಕರು ಒಂದಷ್ಟು ಸೂಕ್ಷ್ಮ ಸಂವೇದನೆಯನ್ನು ತೋರುವ ಅಗತ್ಯ ಇರುತ್ತದೆ. ಯಾವುದೇ ವಿದ್ಯಾರ್ಥಿಯ ಮನಸ್ಸಿಗೆ ಗಾಸಿಯಾಗದಂತೆ, ಅವರಲ್ಲಿ ಕಲಿಯುವ ಆಸಕ್ತಿ, ಉತ್ಸಾಹ ಮೂಡುವಂತೆ ತಾಳ್ಮೆ ವಹಿಸಬೇಕಾಗುತ್ತದೆ. ಅವರು ಕಲಿತೇ ಕಲಿಯುತ್ತಾರೆ ಎಂಬ ವಿಶ್ವಾಸ, ನಂಬಿಕೆಯೊಂದಿಗೆ, ಅವರು ಕಲಿಯುವ ವೇಗಕ್ಕೆ ತಕ್ಕಂತೆ ಕಲಿಸುವ ವಿಧಾನವನ್ನು ಅನುಸರಿಸುವುದು ಉಪಯುಕ್ತವಾದುದಾಗಿದೆ.

ಲೇಖಕ: ಹಿರಿಯ ಉಪನ್ಯಾಸಕ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್), ಬೆಂಗಳೂರು

ವಾಚಕರ ವಾಣಿ

ತಂತ್ರಜ್ಞಾನದ ಫಲ ದಕ್ಕಲಿ

'ಬಾಂಗ್ಲಾದೇಶದ ಬಾಲಕಿಗೆ ಬೆಳಕಾದ ಮಣಿಪಾಲ ಆಸ್ಪತ್ರೆ ವೈದ್ಯರು' ಎಂಬ ವರದಿ (ಪ್ರ.ವಾ., ಅ. 18) ಓದಿ ಸಂತೋಷವಾಯಿತು. ಈ ರೀತಿಯ ಚಿಕಿತ್ಸೆ ಹಿಂದೆಯೇ ಇದ್ದಿದ್ದರೆ ನನ್ನ ಆಪ್ತ ಸ್ನೇಹಿತ ಸಲ್ಮಾನ್ ಅಕಾಲಮರಣಕ್ಕೆ ಈಡಾಗುತ್ತಿರಲಿಲ್ಲವೇನೊ. 30 ವರ್ಷಗಳ ಹಿಂದೆ ಆ ನನ್ನ ಸ್ನೇಹಿತನಿಗೆ ಇದ್ದಕ್ಕಿದ್ದ ಹಾಗೆ ಗೂನು ಬೆನ್ನಾಗ ತೊಡಗಿತು. ಮದುವೆ ಮಾಡಿಕೊಳ್ಳುವ ಸಂಭ್ರಮದಲ್ಲಿದ್ದ ಆತ, ಆ ಕಾರಣದಿಂದ ಹಿಂದೆ ಸರಿಯುವಂತಾಯಿತು. ಕೆಲವೇ ವರ್ಷಗಳಲ್ಲಿ ಅವನು ಸಾವಿಗೀಡಾದ. ಗೂನು ಬೆನ್ನಿನ ಚಿಕಿತ್ಸೆಗೆ ನೆರವಾಗುವ ಈಗಿನ ರೊಬೊಟಿಕ್‌ನಂತಹ ತಂತ್ರಜ್ಞಾನ ಆಗ ಇನ್ನೂ ಆವಿಷ್ಕಾರಗೊಂಡಿರಲಿಲ್ಲ.

ಮಕ್ಕಳ ಭವಿಷ್ಯಕ್ಕೆ ಗೂನು ಬೆನ್ನು ಒಂದು ಸಮಸ್ಯೆಯೇ ಸರಿ. ಅಂತಹ ಸಮಸ್ಯೆ ಎದುರಿಸುತ್ತಿರುವವರು ಸಾಧ್ಯವಾದಷ್ಟೂ ತ್ವರಿತವಾಗಿ ಚಿಕಿತ್ಸೆಗೆ ಒಳಪಡಲಿ. ಗೂನು ಒಂದು ಶಾಪವಲ್ಲ ಎಂಬುದನ್ನು ಅರಿಯಲಿ.

ಬಾಲಕೃಷ್ಣ ಎಂ.ಆರ್., ಬೆಂಗಳೂರು

'ಅಪಾರ್' ಜಾರಿಗೆ ಮುನ್ನ...

ದೇಶದಾದ್ಯಂತ ವಿದ್ಯಾರ್ಥಿಗಳಿಗೆ 'ಅಪಾರ್' ಐ.ಡಿ. ಎನ್ನುವ ಆಧಾರ್ ಮಾದರಿಯ ಗುರುತಿನ ಚೀಟಿಯನ್ನು ನೀಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಆದರೆ ಈ ಯೋಜನೆಯನ್ನು ಇನ್ನಷ್ಟು ಆಳವಾಗಿ ಪರಿಶೀಲಿಸಿ ಸೂಕ್ತ ಕ್ರಮದೊಂದಿಗೆ ಜಾರಿ ಮಾಡುವುದು ಒಳಿತು. ನಾನೊಬ್ಬ ಶಾಲಾ ಶಿಕ್ಷಕನಾಗಿ ಹೇಳುವುದೇನೆಂದರೆ, ಒಬ್ಬ ವಿದ್ಯಾರ್ಥಿಯ ಹೆಸರು ಶಾಲಾ ದಾಖಲಾತಿ, ಎಸ್‌ಟಿಎಸ್, ಆಧಾರ್ ಕಾರ್ಡ್, ಬ್ಯಾಂಕ್ ಪಾಸ್‌ಬುಕ್, ರೇಷನ್ ಕಾರ್ಡ್, ಶಾಲಾ ಐ.ಡಿ. ಕಾರ್ಡ್, ಬಸ್‌ಪಾಸ್‌ನಂತಹ ಹಲವು ಕಡೆ ಇರುವುದರಿಂದ, ಎಲ್ಲ ಕಡೆಯೂ ಒಂದೇ ರೀತಿಯಾಗಿ ಇರಬೇಕಾಗುತ್ತದೆ. ಅಲ್ಪಸ್ವಲ್ಪ ತಪ್ಪಾದರೂ ಸ್ಕಾಲರ್‌ಶಿಪ್‌ನಲ್ಲಿ ಎಂಟ್ರಿ ಆಗುವುದಿಲ್ಲ.

ಆಧಾರ್ ಕಾರ್ಡ್, ರೇಷನ್ ಕಾರ್ಡ್ ತಿದ್ದುಪಡಿಯಂತಹ ಹೊರೆಯಿಂದ ಪಾಲಕರು ಈಗಾಗಲೇ ನಲುಗಿದ್ದಾರೆ. ಇಡೀ ದಿನ ತಮ್ಮ ಕೂಲಿನಾಲಿ ಬಿಟ್ಟು ಸರದಿ ಸಾಲಿನಲ್ಲಿ ಕಾಯ್ದು ಬೇಸತ್ತು ಹೋಗಿದ್ದಾರೆ. ಹೀಗಾಗಿ, ಅಂತಹವರಿಗೆ ಹೊರೆಯೂ ತೊಂದರೆಯೂ ಆಗದಂತೆ ಅಪಾರ್ ಅನ್ನು ಸರ್ಕಾರ ಎಚ್ಚರಿಕೆಯಿಂದ ಜಾರಿ ಮಾಡಬೇಕು.

ಶಿವರಾಜ ಕಾಂಬಳೆ, ಮೂಡಲಗಿ

ಸತ್ಯಹರಿಶ್ಚಂದ್ರ ಸಿಗಬಹುದೇ...?!

ಬೆಳಿಗ್ಗೆ ಪತ್ರಿಕೆಯನ್ನು ಕೈಗೆತ್ತಿಕೊಂಡರೆ, ಭರಪೂರ ಮನರಂಜನೆ ದೊರೆಯುತ್ತದೆ. ಇದಕ್ಕೆ ಕಾರಣ, ರಾಜಕೀಯ ಪುಢಾರಿಗಳ ಪತ್ರಿಕಾ ಹೇಳಿಕೆಗಳು ಹಾಗೂ ಸಾಮಾಜಿಕ ಜಾಲತಾಣಗಳ ಸವಾಲ್– ಜವಾಬ್‌ಗಳು. 'ನಮ್ಮ ತಂಟೆಗೆ ಬಂದರೆ ನಿಮ್ಮನ್ನು ಬೆತ್ತಲೆ ಮಾಡುತ್ತೇನೆ' ಎಂದು ಇಂದು ಒಬ್ಬ ನಾಯಕ ಹೇಳಿದರೆ, ನಾಳೆ ಎದುರಾಳಿ ನಾಯಕ, 'ನಿನ್ನ ಪೂರ್ತಿ ಜಾತಕ ನನ್ನ ಕೈಯಲ್ಲಿ ಇದೆ, ಹುಷಾರ್' ಎಂದು ಗುಡುಗುತ್ತಾನೆ. ಈ ಪ್ರಕ್ರಿಯೆಯಲ್ಲಿ ಇಬ್ಬರೂ ಬೆತ್ತಲಾಗುತ್ತಿದ್ದೇವೆ ಎಂಬ ಪರಿವೆಯೇ ಅವರಿಗೆ ಇದ್ದಂತೆ ಇರುವುದಿಲ್ಲ. ಈ ಬೈದಾಟದಲ್ಲಿ ಪ್ರಯೋಗವಾಗುವ ಶಬ್ದಗಳ ಕೆಲವು ಸ್ಯಾಂಪಲ್‌ಗಳು- ನಕಲಿ ಸ್ವಾಮಿ, ಹೈ ವೋಲ್ಟೇಜ್, ಲೋ ವೋಲ್ಟೇಜ್, ಲೂಟಿ ರವಿ, ಬ್ಲ್ಯಾಕ್‌ಮೇಲರ್, ಸಾಮ್ರಾಟ್, ಸಿದ್ಧಪುರುಷ, ಸತ್ಯ ಹರಿಶ್ಚಂದ್ರ, ನವರಂಗಿ ನಾರಾಯಣ... ಇನ್ನೂ ಎಷ್ಟೋ ಇವೆ.

ನಮ್ಮ ರಾಜಕೀಯ ನಾಯಕರು ಇನ್ನೊಬ್ಬರ ಮೇಲೆ ಭ್ರಷ್ಟಾಚಾರ, ಅಕ್ರಮ ಸಂಪತ್ತಿನ ಆರೋಪ ಮಾಡುತ್ತಾರೆ. ಕೇಂದ್ರ ತನಿಖಾ ಸಂಸ್ಥೆಗಳು ಈ ಎಲ್ಲಾ ಜನಪ್ರತಿನಿಧಿಗಳ ದಶಕಗಳ ಹಿಂದಿನ ಹಾಗೂ ಇಂದಿನ ಆರ್ಥಿಕ ಪರಿಸ್ಥಿತಿಯನ್ನು ಪ್ರಾಮಾಣಿಕವಾಗಿ ಪರಾಮರ್ಶಿಸಿದರೆ, ಯಾರಾದರೂ ಸತ್ಯಹರಿಶ್ಚಂದ್ರ ಸಿಗಬಹುದೇ ಎನ್ನುವುದು ಊಹೆಗೆ ಬಿಟ್ಟ ವಿಚಾರ. ಸಮಾಜಸೇವೆಯ ಹೆಸರಿನಲ್ಲಿ ರಾಜಕೀಯಕ್ಕೆ ಬಂದು ವೈದ್ಯಕೀಯ, ಎಂಜಿನಿಯರಿಂಗ್ ಕಾಲೇಜು, ಐಷಾರಾಮಿ ಹೋಟೆಲ್, ಸ್ಕೂಲ್, ಪೆಟ್ರೋಲ್ ಬಂಕ್, ರೆಸಾರ್ಟ್, ಆಸ್ಪತ್ರೆಯಂತಹವುಗಳ ಮಾಲೀಕತ್ವ ಇಲ್ಲದ ರಾಜಕೀಯ ನಾಯಕರನ್ನು ಕಾಣಲು ಸಾಧ್ಯವೇ? ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷರು ಈ ಸರ್ಕಾರದಲ್ಲೂ ಭ್ರಷ್ಟಾಚಾರವಿದೆ ಎಂದು ಹೇಳುತ್ತಾ, ಈಗ ಯಾವುದೇ ಕಾಮಗಾರಿ ಮಾಡಿಲ್ಲ, ಹಾಗಾಗಿ ಈ ಹಂತದಲ್ಲಿ ಭ್ರಷ್ಟಾಚಾರ ಕಂಡುಬರುತ್ತಿಲ್ಲ ಎಂದು ವಿರೋಧಾಭಾಸದ ಹೇಳಿಕೆ ನೀಡುತ್ತಾರೆ. ಒಟ್ಟಿನಲ್ಲಿ ರಾಜಕೀಯ ಪಕ್ಷಗಳ ಬಗ್ಗೆ ಹೇಸಿಗೆ ಮೂಡುತ್ತದೆ.

ಜಿ.ಕೃಷ್ಣ ಭಟ್, ಬೆಂಗಳೂರು

ಎಂಇಎಸ್‌ಗೆ ಎಚ್ಚರಿಕೆಯ ಗಂಟೆ

ರಾಜ್ಯದ ಗಡಿಭಾಗ ಬೆಳಗಾವಿಯಲ್ಲಿ ಈ ಬಾರಿ ಕನ್ನಡಪರ ಸಂಘಟನೆಗಳ ಸಹಯೋಗದಲ್ಲಿ ಕರ್ನಾಟಕ ರಾಜ್ಯೋತ್ಸವ ಆಚರಣೆಗೆ ಪೂರ್ವಭಾವಿಯಾಗಿ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ. ಮಹಾರಾಷ್ಟ್ರ ಏಕೀಕರಣ ಸಮಿತಿಯು (ಎಂಇಎಸ್) ಪ್ರತಿವರ್ಷವೂ ನವೆಂಬರ್ ಒಂದರಂದು ಕರಾಳ ದಿನ ಆಚರಿಸುತ್ತಿತ್ತು. ಜಿಲ್ಲಾಧಿಕಾರಿ ನಿತೇಶ್ ಪಾಟೀಲ್ ಅವರು ಈ ಬಾರಿ ಕರಾಳ ದಿನಾಚರಣೆಗೆ ಅವಕಾಶ ನೀಡುವುದಿಲ್ಲ ಎಂದು ದಿಟ್ಟ ಹಾಗೂ ಖಡಕ್ ಸೂಚನೆ ನೀಡಿದ್ದಾರೆ. ಈ ಮೂಲಕ, ಎಂಇಎಸ್‌ಗೆ ಜಿಲ್ಲಾಧಿಕಾರಿ ಮಹತ್ವಪೂರ್ಣವಾದ ಎಚ್ಚರಿಕೆಯ ಗಂಟೆ ಬಾರಿಸಿರುವುದು ಸ್ವಾಗತಾರ್ಹ ಹಾಗೂ ಔಚಿತ್ಯಪೂರ್ಣ.

ಜಯವೀರ ಎ.ಕೆ., ಖೇಮಲಾಪುರ, ರಾಯಬಾಗ

ಎಲ್ಲಿ ಅಡಗಿತ್ತು 'ಜಾತ್ಯತೀತ' ತತ್ವ?

ಬಿಜೆಪಿ– ಜೆಡಿಎಸ್ ಮೈತ್ರಿಗೆ ವಿರೋಧ ವ್ಯಕ್ತಪಡಿಸಿರುವ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ.ಇಬ್ರಾಹಿಂ ಅವರ ನಿಲುವನ್ನು ಸಮರ್ಥಿಸಿಕೊಳ್ಳುತ್ತಾ ಎಚ್.ವಿಶ್ವನಾಥ್ ಅವರು, 'ಜಾತ್ಯತೀತವಾದವನ್ನು ಕೊಲೆ ಮಾಡಿ ಜಾತಿವಾದಿ, ಕೋಮುವಾದಿಗಳ ಜೊತೆ ಎಚ್.ಡಿ.ಕುಮಾರಸ್ವಾಮಿ ಅವರು ಮದುವೆಯಾದರೆ ಒಪ್ಪಲು ಸಾಧ್ಯವೇ?' ಎಂದು ಕೇಳಿದ್ದಾರೆ (ಪ್ರ.ವಾ., ಅ. 18). ಆದರೆ ಈ ಬಗ್ಗೆ ಮಾತನಾಡಲು ವಿಶ್ವನಾಥ್ ಅವರಿಗೆ ಏನು ನೈತಿಕ ಹಕ್ಕಿದೆ?! ಅವರು ಈಗಾಗಲೇ ಎಲ್ಲ ಪಕ್ಷಗಳನ್ನೂ ಸುತ್ತಿ, ಕೋಮುವಾದಿ ಎಂದು ಕರೆಸಿಕೊಳ್ಳುವ ಬಿಜೆಪಿಯ ಸಖ್ಯವನ್ನೂ ಮಾಡಿದ್ದಾರೆ. ಆಗ ಅವರ ಕೋಮುವಾದದ ಬಗೆಗಿನ ಸಿಟ್ಟು, ಸೆಡವು ಎಲ್ಲಿ ಹೋಗಿತ್ತು? ಅವರಲ್ಲಿದ್ದ 'ಜಾತ್ಯತೀತ' ತತ್ವ ಎಲ್ಲಿ ಅಡಗಿಕೊಂಡಿತ್ತು?! ಲಾಭಕ್ಕಾಗಿ ಬಣ್ಣ ಬದಲಾಯಿಸುವ ಯಾವ ರಾಜಕಾರಣಿಗಿಂತಲೂ ತಾವು ಭಿನ್ನರೇನಲ್ಲ ಎಂಬುದನ್ನು ವಿಶ್ವನಾಥ್ ಸ್ವತಃ ಸಾಧಿಸಿ ತೋರಿಸಿದ್ದಾರೆ. ಈ ಸತ್ಯವನ್ನು ಅವರು ಮರೆಯಬಾರದು.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರು, ಕೊಪ್ಪ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಹಸಿವು ಸೂಚ್ಯಂಕದಲ್ಲಿ ಕಳಪೆ ಸಾಧನೆ

● ಜಯಸಿಂಹ ಆರ್., ಸುಕೃತ ಎಸ್.

ಜಾಗತಿಕ ಹಸಿವು ಸೂಚ್ಯಂಕದ (ಜಿಎಚ್‌ಐ) ವರದಿ ಇತ್ತೀಚೆಗೆ ಬಿಡುಗಡೆಯಾಗಿದೆ. ಈ ಸೂಚ್ಯಂಕದಲ್ಲಿ ಭಾರತವು 28.68 ಅಂಕಗಳೊಂದಿಗೆ 111ನೇ ಸ್ಥಾನಕ್ಕೆ ಕುಸಿದಿದೆ. ಇದು ಭಾರತದ ಈವರೆಗಿನ ಕನಿಷ್ಠ ರ‍್ಯಾಂಕ್. 2022ರ ಸೂಚ್ಯಂಕದಲ್ಲಿ ದೇಶವು 107ನೇ ಸ್ಥಾನದಲ್ಲಿ ಇತ್ತು. ಈಗ ಸೂಚ್ಯಂಕದ ವರ್ಗೀಕರಣದ 'ಗಂಭೀರ' ವರ್ಗದಲ್ಲಿ ದೇಶವು ಸ್ಥಾನ ಪಡೆದುಕೊಂಡಿದೆ. ಹಲವು ಸೂಚಿಗಳಲ್ಲಿ ಭಾರತವು ಬೇರೆ ದೇಶಗಳಿಗೆ ಹೋಲಿಸಿದರೆ, ಅತ್ಯಂತ ಕಳಪೆ ಪ್ರದರ್ಶನ ನೀಡಿದೆ.

ಎತ್ತರಕ್ಕೆ ತಕ್ಕ ತೂಕವಿಲ್ಲದ ಮಕ್ಕಳು ಸೂಚಿಯಲ್ಲಿ ಭಾರತದ ಕಳಪೆ ಪ್ರದರ್ಶನ ಮುಂದುವರಿದಿದೆ. 2022–23ರ ಮಧ್ಯೆ ಈ ಸೂಚಿಯಲ್ಲಿ ಭಾರತದ ಸ್ಥಿತಿ ಸುಧಾರಿಸಿದೆ. ಆದರೆ, ಇದೇ ಅವಧಿ
ಯಲ್ಲಿ ಬೇರೆ ದೇಶಗಳು ಭಾರತಕ್ಕಿಂತ ಹೆಚ್ಚು ಪ್ರಗತಿ ಸಾಧಿಸಿವೆ. ಇದರ ಜೊತೆಯಲ್ಲಿ ಅಪೌಷ್ಟಿಕತೆ ಸೂಚಿಯ ಅಂಕದಲ್ಲೂ ಭಾರತವು ಈ ಬಾರಿ ಉತ್ತಮ ಪ್ರದರ್ಶನ ನೀಡಿಲ್ಲ. ಈ ಎರಡು ಸೂಚಿಗಳಲ್ಲಿ ಭಾರತವು ಗಣನೀಯ ಬೆಳವಣಿಗೆ ತೋರದ ಕಾರಣದಿಂದಾಗಿ ಈ ಬಾರಿ ಭಾರತದ ಸ್ಥಾನವು ಕುಸಿತ ಕಂಡಿದೆ.

ಆದರೆ, ಕೇಂದ್ರ ಸರ್ಕಾರವು ಜಾಗತಿಕ ಹಸಿವು ಸೂಚ್ಯಂಕದ ವರದಿಯನ್ನು, ಅದರ ಮಾನದಂಡಗಳನ್ನು ತಿರಸ್ಕರಿಸಿದೆ.

ಕೇಂದ್ರ ಸರ್ಕಾರ ಹೇಳುವುದೇನು?: 'ಜಾಗತಿಕ ಹಸಿವು ಸೂಚ್ಯಂಕದಲ್ಲಿ ಅಳೆದಿರುವ 'ಹಸಿವು' ಇಡೀಯಾ ಭಾರತದ ಸ್ಥಿತಿಯನ್ನು ಪ್ರತಿನಿಧಿಸುವುದಿಲ್ಲ. ಇಲ್ಲಿ ಬಳಸಿರುವ ಮಾನದಂಡಗಳು ದೋಷಪೂರಿತವಾಗಿವೆ ಹಾಗೂ ಈ ವರದಿಯು ದುರುದ್ದೇಶದಿಂದ ಕೂಡಿದೆ' ಎಂದು ಕೇಂದ್ರ ಸರ್ಕಾರವು ಆರೋಪಿಸಿದೆ.





'ಮಿಷನ್ ಪೋಷಣ್ 2.0 ಅಡಿಯಲ್ಲಿ ಸರ್ಕಾರವು ಉತ್ತಮ ಕೆಲಸಗಳನ್ನು ಮಾಡುತ್ತಿದೆ. 'ಪೋಷಣ್ ಟ್ರ್ಯಾಕರ್' ಅನ್ನು ಆರಂಭಿಸಿದ್ದೇವೆ. ಈ ಬಗ್ಗೆ ಯುನಿಸೆಫ್, ವಿಶ್ವ ಆರೋಗ್ಯ ಸಂಸ್ಥೆ ಹಾಗೂ ವಿಶ್ವ ಬ್ಯಾಂಕ್ ಕೂಡ ಮೆಚ್ಚುಗೆ ವ್ಯಕ್ತಪಡಿಸಿವೆ. ಮಕ್ಕಳ ಕುಂಠಿತ ಬೆಳವಣಿಗೆ, ಎತ್ತರಕ್ಕೆ ತಕ್ಕ ತೂಕವಿರದ ಮಕ್ಕಳು, ದಢೂತಿ ಮಕ್ಕಳು ಸೇರಿದಂತೆ ಹಲವು ವಿಷಯಗಳ ಬಗ್ಗೆ ಪ್ರತಿನಿತ್ಯವು ಅಂಕಿ–ಸಂಕಿಗಳನ್ನು ಈ ಟ್ರ್ಯಾಕರ್‌ನಲ್ಲಿ ಕಾಣಬಹುದು' ಎಂದು ಮಕ್ಕಳ ಮತ್ತು ಮಹಿಳಾ ಅಭಿವೃದ್ಧಿ ಸಚಿವಾಲಯ ತನ್ನ ಹೇಳಿಕೆಯಲ್ಲಿ ಹೇಳಿದೆ.

'ಆಹಾರ ಭದ್ರತೆ ಕಾಯ್ದೆ 2013ರ ಅಡಿಯಲ್ಲಿ ದೇಶದ ಒಟ್ಟು 80 ಕೋಟಿ ಜನರಿಗೆ ಆಹಾರ ಭದ್ರತೆ ಒದಗಿಸುತ್ತಿದ್ದೇವೆ' ಎಂದೂ
ಇಲಾಖೆ ಹೇಳಿದೆ. ಆದರೆ, ಸರ್ಕಾರವು 2011ರ ಜನಗಣತಿ ಆಧಾರದಲ್ಲಿ ಜನರಿಗೆ ಆಹಾರ ಒದಗಿಸುತ್ತಿದೆ. ಆದರೆ, ವಿಶ್ವಸಂಸ್ಥೆ ಅಂದಾಜಿಸಿರುವಂತೆ ಈಗ ಭಾರತದ ಜನಸಂಖ್ಯೆ 141 ಕೋಟಿ ಇದೆ. ವಿಶ್ವಬ್ಯಾಂಕ್ ಹೇಳಿರುವಂತೆ ಭಾರತವು 97 ಕೋಟಿ ಜನರಿಗೆ ಆಹಾರ ಭದ್ರತೆ ಒದಗಿಸಬೇಕಿತ್ತು. ಆಹಾರ ಭದ್ರತೆ ಒದಗಿಸಬೇಕಾಗಿದ್ದ ಅರ್ಹ 13 ಕೋಟಿ ಜನರು ಈ ಯೋಜನೆಯಿಂದ ಹೊರಗುಳಿದಿದ್ದಾರೆ ಎಂದು ಕೇಂದ್ರ ಸರ್ಕಾರವೇ ರಾಜ್ಯಸಭೆಗೆ ಮಾಹಿತಿ ನೀಡಿತ್ತು. ದೇಶದಲ್ಲಿ ಪೌಷ್ಟಿಕಾಂಶಯುಕ್ತ ಆಹಾರದ ಕೊರತೆ ಇದೆ ಎಂಬುದಕ್ಕೆ ಇವೆಲ್ಲವೂ ನಿದರ್ಶನ.

ಹಸಿವು ಎಂದರೆ ಆಹಾರ ಸಿಗದಿರುವ ಸ್ಥಿತಿ ಎಂದು ಮಾತ್ರ ಅರ್ಥೈಸಲು ಸಾಧ್ಯವಿಲ್ಲ. ಹಸಿವು ಎಂದರೆ ದೇಹಕ್ಕೆ ಬೇಕಾದ ಪೌಷ್ಟಿಕಾಂಶಗಳು ದೊರೆಯದಿರುವುದು, ಅಗತ್ಯ ಇರುವಷ್ಟು ಕ್ಯಾಲೊರಿಷ್ಟು ಆಹಾರ ದೊರೆಯದೇ ಇರುವ ಸ್ಥಿತಿಯನ್ನು 'ಹಸಿವು' ಎನ್ನುತ್ತದೆ ವಿಶ್ವಸಂಸ್ಥೆ. ಅಪೌಷ್ಟಿಕತೆ, ಕುಂಠಿತ ಬೆಳವಣಿಗೆ, ಕಡಿಮೆ ತೂಕ ಈ ಎಲ್ಲವೂ ಆಹಾರದ ಕೊರತೆಯ ಸೂಚಿಗಳು ಎಂದು ವಿಶ್ವ ಆರೋಗ್ಯ ಸಂಸ್ಥೆ ಅರ್ಥೈಸುತ್ತದೆ. ಭಾರತವೂ ಸೇರಿ ಎಲ್ಲಾ ದೇಶಗಳು ಈ ವ್ಯಾಖ್ಯಾನವನ್ನು ಒಪ್ಪಿಕೊಂಡಿವೆ

ಸೂಚ್ಯಂಕ ವಿವರ ಮತ್ತು ಭಾರತದ ತಕರಾರು

ಹಸಿವಿನ ಸೂಚ್ಯಂಕದಲ್ಲಿ ಶೂನ್ಯ ಅಂಕ ಗಳಿಸಿದರೆ, ಆ ದೇಶದಲ್ಲಿ ಹಸಿವಿನಿಂದ ಬಳಲುತ್ತಿರುವವರ ಪ್ರಮಾಣ ಕಡಿಮೆ ಇದೆ ಎಂದು ಅರ್ಥ. ಅಂಕವು ಹೆಚ್ಚುತ್ತಾ ಹೋಗುವುದು, ಹಸಿವಿನಿಂದ ಬಳಲುತ್ತಿರುವವರ ಪ್ರಮಾಣ ಹೆಚ್ಚಾಗುತ್ತಿದೆ ಎಂಬುದನ್ನು ಸೂಚಿಸುತ್ತದೆ. ಹಸಿವಿನ ಸೂಚ್ಯಂಕವನ್ನು ನಿರ್ಧರಿಸಲು ನಾಲ್ಕು ಮಾನದಂಡಗಳನ್ನು ಬಳಸಲಾಗುತ್ತದೆ. ಈ ಮಾನದಂಡಗಳಲ್ಲಿ ಅಂಕಗಳನ್ನು ನಿರ್ಧರಿಸಲು ವಿಶ್ವಸಂಸ್ಥೆಯ 'ಆಹಾರ ಮತ್ತು ಕೃಷಿ' ವರದಿ ಮತ್ತು ಇತರ ವರದಿಗಳ ದತ್ತಾಂಶವನ್ನು ಆಧಾರವಾಗಿ ಬಳಸಿಕೊಳ್ಳಲಾಗಿದೆ. ಆ ನಾಲ್ಕು ಮಾನದಂಡಗಳಲ್ಲಿ ಭಾರತದ ಸ್ಥಿತಿ ಮತ್ತು ಅದರ ಆಧಾರದಲ್ಲಿ ಗಳಿಸಿದ ಅಂಕಗಳು ಇಂತಿವೆ

ಹಸಿವು ಸೂಚ್ಯಂಕದ ಲೆಕ್ಕಾಚಾರ

1. ಅಪೌಷ್ಟಿಕತೆ: ಭಾರತದಲ್ಲಿ ಅಪೌಷ್ಟಿಕತೆಯಿಂದ ಬಳಲುತ್ತಿರುವವರ ಪ್ರಮಾಣ ಶೇ 16.6ರಷ್ಟಿದೆ ಎಂದು ಜಿಎಚ್‌ಐ ವಿವರಿಸಿದೆ. ಜಿಎಚ್‌ಐ ಸೂಚ್ಯಂಕದಲ್ಲಿ 'ಅಪೌಷ್ಟಿಕತೆ'ಗೆ ಶೇ 33.33ರಷ್ಟು ವೇಯ್ಟೇಜ್ ನೀಡಲಾಗಿದೆ. ಈ ಪ್ರಕಾರ ಅಪೌಷ್ಟಿಕತೆ ಸೂಚಿಯಲ್ಲಿ ಭಾರತದ ಗಳಿಸಿದ ಅಂಕ 6.9ರಷ್ಟಾಗುತ್ತದೆ

2. ಮಕ್ಕಳ ಕುಂಠಿತ ಬೆಳವಣಿಗೆ: ಭಾರತದಲ್ಲಿರುವ ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಲ್ಲಿ, ವಯಸ್ಸಿಗೆ ತಕ್ಕ ಎತ್ತರ ಇಲ್ಲದಿರುವ ಮಕ್ಕಳ ಪ್ರಮಾಣ ಶೇ 35.5ರಷ್ಟಿದೆ. ಜಿಎಚ್‌ಐ ಸೂಚ್ಯಂಕದಲ್ಲಿ ಇದಕ್ಕೆ ಶೇ 16.67ರಷ್ಟು ವೇಯ್ಟೇಜ್ ನೀಡಲಾಗಿದೆ. ಈ ಪ್ರಕಾರ ಮಕ್ಕಳ ಕುಂಠಿತ ಬೆಳವಣಿಗೆ ಸೂಚಿಯಲ್ಲಿ ಭಾರತ ಗಳಿಸಿದ ಅಂಕ 8.45 ಆಗುತ್ತದೆ

3. ಮಕ್ಕಳು ಎತ್ತರಕ್ಕೆ ತಕ್ಕ ತೂಕವಿಲ್ಲದಿರುವುದು: ಭಾರತದಲ್ಲಿ ಎತ್ತರಕ್ಕೆ ತಕ್ಕ ತೂಕವಿಲ್ಲದೇ ಇರುವ ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಪ್ರಮಾಣ ಶೇ 18.7ರಷ್ಟಿದೆ. ಜಿಎಚ್‌ಐ ಸೂಚ್ಯಂಕದಲ್ಲಿ ಇದಕ್ಕೆ ಶೇ 16.67ರಷ್ಟು ವೇಯ್ಟೇಜ್ ನೀಡಲಾಗಿದೆ. ಈ ಪ್ರಕಾರ ಮಕ್ಕಳು ಎತ್ತರಕ್ಕೆ ತಕ್ಕ ತೂಕವಿಲ್ಲದಿರುವುದರ ಸೂಚಿಯಲ್ಲಿ ಭಾರತ ಗಳಿಸಿದ ಅಂಕ 10.38 ಆಗುತ್ತದೆ

4. ಶಿಶು ಮರಣ ಪ್ರಮಾಣ: ಭಾರತದಲ್ಲಿ ಶಿಶುಮರಣ ಪ್ರಮಾಣ ಶೇ3.1ರಷ್ಟಿದೆ. ಜಿಎಚ್‌ಐ ಸೂಚ್ಯಂಕದಲ್ಲಿ ಇದಕ್ಕೆ ಶೇ 33.33ರಷ್ಟು ವೇಯ್ಟೇಜ್ ನೀಡಲಾಗಿದೆ. ಈ ಪ್ರಕಾರ ಶಿಶು ಮರಣ ಪ್ರಮಾಣ ಸೂಚಿಯಲ್ಲಿ ಭಾರತದ ಗಳಿಸಿದ ಅಂಕ 2.95

ಈ ಎಲ್ಲಾ ಅಂಕಗಳನ್ನು ಕೂಡಿಸಿದಾಗ ಭಾರತದ ಸೂಚ್ಯಂಕ 28.68ರಷ್ಟಾಗುತ್ತದೆ. 110 ದೇಶಗಳು ಇದಕ್ಕಿಂತ ಕಡಿಮೆ ಸೂಚ್ಯಂಕ ಪಡೆದಿರುವ ಕಾರಣ ಅವುಗಳು ಭಾರತಕ್ಕಿಂತ ಮೊದಲಿನ ರ‍್ಯಾಂಕ್‌ಗಳಲ್ಲಿ ಇವೆ. ಇನ್ನೂ 14 ದೇಶಗಳು ಭಾರತಕ್ಕಿಂತ ಹೆಚ್ಚು ಸೂಚ್ಯಂಕ ಪಡೆದಿರುವ ಕಾರಣ ಅವು, ಭಾರತದ ನಂತರದ ರ‍್ಯಾಂಕ್‌ಗಳಲ್ಲಿವೆ

ಸರ್ಕಾರದ ಆಕ್ಷೇಪ ಮತ್ತು ಸಮರ್ಥನೆ

1. ಅಪೌಷ್ಟಿಕತೆ: ವಿಶ್ವಸಂಸ್ಥೆಯು 3,000 ಭಾರತೀಯರಿಗೆ ಎಂಟು ಪ್ರಶ್ನೆಗಳನ್ನು ಕೇಳಿ, ಭಾರತದಲ್ಲಿ ಶೇ 16.6ರಷ್ಟು ಅಪೌಷ್ಟಿಕತೆ ಇದೆ ಎಂದು ನಿರ್ಧರಿಸಿದೆ. ಇದು ಸತ್ಯಕ್ಕೆ ದೂರವಾದ ಮಾತು. 3,000 ಜನರ ಅಭಿಪ್ರಾಯವನ್ನು ಇಡೀ ದೇಶದ ಜನತೆಗೆ ಅನ್ವಯಿಸಲು ಸಾಧ್ಯವಿಲ್ಲ

2, 3. ಮಕ್ಕಳ ಕುಂಠಿತ ಬೆಳವಣಿಗೆ ಮತ್ತು ಮಕ್ಕಳು ಎತ್ತರಕ್ಕೆ ತಕ್ಕ ತೂಕವಿಲ್ಲದಿರುವುದು: ಮಕ್ಕಳ ಕುಂಠಿತ ಬೆಳವಣಿಗೆ ಎಂಬುದನ್ನು ದೇಶದ ಜನರಿಗೆ ಆಹಾರದ ಕೊರತೆ ಇದೆ ಎಂದು ಪರಿಗಣಿಸಲು ಸಾಧ್ಯವಿಲ್ಲ. ಹಸಿವಿನ ಜತೆಗೆ ಶುಚಿತ್ವದ ಕೊರತೆ, ವಂಶವಾಹಿ, ಪರಿಸರ ಮತ್ತು ಆಹಾರ ಸೇವನೆಯ ಪ್ರಮಾಣವು ಮಕ್ಕಳ ಕುಂಠಿತ ಬೆಳವಣಿಗೆ ಹಾಗೂ ಮಕ್ಕಳು ಎತ್ತರಕ್ಕೆ ತಕ್ಕ ತೂಕವಿಲ್ಲದಿರುವುದಕ್ಕೆ ಕಾರಣವಾಗುತ್ತವೆ. ಹೀಗಾಗಿ ಈ ಸೂಚಿಗಳ ಆಧಾರದಲ್ಲಿ ಸಿದ್ಧಪಡಿಸಿರುವ ಸೂಚ್ಯಂಕವನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ

4. ಶಿಶು ಮರಣ ಪ್ರಮಾಣ: ಶಿಶು ಮರಣಕ್ಕೆ ಹಸಿವೇ ಕಾರಣ ಎಂಬುದಕ್ಕೆ ಯಾವುದೇ ಸಾಕ್ಷ್ಯವಿಲ್ಲ. ಹೀಗಾಗಿ ಶಿಶು ಮರಣ ಸೂಚಿಯ ಆಧಾರದಲ್ಲಿ ಸಿದ್ಧಪಡಿಸಿರುವ ಸೂಚ್ಯಂಕವನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ

ಸರ್ಕಾರದ್ದೇ ದತ್ತಾಂಶ ಬಳಸಿದರೆ ರ‍್ಯಾಂಕ್‌ಗೆ ಧಕ್ಕೆ

1. ಅಪೌಷ್ಟಿಕತೆ: ಭಾರತದಲ್ಲಿ ಅಪೌಷ್ಟಿಕತೆಯಿಂದ ಬಳಲುತ್ತಿರುವವರ ಪ್ರಮಾಣ ಶೇ 17.45ರಷ್ಟು ಎಂದು ಎನ್‌ಎಫ್‌ಎಚ್‌ಎಸ್–5 ವರದಿ ಹೇಳುತ್ತದೆ. ಈ ದತ್ತಾಂಶವನ್ನು ಬಳಸಿಕೊಂಡು ಜಿಎಚ್‌ಐ ಲೆಕ್ಕಹಾಕಿದರೆ, ಅಪೌಷ್ಟಿಕತೆಯಲ್ಲಿ ಭಾರತದ ಅಂಕ 7.27 ಆಗುತ್ತದೆ

2. ಮಕ್ಕಳ ಕುಂಠಿತ ಬೆಳವಣಿಗೆ: ಮಕ್ಕಳ ಕುಂಠಿತ ಬೆಳವಣಿಗೆಗೆ ಆಹಾರದ ಕೊರತೆ, ಪೌಷ್ಟಿಕಾಂಶದ ಕೊರತೆ, ತಾಯಂದಿರಲ್ಲಿನ ಪೌಷ್ಟಿಕಾಂಶದ ಕೊರತೆ ಕಾರಣ ಎಂದು ಜಿಎಚ್‌ಐನಲ್ಲಿ ವಿವರಿಸಲಾಗಿದೆ. ಹೀಗಾಗಿ ಮಕ್ಕಳ ಕುಂಠಿತ ಬೆಳವಣಿಗೆಯು ಆಹಾರದ ಕೊರತೆಯನ್ನು ಸೂಚಿಸುವುದಿಲ್ಲ ಎಂಬ ಸರ್ಕಾರದ ಪ್ರತಿಪಾದನೆಯಲ್ಲೇ ಲೋಪವಿದೆ. ಎನ್‌ಎಫ್‌ಎಚ್‌ಎಸ್–5 ದತ್ತಾಂಶ ಮತ್ತು ವಿಶ್ವ ಸಂಸ್ಥೆಯ ದತ್ತಾಂಶ ಎರಡೂ ಸಹ ಭಾರತದಲ್ಲಿ ಕುಂಠಿತ ಬೆಳವಣಿಗೆಯಿಂದ ಬಳಲುತ್ತಿರುವ ಮಕ್ಕಳ ಪ್ರಮಾಣ ಶೇ 35.5ರಷ್ಟು ಎಂದೇ ಹೇಳುತ್ತವೆ. ಇದರ ಪ್ರಕಾರ ಈ ಸೂಚಿಯಲ್ಲಿ ಭಾರತದ ಅಂಕದಲ್ಲಿ (8.45) ವ್ಯತ್ಯಾಸ ಆಗುವುದಿಲ್ಲ

3. ಮಕ್ಕಳು ಎತ್ತರಕ್ಕೆ ತಕ್ಕ ತೂಕವಿಲ್ಲದಿರುವುದು: ಆಹಾರದ ಕೊರತೆ, ಅಪೌಷ್ಟಿಕತೆ, ತಾಯಂದಿರಲ್ಲಿನ ಪೌಷ್ಟಿಕಾಂಶದ ಕೊರತೆಯಿಂದಲೇ ಮಕ್ಕಳು ಕಡಿಮೆ ತೂಕ ಹೊಂದಿರುತ್ತಾರೆ ಎಂಬುದನ್ನು ವಿಶ್ವ ಆರೋಗ್ಯ ಸಂಸ್ಥೆ ಅರ್ಥೈಸುತ್ತದೆ. ಭಾರತವೂ ಸೇರಿ ವಿಶ್ವದ ಎಲ್ಲಾ ದೇಶಗಳು ಇದನ್ನು ಒಪ್ಪಿಕೊಂಡಿವೆ. ಹೀಗಾಗಿ ಈ ಸೂಚಿಯು ಹಸಿವನ್ನು ಸೂಚಿಸುವುದಿಲ್ಲ ಎಂಬ ಸರ್ಕಾರದ ಪ್ರತಿಪಾದನೆಯಲ್ಲಿ ಲೋಪವಿದೆ. ಎಬ್‌ಎಫ್‌ಎಚ್‌ಎಸ್–5 ವರದಿಯ ಪ್ರಕಾರ ಎತ್ತರಕ್ಕೆ ತಕ್ಕ ತೂಕವಿಲ್ಲದೇ ಇರುವ ಮಕ್ಕಳ ಪ್ರಮಾಣ ಶೇ 19.3ರಷ್ಟು. ಇದರ ಪ್ರಕಾರ ಈ ಸೂಚಿಯಲ್ಲಿ ಭಾರತದ ಅಂಕ 10.72ರಷ್ಟಾಗುತ್ತದೆ

4. ಶಿಶು ಮರಣ: ಶಿಶುಮರಣಕ್ಕೆ ಅಪೌಷ್ಟಿಕತೆಯೂ ಒಂದು ಕಾರಣ ಎಂದು ಪರಿಗಣಿಸಲಾಗುತ್ತದೆ. ಭಾರತದಲ್ಲಿ ಶಿಶು ಮರಣ ದರ 1000ಕ್ಕೆ 41.1ರಷ್ಟಿದೆ. ಇದನ್ನು ಶೇಕಡಾವಾರು ಪ್ರಮಾಣಕ್ಕೆ ಪರಿವರ್ತಿಸಿದರೆ ಅದು, ಶೇ 4.1ರಷ್ಟಾಗುತ್ತದೆ. ಇದರ ಆಧಾರದಲ್ಲಿ ಶಿಶು ಮರಣ ಸೂಚಿಯನ್ನು ಲೆಕ್ಕಹಾಕಿದರೆ ಭಾರತದ ಅಂಕ 3.90ರಷ್ಟಾಗುತ್ತದೆ

ಈ ಎಲ್ಲಾ ಸೂಚಿಗಳ ಅಂಕಗಳನ್ನು ಕೂಡಿದರೆ, ಭಾರತದ ಹಸಿವು ಸೂಚ್ಯಂಕವು 30.34ರಷ್ಟಾಗುತ್ತದೆ. ಇದನ್ನೇ ಪರಿಗಣಿಸಿದರೆ ಹಸಿವು ಸೂಚ್ಯಂಕದಲ್ಲಿ ಭಾರತದ ರ‍್ಯಾಂಕ್ 112ಕ್ಕೆ ಕುಸಿಯುತ್ತದೆ

ಆಧಾರ: ಜಾಗತಿಕ ಹಸಿವು ಸೂಚ್ಯಂಕ ವರದಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದ ಪ್ರಕಟಣೆ, ಎನ್‌ಎಫ್‌ಎಚ್‌ಎಸ್–5 ವರದಿ, ವಿಶ್ವ ಸಂಸ್ಥೆಯ ಆಹಾರ ಮತ್ತು ಕೃಷಿ ವರದಿ

ಸಿನಿ ಬಿಟ್ಸ್

ಬ್ರಹ್ಮನಿಗೆ ಜೊತೆಯಾದ ವಸಿಷ್ಠ ಸಿಂಹ

ನಟ ವಸಿಷ್ಠ ಸಿಂಹ ಹೆಸರಿಡದ ಹೊಸ ಚಿತ್ರವೊಂದರಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಕಲಾ ಸೃಷ್ಟಿ ಪ್ರೊಡಕ್ಷನ್ಸ್ ನಿರ್ಮಿಸುತ್ತಿರುವ ಈ ಚಿತ್ರಕ್ಕೆ ರಾಗಿಣಿ ಅಭಿನಯದ 'ಸಾರಿ ಕರ್ಮ ರಿಟರ್ನ್ಸ್' ಚಿತ್ರ ನಿರ್ದೇಶಿಸಿದ್ದ ಬ್ರಹ್ಮ ಆ್ಯಕ್ಷನ್‌–ಕಟ್ ಹೇಳುತ್ತಿದ್ದಾರೆ.

'ಕ್ರೈಮ್ ಥ್ರಿಲ್ಲರ್ ಹಾಗೂ ದ್ವೇಷ ತೀರಿಸಿಕೊಳ್ಳುವ ಕಥಾಹಂದರ ಹೊಂದಿರುವ ಈ ಚಿತ್ರವನ್ನು ಹಾಲಿವುಡ್ ಶೈಲಿಯಲ್ಲಿ ಪ್ರಸ್ತುತಪಡಿಸುತ್ತೇವೆ. ಬೆಂಗಳೂರು, ಕೊಡಗು ಮುಂತಾದ ಕಡೆ ಚಿತ್ರೀಕರಣ ನಡೆಯಲಿದ್ದು, ದೀಪಾವಳಿ ಹಬ್ಬದ ನಂತರ ಸಿನಿಮಾ ಸೆಟ್ಟೇರಲಿದೆ' ಎಂದು ನಿರ್ದೇಶಕರು ತಿಳಿಸಿದ್ದಾರೆ.

ರಾಜೀವ್ ಗಣೇಶನ್ ಛಾಯಾಗ್ರಹಣ ಹಾಗೂ ರಾಘವನ್ ಕಾರ್ತಿಕ್ ಸಂಗೀತ ನಿರ್ದೇಶನ ಚಿತ್ರಕ್ಕಿರಲಿದೆ. ❖

ವಸಿಷ್ಠ ಸಿಂಹ

ಯೋಗರಾಜ ಭಟ್, ಯಶಸ್ ಸೂರ್ಯ, ಬಿ.ಸಿ.ಪಾಟೀಲ್

ಗರಡಿಯ 'ಬಡವನ ಹೃದಯ'

ಯೋಗರಾಜ್ ಭಟ್ ನಿರ್ದೇಶಿಸಿರುವ ಗರಡಿ ಸಿನಿಮಾದ 'ಬಡವನ ಹೃದಯ' ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಗೀತೆಗೆ ಯೋಗರಾಜ್ ಭಟ್ ಅವರ ಸಾಹಿತ್ಯವಿದ್ದು, ವಿ. ಹರಿಕೃಷ್ಣ ಸಂಗೀತ ಸಂಯೋಜಿಸಿದ್ದಾರೆ. ವಿಜಯ್ ಪ್ರಕಾಶ್ ಪ್ರಕಾಶ್ ಈ ಗೀತೆಗೆ ಧ್ವನಿಯಾಗಿದ್ದಾರೆ.

ವನಜಾ ಬಿ.ಸಿ ಪಾಟೀಲ್ ನಿರ್ಮಾಣದ ಚಿತ್ರದಲ್ಲಿ ಯಶಸ್ ಸೂರ್ಯ, ಸೋನಲ್ ಮೊಂತೆರೋ ಜೊತೆಯಾಗಿದ್ದಾರೆ. ಬಿ.ಸಿ ಪಾಟೀಲ್, ನಟ ದರ್ಶನ್ ಕೂಡ ಚಿತ್ರದಲ್ಲಿದ್ದಾರೆ.

'ಎರಡನೇ ಲಾಕ್‌ಡೌನ್ ಸಮಯದಲ್ಲೇ ಈ ಹಾಡು ಬರೆದಿದ್ದೆ. ಬಾದಾಮಿ, ಬೆಂಗಳೂರು ಸೇರಿದಂತೆ ಅನೇಕ ಕಡೆ ಹಾಡಿನ ಚಿತ್ರೀಕರಣ ನಡೆದಿದೆ. ದಯಮಾಡಿ ಉರಿಸ ಬೇಡ ಬಡವನ ಹೃದಯ ಎಂಬ ಮೊದಲ ಸಾಲೇ ಎಲ್ಲರ ಮನಸ್ಸಿಗೂ ಹತ್ತಿರವಾಗುತ್ತದೆ' ಎಂದರು.

'ನವೆಂಬರ್ 1ರಂದು ರಾಣೆಬೆನ್ನೂರು ಅದ್ದೂರಿಯಾಗಿ ಟ್ರೇಲರ್ ಬಿಡುಗಡೆ ಸಮಾರಂಭ ನಡೆಯಲಿದೆ. ದರ್ಶನ್ ಅವರು ಕಾರ್ಯಕ್ರಮಕ್ಕೆ ಬರಲಿದ್ದಾರೆ. ನವೆಂಬರ್ 10ರಂದು ಚಿತ್ರ ಬಿಡುಗಡೆಯಾಗುತ್ತಿದೆ. ನೋಡಿ ಪ್ರೋತ್ಸಾಹಿಸಿ' ಎಂದರು ನಿರ್ಮಾಪಕ ಬಿ.ಸಿ.ಪಾಟೀಲ್. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ 'ಭಾರತದಲ್ಲಿ ಎತ್ತರಕ್ಕೆ ತಕ್ಕ ತೂಕವಿಲ್ಲದೇ ಇರುವ ಮಕ್ಕಳ ಪ್ರಮಾಣ ಶೇ 18.7ರಷ್ಟು ಎಂದು ಜಾಗತಿಕ ಹಸಿವು ಸೂಚ್ಯಂಕ (ಜಿಎಚ್‌ಐ) ಹೇಳಿದೆ. ಆದರೆ ಇದು ದೋಷಪೂರಿತ ಮಾಹಿತಿ. ಪೋಷನ್ ಟ್ರ್ಯಾಕರ್‌ನಲ್ಲಿ 7.24 ಕೋಟಿಯಷ್ಟು ಮಕ್ಕಳ ನೋಂದಣಿಯಾಗಿದ್ದು, ಅವರಲ್ಲಿ ಎತ್ತರಕ್ಕೆ ತಕ್ಕ ತೂಕವಿಲ್ಲದೇ ಇರುವ ಮಕ್ಕಳ ಪ್ರಮಾಣ 7.2ರಷ್ಟು. ಹೀಗಾಗಿ ಜಿಎಚ್‌ಐ ನೀಡಿರುವ ಮಾಹಿತಿ ತಪ್ಪು' ಎಂದು ಕೇಂದ್ರ ಮಕ್ಕಳ ಮತ್ತು ಮಹಿಳಾ ಅಭಿವೃದ್ಧಿ ಸಚಿವಾಲಯವು ಇದೇ 12ರಂದು ತನ್ನ ಪ್ರಕಟಣೆಯಲ್ಲಿ ತಿಳಿಸಿತ್ತು. ಆದರೆ ಸಚಿವಾಲಯ ನೀಡಿರುವ ಮಾಹಿತಿ, ಪೂರ್ಣ ಪ್ರಮಾಣದಲ್ಲ.

✓ ಪೋಷಣ್ ಟ್ರ್ಯಾಕರ್‌ನಲ್ಲಿ 7.24 ಕೋಟಿ ಮಕ್ಕಳ ಪೌಷ್ಟಿಕಾಂಶದ ಸ್ಥಿತಿಯನ್ನಷ್ಟೇ ಅಪ್‌ಲೋಡ್ ಮಾಡಲಾಗಿದೆ. ಈ 7.24 ಕೋಟಿ ಮಕ್ಕಳಲ್ಲಿ ಶೇ 7.2ರಷ್ಟು ಮಕ್ಕಳು ಎತ್ತರಕ್ಕೆ ತಕ್ಕ ತೂಕವಿಲ್ಲದೇ ಇರುವ ಸಮಸ್ಯೆಯಿಂದ ಬಳಲುತ್ತಿದ್ದಾರೆ ಎಂದು ಪೋಷಣ್ ಟ್ರ್ಯಾಕರ್ ಹೇಳುತ್ತದೆ. ಜತೆಗೆ ಇತ್ತೀಚಿನ ಜನಗಣತಿ ನಡೆಯದೇ ಇರುವ ಕಾರಣ, ಈ ವಯಸ್ಸಿನ ಮಕ್ಕಳ ನೈಜ ಸಂಖ್ಯೆ ಎಷ್ಟು ಎಂಬ ಮಾಹಿತಿ ಲಭ್ಯವಿಲ್ಲ. ವಿಶ್ವ ಸಂಸ್ಥೆಯ ಅಂದಾಜಿ ಪ್ರಕಾರ ಭಾರತದಲ್ಲಿ ಈ ವಯಸ್ಸಿನ ಮಕ್ಕಳ ಸಂಖ್ಯೆ 11.3 ಕೋಟಿಯಷ್ಟು. ಹೀಗಾಗಿ ಪೋಷಣ್ ಟ್ರ್ಯಾಕರ್‌ನಲ್ಲಿನ ದತ್ತಾಂಶಗಳು ಭಾರತದಲ್ಲಿರುವ ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಎಲ್ಲಾ ಮಕ್ಕಳಿಗೆ ಅನ್ವಯವಾಗುವುದಿಲ್ಲ. ಅಲ್ಲದೆ, ಎನ್‌ಎಫ್‌ಎಚ್‌ಎಸ್–5 ದತ್ತಾಂಶ ಪ್ರಕಾರ ಭಾರತದಲ್ಲಿ ಎತ್ತರಕ್ಕೆ ತಕ್ಕ ತೂಕವಿಲ್ಲದೇ ಇರುವ ಮಕ್ಕಳ ಪ್ರಮಾಣ ಶೇ 19.3ರಷ್ಟು.



ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಅಕ್ಟೋಬರ್ 19, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಶುಕ್ಲ ಪಂಚಮಿ ಗಂ. 24-32 ನಕ್ಷತ್ರ: ಜ್ಯೇಷ್ಠ ಗಂ. 21-04 ಯೋಗ: ಸೌಭಾಗ್ಯ ಗಂ 06-54 ಕರಣ: ಬವ ಗಂ. 12-56, ತುಲಾ ಮಾಸದ 02 ನೇ ದಿನ, ಮಳೆನಕ್ಷತ್ರ: ಚಿತ್ರ 3.
ರಾಹುಕಾಲ : ಮಧ್ಯಾಹ್ನ 01-30 - 03-00 ಸೂರ್ಯೋದಯ : 06-25
ಸೂರ್ಯಾಸ್ತ : 06-06 ಮುಸ್ಲಿಂ ದಿನಾಂಕ : 03 ರಬಿಯುಸ್ಸಾನಿ
ದಿನ ವಿಶೇಷ : ನವರಾತ್ರಿ 5ನೇ ದಿನ,
ಲಲಿತಾ ಪಂಚಮಿ ಅದೃಷ್ಟ ಸಂಖ್ಯೆ : 2, 1

ಮೇಷ: ಎಂಜಿನಿಯರಿಂಗ್, ಮೆಡಿಕಲ್ ವಿದ್ಯಾರ್ಥಿಗಳಿಗೆ ಹೆಚ್ಚಿನ ಶ್ರಮ ಅಗತ್ಯ ಎನಿಸುವುದು. ಪಾಲುದಾರಿಕೆಯಲ್ಲಿ ಒಮ್ಮತ ಮೂಡದೆ ಹಿಂದೆ ಸರಿಯುವಂತೆ ಆಗಲಿದೆ. ಈ ಹಿಂದೆ ರೂಪಿಸಿದ್ದ ಯೋಜನೆ ಇಂದು ಯಶಸ್ವಿಯಾಗಲಿದೆ.

ವೃಷಭ: ನಾಜೂಕಿನ ಮಾತು ಅಥವಾ ಹಿತವಚನ ಸಹೋದ್ಯೋಗಿಯನ್ನು ಧೈರ್ಯದಿಂದ ಇರುವಂತೆ ಮಾಡಲಿದೆ. ಸಾಮಾಜಿಕ ವಲಯದಲ್ಲಿ ನಿಮ್ಮ ಸ್ಥಾನಮಾನ ಹೆಚ್ಚಲಿದೆ. ನಾನಾ ವಿಧದಿಂದ ಧನ ಸಂಪಾದನೆಯಾಗುವುದು.

ಮಿಥುನ: ಸಂಶೋಧನಾ ಕ್ಷೇತ್ರದಲ್ಲಿನ ಕಾರ್ಯಗಳಲ್ಲಿ ಹೆಚ್ಚಿನ ಪ್ರಗತಿ ಸಾಧಿಸುವಿರಿ. ವಾಣಿಜ್ಯೋದ್ಯಮಿಗಳಿಗೆ ಉದ್ಯೋಗಕ್ಕೆ ಸಂಬಂಧಿಸಿದಂತೆ ವಿಶೇಷ ಅನುಭವ. ಹಣದ ವಿಚಾರದಲ್ಲಿ ಮಿತ ವ್ಯಯಿಗಳಾಗುವಿರಿ.

ಕರ್ಕಾಟಕ: ಇಂದು ಹಳೇ ಬಾಕಿ ಸಂದಾಯ. ಮನೆಯ ಹಿರಿಯರೊಬ್ಬರ ಮಧ್ಯಸ್ಥಿಕೆಯಿಂದ ನೆಂಟಸ್ತಿಕೆಯಲ್ಲಿ ಸಂಬಂಧ ಕೂಡಿ ಬರುವುದು. ಮೂಕಂಬಿಕೆಯ ದರ್ಶನದಿಂದ ಕೆಲಸ ಕಾರ್ಯಗಳು ಸುಗಮವಾಗುವುದು.

ಸಿಂಹ: ಸಿಗುವ ಅವಕಾಶ ಸದುಪಯೋಗ ಪಡಿಸಿಕೊಳ್ಳಲು ವಿಫಲರಾಗುವಿರಿ. ಬ್ಯಾಂಕ್ ನೌಕರರಿಗೆ ಕೆಲಸಗಳಲ್ಲಿ ಒತ್ತಡ ಕಡಿಮೆಯಾಗಿ ಮನಸ್ಸಿಗೆ ನೆಮ್ಮದಿಯು ಸಿಗುವುದು. ದೂರ ಪ್ರಯಾಣ ಮಾಡಬೇಕಾದ ಸಂದರ್ಭಗಳು ಬರಲಿದೆ.

ಕನ್ಯಾ: ಅಂದುಕೊಂಡಿರುವ ಕೆಲಸ ಉತ್ತಮವಾಗಿ ನೆರವೇರಿವುದರಿಂದ ನೆಮ್ಮದಿ ಇರುವುದು. ಉದ್ಯೋಗದಲ್ಲಿ ಸ್ಥಾನ ಬದಲಾವಣೆಯಾಗಿ ಮನಸ್ಸಿಗೆ ಆಘಾತವಾಗಲಿದೆ. ಸಿವಿಲ್ ಎಂಜಿನಿಯರ್‌ಗಳಿಗೆ ಉತ್ತಮ ಅವಕಾಶ ಸಿಗುವುದು.

ತುಲಾ: ವ್ಯವಹಾರಗಳನ್ನು ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡಿಕೊಳ್ಳಲು ಈ ದಿನ ಪ್ರಯತ್ನ ಪಡುವುದು ಒಳ್ಳೆಯದು. ಸಹವರ್ತಿಗಳು ಅವಿರೋಧ ಆಯ್ಕೆಗೆ ಒಲವು ತೋರಿದ್ದರಿಂದ ನೀವು ಸುಲಭವಾಗಿ ಸ್ಥಾನ ಗಳಿಸುವಿರಿ.

ವೃಶ್ಚಿಕ: ವೃತ್ತಿಯಲ್ಲಿ ನಿಮ್ಮ ಅನುಭವ, ಪರಿಶ್ರಮ ಸೂಕ್ತ ಸಮಯದಲ್ಲಿ ಬೆಳಕಿಗೆ ಬಂದು ಉಪಯೋಗವಾಗುವುದು. ಕೃಷಿಯ ಕೆಲಸಗಳು ಸಮರ್ಪಕವಾಗಿ ನಡೆದು ಮನಸ್ಸಿಗೆ ನೆಮ್ಮದಿ ಉಂಟಾಗುವುದು.

ಧನು: ಪ್ರವಾಸ ಹೋಗುವ ವಿಷಯದಲ್ಲಿ ಕುಟುಂಬದ ಸದಸ್ಯರು ನಿಮ್ಮ ನಿರ್ಧಾರಗಳನ್ನು ಒಪ್ಪಿಕೊಳ್ಳುವರು. ಕುಟುಂಬದಲ್ಲಿ ಎಲ್ಲರ ಆರೋಗ್ಯವೂ ಉತ್ತಮವಾಗಿರುವುದು. ಎಲ್ಲ ಕೆಲಸಗಳಲ್ಲೂ ಧೈರ್ಯದಿಂದ ಮುನ್ನಡೆ ಸಾಧಿಸುವಿರಿ.

ಮಕರ: ಆಟೋಮೊಬೈಲ್ಸ್ ಸಂಬಂಧಿತ ಕೆಲಸಗಾರರಿಗೆ ಹರ್ಷದಾಯಕ ದಿನ. ಪ್ರವೃತ್ತಿಯಲ್ಲಿ ಅಪಾದನೆ ಎದುರಾಗಿ ಮಾನಸಿಕವಾಗಿ ಕಿರಿಕಿರಿ. ಸಮಾನ ಮನಸ್ಕರಲ್ಲಿನ ಮಾತುಕತೆಗಳಿಂದಾಗಿ ಕೆಲಸ ಕಾರ್ಯಗಳು ಸುಗಮವಾಗುತ್ತದೆ.

ಕುಂಭ: ಉದ್ಯೋಗಕ್ಕೆ ಅನುಕೂಲವಾಗುವ ಹೊಸ ಜನರ ಪರಿಚಯವಾಗಲಿದೆ. ಕರಕುಶಲ ವಸ್ತು ತಯಾರಕರು ತಮ್ಮ ಉತ್ತಮ ಕೆಲಸಗಳಿಂದ ಆದಾಯವನ್ನು ಹೆಚ್ಚಿಸಿಕೊಳ್ಳಬಹುದು. ಮಕ್ಕಳಿಗೆ ಜೀವನದ ಪಾಠ ಹೇಳುವಿರಿ.

ಮೀನ: ನಿಮ್ಮ ಸತ್ಕಾರ್ಯದ ಯತ್ನಗಳು ಕೈಗೂಡಲು ತಾಳ್ಮೆ ವಹಿಸುವುದು ಸೂಕ್ತ. ಅನನ್ಯ ಭಕ್ತಿಯಿಂದ ಮಲ್ಲಿಕಾರ್ಜುನನನ್ನು ಆರಾಧಿಸಿ ಶುಭವಾಗುವುದು. ಶ್ವಾಸ ಕೋಶಕ್ಕೆ ಸಂಬಂಧಪಟ್ಟ ಕಾಯಿಲೆಗಳ ಬಗ್ಗೆ ನಿಗಾ ಇರಲಿ.

ನುಡಿ ಬೆಳಗು

ನಮ್ಮನ್ನು ನಾವು ತಿದ್ದಿಕೊಳ್ಳೋಣ

ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

ಒಂದೂರಲ್ಲಿ ಒಬ್ಬ ಶ್ರೀಮಂತನಿದ್ದ. ಅವನಿಗೋ ಯಾವಾಗಲೂ ಕಣ್ಣು ನೋವು. ಎಷ್ಟು ಮಂದಿ ವೈದ್ಯರನ್ನು ನೋಡಿದರೂ ಕಣ್ಣು ನೋವು ಕಡಿಮೆಯಾಗಲಿಲ್ಲ. ಕೊನೆಯ ಪ್ರಯತ್ನವೆಂಬಂತೆ ಒಬ್ಬ ವೈದ್ಯ ಸನ್ಯಾಸಿಯ ಹತ್ತಿರ ಆತ ಹೋಗುತ್ತಾನೆ. ಆಗ ಆ ಸನ್ಯಾಸಿ, ನೀನು ಹಸಿರು ಬಣ್ಣದ ಮೇಲೆ ಗಮನ ಕೊಡು, ಬರೀ ಹಸಿರನ್ನೇ ನೋಡು ಬೇರೆ ಯಾವ ಬಣ್ಣವನ್ನೂ ನೋಡಬೇಡ, ನಿನ್ನ ಕಣ್ಣುನೋವು ಕಡಿಮೆಯಾಗುತ್ತದೆ ಎನ್ನುತ್ತಾನೆ.

ಶ್ರೀಮಂತನಿಗೆ ಇದು ಯಾವ ರೀತಿಯ ಚಿಕಿತ್ಸೆ ಎಂದು ಅಚ್ಚರಿಯಾದರೂ ಸನ್ಯಾಸಿಯ ಮಾತನ್ನು ಅಕ್ಷರಶಃ ಪಾಲಿಸುವವನಂತೆ ತನ್ನ ಸುತ್ತಲಿನ ವಾತಾವರಣವನ್ನು ಹಸಿರಾಗಿ ಪರಿವರ್ತಿಸತೊಡಗುತ್ತಾನೆ. ಇಡೀ ಮಹಲಿಗೂ, ಎಲ್ಲ ವಸ್ತುಗಳಿಗೂ ಹಸಿರು ಬಣ್ಣ ಬಳಿಸುತ್ತಾನೆ. ಕೆಲವು ದಿನ ಕಳೆದ ಮೇಲೆ ಆ ಸನ್ಯಾಸಿ ಈತನನ್ನು ನೋಡಲು ಬರುತ್ತಾನೆ. ಆತ ಬರುತ್ತಿದ್ದಂತೆ ಆ ಶ್ರೀಮಂತನ ಆಳು ಹಸಿರು ಬಣ್ಣವನ್ನು ಸನ್ಯಾಸಿಯ ಮೇಲೆ ಸುರಿಯುತ್ತಾನೆ. ಏಕೆ ಎಂದು ಸನ್ಯಾಸಿ ಕೇಳಿದಾಗ ಅವನು, 'ನೀವು ಕಾವಿ ಬಟ್ಟೆ ತೊಟ್ಟಿದ್ದೀರಿ. ಹಸಿರು ಬಿಟ್ಟು ಬೇರೆ ಯಾವ ಬಣ್ಣವನ್ನೂ ನೋಡಬಾರದೆಂದು ನಮ್ಮ ಯಜಮಾನರಿಗೆ ವೈದ್ಯರು ಹೇಳಿದ್ದಾರೆ' ಎನ್ನುತ್ತಾನೆ. ಆಗ ಸನ್ಯಾಸಿಯು ನಗುತ್ತ ಹೇಳುತ್ತಾನೆ, 'ಇಷ್ಟೆಲ್ಲ ಮಾಡುವ ಬದಲು ಒಂದು ಹಸಿರು ಕನ್ನಡಕವನ್ನು ಖರೀದಿಸಿದರೆ ಆಗಿಹೋಗುತ್ತಿತ್ತಲ್ಲ. ಹಣ ಖರ್ಚು ಮಾಡುವ ಅಗತ್ಯವೇ ಇರಲಿಲ್ಲ.'

'ಲೋಕದ ಡೊಂಕ ನೀವೇಕೆ ತಿದ್ದುವಿರಿ, ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿರಿ, ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿರಿ' ಎಂದು ಬಸವಣ್ಣನವರು ಹೇಳಿದ್ದು ಇದಕ್ಕೇ. ನಮ್ಮನ್ನು ನಾವು ಬದಲಾಯಿಸಿಕೊಳ್ಳುವುದು ಸುತ್ತಲಿನ ಜಗತ್ತನ್ನು ಬದಲಾಯಿಸುವುದಕ್ಕಿಂತ ಅತ್ಯಂತ ಸುಲಭದ ಕೆಲಸ. ಆದರೆ ಪರಿಪೂರ್ಣ ಮನುಷ್ಯರೆನ್ನುವವರು ಯಾರೂ ಇರುವುದಿಲ್ಲ ಎಂಬ ವಾಸ್ತವವನ್ನು ಮರೆತು ನಾವೇ ಪರಿಪೂರ್ಣ ವ್ಯಕ್ತಿಗಳೆಂದು ಭ್ರಮಿಸಿ ಬೇರೆಯವರನ್ನು ತಿದ್ದಲು ಹೋಗುತ್ತೇವೆ. ಜಗತ್ತನ್ನೇ ಬದಲಾಯಿಸುವ ಯೋಚನೆ ಕೈಬಿಟ್ಟು ನಮ್ಮ ದೃಷ್ಟಿಕೋನವನ್ನು ಬದಲಾಯಿಸಿಕೊಂಡರೆ ಜಗತ್ತು ಅದಕ್ಕನುಗುಣವಾಗಿ ಕಾಣುತ್ತದೆ. ಬೇರೆಯವರಿಗೆ ಉಪದೇಶವನ್ನು ಹೇಡಿಯೂ ಮಾಡಬಲ್ಲ. ಆದರೆ ತಮ್ಮ ತಪ್ಪುಗಳಿಗೆ ನೆಪ ಹೇಳದೇ ಅವನ್ನು ಒಪ್ಪಿಕೊಳ್ಳುವುದಕ್ಕೆ ಧೈರ್ಯಬೇಕು. ಹಾಗಾಗಿ ಆತ್ಮವಿಮರ್ಶೆ ಎನ್ನುವುದು ಸದಾ ನಮಗೆ ದಾರಿ ತೋರುವ ಕಿರು ದೀವಿಗೆಯಾಗಬೇಕು. ಏಕೆಂದರೆ ತಪ್ಪು ಮಾಡುವ ಮತ್ತು ತಿದ್ದಿಕೊಳ್ಳುವ ನಿರಂತರ ಪ್ರಕ್ರಿಯೆಯೇ ಬದುಕು. ❖

ಪದಬಂಧ 5475 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ವನದಲ್ಲಿ ದೊರೆತ ಆದಾಯ (4)
3.ಕಾಡು ಪ್ರಾಣಿ ಇಲ್ಲಿದೆ (4)
5.ಅತೀ ಆಸೆಯಿದು (3)
6.ರವೆಯನ್ನು ಆನೆ ಮೇಲೆ ಸಾಗಿಸುವುದು! (3)
8.ತವರಿನವರು ಕೊಟ್ಟ ಲೋಹ (3)
10.ಮಂಕ ಹೊತ್ತಿರುವ ಬುಟ್ಟಿ (3)
11.ಸರಕ್ಕನೆ ತಂದಿರುವ ಸಾಮಾನು (3)
13.ದೇವಾಲಯದ ಗೋಪುರದ ತುದಿ (3)
15.ಈಕೆ ಒಡಹುಟ್ಟಿದವಳು (4)
16.ಪಟದಲ್ಲಿಯೇ ಈ ತೊಳಲಾಟ! (4)

ಮೇಲಿಂದ ಕೆಳಕ್ಕೆ
1.ವನದ ಹತ್ತಿರ ಬೇಡನಿದ್ದಾನೆ (4)
2. ಕೈಯಲ್ಲಿರುವ ದುಡ್ಡು (3)
3.ವರ ತೋರಿದ ವ್ಯಾಯಾಮದ ಪಟ್ಟು! (3)
4.ಬೇರೆಯ ಉಪಾಯ (4)
7.ಈತ ವಾದ್ಯ ನುಡಿಸುವವನು (3)
9.ವರನಲ್ಲಿ ವಾಗ್ಮಿ ಕಾಣುತ್ತಿರುವನಲ್ಲಾ? (3)
10.ಮಂದ ಬುದ್ಧಿಯವ ತೋರಿದ ಮುಗುಳುನಗೆ! (4)
12.ಕುಡಿಗಣ್ಣಲ್ಲಿ ನೋಡಿದ ನೋಟ (4)
13.ಕರಿಯ ಮರಿ ಬಿದ್ದಿರುವ ಪ್ರಪಾತ! (3)
14.ಸರಸದ ಮಾತುಕತೆ (3)



5474ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1. ಧುಮಾಸ 3.ಅನುಭವ 5.ಬಡತನ 7.ರಮಣ 8.ವನಪಾಲಕ 11.ಉದಕ 12.ನವರಂಗ 14.ಸಮುದಾಯ 15.ಪರಿಚಿತ
ಮೇಲಿಂದ ಕೆಳಕ್ಕೆ: 1. ಮನೋಬಲ 2.ಮಾವುತ 4.ವರುಣ 6.ನವೀನ 7.ರಕ್ಷಕ 8.ವರ್ತಕ 9.ಲಶುನ 10.ಅಂಗಜಾತ 11.ಉಲ್ಲಾಸ 13.ವೈಯಾರಿ

ಸುಡೊಕು 5861

5			4		3		6	
	9				2			5
		3	5		8	7	2	
		9		3				7
	3				6		5	
8		6		4		2		3
		5		2				4
3						5		
	8	2		5			7	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5860 ಸುಡೊಕು

5	7	2	9	3	4	1	8	6
4	6	9	8	5	1	7	3	2
3	1	8	7	6	2	9	5	4
7	2	3	5	8	6	4	9	1
8	4	1	3	2	9	5	6	7
6	9	5	1	4	7	3	2	8
1	8	7	6	9	5	2	4	3
2	5	6	4	1	3	8	7	9
9	3	4	2	7	8	6	1	5

ಒಡಿಶಾ, ತ್ರಿಪುರಾಕ್ಕೆ ರಾಜ್ಯಪಾಲರ ನೇಮಕ

ನವದೆಹಲಿ (ಪಿಟಿಐ): ಜಾರ್ಖಂಡ್‌ನ ಮಾಜಿ ಮುಖ್ಯಮಂತ್ರಿ ರಘುಬರ್ ದಾಸ್ ಮತ್ತು ತೆಲಂಗಾಣದ ಬಿಜೆಪಿ ನಾಯಕ ಇಂದ್ರ ಸೇನಾ ರೆಡ್ಡಿ ನಲ್ಲು ಅವರನ್ನು ಕ್ರಮವಾಗಿ ಒಡಿಶಾ ಮತ್ತು ತ್ರಿಪುರಾದ ರಾಜ್ಯಪಾಲರನ್ನಾಗಿ ನೇಮಿಸಲಾಗಿದೆ ಎಂದು ರಾಷ್ಟ್ರಪತಿ ಭವನ ಬುಧವಾರ ತಿಳಿಸಿದೆ.

ಪ್ರಸ್ತುತ ಬಿಜೆಪಿಯ ರಾಷ್ಟ್ರೀಯ ಉಪಾಧ್ಯಕ್ಷರೂ ಆಗಿರುವ ದಾಸ್ ಅವರು 2014ರಿಂದ 2019ರವರೆಗೆ ಜಾರ್ಖಂಡ್‌ನ ಮುಖ್ಯಮಂತ್ರಿಯಾಗಿದ್ದರು. ಇಂದ್ರ ಸೇನಾ ರೆಡ್ಡಿ ನಲ್ಲು ಅವರು ತೆಲಂಗಾಣದ ಬಿಜೆಪಿ ನಾಯಕರಾಗಿದ್ದು ಬಿಜೆಪಿಯ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯರೂ ಆಗಿದ್ದಾರೆ.

ಬಸವೇಶ್ವರರ ಭಾವಚಿತ್ರ ವಿರೂಪ: ಆರೋಪಿ ಬಂಧನ

ಕಲಬುರಗಿ: ಚಿತ್ತಾಪುರ ತಾಲ್ಲೂಕಿನ ಹಲಕರ್ಟಿ ಗ್ರಾಮದಲ್ಲಿನ ಫ್ಲೆಕ್ಸ್‌ನಲ್ಲಿದ್ದ ಬಸವೇಶ್ವರರ ಭಾವಚಿತ್ರಕ್ಕೆ ಅಪಮಾನ ಮಾಡಿದ ಪ್ರಕರಣ ಸಂಬಂಧ ಆರೋಪಿಯನ್ನು ಬಂಧಿಸಲಾಗಿದೆ.

'ಹಲಕರ್ಟಿ ಗ್ರಾಮದ ಶಾರೂಕ್ (28) ಬಂಧಿತ ಆರೋಪಿ. ಟಂಟಂ ಚಾಲಕನಾಗಿರುವ ಶಾರೂಕ್, ಕುಡಿದ ಮತ್ತಿನಲ್ಲಿ ಬಸವೇಶ್ವರ ಭಾವಚಿತ್ರಕ್ಕೆ ಅಪಮಾನ ಮಾಡಿದ್ದಾನೆ. ಆರೋಪಿಯು ಪೊಲೀಸ್ ವಶದಲ್ಲಿದ್ದು, ತನಿಖೆ ನಡೆಯುತ್ತಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

2020ರ ನ.7ರಂದು ಹಲಕರ್ಟಿ ಗ್ರಾಮದಲ್ಲಿ ಹಗಲಲ್ಲಿ ನಡೆದಿದ್ದ ಜ್ಯೋತಿಷಿ ಸುರೇಶ ಎಂಬಾತನ ಕೊಲೆ ಪ್ರಕರಣದಲ್ಲಿ ಶಾರೂಕ್ ಜೈಲಿಗೆ ಹೋಗಿ ಬಂದಿದ್ದ. ಈಗ ಮತ್ತೊಂದು ಕೃತ್ಯ ಎಸಗಿದ್ದ.

ಐದಕ್ಕೂ ಹೆಚ್ಚು ಸಿಲಿಂಡರ್‌ಗಳು ಸ್ಫೋಟ: ದಟ್ಟೈಸಿದ ಹೊಗೆ, ಬೆಂಕಿಯ ಕೆನ್ನಾಲಿಗೆ

ಭಾರಿ ಶಬ್ದಕ್ಕೆ ಬೆಚ್ಚಿದ ಜನರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋರಮಂಗಲದ ತಾವರೆಕೆರೆ ಜಂಕ್ಷನ್‌ನ ಹೊಸೂರು ರಸ್ತೆಯಲ್ಲಿರುವ ಮಡ್‌ಪೈಪ್ ಕೆಫೆಯಲ್ಲಿ ಬುಧವಾರ ಮಧ್ಯಾಹ್ನ ಸಂಭವಿಸಿದ ಬೆಂಕಿ ದುರಂತದ ವೇಳೆ ಐದಕ್ಕೂ ಹೆಚ್ಚು ಸಿಲಿಂಡರ್‌ಗಳು ಸ್ಫೋಟಗೊಂಡಿದ್ದರಿಂದ ಉಂಟಾದ ಭಾರಿ ಶಬ್ದವು ಸ್ಥಳೀಯರನ್ನು ಬೆಚ್ಚಿಬೀಳುವಂತೆ ಮಾಡಿತು.

ಕೋರಮಂಗಲ ಪ್ರದೇಶದಲ್ಲಿ ಅತಿಹೆಚ್ಚು ಪಬ್‌ಗಳಿವೆ. ಬುಧವಾರ ಎಂದಿನಂತೆಯೇ ಜನರು ಕೆಲಸ ಕಾರ್ಯದಲ್ಲಿ ಮಗ್ನರಾಗಿದ್ದರು. ಆಗ ಮಡ್‌ಪೈಪ್ ಕೆಫೆಯಿರುವ ಮಹಡಿಯಿಂದ ಇದಕ್ಕಿದ್ದಂತೆ ಭಾರಿ ಶಬ್ದ ಕೇಳಿಸಿತು. ಬೆಂಕಿಯ ಕೆನ್ನಾಲಿಗೆ, ದಟ್ಟವಾದ ಹೊಗೆಯೂ ಕಾಣಿಸಿಕೊಂಡಿತು. ಈ ಎಲ್ಲ ದೃಶ್ಯಗಳೂ ಸುತ್ತಲಿದ್ದ ಜನರ ಆತಂಕ ಹೆಚ್ಚುವಂತೆ ಮಾಡಿತ್ತು. ಸ್ಫೋಟದ ರಭಸಕ್ಕೆ ಶೀಟ್‌ನಿಂದ ನಿರ್ಮಿಸಿದ್ದ ಚಾವಣಿ ಹಾರಿ ಹೋಗಿತ್ತು. ಶೀಟ್‌ಗಳು ಅಕ್ಕಪಕ್ಕದ ಕಟ್ಟಡಗಳು ಹಾಗೂ ರಸ್ತೆಯ ಮೇಲೂ ಬಿದ್ದಿದ್ದವು.

ಒಂದೊಂದು ಸಿಲಿಂಡರ್‌ಗಳು ಸ್ಫೋಟಗೊಳುತ್ತಿದ್ದಂತೆಯೇ ಭಾರಿ ಪ್ರಮಾಣದಲ್ಲಿ ಶಬ್ದ ಕೇಳಿಸುತ್ತಿತ್ತು. ಬೆಂಕಿ ಕಾಣಿಸಿಕೊಂಡ ತಕ್ಷಣ ಕೆಲವರು, ಅಗ್ನಿಶಾಮಕ ದಳಕ್ಕೆ ಕರೆ ಮಾಡಿ ಮಾಹಿತಿ ತಿಳಿಸಿದರು.

ಪಾರಾದ ಪ್ರೇಮ್ ಸ್ನೇಹಿತರು: ಹೊರಗೆ ಕೆಫೆ ಎಂದು ನಾಮಫಲಕ ಹಾಕಿದ್ದರೂ ಒಳಗೆ ರೆಸ್ಟೋರೆಂಟ್ ನಡೆಸಲಾಗುತ್ತಿತ್ತು. ಮಧ್ಯಾಹ್ನದ ವೇಳೆ ಘಟನೆ ನಡೆದಿದ್ದರಿಂದ ಗ್ರಾಹಕರು ಇರಲಿಲ್ಲ. ಬಾಣಸಿಗ ಪ್ರೇಮ್ ಸಿಂಗ್‌ಸೌದ ಅವರು ಅಡುಗೆಯ ಸಿದ್ಧತೆ ಮಾಡಿಕೊಳ್ಳುತ್ತಿದ್ದರು. ಆಗ ಸಿಲಿಂಡರ್‌ನಿಂದ ಅನಿಲ ಸೋರಿಕೆಯಾಗಿ ಬೆಂಕಿ ಹೊತ್ತಿಕೊಂಡಿದೆ ಎನ್ನಲಾಗಿದೆ.

ಎರಡು ಹಾಗೂ ಮೂರನೇ ಅಂತಸ್ತಿನ ಫಿಟ್ನೆಸ್ ಕ್ಲಬ್‌ನಲ್ಲಿ ಯಾರೂ ಇರಲಿಲ್ಲ. ಈ ಕ್ಲಬ್‌ನಲ್ಲಿ ಯಾವುದೇ ಹಾನಿ ಸಂಭವಿಸಿಲ್ಲ. ಆದರೆ, ಕೆಳಅಂತಸ್ತಿನದಲ್ಲಿದ್ದ ನೆಕ್ಸಾ ಕಾರು ಶೋರೂಂನಲ್ಲಿ ಒಂದು ಕಾರಿಗೆ ಹಾನಿಯಾಗಿದೆ. ರಸ್ತೆ ಪಕ್ಕದಲ್ಲಿ ನಿಲ್ಲಿಸಿದ್ದ ನಾಲ್ಕು ಬೈಕ್‌ಗಳು ಭಸ್ಮವಾಗಿವೆ. ಸ್ಥಳಕ್ಕೆ ಬಂದಿದ್ದ ಆಂಬುಲೆನ್ಸ್ ಸಿಬ್ಬಂದಿ ಹನುಮಂತಪ್ಪ ಸೇರಿದಂತೆ ಹಲವರು ಬೆಂಕಿ ನಂದಿಸಲು ಅಗ್ನಿಶಾಮಕ ಸಿಬ್ಬಂದಿ ಜತೆಗೆ ಕೈಜೋಡಿಸಿದರು.

ಎಂಟು ವಾಹನಗಳ ಕಾರ್ಯಾಚರಣೆ: ನಗರದ ವಿವಿಧೆಡೆಯ ಅಗ್ನಿಶಾಮಕ ದಳದ ಎಂಟು ವಾಹನಗಳಲ್ಲಿ ಸ್ಥಳಕ್ಕೆ ಬಂದ ಸಿಬ್ಬಂದಿ ಮೂರು ತಾಸು ಕಾರ್ಯಾಚರಣೆ ನಡೆಸಿ, ಬೆಂಕಿಯನ್ನು ಹತೋಟಿಗೆ ತರಲು ಯಶಸ್ವಿಯಾದರು. ಮಧ್ಯಾಹ್ನ 3 ಗಂಟೆ ವೇಳೆಗೆ ಬೆಂಕಿ ಸಂಪೂರ್ಣ ನಿಯಂತ್ರಣಕ್ಕೆ ಬಂತು ಎಂದು ಕಾರ್ಯಾಚರಣೆ ನಡೆಸಿದ ಸಿಬ್ಬಂದಿ ಮಾಹಿತಿ ನೀಡಿದರು.

'ರೆಸ್ಟೋರೆಂಟ್‌ನಲ್ಲಿ 15 ಮಂದಿ ಕೆಲಸ ಮಾಡುತ್ತಿದ್ದೆವು. ಎಲ್ಲರೂ ನೇಪಾಳದವರು. ಘಟನೆ ನಡೆದ ವೇಳೆ ಕೆಲವರು ಮಾತ್ರ ಆ ಅಂತಸ್ತಿನಲ್ಲಿದ್ದರು' ಎಂದು ಗಾಯಾಳು ಪ್ರೇಮ್ ಸಹೋದರ ಹೇಳಿದರು.

ಕಟ್ಟಡದ ಒಳಗೇ ಸಿಲಿಂಡರ್: 20 ದಿನಗಳ ಹಿಂದಷ್ಟೇ ಆರಂಭವಾಗಿದ್ದ ಕೆಫೆಯಲ್ಲಿ ಅಗ್ನಿನಂದಿಸುವ ಉಪಕರಣಗಳನ್ನು ಅಳವಡಿಸಿರಲಿಲ್ಲ. ಕಟ್ಟಡದ ಹೊರಭಾಗದಲ್ಲಿ ಸಿಲಿಂಡರ್ ದಾಸ್ತಾನು ಮಾಡುವ ಬದಲಿಗೆ ಅಡುಗೆ ಕೋಣೆಯಲ್ಲೇ ಎಲ್ಲ ಸಿಲಿಂಡರ್‌ಗಳನ್ನು ಇಡಲಾಗಿತ್ತು ಎಂದು ಅಗ್ನಿಶಾಮಕ ದಳದ ಸಿಬ್ಬಂದಿ ಮಾಹಿತಿ ನೀಡಿದರು. ಮಾಲೀಕ ಕರಣ್ ಜೈನ್ ಅವರನ್ನು ಸುದ್ದಗುಂಟೆಪಾಳ್ಯ ಪೊಲೀಸರು ವಿಚಾರಣೆ ನಡೆಸಿದರು.

ಘಟನೆ ನಡೆದ ಅಂತಸ್ತಿನಲ್ಲಿ ಹುಕ್ಕಾ ಬಾರ್ ನಡೆಸಲಾಗುತ್ತಿತ್ತೇ ಅಥವಾ ರೆಸ್ಟೋರೆಂಟ್ ಇತ್ತೇ ಎಂಬುದರ ಕುರಿತು ತನಿಖೆ ನಡೆಸಲಾಗುವುದು ಎಂದು ಪೊಲೀಸರು ಹೇಳಿದರು.

ಘಟನಾ ಸ್ಥಳಕ್ಕೆ ಅಗ್ನಿಶಾಮಕ ದಳದ ಎಡಿಜಿಪಿ ಪಿ.ಹರಿಶೇಖರನ್, ಹೆಚ್ಚುವರಿ ಪೊಲೀಸ್ ಆಯುಕ್ತ ರಮಣ್ ಗುಪ್ತಾ, ಸತೀಶ್ ಕುಮಾರ್, ಡಿಸಿಪಿ ಸಿ.ಕೆ.ಬಾಬಾ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಕೋರಮಂಗಲದ ಮಡ್ ಪೈಪ್ ಕೆಫೆಯಲ್ಲಿ ಸಂಭವಿಸಿದ ಬೆಂಕಿ ಅವಘಡದಲ್ಲಿ ಕಟ್ಟಡದಿಂದ ಹೊರಬಂದ ಬೆಂಕಿ (ಎಡಚಿತ್ರ) ಬೆಂಕಿಗೆ ಆಹುತಿಯಾದ ಬೈಕ್‌ಗಳು

ಪಬ್‌ಗಳಲ್ಲಿ ನಿಯಮ ಉಲ್ಲಂಘನೆ

'ಕೋರಮಂಗಲದ ಭಾಗದಲ್ಲಿ ನೂರಾರು ಪಬ್‌ಗಳಿವೆ. ಹಲವು ಪಬ್‌ಗಳು ನಿಯಮ ಉಲ್ಲಂಘಿಸಿ ನಡೆಯುತ್ತಿವೆ. ಈ ಭಾಗದಲ್ಲಿ ಶಾಲಾ–ಕಾಲೇಜುಗಳಿದ್ದರೂ ಅನುಮತಿ ನೀಡಲಾಗಿದೆ. ರಾತ್ರಿ 2 ಗಂಟೆಯವರೆಗೂ ಅಬ್ಬರದ ಸಂಗೀತ ಇರುತ್ತದೆ. ಇದರಿಂದ ಸ್ಥಳೀಯರು ನಿತ್ಯ ತೊಂದರೆ ಅನುಭವಿಸುತ್ತಿದ್ದಾರೆ. ನಿಯಮ ಪಾಲಿಸದ ಪಬ್‌ಗಳನ್ನು ಬಂದ್ ಮಾಡಿಸಬೇಕು' ಎಂದು ಕೋರಮಂಗಲದ ನಿವಾಸಿ ಸುರೇಶ್ ಹೇಳಿದರು.

ಕೆಫೆಯಲ್ಲಿ ನಡೆದ ದುರಂತದಿಂದ ಮರಿಗೌಡ ರಸ್ತೆ, ತಾವರೆಕೆರೆ ಜಂಕ್ಷನ್ ಸುತ್ತಮುತ್ತ ಭಾರಿ ಸಂಚಾರ ದಟ್ಟಣೆ ಕಂಡುಬಂತು.

ಸುದ್ದಿ 2 ನಿಮಿಷ

'ಕನ್ನಡ ಬೆಳೆಸುತ್ತಿರುವ ಕಾರ್ಮಿಕರು'

ಬೆಂಗಳೂರು: 'ಕನ್ನಡವನ್ನು ತಳಮಟ್ಟದಲ್ಲಿ ಉಳಿಸಿ ಬೆಳೆಸುವಲ್ಲಿ ಕಾರ್ಮಿಕರ ಪಾತ್ರ ಬಹುದೊಡ್ಡದು' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷ ಮಹೇಶ ಜೋಶಿ ತಿಳಿಸಿದರು.

ಕಸಾಪ ಹಾಗೂ ಕರ್ನಾಟಕ ಕೈಗಾರಿಕೆ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟ ಜಂಟಿಯಾಗಿ ನಗರದಲ್ಲಿ ಮಂಗಳವಾರ ಹಮ್ಮಿಕೊಂಡ ಸಮಾಲೋಚನಾ ಸಭೆ ಉದ್ಘಾಟಿಸಿ, ಮಾತನಾಡಿದರು.

'ಕಾರ್ಮಿಕರ ಭಾವನೆಗಳಿಗೆ ಪರಿಷತ್ತು ಸದಾ ಸ್ಪಂದಿಸುತ್ತ ಬಂದಿದೆ. ಮುಂದಿನ ದಿನಗಳಲ್ಲಿ ನಾಡಿನ ಎಲ್ಲಾ ವರ್ಗದ ಕನ್ನಡದ ಕಾರ್ಮಿಕರನ್ನು ಸೇರಿಸಿಕೊಂಡು ಕನ್ನಡ ಕಟ್ಟುವ ಕಾಯಕದಲ್ಲಿ ಪರಿಷತ್ತು ಮುನ್ನಡೆಯಲಿದೆ' ಎಂದರು.

'ಸರ್ಕಾರದಿಂದ ಕಾರ್ಮಿಕ ವರ್ಗದವರಿಗೆ ಸಿಗಬೇಕಾದ ಸೌಲಭ್ಯಗಳ ಬಗ್ಗೆ ಸಂಬಂಧಪಟ್ಟ ಇಲಾಖೆಯೊಂದಿಗೆ ಮಾತುಕತೆ ನಡೆಸಲಾ ಗುವುದು. ನಾಡಿನ ಪ್ರತಿಯೊಬ್ಬ ಕಾರ್ಮಿಕರನ್ನೂ ಕನ್ನಡ ಕಟ್ಟುವ ಕಾಯಕದಲ್ಲಿ ಬಳಸಿಕೊಳ್ಳಲಾಗುವುದು' ಎಂದು ಅವರು ಹೇಳಿದರು.

ಮೆಟ್ರೊದಲ್ಲಿ ಪ್ರಯಾಣಿಸಿದ ಸಚಿವ ಎಂ.ಬಿ. ಪಾಟೀಲ

ಬೆಂಗಳೂರು: ಇಲ್ಲಿನ ಕೆಂಗೇರಿ ಸಮೀಪದ ಮೈಲಸಂದ್ರ- ಶ್ರೀನಿವಾಸಪುರದಲ್ಲಿ ಬುಧವಾರ ನಿಗದಿಯಾಗಿದ್ದ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ವಿಧಾನಸೌಧದಿಂದ ಕೆಂಗೇರಿ ಬಸ್ ಟರ್ಮಿನಲ್‌ವರೆಗೆ 'ನಮ್ಮ ಮೆಟ್ರೊ'ದಲ್ಲಿ ಪ್ರಯಾಣಿಸಿದರು.

'ದೇಶದ ಬೇರೆ ಬೇರೆ ಭಾಗಗಳಲ್ಲಿ ಮೆಟ್ರೊದಲ್ಲಿ ಸಂಚರಿಸಿದ್ದೆ. ಆದರೆ, ಬೆಂಗಳೂರಿನಲ್ಲಿ ನಮ್ಮ ಮನೆ ಹತ್ತಿರಕ್ಕೆ ಮೆಟ್ರೊ ಬಂದಿಲ್ಲ. ಹಾಗಾಗಿ ಪ್ರಯಾಣಿಸಿರಲಿಲ್ಲ. ಇಂದು ಕಾರ್ಯಕ್ರಮಕ್ಕೆ ತೆರಳಲು ಮೆಟ್ರೊವನ್ನು ಆಯ್ಕೆ ಮಾಡಿಕೊಂಡೆ. ವಿಧಾನಸೌಧದಿಂದ ಮೈಲಸಂದ್ರಕ್ಕೆ ಕೇವಲ 30 ನಿಮಿಷಗಳಲ್ಲಿ ತಲುಪಿದೆ' ಎಂದು ಸಚಿವರು ವಿವರಿಸಿದರು.

'ಸಹ ಪ್ರಯಾಣಿಕರ ಜೊತೆ ಮಾತನಾಡಿಕೊಂಡು, ಮೆಟ್ರೊ ಬಗ್ಗೆ ವಿಚಾರಿಸಿದೆ. ಮೆಟ್ರೊ ರೈಲಿನಿಂದಾಗಿ ಸುಗಮ ಸಂಚಾರ ಸಾಧ್ಯವಾಗಿದೆ ಎಂದು ಪ್ರಯಾಣಿಕರು ಮಾಹಿತಿ ನೀಡಿದರು. ಸಂಚಾರ ದಟ್ಟಣೆಯ ಸಮಸ್ಯೆ ಆಧುನಿಕ ನಗರಗಳ ಭಾಗವಾಗಿ ಬಿಟ್ಟಿದೆ. ಮೆಟ್ರೊ ಸೌಲಭ್ಯವು ನಗರದ ಸಂಚಾರ ವ್ಯವಸ್ಥೆಯ ರೂಪುರೇಷೆಗಳನ್ನು ಆಮೂಲಾಗ್ರವಾಗಿ ಬದಲಿಸುತ್ತಿದೆ. ಇದರಿಂದ ಬೆಂಗಳೂರಿನ ಉತ್ಪಾದಕತೆ ಗಣನೀಯವಾಗಿ ಹೆಚ್ಚಲಿದೆ. ಜೊತೆಗೆ ಶಬ್ದ, ದೂಳು ಮತ್ತು ಇಂಗಾಲದ ಮಾಲಿನ್ಯಗಳಿಗೆ ಪರಿಹಾರವಾಗಿದೆ. ಆರೋಗ್ಯದ ಸಮಸ್ಯೆಗಳಿಂದಲೂ ಪಾರಾಗಬಹುದು ಎಂದು ತಿಳಿಸಿದರು.

ಭೂಸ್ವಾಧೀನ ಬಿಕ್ಕಟ್ಟು: ಮತ್ತೆ ಸಭೆಗೆ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣ ಹೋಬಳಿಯ 13 ಹಳ್ಳಿಗಳಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು (ಕೆಐಎಡಿಬಿ) 1,777 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಸಂಬಂಧಿಸಿದ ಬಿಕ್ಕಟ್ಟು ಇತ್ಯರ್ಥಪಡಿಸಲು ರೈತರೊಂದಿಗೆ ಮತ್ತೆ ಸಭೆ ನಡೆಸಲಾಗುವುದು ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

ಸ್ಥಳೀಯ ಶಾಸಕರೂ ಆಗಿರುವ ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಅವರ ಜತೆಗೂಡಿ ಪಾಟೀಲ ಅವರು ರೈತರ ಜತೆ ಬುಧವಾರ ಸಭೆ ನಡೆಸಿದರು. ಆದರೆ, ಭೂಸ್ವಾಧೀನಕ್ಕೆ ರೈತರು ತೀವ್ರ ವಿರೋಧ ವ್ಯಕ್ತಪಡಿಸಿದರು. ಇದರಿಂದಾಗಿ ಅಂತಿಮ ತೀರ್ಮಾನಕ್ಕೆ ಬರಲು ಸಾಧ್ಯವಾಗಲಿಲ್ಲ. ಇದೇ 25ರ ಬಳಿಕ ಪುನಃ ಸಭೆ ಕರೆಯುವುದಾಗಿ ಸಚಿವರು ಪ್ರಕಟಿಸಿದರು.

ಸಭೆಯಲ್ಲಿ ಪಾಲ್ಗೊಂಡಿದ್ದ ರೈತ ಮುಖಂಡರಾದ ಜಿ.ಸಿ. ಬೈಯ್ಯಾ ರೆಡ್ಡಿ, ಚಿಕ್ಕಿ ನಂಜುಂಡಸ್ವಾಮಿ ಮತ್ತಿತರರು ಭೂಸ್ವಾಧೀನವನ್ನು ತೀವ್ರವಾಗಿ ವಿರೋಧಿಸಿದರು. 'ಭೂಸ್ವಾಧೀನ ಪ್ರಕ್ರಿಯೆ ವಿರುದ್ಧ ರೈತರು ಒಂದೂವರೆ ವರ್ಷದಿಂದ ಹೋರಾಟ ನಡೆಸುತ್ತಿದ್ದಾರೆ. ರೈತರು ಜಮೀನುಗಳನ್ನು ಬಿಟ್ಟುಕೊಡುವ ಪ್ರಶ್ನೆಯೇ ಇಲ್ಲ. ಇಲ್ಲಿ ನೂರಾರು ರೈತ ಕುಟುಂಬಗಳ ಭವಿಷ್ಯದ ಪ್ರಶ್ನೆ ಇದೆ. ಭೂಸ್ವಾಧೀನಕ್ಕೆ ಹೊರಡಿಸಿರುವ ಪ್ರಾಥಮಿಕ ಅಧಿಸೂಚನೆಯನ್ನೇ ರದ್ದುಪಡಿಸಬೇಕು' ಎಂದು ಆಗ್ರಹಿಸಿದರು.

ಪ್ರತಿಕ್ರಿಯೆ ನೀಡಿದ ಪಾಟೀಲ, 'ದೇವನಹಳ್ಳಿ ತಾಲ್ಲೂಕಿನಲ್ಲಿ ಮಾತ್ರ ಕೆಐಎಡಿಬಿ ಭೂಸ್ವಾಧೀನ ಪ್ರಕ್ರಿಯೆ ನಡೆಸುತ್ತಿದೆ ಎಂಬ ತಪ್ಪು ಕಲ್ಪನೆ ಬೇಡ. ರಾಜ್ಯದ ಎಲ್ಲ ಕಡೆಗಳಲ್ಲೂ ಕೈಗಾರಿಕೆಗಳು ಬರಬೇಕಿದೆ. ಅದಕ್ಕೆ ಪೂರಕವಾಗಿ ಪ್ರಕ್ರಿಯೆ ನಡೆಸಲಾಗುತ್ತದೆ. ರೈತರು ಮತ್ತು ರೈತ ಮುಖಂಡರು ಮತ್ತೊಮ್ಮೆ ಚರ್ಚಿಸಿ. ಅಕ್ಟೋಬರ್ 25ರ ಬಳಿಕ ಮತ್ತೆ ಸಭೆ ನಡೆಸೋಣ. ಆಗಲೂ ಸಮಸ್ಯೆ ಇತ್ಯರ್ಥವಾಗದಿದ್ದರೆ ಮುಖ್ಯಮಂತ್ರಿಯವರ ಬಳಿ ಹೋಗೋಣ' ಎಂದರು.

ರೈತರಿಂದ ಸ್ವಾಧೀನಪಡಿಸಿಕೊಳ್ಳುವ ಜಮೀನಿಗೆ ಸರ್ಕಾರದ ಉತ್ತಮ ದರದಲ್ಲಿ ಪರಿಹಾರ ನೀಡುತ್ತದೆ. ಹಣದ ರೂಪದ ಪರಿಹಾರ ಬೇಡವಾದರೆ ಪ್ರತಿ ಎಕರೆಗೆ 10,800 ಚದರ ಅಡಿಗಳಷ್ಟು ಅಭಿವೃದ್ಧಿಪಡಿಸಿದ ಜಾಗವನ್ನೂ ಪಡೆಯಬಹುದು ಎಂದು ಸಚಿವರು ಸಲಹೆ ನೀಡಿದರು.

ಶಿವಣ್ಣ, ಅಜಿತ್ ವಿರುದ್ಧ ಎಫ್‌ಐಆರ್

'ಸರ್ಕಾರಿ ಕಂದಾಯ ಜಮೀನು' ಎಂದು ತಿದ್ದುಪಡಿ ಮಾಡಿದ್ದ ಎ.ಸಿ, ತಹಶೀಲ್ದಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಉತ್ತರ ವಿಭಾಗದ ವ್ಯಾಪ್ತಿಯಲ್ಲಿ ಅರಣ್ಯ ಜಮೀನಿನ ದಾಖಲೆಗಳನ್ನು ಅಕ್ರಮವಾಗಿ 'ಸರ್ಕಾರಿ ಕಂದಾಯ ಜಮೀನು' ಎಂದು ತಿದ್ದುಪಡಿ ಮಾಡಿದ್ದ ಹಿಂದಿನ ಉಪ ವಿಭಾಗಾಧಿಕಾರಿ ಎಂ.ಜಿ.ಶಿವಣ್ಣ ಹಾಗೂ ಬೆಂಗಳೂರು ಪೂರ್ವ ತಾಲ್ಲೂಕಿನ ತಹಶೀಲ್ದಾರ್ ಆಗಿದ್ದ ಅಜಿತ್ ಕುಮಾರ್ ರೈ ಅವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ನಗರ ಜಿಲ್ಲಾಧಿಕಾರಿ ಆದೇಶದಂತೆ 2006ರಲ್ಲೇ ಅರಣ್ಯ ಎಂದು ವರ್ಗೀಕರಣವಾಗಿದ್ದ ನೂರಾರು ಕೋಟಿ ರೂಪಾಯಿ ಮೌಲ್ಯದ ಅರಣ್ಯ ಭೂಮಿಯನ್ನು ಕಂದಾಯ ಭೂಮಿ ಎಂದು ತಿದ್ದುಪಡಿ ಮಾಡಿದ್ದರು.

ಅ.10ರಂದು ತನಿಖಾ ವರದಿಯನ್ನು ಬೆಂಗಳೂರು ನಗರ ವಿಭಾಗದ ಡಿಸಿಎಫ್ ಎನ್.ರವೀಂದ್ರ ಕುಮಾರ್ ಅವರು ಅರಣ್ಯ ಇಲಾಖೆ ನೋಡಲ್ ಅಧಿಕಾರಿಯೂ ಆಗಿರುವ ಪಿಸಿಸಿಎಫ್ ಅವರಿಗೆ ಸಲ್ಲಿಸಿದ್ದರು. ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ ಸೂಚನೆಯ ಮೇರೆಗೆ ಇಲಾಖೆ ಎಫ್.ಐ.ಆರ್. ದಾಖಲು ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಏನಿದು ಪ್ರಕರಣ: ಉತ್ತರ ಬೆಂಗಳೂರಿನ ಭಾರತೀಯ ನಗರದ ಬಳಿ ಸುಮಾರು ₹ 500 ಕೋಟಿ ಮಾರುಕಟ್ಟೆ ಮೌಲ್ಯದ 17 ಎಕರೆ 34 ಗುಂಟೆ ಅರಣ್ಯ ಭೂಮಿಯನ್ನು ಉಪ ವಿಭಾಗಾಧಿಕಾರಿ ಆಗಿದ್ದ ಶಿವಣ್ಣ ಅವರು ಕಂದಾಯ ಭೂಮಿ ಎಂದು ತಿದ್ದುಪಡಿ ಮಾಡಿದ್ದರು. ಈ ಭೂಮಿಯನ್ನು ಒತ್ತುವರಿ ಮಾಡಿ, ಆ ಜಮೀನಿನ ಮೇಲೆ ಹಕ್ಕು ಸ್ಥಾಪಿಸಲು ಪ್ರಯತ್ನಿಸಿದವರಿಗೆ ಅನುಕೂಲ ಮಾಡಿಕೊಡುವ ಶಿವಣ್ಣ ಅವರ ಸಂಚನ್ನು ಅರಣ್ಯ ಇಲಾಖೆ ತನಿಖಾ ತಂಡವು ಪತ್ತೆ ಮಾಡಿತ್ತು.

ಅದಾದ ಮೇಲೆ ತನಿಖೆ ನಡೆಸಿ ಕ್ರಮ ಕೈಗೊಳ್ಳುವಂತೆ ಅರಣ್ಯ ಇಲಾಖೆ ಜಾಗೃತ ದಳಕ್ಕೆ ಅರಣ್ಯ ಸಚಿವರು ಸೂಚನೆ ನೀಡಿದ್ದರು.

ಕೆ.ಆರ್.ಪುರಂ ಹೋಬಳಿ ಕೊತ್ತನೂರು ಗ್ರಾಮದ ಸರ್ವೆ ನಂ.47ರಲ್ಲಿ ಸುಮಾರು 18 ಎಕರೆ ಅರಣ್ಯ ಭೂಮಿಯನ್ನು ಹೊಸದಾಗಿ ಅತಿಕ್ರಮಣಕ್ಕೆ ಅನುವು ಮಾಡಿಕೊಡಲು ತಮ್ಮ ಇಲಾಖೆಯ ಉನ್ನತಾಧಿಕಾರಿ ಅಂದರೆ ಜಿಲ್ಲಾಧಿಕಾರಿಗಳ ಆದೇಶವನ್ನೇ ಬದಲಾಯಿಸಿದ ಕೆಳಹಂತದ ಅಧಿಕಾರಿಗಳಾದ ಬೆಂಗಳೂರು ಪೂರ್ವ ತಹಶೀಲ್ದಾರ್ (ಅರಣ್ಯ ಭೂಮಿಯನ್ನು ಕಂದಾಯ ಎಂದು ಪರಿವರ್ತಿಸಲು ಎ.ಸಿ. ಕೋರ್ಟ್‌ಗೆ ಶಿಫಾರಸು ಮಾಡಿದ್ದವರು) ಅಜಿತ್ ಕುಮಾರ್ ರೈ ಮತ್ತು ಉಪ ವಿಭಾಗಾಧಿಕಾರಿ ಶಿವಣ್ಣ ವಿರುದ್ಧ ಕರ್ನಾಟಕ ಅರಣ್ಯ ಕಾಯಿದೆ 1963ರ ಸೆಕ್ಷನ್ 33, 104 ಮತ್ತು 104 ಸಿ ಅಡಿಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಸುಪ್ರೀಂ ಮೆಟ್ಟಿಲೇರಿದ್ದ ಪ್ರಕರಣ

ಈ ಜಮೀನನ್ನು ಅರಣ್ಯ ಇಲಾಖೆಯದ್ದು ಎಂದು ಜಿಲ್ಲಾಧಿಕಾರಿಯವರು ಘೋಷಿಸಿದ್ದ ಮೇಲೆ ಸಂಸ್ಥೆಯೊಂದು ಇದನ್ನು ಪ್ರಶ್ನಿಸಿ ನ್ಯಾಯಾಲಯದ ಮೊರೆ ಹೋಗಿತ್ತು. ಕಂದಾಯ ಇಲಾಖೆ ಮತ್ತು ಅರಣ್ಯ ಇಲಾಖೆ ಜಂಟಿ ಸರ್ವೆ ನಡೆಸಿ ದಾಖಲೆಗಳನ್ನು ಪರಿಶೀಲಿಸಿ, ಇದು ಅರಣ್ಯ ಭೂಮಿ ಎಂಬ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದವು.

ಸುಪ್ರೀಂ ಕೋರ್ಟ್ 2017ರ ಮಾರ್ಚ್‌ನಲ್ಲಿ ಅರ್ಜಿ ವಿಲೇವಾರಿ ಮಾಡಿತ್ತು.ಆದರೂ, ಇದೇ ವರ್ಷ ಕೆಲವು ಭೂಕಬಳಿಕೆದಾರರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಆರ್‌ಟಿಸಿ ಯಲ್ಲಿ ಅರಣ್ಯ ಭೂಮಿ ಎಂದಿದ್ದನ್ನು ಸರ್ಕಾರದ ಜಮೀನು ಎಂದು ಇಬ್ಬರು ಅಧಿಕಾರಿಗಳು ತಿದ್ದುಪಡಿ ಮಾಡಿದ್ದರು. ತಿದ್ದುಪಡಿ ಮಾಡಿರುವುದು ಕಾನೂನಿನ ರೀತಿಯ ಅಪರಾಧ. ಇದು ಸರ್ಕಾರಿ ಅಧಿಕಾರಿ ಎಸಗಿರುವ ನಂಬಿಕೆ ದ್ರೋಹ ಮತ್ತು ಕರ್ತವ್ಯ ಲೋಪ. ಸುಪ್ರೀಂಕೋರ್ಟ್‌ಗೆ ಸಲ್ಲಿಸಿರುವ ಪ್ರಮಾಣಪತ್ರದ ಉಲ್ಲಂಘನೆಯೂ ಆಗಿರುತ್ತದೆ ಎಂದು ಅರಣ್ಯ ಇಲಾಖೆಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಯಶವಂತಪುರ ಸರ್ಕಾರಿ ಆಸ್ಪತ್ರೆ ಪುನರಾರಂಭಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಕಾರಣಗಳಿಗಾಗಿ ಏಳು ವರ್ಷಗಳಿಂದ ಸ್ಥಗಿತಗೊಂಡಿರುವ ಯಶವಂತಪುರದ ಮಕ್ಕಳ ಮತ್ತು ಮಹಿಳಾ ಹೆರಿಗೆ ಆಸ್ಪತ್ರೆ ಯನ್ನು ಪುನರ್ ಆರಂಭಿಸಬೇಕು ಎಂದು ಅಖಿಲಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ (ಎಐಎಂಎಸ್‌ಎಸ್) ಆಗ್ರಹಿಸಿದೆ.

ಸಂಘಟನೆಯ ಸದಸ್ಯರು ಮಂಗಳವಾರ ಬಿಬಿಎಂಪಿಯ ಆರೋಗ್ಯ ಮತ್ತು ಮಾಹಿತಿ ತಂತ್ರಜ್ಞಾನ ವಿಶೇಷ ಆಯುಕ್ತ ಡಾ.ಕೆ.ವಿ. ತ್ರಿಲೋಕ್ ಚಂದ್ರ ಹಾಗೂ ಬುಧವಾರ ಸಂಸದ ಡಿ.ಕೆ.ಸುರೇಶ್ ಅವರನ್ನು ಭೇಟಿ ಮಾಡಿ ಆಸ್ಪತ್ರೆ ಪುನರ್ ಆರಂಭಿಸುವಂತೆ ಮನವಿ ಸಲ್ಲಿಸಿದ್ದಾರೆ.

ಯಶವಂತಪುರದ ರೈಲ್ವೆ ನಿಲ್ದಾಣದ ಸಮೀಪವಿರುವ ಮಕ್ಕಳ ಮತ್ತು ಮಹಿಳಾ ಹೆರಿಗೆ ಆಸ್ಪತ್ರೆಯನ್ನು ದುರಸ್ತಿಯ ಕಾರಣಕ್ಕಾಗಿ 2016ರಿಂದ ಮುಚ್ಚಲಾಗಿತ್ತು. ದುರಸ್ತಿಯಾಗಿ, ನವೀಕರಣಗೊಂಡ ನಂತರ ಅದನ್ನು ಕೋವಿಡ್ ಆಸ್ಪತ್ರೆಯಾಗಿ ಮಾರ್ಪಡಿಸಲಾಯಿತು. ಮುಂದೆ ಇದು ಹೆರಿಗೆ ಆಸ್ಪತ್ರೆಯಾಗಿ ಕಾರ್ಯನಿರ್ವಹಿಸಲೇ ಇಲ್ಲ ಎಂದು ಮನವಿಯಲ್ಲಿ ವಿವರಿಸಿದ್ದಾರೆ.

'ಯಶವಂತಪುರ, ಪೀಣ್ಯ, ದಾಸರಹಳ್ಳಿ, ಮತ್ತಿಕೆರೆ, ಜಾಲಹಳ್ಳಿ ಸುತ್ತಮುತ್ತಲಿನ ಬಡಾವಣೆಯ ಬಡ ಕೂಲಿ ಕಾರ್ಮಿಕ ಮಹಿಳೆಯರು, ಕೆಳಮಧ್ಯಮ ವರ್ಗದ ಮಹಿಳೆಯರು ಈ ಆಸ್ಪತ್ರೆಯಿಂದ ಅನುಕೂಲ ಪಡೆಯುತ್ತಿದ್ದರು. ಇಲ್ಲಿ ತಿಂಗಳಿಗೆ ಸರಾಸರಿ 300 ಹೆರಿಗೆಗಳಾಗುತ್ತಿದ್ದವು ಈಗ ಆಸ್ಪತ್ರೆ ಮುಚ್ಚಿರುವ ಕಾರಣ ಸಮೀಪದ ಬಡಾವಣೆಗಳ ಮಹಿಳೆಯರು ಶ್ರೀರಾಂಪುರ ಹೆರಿಗೆ ಆಸ್ಪತ್ರೆ, ಕೆ ಸಿ ಜನರಲ್ ಆಸ್ಪತ್ರೆ, ವಾಣಿ ವಿಲಾಸದಂತಹ ಸರ್ಕಾರಿ ಆಸ್ಪತ್ರೆಗಳನ್ನು ಅರಸಿ ಹೋಗುವಂತಾಗಿದೆ. ಕೆಲವೊಮ್ಮೆ ತುರ್ತು ಸಮಯದಲ್ಲಿ ಸಾಲ ಮಾಡಿ ಖಾಸಗಿ ಆಸ್ಪತ್ರೆಗಳನ್ನೂ ಆಶ್ರಯಿಸುವಂತಾಗಿದೆ ಎಂದು ಸದಸ್ಯರು ಮನವಿಯಲ್ಲಿ ತಿಳಿಸಿದ್ದಾರೆ.

ಕೋವಿಡ್ ನಂತರ ಆರೋಗ್ಯ ಕ್ಷೇತ್ರ ದುಬಾರಿಯಾಗಿದೆ. ಬಡವರ್ಗದವರಿಗೆ ಅನುಕೂಲ ಕಲ್ಪಿಸುವ ಈ ಆಸ್ಪತ್ರೆಯನ್ನು ಶೀಘ್ರವೇ ಪುನರ್ ಆರಂಭಿಸಬೇಕು ಎಂದು ಸಂಘಟನೆ ಸದಸ್ಯರು ಮನವಿ ಮಾಡಿದ್ದಾರೆ.

'15 ದಿನಗಳೊಳಗೆ ಗುಜರಿ ಅಂಗಡಿ ತೆರವು'

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಜನವಸತಿ ಪ್ರದೇಶದಲ್ಲಿ ಇರುವ ಗುಜರಿ ಅಂಗಡಿಗಳನ್ನು 15 ದಿನಗಳ ಒಳಗೆ ತೆರವು ಮಾಡಬೇಕು ಎಂದು ಶಾಸಕ ಎಸ್. ಮುನಿರಾಜು ಸೂಚನೆ ನೀಡಿದ್ದಾರೆ.

ಲಗ್ಗೆರೆಯ ಚಾಮುಂಡಿ ನಗರದಲ್ಲಿ ಹೈಟೆನ್ಶನ್ ಲೈನ್ ಸ್ಟ್ರೀಟ್‌ನಲ್ಲಿರುವ ಟ್ರಾನ್ಸ್‌ಫಾರ್ಮರ್ ಸ್ಫೋಟಗೊಂಡು ಗುಜರಿ ಅಂಗಡಿ ಹಾಗೂ ಸುತ್ತಲಿನ ಮನೆಗಳು ಸುಟ್ಟು ಹೋಗಿದ್ದವು. ಈ ಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲಿಸಿದ ಶಾಸಕರು ಈ ಸೂಚನೆ ನೀಡಿದರು.

'ನಮ್ಮ ಮನೆಯ ರೂಮ್, ಅಡುಗೆ ಮನೆ ಕಿಟಕಿ ಒಡೆದು ಹೋಗಿವೆ. ಗೋಡೆ ಸುಟ್ಟಿದೆ. ಅದನ್ನೆಲ್ಲ ಸರಿ ಮಾಡಿಸಲು ಅಂದಾಜು ₹1.5 ಲಕ್ಷ ಬೇಕಾಗುತ್ತದೆ' ಎಂದು ಪಕ್ಕದ ಮನೆ ಮಾಲೀಕ ಕಿರಣ್ ಶಾಸಕರಿಗೆ ದೂರು ನೀಡಿದರು.

ಈ ಪ್ರದೇಶಲ್ಲಿ ಯಾವುದೇ ಅನುಮತಿ ಪಡೆಯದೇ ಗುಜರಿ ಅಂಗಡಿ ಇಟ್ಟುಕೊಂಡಿದ್ದಾರೆ. ಇದರಿಂದ ಹಾವು, ಚೇಳು, ಇಲಿ ಕಾಟವೂ ಅತಿಯಾಗಿತ್ತು. ಗುಜರಿ ಅಂಗಡಿ ತೆರವುಗೊಳಿಸಬೇಕು ಎಂದು ಮಹಾದೇವಿ ಮತ್ತು ಪಾರ್ವತಿ ಶಾಸಕರಿಗೆ ಮನವಿ ಸಲ್ಲಿಸಿದರು.

ನವರಾತ್ರಿ ವಿಶೇಷ

ಸಾಯಿ ಚಂಡಿಕಾಂಬ ಸಪ್ತಾಹ: ಆಯೋಜನೆ ಮತ್ತು ಸ್ಥಳ: ಸತ್ಯಸಾಯಿ ಆಶ್ರಮ, ಕಾಡುಗೋಡಿ, ಬೆಳಿಗ್ಗೆ ಮತ್ತು ಸಂಜೆ 5 ರಿಂದ

'ನಿಮಿಷಾಂಬಾದೇವಿಗೆ ಧನಲಕ್ಷ್ಮಿ ಅಲಂಕಾರ': ಆಯೋಜನೆ ಮತ್ತು ಸ್ಥಳ: ನಿಮಿಷಾಂಬಾ ದೇವಿ ದೇವಸ್ಥಾನ, ಅಕ್ಕಿಪೇಟೆ ಹತ್ತಿರ, ಓ.ಟಿ.ಸಿ. ರಸ್ತೆ

ದೇವಿಗೆ ಚಿಕ್ಕ ಕಡ್ಲೆಕಾಳು, ಮಲ್ಲಿಗೆ ಮೊಗ್ಗಿನ ಅಲಂಕಾರ: ಆಯೋಜನೆ ಮತ್ತು ಸ್ಥಳ: ಮಹೇಶ್ವರಿ ದೇವಸ್ಥಾನ ಟ್ರಸ್ಟ್,ಮಲ್ಲೇಶ್ವರ

ಸ್ಕಂದಮಾತಾ ದೇವಿಯ ಆವಾಹನೆ, ಸ್ಕಂದಮಾತಾ ಹೋಮ, ಕುಂಕುಮಾರ್ಚನೆ, ಪುಷ್ಪಾರ್ಚನೆ, 108 ಜಪ ಪಾರಾಯಣ, ಚಂಡಿ ಪಾರಾಯಣ, ಮಹಾ ಮಂಗಳಾರತಿ, ಆಯೋಜನೆ: ತ್ರಿಕೋನ ಶಕ್ತಿ ಪೀಠ, ಸ್ಥಳ: ಸಾತನೂರು, ಯಲಹಂಕ, ಬೆಳಿಗ್ಗೆ 9ರಿಂದ

ದೇವಿಗೆ ಮಹಾಭಿಷೇಕ, ಮುತ್ತಿನ ಅಲಂಕಾರ: ಸಾಮೂಹಿಕ ಲಲಿತ ಸಹಸ್ರ ಪಾರಾಯಣ ಮಧ್ಯಾಹ್ನ 1.30ಕ್ಕೆ, ಭಕ್ತಿ ಗೀತೆಗಳು: ಮಕ್ಕಳಿಂದ, ಸಂಜೆ 6.30ಕ್ಕೆ, ಆಯೋಜನೆ ಮತ್ತು ಸ್ಥಳ: ಸರ್ಕಲ್ ಮಾರಮ್ಮ ದೇವಸ್ಥಾನ, ಮಲ್ಲೇಶ್ವರ

ವಚನ ನವರಾತ್ರಿ: ಆಶಯ ನುಡಿ: ಗುಂಡೀಗೆರೆ ವಿಶ್ವನಾಥ್, 'ವ್ರತಶೀಲೆ ಮಸಣಮ್ಮ ದಸರಯ್ಯ' ಕುರಿತು ಉಪನ್ಯಾಸ: ವಿಜಯ ಮಂಜಪ್ಪ, ಅತಿಥಿಗಳು: ಚಂದ್ರಕಲ ಹಾರಕೂಡೆ, ಲಕ್ಷ್ಮೀ ಪ್ರಭುರಾಜ್, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಬಸವ ಬೆಳಕು, ದೊಡ್ಡಬಸ್ತಿ ಮುಖ್ಯರಸ್ತೆ, ಕಲ್ಯಾಣ ಗೃಹನಿರ್ಮಾಣ ಸಹಕಾರ ಸಂಘ ಬಡಾವಣೆ, ಸಂಜೆ 5

ದೇವಿ ಸ್ತೋತ್ರ ಪಠಣ, ಚಲನಚಿತ್ರ ಉತ್ಸವ: 'ರಂಗಪ್ರವೇಶ' ಚಲನಚಿತ್ರ ಪ್ರದರ್ಶನ, ಆಯೋಜನೆ ಮತ್ತು ಸ್ಥಳ: ಕಪ್ಪಣ್ಣ ಅಂಗಳ, ಜೆ.ಪಿ. ನಗರ, ಸಂಜೆ 5ರಿಂದ

ದೇವಿಗೆ ಶೃಂಗೇರಿ ಗಜಲಕ್ಷ್ಮಿ ಅಲಂಕಾರ: ಭಜನೆ, ಸಂಗೀತ ಕಾರ್ಯಕ್ರಮ, ಆಯೋಜನೆ ಮತ್ತು ಸ್ಥಳ: ಮಾತಾ ಅನ್ನಪೂರ್ಣೇಶ್ವರಿ ದೇವಾಲಯ, ಬ್ಯಾಂಕ್ ಕಾಲೊನಿ, ಕೋಣನಕುಂಟೆ, ಸಂಜೆ 5.30ರಿಂದ

ದೇವಿಗೆ ಅಭಿಷೇಕ, ಮಹಾಲಕ್ಷ್ಮಿ ಅಲಂಕಾರ: ಲಲಿತಾ ಸಹಸ್ರನಾಮ ಪಾರಾಯಣ: ಆಯೋಜನೆ ಮತ್ತು ಸ್ಥಳ: ಬಂಡೆ ಮಹಾಂಕಾಳಿ ದೇವಾಲಯ ವಿಶ್ವಸ್ಥ ಮಂಡಳಿ, ಗುಟ್ಟಹಳ್ಳಿ, ಸಂಜೆ 6

ದುರ್ಗಾ ಮಹೇಶ್ವರಮ್ಮ ದೇವಿಗೆ 'ಸ್ಕಂದಮಾತಾ ದೇವಿ ಅಲಂಕಾರ': **ಭಜನೆ:** ದಿವ್ಯ ಉಪಾಧ್ಯಯ, ವಾಗದೇವಿ ಸಂಗೀತ ಪಾಠಶಾಲೆಯ ಮಕ್ಕಳಿಂದ, ಆಯೋಜನೆ: ದುರ್ಗಾ ಮಹೇಶ್ವರಮ್ಮ ದೇವಾಲಯ, ಕೃಷ್ಣಾ ರಾಜಪುರ, ಸಂಜೆ 6

ದೇವಿಗೆ ಪೂಜೆ: ಮಹಾ ನೀರಾಜನ, ತೀರ್ಥಪ್ರಸಾದ ವಿನಿಯೋಗ, ಲಲಿತ ಸಹಸ್ರನಾಮ ಪಾರಾಯಣ, ಭಕ್ತಿ ಗೀತೆಗಳು: ಕಾತ್ಯಾಯಿನಿ ಸುಧೀಂದ್ರ, ಆಯೋಜನೆ: ಸನಾತನ ಭಕ್ತ ಮಂಡಲಿ ಟ್ರಸ್ಟ್, ಸ್ಥಳ: ಕೋದಂಡ ರಾಮ ದೇವಸ್ಥಾನ, ವಿಜಯನಗರ, ಸಂಜೆ 6

ನವರಾತ್ರಿ ಸಾಂಸ್ಕೃತಿಕ ಸಿಂಚನ: ಸಾಂಸ್ಕೃತಿಕ ಕಾರ್ಯಕ್ರಮ: ಎಂಇಎಸ್ ಕಾಲೇಜು ವಿದ್ಯಾರ್ಥಿಗಳಿಂದ, ಆಯೋಜನೆ: ಬ್ರಾಹ್ಮಣ ಸಭಾ, ಸ್ಥಳ: ಗಾಯತ್ರಿ ಮಂದಿರ, ಕೆಂಗೇರಿ ಉಪನಗರ, ಸಂಜೆ 6ರಿಂದ

ದೇವಿಗೆ ಸ್ವರ್ಣಲಕ್ಷ್ಮಿ ಅಲಂಕಾರ: ಸೂಕ್ತಹೋಮ, ಆಯೋಜನೆ ಮತ್ತು ಸ್ಥಳ: ಮಾರಮ್ಮ ಅಂಜನೇಯಸ್ವಾಮಿ ಸೇವಾ ಟ್ರಸ್ಟ್, ಚಿನ್ನಯ್ಯನಪಾಳ್ಯ, ಸಂಜೆ 6

ಯಲ್ಲಮ್ಮ ದೇವಿಗೆ ನಾಗದೇವತೆ ಅಲಂಕಾರ: ಆಯೋಜನೆ ಮತ್ತು ಸ್ಥಳ: ಯಲ್ಲಮ್ಮದೇವಿ ದೇವಾಲಯ, ದೇಶದಪೇಟೆ ರಸ್ತೆ, ಯಲಹಂಕ, ಸಂಜೆ 6.30

ದೇವಿಗೆ ಇಂದ್ರಾಣಿ ಅಲಂಕಾರ, ಲಲಿತ ಹೋಮ, ಗಾಯನ: ಬಾಲಸುಬ್ರಹ್ಮಣ್ಯ ಶರ್ಮ, ಆಯೋಜನೆ ಮತ್ತು ಸ್ಥಳ: ಶೃಂಗೇರಿ ಶಂಕರಮಠ ಶಂಕರಪುರ, ಸಂಜೆ 7

ದೊಡ್ಡಮ್ಮ ದೇವಿಗೆ ಮೆಕ್ಕೆಜೋಳ ಅಲಂಕಾರ: ಆಯೋಜನೆ ಮತ್ತು ಸ್ಥಳ: ದೊಡ್ಡಮ್ಮ ದೇವಿ ಅಭಿವೃದ್ಧಿ ಸಮಿತಿ, ಚಿಕ್ಕದೇವಸಂದ್ರ, ಕೆ.ಆರ್. ಪುರ, ಸಂಜೆ 7.30

ನಗರದಲ್ಲಿ ಇಂದು

ಎಂ.ಎಸ್.ಎಸ್ ಮೂರ್ತಿ ಅವರ 'ಪ್ರೊ. ಸಿ.ಎನ್.ಆರ್.ರಾವ್ ವಿಜ್ಞಾನ ದೊಳಗೊಂದು ಜೀವನ' ಪುಸ್ತಕ ಬಿಡುಗಡೆ: ಚಂದ್ರಶೇಖರ ಕಂಬಾರ, ಅಧ್ಯಕ್ಷತೆ: ಗಿರಿಧರ್ ಯು. ಕುಲಕರ್ಣಿ, ಉಪಸ್ಥಿತಿ: ಸಿ.ಎನ್. ಆರ್. ರಾವ್, ಎ. ರಮೇಶ ಉಡುಪ, ಆಯೋಜನೆ: ನವಕರ್ನಾಟಕ ಪ್ರಕಾಶನ, ಸ್ಥಳ: ನೆವಿಲ್ ಮಾಟ್‌ಹಾಲ್, ಜವಾಹರಲಾಲ್ ನೆಹರೂ ಉನ್ನತ ವಿಜ್ಞಾನ ಸಂಶೋಧನಾ ಕೇಂದ್ರ, ಜಕ್ಕೂರು, ಬೆಳಿಗ್ಗೆ 10.30

ಚಂದ್ರಶೇಖರ ಕಂಬಾರ

'ಕಾವ್ಯೇಷು ರಮ್ಯಂ ನಾಟಕಂ' ಬಹುಮಾನ ವಿತರಣೆ: ಆರ್.ಪಿ. ಮೋಹನ್, ಅತಿಥಿಗಳು: ರಮೇಶ್ ಪಂಡಿತ್, ದರ್ಶನ್ ಪವಾರ್, ಚಂದನ್, ಎಂ.ಬೈರೇಗೌಡ, ಮಾಧುರಿ ಶಿವಾಂಗಿ, ಅಧ್ಯಕ್ಷತೆ: ನರಸಿಂಹ ನಾಯ್ಕ, ಆಯೋಜನೆ: ಭಾರತ್ ಎಲೆಕ್ಟ್ರಾನಿಕ್ಸ್ ಲಲಿತಕಲಾ ಸಂಘ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಜಾಲಹಳ್ಳಿ, ಸಂಜೆ 6

'ಮೈಸೂರು ಮಹಾರಾಜರ ಕೊಡುಗೆ' ಕುರಿತು ಉಪನ್ಯಾಸ: ಡಿ.ಬಿ. ಮಲ್ಲಿಕಾರ್ಜುನಸ್ವಾಮಿ ಮಹಾಮನೆ, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ವಕೀಲ ಅಮಿತ್ ಕೇಶವಮೂರ್ತಿ ಕೊಲೆ ಪ್ರಕರಣ

ಕಾರು ಜನರಿಲ್ಲದ ಸ್ಥಳದಲ್ಲಿ ನಿಂತಿತ್ತು..!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನಸಂದಣಿ ಇಲ್ಲದ ಸ್ಥಳದಲ್ಲಿ ನಿಂತಿದ್ದ ಸ್ವಿಫ್ಟ್ ಕಾರಿನ ಹಿಂದೆ ನನ್ನ ಇನ್ನೋವಾ ಕಾರನ್ನು ನಿಲ್ಲಿಸಿದೆ. ಅದು ನನ್ನ ಹೆಂಡತಿಯ ಕಾರು ಇರಬಹುದು ಎಂದು ಅದರ ಬಳಿ ಹೋಗಿ ನೋಡಿದೆ. ಕಾರಿನ ಬಲಬದಿಯ ಗ್ಲಾಸನ್ನು ಇಳಿಸಿದ ನನ್ನ ಹೆಂಡತಿ ಡ್ರೈವರ್ ಸೀಟಿನಲ್ಲಿ ಕುಳಿತಿದ್ದಳು. ಅವಳ ಪಕ್ಕದ ಸೀಟಿನಲ್ಲಿ ಒಬ್ಬ ಅಪರಿಚಿತ ವ್ಯಕ್ತಿಯೂ ಇದ್ದ..!

ನೆಲಮಂಗಲದ ಖ್ಯಾತ ವಕೀಲ ಕೇಶವಮೂರ್ತಿ ಅವರ ಪುತ್ರ ವಕೀಲ ಅಮಿತ್ ಕೇಶವಮೂರ್ತಿ ಕೊಲೆ ಪ್ರಕರಣದ ಅಂತಿಮ ವಿಚಾರಣೆಯನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಯ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ಪುಂಡಲೀಕ ಹೊಸಮನಿ ಬುಧವಾರ ಮುಂದುವರಿಸಿದರು.

ವಿಚಾರಣೆ ವೇಳೆ ಪ್ರಕರಣದ ಪ್ರಮುಖ ಆರೋಪಿ ರಾಜೇಶ್ (ಆತ್ಮಹತ್ಯೆಗೆ ಶರಣಾದ ಶ್ರುತಿಗೌಡ ಪತಿ) ಅಪರಾಧ ಪ್ರಕ್ರಿಯಾ ಸಂಹಿತೆ-1973ರ ಕಲಂ 313ರ ಅನುಸಾರ ನ್ಯಾಯಾಧೀಶರಿಗೆ ನೀಡಿರುವ 13 ಪುಟಗಳ ಲಿಖಿತ ಹೇಳಿಕೆಯನ್ನು ವಿಶೇಷ ಪ್ರಾಸಿಕ್ಯೂಟರ್ ಸಿ.ಎಚ್. ಹನುಮಂತರಾಯ ನ್ಯಾಯಾಧೀಶರಿಗೆ ಓದಿ ಹೇಳಿ ವಿವರಿಸಿದರು.

ಅಮಿತ್ ಮತ್ತು ಶ್ರುತಿ

ರಾಜೇಶ್ ಹೇಳಿಕೆ ಮುಖ್ಯಾಂಶ: ನನ್ನನ್ನು ನೋಡಿದೊಡನೆಯೇ ಅಪರಿಚಿತ ವ್ಯಕ್ತಿ ಮತ್ತು ನನ್ನ ಹೆಂಡತಿ ಗಲಿಬಿಲಿಗೆ ಒಳಗಾದರು. ಆಗ ನಾನು ಯಾರು ಈ ಅಪರಿಚಿತ ವ್ಯಕ್ತಿ, ಏಕೆ ಇಲ್ಲಿದ್ದೀಯ, ಏನಿದು ನಿನ್ನ ಅವಸ್ಥೆ, ಎದ್ದು ನಡಿ, ಮನೆಗೆ ಹೋಗೋಣ ಎಂದೆ.

ಇದಕ್ಕೆ ನನ್ನ ಹೆಂಡತಿ, ನೀನು ಏಕೆ ಇಲ್ಲಿಗೆ ಬಂದೆ?, ನಿನ್ನನ್ನು ಇಲ್ಲಿಗೆ ಬರಲು ಹೇಳಿದ್ದು ಯಾರು?, ಮನೆಗೆ ಬರುತ್ತೇನೆ ಎಂದು ನಿನಗೆ ಹೇಳಿಲ್ಲವಾ, ಮುಚ್ಚಿಕೊಂಡು ಹೊರಡು. ಮನೆಗೆ ಬರುವುದು ನನಗೆ ಗೊತ್ತಿದೆ. ನೀನ್ಯಾವಾನೊ ಕೇಳೋದಕ್ಕೆ ಅಂತಾ ಬೈದಳು. ಆಗ ನಾನು ಬರುತ್ತೀಯೊ ಇಲ್ಲವೋ ಅಂತಾ ಹೇಳಿ ಕಾರಿನ ಬಲಭಾಗದ ಬಾಗಿಲು ತೆಗೆದು ಹೊರಗಡೆ ಎಳೆದುಕೊಳ್ಳಲು ಹೋದಾಗ ಅವಳು ತನ್ನ ಬಳಿ ಇದ್ದ ಪಿಸ್ತೂಲು ತೆಗೆದು ನನ್ನನ್ನು ಸುಟ್ಟು ಹಾಕುತ್ತೇನೆ ಎಂದು ಬೆದರಿಸಿದಳು.

ಗಾಬರಿಗೊಂಡ ನಾನು ಅವಳ ಕೈಗಳನ್ನು ಹಿಡಿದುಕೊಂಡು ಪಿಸ್ತೂಲನ್ನು ಕಿತ್ತುಕೊಳ್ಳಲು ಪ್ರಯತ್ನ ಮಾಡಿದಾಗ ಅಪರಿಚಿತ ವ್ಯಕ್ತಿಯೂ ಅವಳ ಕೈಯಲ್ಲಿದ್ದ ಪಿಸ್ತೂಲನ್ನು ಕಿತ್ತುಕೊಳ್ಳಲು ಹೋದ. ಈ ಪ್ರಯತ್ನದಲ್ಲಿ ಆಕಸ್ಮಿಕವಾಗಿ ಪಿಸ್ತೂಲು ಫೈರ್ ಆಗಿ ಅಪರಿಚಿತ ವ್ಯಕ್ತಿಗೆ ಗಾಯವಾಗಿದ್ದನ್ನು ಗಮನಿಸಿದೆ. ಆಗ ನನ್ನ ಹೆಂಡತಿ ಅಪರಿಚಿತ ವ್ಯಕ್ತಿಯನ್ನು, ನನ್ನ ಕಾರಿನಲ್ಲಿ ಕರೆದುಕೊಂಡು ಹೋಗುತ್ತೇನೆ. ನೀವು ನನ್ನ ಹಿಂಬಾಲಿಸಿ ಎಂದಳು.

ಗಾಯಾಳುವನ್ನು ಸಪ್ತಗಿರಿ ಆಸ್ಪತ್ರೆಗೆ ಕರೆದುಕೊಂಡು ಹೋದಳು. ಆಗ ನಾನು, ನಮ್ಮ ಕಾರಿನ ಡ್ರೈವರ್ ಮತ್ತು ನನ್ನ ತಂದೆ ನಮ್ಮ ಇನ್ನೋವಾ ಕಾರಿನಲ್ಲಿ ಕುಳಿತುಕೊಂಡು ಅವಳನ್ನು ಹಿಂಬಾಲಿಸಿದೆವು. ಆಸ್ಪತ್ರೆಯ ಬಳಿ ಹೆಂಡತಿಗೆ ಸಹಕರಿಸಲು ಹೋದೆವು. ಆಗ ಅವಳು ನೀವು ಹೊರಡಿ ನಾನು ನೋಡಿಕೊಳ್ಳುತ್ತೇನೆ ಎಂದು ನಮ್ಮನ್ನು ಅಲ್ಲಿಂದ ವಾಪಸು ಕಳಿಸಿದಳು. ಆಗ ನನಗೆ ಗಾಬರಿ ಹೆಚ್ಚಾಯಿತು. ಒಬ್ಬಳೇ ಇದ್ದಾಳೆ ಏನಾದರೂ ಆಗಬಹುದು ಎಂದು ಆತಂಕ ವ್ಯಕ್ತಪಡಿಸಿದೆ ಮತ್ತು ಪೊಲೀಸ್ ಕಮಿಷನರ್‌ಗೆ ದೂರು ನೀಡೋಣ ಎಂದು ನೇರವಾಗಿ ಇನ್ಫೆಂಟ್ರಿ ರಸ್ತೆಯಲ್ಲಿರುವ ಪೊಲೀಸ್ ಕಮಿಷನರ್ ಕಚೇರಿಗೆ ಬಂದೆವು. ಕಮಿಷನರ್ ಕಚೇರಿ ಬಳಿ ಬಂದಾಗ ಸಂಜೆ 5ರಿಂದ 5.30 ಆಗಿತ್ತು...

ವಿವರವಾದ ಪ್ರಾಸಿಕ್ಯೂಷನ್ ಹೇಳಿಕೆಯನ್ನು ಆಲಿಸಿದ ನ್ಯಾಯಾಧೀಶ ಪುಂಡಲೀಕ ಹೊಸಮನಿ, 'ಆರೋಪಿ ರಾಜೇಶ್ ತನ್ನ ಪತ್ನಿ ಶ್ರುತಿಯನ್ನು ಹಿಂಬಾಲಿಸಿಕೊಂಡು ಬಂದ ನಡೆಯನ್ನು ಏನೆಂದು ಬಣ್ಣಿಸುತ್ತೀರಿ' ಎಂದು ಹನುಮಂತರಾಯ ಅವರನ್ನು ಪದೇ ಪದೇ ಪ್ರಶ್ನಿಸಿದರು. ಆದರೆ, ಹನುಮಂತರಾಯರು, 'ಮುಂದುವರಿದ ವಾದವನ್ನು ಲಿಖಿತ ರೂಪದಲ್ಲಿ ಸಲ್ಲಿಸುತ್ತೇನೆ. ಅದಕ್ಕೆ ಅನುಮತಿ ನೀಡಬೇಕು' ಎಂದು ಕೋರಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಾಧೀಶರು ಆರೋಪಿ ಪರ ವಕೀಲ ಶಂಕರಪ್ಪ ಅವರಿಗೆ, 'ಮುಂದಿನ ಮುದ್ದತ್ತಿನ ದಿನ ನಿಮ್ಮ ವಾದ ಆರಂಭಿಸಿ' ಎಂದು ಸೂಚಿಸಿ ವಿಚಾರಣೆಯನ್ನು ಇದೇ 21ಕ್ಕೆ ಮುಂದೂಡಿದರು.

ಏನಿದು ಘಟನೆ?

ಸೋಲದೇವನಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿರುವ ಆಚಾರ್ಯ ಎಂಜಿನಿಯರಿಂಗ್ ಕಾಲೇಜು ಬಳಿ 2017ರ ಜನವರಿ 13ರಂದು ಮಧ್ಯಾಹ್ನ 3.15ರ ಸಮಯದಲ್ಲಿ ಅಮಿತ್ ಕೇಶವಮೂರ್ತಿ ಅವರು ಆರೋಪಿ ರಾಜೇಶ್ ಅವರ ಪತ್ನಿ ಪಿಡಿಒ (ಪಂಚಾಯಿತಿ ಅಭಿವೃದ್ಧಿ ಅಧಿಕಾರಿ) ಆಗಿದ್ದ ಶ್ರುತಿಗೌಡ ಅವರೊಂದಿಗೆ ಸ್ವಿಫ್ಟ್ ಕಾರಿನಲ್ಲಿ ಕುಳಿತಿದ್ದರು. ಈ ಕಾರನ್ನು ಹಿಂಬಾಲಿಸಿಕೊಂಡು ಬಂದಿದ್ದ ರಾಜೇಶ್, ಕಾರಿನ ಬಾಗಿಲು ತೆರೆದು ತಮ್ಮ ಬಳಿ ಇದ್ದ ಪಿಸ್ತೂಲಿನಿಂದ ಅಮಿತ್ ಮೇಲೆ ಏಕಾಏಕಿ ಗುಂಡು ಹಾರಿಸಿ ಕೊಂದಿದ್ದರು.

ಶ್ರುತಿ ಗೌಡ ಅವರ ನಡೆ ಮತ್ತು ಚಟುವಟಿಕೆಗಳ ಮೇಲೆ ಸದಾ ಸಂಶಯ ವ್ಯಕ್ತಪಡಿಸುತ್ತಿದ್ದ ರಾಜೇಶ್, ಶ್ರುತಿ ಬಳಸುವ ಕಾರಿಗೆ ಜಿಪಿಎಸ್ (ಗ್ಲೋಬಲ್ ಪೊಸಿಷನಿಂಗ್ ಸಿಸ್ಟಮ್) ಅಳವಡಿಸಿ ಅದರ ಮುಖಾಂತರ ಅವರಿದ್ದ ಸ್ಥಳಕ್ಕೆ ಹಿಂಬಾಲಿಸಿಕೊಂಡು ಬಂದಿದ್ದರು. ಅಮಿತ್ ಮೃತಪಟ್ಟ ಸುದ್ದಿ ತಿಳಿದ ನಂತರ ಶ್ರುತಿಗೌಡ ಲಾಡ್ಜ್‌ನಲ್ಲಿ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದರು' ಎಂದು ದೋಷಾರೋಪ ಪಟ್ಟಿಯಲ್ಲಿ ವಿವರಿಸಲಾಗಿದೆ. ಅಮಿತ್ ಕೇಶವಮೂರ್ತಿ ಅಮೆರಿಕದಲ್ಲಿ ಎಲ್‌ಎಲ್‌ಎಂ ಸ್ನಾತಕೋತ್ತರ ಪದವಿ ಪಡೆದಿದ್ದರು. ನೆಲಮಂಗಲ ಮತ್ತು ಬೆಂಗಳೂರು ನಗರದಲ್ಲಿ ವಕೀಲಿಕೆ ನಡೆಸುತ್ತಿದ್ದರು.

ನವವರ್ಣ

ನವರಾತ್ರಿಯ ನಾಲ್ಕನೆಯ ದಿನ ಶಕ್ತಿಸ್ವರೂಪಿಣಿಯಾದ ದುರ್ಗಾದೇವಿಯನ್ನು 'ಕೂಷ್ಮಾಂಡಾ' ರೂಪದಲ್ಲಿ ಪೂಜಿಸಲಾಗುತ್ತದೆ. ಸೃಷ್ಟಿಗೆ ಕಾರಣಳಾಗಿರುವವಳೇ ಜಗನ್ಮಾತೆ; ಅವಳ ಈ ಸೃಷ್ಟಿತತ್ತ್ವಕ್ಕೆ ಸಂಕೇತವೇ ಅವಳ ಈ ಕೂಷ್ಮಾಂಡರೂಪ. ಸೃಷ್ಟಿಯ ಆದಿಶಕ್ತಿಯೂ ಅವಳೇ. ಈ ಶಕ್ತಿಯು ಅನಂತವಾದುದು. ಈ ಅನಂತತತ್ತ್ವಕ್ಕೆ ಪ್ರತೀಕವೇ ಆಕಾಶ; ಇದರ ಬಣ್ಣ ನೀಲಿ.
ಶಕ್ತಿಯ ಅನಂತಸ್ವರೂಪದ ಆರಾಧನೆಯಲ್ಲಿ ನೀಲಿಬಣ್ಣದ ಸೀರೆಯನ್ನುಟ್ಟು ನಲಿದಿರುವವರ ಕೆಲವು ಚಿತ್ರಗಳು ಇಲ್ಲಿವೆ.

ಕೇಸರಿ ಬಣ್ಣದ ಧಿರಿಸನ್ನು ಧರಿಸಿ ತೆಗೆಸಿಕೊಂಡ ಚಿತ್ರಗಳನ್ನು ಗುರುವಾರ ಸಂಜೆ 4 ಗಂಟೆಯೊಳಗೆ ಕಳುಹಿಸಿ. ಹೆಸರು, ವಿಳಾಸವೂ ಇರಲಿ... 7338018541

ಮೀನಾಕುಮಾರಿ ಮತ್ತು ಗೆಳತಿಯರು, ಗೋವಿಂದರಾಜ ನಗರ, ಬೆಂಗಳೂರು

ಅನಿಕೇತನ ಮಹಿಳಾ ಸಂಘದ ಸದಸ್ಯರು. ಬಿಟಿಎಂ ಬಡಾವಣೆ, ಬೆಂಗಳೂರು

ಶಿಲ್ಪ, ಅನುರಾಧ, ಸಂಧ್ಯಾ ಮತ್ತು ಸ್ಮೃತಿ, ವಿನಾಯಕನಗರ, ನಾಗಸಂದ್ರ, ಬೆಂಗಳೂರು

ಮಂತ್ರಿ ಡೆವಲಪರ್ಸ್ ಸಿಬ್ಬಂದಿ, ವಿಠಲ ಮಲ್ಯ ರಸ್ತೆ, ಬೆಂಗಳೂರು

ಬೆಸ್ಕಾಂ ಸಿಬ್ಬಂದಿ, ಕೆ.ಆರ್. ವೃತ್ತ, ಬೆಂಗಳೂರು

ಎಸ್‌ಜೆಆರ್ ಮಹಿಳಾ ಕಾಲೇಜಿನ ಸಿಬ್ಬಂದಿ, ರಾಜಾಜಿನಗರ, ಬೆಂಗಳೂರು

ಚಂದ್ರಕಲಾ ಮತ್ತು ಸ್ನೇಹಿತೆಯರು, ಆನೇಕಲ್

ದೈವಜ್ಞ ಬ್ರಾಹ್ಮಣ ಜ್ಞಾನೇಶ್ವರಿ ಮಹಿಳಾ ಮಂಡಳಿಯ ಸದಸ್ಯೆಯರು, ಹಂಪಿನಗರ, ಬೆಂಗಳೂರು

ಕುಸುಮ ಮತ್ತು ಗೆಳತಿಯರು, ಆನೇಕಲ್

ಗ್ಲೋಬಲ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸಿಬ್ಬಂದಿ, ರಾಜರಾಜೇಶ್ವರಿ ನಗರ, ಬೆಂಗಳೂರು

ನೇತಾಜಿ ಪಾಪ್ಯುಲರ್ ಇಂಗ್ಲಿಷ್ ಹೈಸ್ಕೂಲ್‌ನ ಶಿಕ್ಷಕಿಯರು, ಐಜೂರು, ರಾಮನಗರ

ಔಷಧ ನಿಯಂತ್ರಣ ಇಲಾಖೆ ಸಿಬ್ಬಂದಿ, ಅರಮನೆ ರಸ್ತೆ, ಬೆಂಗಳೂರು

ದೀಪ್ತಿ, ಆಶಾ ಮತ್ತು ಸುಜಾತಾ, ಬೆಂಗಳೂರು

ಶ್ರಾವಣಿ, ಕೆಂಗೇರಿ

ಗ್ಲೋಬಲ್ ಅಕಾಡೆಮಿ ಆಫ್ ಟೆಕ್ನಾಲಜಿ ಕಾಲೇಜಿನ ವಿದ್ಯಾರ್ಥಿಗಳು, ಬೆಂಗಳೂರು

ಕ್ಲೂನಿ ಕಾನ್ವೆಂಟ್ ಹೈಸ್ಕೂಲ್ ಶಿಕ್ಷಕಿಯರು, ಮಲ್ಲೇಶ್ವರ, ಬೆಂಗಳೂರು

ಡಾಲಿ ಮತ್ತು ಸ್ನೇಹಿತೆಯರು, ಬೆಂಗಳೂರು

ನಾಗವೇಣಿ ಮತ್ತು ಗೆಳತಿಯರು, ಸುಲ್ತಾನಪಾಳ್ಯ, ಬೆಂಗಳೂರು

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸಿಬ್ಬಂದಿ, ಬೆಂಗಳೂರು

ಛಾಯಾ ಮತ್ತು ಗೆಳತಿಯರು, ಕಾವೇರಿ ಭವನ, ಬೆಂಗಳೂರು

ಅನುಪಮ, ಅನಸೂಯ, ಇಂದಿರಾ ಮತ್ತು ಮೀನಾಕ್ಷಿ, ಬೆಂಗಳೂರು

ಬಸವೇಶ್ವರ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಸಿಬ್ಬಂದಿ, ರಾಜಾಜಿನಗರ, ಬೆಂಗಳೂರು

ಗೀತಾ ಸುರೇಶ ಮತ್ತು ಸ್ನೇಹಿತೆಯರು, ಬೆಂಗಳೂರು

‘ಪದೇ ಪದೇ ಪಿ.ಎಂ ಭೇಟಿ ಮಾಡುವ ಕುಮಾರಸ್ವಾಮಿ’

ಪ್ರಜಾವಾಣಿ ವಾರ್ತೆ

ಮೈಸೂರು: ‘ನರೇಂದ್ರ ಮೋದಿ ಪ್ರಧಾನಿಯಾದರೆ ದೇಶ ಬಿಟ್ಟು ಹೋಗುತ್ತೇನೆ ಎಂದಿದ್ದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಈಗ ಪದೇ ಪದೇ ದೆಹಲಿಗೆ ಹೋಗಿ ಮೋದಿ ಅವರನ್ನೇ ಭೇಟಿಯಾಗುತ್ತಿದ್ದಾರೆ’ ಎಂದು ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ ಟೀಕಿಸಿದರು.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಸರ್ಕಾರದ ವಿರುದ್ಧ ವೈಎಸ್ಟಿ, ಎಸ್‌ಎಸ್‌ಟಿ ಹಣ ಎಂದೆಲ್ಲಾ ಆರೋಪಿಸುತ್ತಿದ್ದಾರೆ. ವೈಯಕ್ತಿಕವಾಗಿ ಅವರ ಬಗ್ಗೆ ಬಹಳ ಗೌರವವಿದೆ. ನಾವೂ ಎಚ್‌ಡಿಕೆ ಟ್ಯಾಕ್ಸ್ ಎಂದೆಲ್ಲಾ ಹೆಸರು ಕೊಡಬಹುದು’ ಎಂದರು.

‘ಹಳೇ ಮೈಸೂರು ಭಾಗದಲ್ಲಿ ಅವರ ಅವಕಾಶವಾದಿ ರಾಜಕಾರಣ ಎಲ್ಲರಿಗೂ ಗೊತ್ತಿದೆ. ಅವರ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರನ್ನೇ ಬಿಟ್ಟು ಕುಟುಂಬ ರಾಜಕಾರಣ ಮಾಡುವ ಅವರು, ಕಾಂಗ್ರೆಸ್ ಬಗ್ಗೆ ಆರೋಪಿಸುತ್ತಿದ್ದಾರೆ’ ಎಂದು ಕಿಡಿಕಾರಿದರು.

ಅತ್ತಿಬೆಲೆ ಪಟಾಕಿ ದುರಂತ ಸ್ಥಳಕ್ಕೆ ಗೃಹ ಸಚಿವ ಡಾ.ಜಿ.ಪರಮೇಶ್ವರ ಭೇಟಿ

ದೆಹಲಿ ಮಾದರಿ ಪಟಾಕಿ ನಿಷೇಧಕ್ಕೆ ಚಿಂತನೆ

ಪ್ರಜಾವಾಣಿ ವಾರ್ತೆ

ಆನೇಕಲ್: ಅತ್ತಿಬೆಲೆ ಪಟಾಕಿ ದುರಂತ ಸರ್ಕಾರಕ್ಕೆ ಒಂದು ಪಾಠ. ಕಾನೂನು ಸಮಗ್ರವಾಗಿ ಪರಿಶೀಲಿಸಿ ಹೊಸ ಕಾನೂನು ರೂಪಿಸುವ ಅವಶ್ಯವಿದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ ತಿಳಿಸಿದರು.

ಅವರು ತಾಲ್ಲೂಕಿನ ಅತ್ತಿಬೆಲೆ ಪಟಾಕಿ ದುರಂತ ಸ್ಥಳಕ್ಕೆ ಬುಧವಾರ ಭೇಟಿ ನೀಡಿ ಅಧಿಕಾರಿಗಳಿಂದ ಮಾಹಿತಿ ಪಡೆದರು.

ದೆಹಲಿ ಮಾದರಿಯಲ್ಲಿ ರಾಜ್ಯದಲ್ಲಿಯೂ ಪಟಾಕಿ ನಿಷೇಧಿಸುವ ಚಿಂತನೆ ನಡೆದಿದೆ. ಮುಖ್ಯಮಂತ್ರಿಯೊಂದಿಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು. ಬೆಂಗಳೂರಿನಲ್ಲಿ ಜನಸಂಖ್ಯೆ ಹೆಚ್ಚಾಗಿದೆ. ಹಾಗಾಗಿ ದೀಪಾವಳಿ ಸಂದರ್ಭದಲ್ಲಿ ಪಟಾಕಿ ನಿಷೇಧ ಮಾಡುವ ಬಗ್ಗೆ ತುರ್ತು ಕ್ರಮ ಕೈಗೊಳ್ಳಲಾಗುವುದು ಎಂದರು.

ಆನೇಕಲ್ ತಾಲ್ಲೂಕಿನ ಅತ್ತಿಬೆಲೆ ಪಟಾಕಿ ದುರಂತದ ಸ್ಥಳಕ್ಕೆ ಗೃಹ ಸಚಿವ ಡಾ.ಜಿ.ಪರಮೇಶ್ವರ ಅವರು ಭೇಟಿ ನೀಡಿ ಅಧಿಕಾರಿಗಳಿಂದ ಮಾಹಿತಿ ಪಡೆದರು

ಅತ್ತಿಬೆಲೆ ಪಟಾಕಿ ದುರಂತದಲ್ಲಿ ಕಂದಾಯ, ಪೊಲೀಸ್, ಅಗ್ನಿಶಾಮಕ ಮತ್ತು ಸಾರಿಗೆ ಇಲಾಖೆ ವೈಫಲ್ಯ ಕಂಡು ಬಂದಿದೆ. ಇದರಿಂದಾಗಿ 17 ಮಂದಿ ಮೃತಪಟ್ಟಿದ್ದಾರೆ. ಈ ಎಲ್ಲ ಘಟನೆಗಳಿಗೆ ಸಂಬಂಧಿಸಿದಂತೆ ಸಿಐಡಿ ತನಿಖೆ ನಡೆಯುತ್ತಿದೆ. ಸರ್ಕಾರ ಮ್ಯಾಜಿಸ್ಟ್ರೇಟ್ ತನಿಖೆಗೂ ಆದೇಶ ನೀಡಿ ಮೂರು ತಿಂಗಳಲ್ಲಿ ವರದಿ ನೀಡುವಂತೆ ತಿಳಿಸಿದೆ. ವರದಿ ಕೈ ಸೇರಿದ ನಂತರ ಕ್ರಮ ಕೈಗೊಳ್ಳಲಾಗುವುದು. ನಿರ್ದಿಷ್ಟ ಮಾನದಂಡ ಅಳವಡಿಸಿ ಹೊಸ ಕಾನೂನು ತರುವ ನಿಟ್ಟಿನಲ್ಲಿ ಚಿಂತನೆ ನಡೆಸಲಾಗಿದೆ ಎಂದರು.

17ಕ್ಕೇರಿದ ಸಾವಿನ ಸಂಖ್ಯೆ

ಅತ್ತಿಬೆಲೆ ಪಟಾಕಿ ದುರಂತದಲ್ಲಿ ಗಾಯಗೊಂಡು ಸೇಂಟ್‌ಜಾನ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ತಮಿಳುನಾಡಿನ ವಾಣಿಯಾಂಬಾಡಿ ಕಾರ್ಮಿಕ ರಾಜೇಶ್ (19) ಬುಧವಾರ ಮೃತಪಟ್ಟಿದ್ದು, ಮೃತರ ಸಂಖ್ಯೆ 17ಕ್ಕೇರಿದೆ.

ಅಕ್ಟೋಬರ್ 7ರಂದು ಪಟಾಕಿ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದಾಗ ಸಂಭವಿಸಿದ ದುರಂತದಲ್ಲಿ ರಾಜೇಶ್ ತೀವ್ರವಾಗಿ ಗಾಯಗೊಂಡಿದ್ದರು.

ಘಟನೆಯಲ್ಲಿ ಗಾಯಗೊಂಡಿದ್ದ ಬಾಡಿಬಿಲ್ಡರ್ ವೆಂಕಟೇಶ್ ಅವರನ್ನು ಸೇಂಟ್ ಜಾನ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಈಗಾಗಲೇ ಮೃತಪಟ್ಟಿದ್ದಾರೆ. ಪಟಾಕಿ ಅಂಗಡಿ ಮಾಲೀಕ ನವೀನ್‌ಗೆ ಚಿಕಿತ್ಸೆ ಮುಂದುವರಿದಿದೆ.

ಸುದ್ದಿ 2 ನಿಮಿಷ

ದಸರಾ ಗೋಲ್ಡ್‌ಕಾರ್ಡ್, ಟಿಕೆಟ್ ಒಂದೇ ತಾಸಿನಲ್ಲೇ ಬಿಕರಿ!

ಮೈಸೂರು: ಜಿಲ್ಲಾಡಳಿತವು ಮೈಸೂರು ದಸರಾ ಅಂಗವಾಗಿ ಬುಧವಾರ ಬೆಳಿಗ್ಗೆ 10ಕ್ಕೆ ಬಿಡುಗಡೆ ಮಾಡಿದ 1 ಸಾವಿರ ಗೋಲ್ಡ್ ಕಾರ್ಡ್ ಹಾಗೂ ಜಂಬೂಸವಾರಿ ಮತ್ತು ಪಂಜಿನ ಕವಾಯತು ಪ್ರದರ್ಶನದ ತಲಾ 2ಸಾವಿರ ಟಿಕೆಟ್‌ಗಳು ಒಂದೇ ತಾಸಿನಲ್ಲೇ ಬಿಕರಿಯಾಗಿವೆ. ಇದರಿಂದ ₹89 ಲಕ್ಷ ವರಮಾನ ಬಂದಿದೆ. ಅವುಗಳನ್ನು ಅಧಿಕೃತ ಜಾಲತಾಣದಲ್ಲಿ ಬಿಡುಗಡೆ ಮಾಡಲಾಗಿತ್ತು. ಗೋಲ್ಡ್‌ಕಾರ್ಡ್‌ಗೆ ತಲಾ ₹6ಸಾವಿರ ನಿಗದಿಪಡಿಸಲಾಗಿತ್ತು.

ಅರಮನೆ ಆವರಣದೊಳಗೆ ದಸರಾ ಮೆರವಣಿಗೆ ವೀಕ್ಷಣೆಯ ತಲಾ ₹ 3ಸಾವಿರದ ಒಟ್ಟು 400 ಟಿಕೆಟ್‌ಗಳು, ತಲಾ ₹ 2ಸಾವಿರದ ಒಟ್ಟು 600 ಟಿಕೆಟ್‌ಗಳು ಮತ್ತು ಬನ್ನಿಮಂಟಪದಲ್ಲಿ ಪಂಜಿನ ಕವಾಯಿತು ಟಿಕೆಟ್ ತಲಾ ₹ 500ರ ಒಟ್ಟು 1ಸಾವಿರ ಟಿಕೆಟ್‌ಗಳು ಮಾರಾಟವಾಗಿವೆ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ತಿಳಿಸಿದ್ದಾರೆ.

18 ವರ್ಷದ ನಂತರ ಪಿಎಚ್‌.ಡಿ ಕನಸು ನನಸು: ಹಂಸಲೇಖ

ಮೈಸೂರು: ‘ ಪಿಎಚ್‌.ಡಿ ಪಡೆಯುವ ಕನಸು 18 ವರ್ಷದ ನಂತರ ನನಸಾಗಿದೆ’ ಎಂದು ಸಂಗೀತ ನಿರ್ದೇಶಕ ಹಂಸಲೇಖ ಹರ್ಷ ವ್ಯಕ್ತಪಡಿಸಿದರು.

ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಬುಧವಾರ ‘ದೇಸಿ ಸಂಗೀತ: ಐದನಿ-ಸರಿಗಮಪದನಿ- ಆರಂಭ’ ಪ್ರಬಂಧಕ್ಕೆ ಪಿಎಚ್‌.ಡಿ ಪದವಿ ಸ್ವೀಕರಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು. ‘18 ವರ್ಷದಿಂದ ಪಿಎಚ್‌.ಡಿ ಮಾಡಲು ರಾಜ್ಯದ ಎಲ್ಲ ವಿ.ವಿ.ಗಳಿಗೆ ಹೋಗುತ್ತಿದ್ದೆ. ಯಾರೂ ನನ್ನನ್ನು ವಿದ್ಯಾರ್ಥಿಯಂತೆ ನೋಡಲಿಲ್ಲ. ಯಾರೋ ಸಿನಿಮಾದವನು ಬಂದಿದ್ದಾನೆಂದು ಸಾಗಿಹಾಕುತ್ತಿದ್ದರು. ಕಡೆಗೆ ಗಂಗೂಬಾಯಿ ಹಾನಗಲ್ ವಿಶ್ವವಿದ್ಯಾಲಯವು ಅವಕಾಶ ನೀಡಿತು’ ಎಂದು ಹರ್ಷ ವ್ಯಕ್ತಪಡಿಸಿದರು.

‘ಈ ಸಂಶೋಧನೆಯು ಜಗತ್ತಿನ ಆವಿಷ್ಕಾರಗಳಲ್ಲಿ ಒಂದು. 700–800 ವರ್ಷಗಳ ಹಿಂದೆ ಪುರಂದರದಾಸರು ಕರ್ನಾಟಕ ಸಂಗೀತಕ್ಕೆ ಪಠ್ಯ ಬರೆದರೆಂಬ ದಾಖಲೆ ಇದೆ. 500 ವರ್ಷಗಳ ಹಿಂದೆ ಪಾಶ್ಚಾತ್ಯ ಸಂಗೀತಕ್ಕೆ ಪಠ್ಯ ಬರೆದ ದಾಖಲೆ ಇದೆ. ಅದಾದ ಬಳಿಕ ಸಂಗೀತ ಶಾಸ್ತ್ರಗಳಲ್ಲಿ ಯಾವುದೇ ಆವಿಷ್ಕಾರ, ಸಿದ್ಧತೆಗಳು ಆಗಿರಲಿಲ್ಲ. ಇದನ್ನು ಗಹನವಾಗಿ ಯೋಚನೆ ಮಾಡಿ, ಐದನೇ ಸಂಗೀತ ಶಾಸ್ತ್ರ ಎನ್ನುವ ಆಧುನಿಕ ಶಾಸ್ತ್ರ ಮಾಡಿದ್ದೇವೆ. ಅದನ್ನು ಜನಪದವೂ ಸೇರಿದಂತೆ ಯಾವುದೇ ಜಗತ್ತಿನ ಸಂಗೀತ ಕಲಿಯುವುದಕ್ಕೆ ಅನುಕೂಲ ಆಗುವಂತೆ, ಬರೆದು ಓದುವುದಕ್ಕೆ ದೇಸಿ ನೊಟೇಷನ್ ಎನ್ನುವ ವಿಶ್ವವ್ಯಾಪಕವಾದ ಸಂಗೀತ ಲಿಪಿಯನ್ನು ಆವಿಷ್ಕಾರ ಮಾಡಿದ್ದೇವೆ. ಅದು ವಿಶ್ವ ಸಂಗೀತ ಪ್ರಪಂಚಕ್ಕೆ ಕರ್ನಾಟಕದ ದೊಡ್ಡ ಕೊಡುಗೆ’ ಎಂದು ಅವರು ವಿವರಿಸಿದರು.

ಅಧಿಕಾರಿ ವಿರುದ್ಧ ಪ್ರಕರಣ ರದ್ದುಗೊಳಿಸಲು ನಕಾರ

ಧಾರವಾಡದ ಹೆಬ್ಬಳ್ಳಿ ಜಿ.ಪಂ ಕ್ಷೇತ್ರದ ಬಿಜೆಪಿಯ ಸದಸ್ಯ ಯೋಗೀಶ್‌ಗೌಡ ಗೌಡರ್ ಕೊಲೆ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ಕಾರಿ ಅಧಿಕಾರಿಯಾಗಿ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿದವರನ್ನು ರಕ್ಷಿಸಲು ಕಾನೂನಿನಲ್ಲಿ ಅವಕಾಶವಿಲ್ಲ’ ಎಂದು ಸ್ಪಷ್ಟಪಡಿಸಿರುವ ಹೈಕೋರ್ಟ್, ಧಾರವಾಡ ಜಿಲ್ಲೆಯ ಹೆಬ್ಬಳ್ಳಿ ಜಿಲ್ಲಾ ಪಂಚಾಯಿತಿ ಕ್ಷೇತ್ರದ ಬಿಜೆಪಿ ಸದಸ್ಯರಾಗಿದ್ದ ಯೋಗೀಶ್‌ಗೌಡ ಗೌಡರ್ ಕೊಲೆ ಪ್ರಕರಣದ 21ನೇ ಆರೋಪಿ ಸೋಮಶೇಖರ ನ್ಯಾಮಗೌಡರ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದುಗೊಳಿಸಲು ನಿರಾಕರಿಸಿದೆ.

ಘಟನೆ ನಡೆದಿದ್ದ ವೇಳೆ ಅಂದು ಸಚಿವರಾಗಿದ್ದ ವಿನಯ ಕುಲಕರ್ಣಿ ಆಪ್ತ ಕಾರ್ಯದರ್ಶಿ ಸೋಮಶೇಖರ ನ್ಯಾಮಗೌಡರ (ಸದ್ಯ ತಿಪಟೂರಿನ ಎಪಿಎಂಸಿ ಕಾರ್ಯದರ್ಶಿ) ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ಅರ್ಜಿದಾರರಿಗೆ ಕೊಲೆ ಸಂಚಿನ ಬಗ್ಗೆ ಅರಿವಿತ್ತು. ಇವರು ಸುಳ್ಳು ಪ್ರವಾಸ ಕಾರ್ಯಕ್ರಮ ಸಿದ್ದಪಡಿಸಿರುವುದು ಸಂಚಿನ ಭಾಗ. ಈ ಕೆಲಸವನ್ನು ಅವರು ಪ್ರಕರಣದ ಪ್ರಮುಖ ಆರೋಪಿಯಾದ ವಿನಯ್ ಕುಲಕರ್ಣಿ ಸೂಚನೆಯಂತೆ ಪಾಲಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಸಾರ್ವಜನಿಕ ಸೇವಕರಾಗಿ ತಮ್ಮ ಸ್ಥಾನವನ್ನು ದುರುಪಯೋಗಪಡಿಸಿಕೊಂಡಿದ್ದಾರೆ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಆರೋಪವೇನು?: ‘ಕೊಲೆ ಸಂದರ್ಭದಲ್ಲಿ ವಿನಯ ಕುಲಕರ್ಣಿ ಸಚಿವರಾಗಿದ್ದರು. ಅಂದು ಅವರ ಆಪ್ತ ಕಾರ್ಯದರ್ಶಿಯಾಗಿದ್ದ ಸೋಮಶೇಖರ ನ್ಯಾಮಗೌಡ 2016ರ ಜೂನ್ 12 ರಂದು ವಿನಯ ಕುಲಕರ್ಣಿ ಅವರ ಸುಳ್ಳು ಪ್ರವಾಸ ಕಾರ್ಯಕ್ರಮ ಸೃಷ್ಟಿಸಿದ್ದರು. ಅವರ ಜತೆಗೆ ಅದೇ ದಿನ ನವದೆಹಲಿಯಲ್ಲಿ ಕೇಂದ್ರ ಸಚಿವರನ್ನು ಭೇಟಿಯಾಗಲು ತೆರಳುತ್ತಿರುವುದಾಗಿ ವಿಮಾನದ ಟಿಕೆಟ್‌ಗಳನ್ನು ಕಾಯ್ದಿರಿಸಿದ್ದರು’ ಎಂದು ಸಿಬಿಐ ಆರೋಪಿಸಿತ್ತು.

‘ನವದೆಹಲಿಯಲ್ಲಿನ ಸಭೆಗೆ ಸಂಬಂಧಿಸಿದಂತೆ ಕೇಂದ್ರ ಸಚಿವರಿಗೆ ಯಾವುದೇ ಮನವಿ ರವಾನೆಯಾಗಿರಲಿಲ್ಲ. ಈ ಸಂದರ್ಭದಲ್ಲಿ ಕೇಂದ್ರ ಸಚಿವರು ರಾಷ್ಟ್ರ ಮಟ್ಟದ ಕಾರ್ಯಕ್ರಮವೊಂದರಲ್ಲಿ ಭಾಗಿಯಾಗಲು ಅಲಹಾಬಾದ್‌ಗೆ ಭೇಟಿ ನೀಡಿದ್ದರು’ ಎಂದು ಸಿಬಿಐ ದೋಷಾರೋಪ ಪಟ್ಟಿಯಲ್ಲಿ ವಿವರಿಸಿತ್ತು.

ಪ್ರಕರಣವೇನು?: ಯೋಗೀಶ್‌ಗೌಡ ಗೌಡರ್ ಕೊಲೆ 2016ರ ಜೂನ್‌ನಲ್ಲಿ ನಡೆದಿತ್ತು. ಈ ಪ್ರಕರಣವನ್ನು ಸಿಬಿಐ ತನಿಖೆ ನಡೆಸುತ್ತಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ 2020ರ ನವೆಂಬರ್‌ನಲ್ಲಿ ವಿನಯ ಕುಲಕರ್ಣಿ ಅವರನ್ನು ಬಂಧಿಸಿ, ಬೆಳಗಾವಿಯ ಹಿಂಡಲಗಾ ಕೇಂದ್ರ ಕಾರಾಗೃಹದಲ್ಲಿ ಒಂಬತ್ತು ತಿಂಗಳ ಕಾಲ ನ್ಯಾಯಾಂಗ ಬಂಧನದಲ್ಲಿ ಇರಿಸಲಾಗಿತ್ತು.

ಎಸ್‌ಎಂಆರ್‌ಜೆ–ಬಿಸಿಐಸಿ ಒಪ್ಪಂದ

ಬೆಂಗಳೂರು: ಭಾರತ ಮತ್ತು ಜಪಾನಿನ ಉದ್ದಿಮೆಗಳು ಜಾಗತಿಕ ಮಟ್ಟದಲ್ಲಿ ವಹಿವಾಟು ವಿಸ್ತರಿಸಲು ಅನುಕೂಲ ಆಗುವಂತೆ ಬೆಂಗಳೂರು ಚೇಂಬರ್ ಆಫ್ ಇಂಡಸ್ಟ್ರಿ ಆ್ಯಂಡ್ ಕಾಮರ್ಸ್ (ಬಿಸಿಐಸಿ) ಮತ್ತು ಜಪಾನ್‌ನ ಸ್ಮಾಲ್ ಆ್ಯಂಡ್ ಮೀಡಿಯಂ ಎಂಟರ್‌ಪ್ರೈಸಸ್ ಆ್ಯಂಡ್ ರೀಜನಲ್ ಇನೊವೇಷನ್ (ಎಸ್‌ಎಂಆರ್‌ಜೆ) ಒಪ್ಪಂದ ಮಾಡಿಕೊಂಡಿವೆ.

ಬಿಸಿಐಸಿನ ಅಧ್ಯಕ್ಷ ಎಸ್. ದೇವರಾಜನ್, ಎಸ್‌ಎಂಆರ್‌ಜೆನ ಕಾರ್ಯನಿರ್ವಾಹಕ ಉಪಾಧ್ಯಕ್ಷ ಟಿ.ಕನೆಕೊ ಅವರು ಒಪ್ಪಂದಕ್ಕೆ ಸಹಿ ಮಾಡಿದ್ದಾರೆ.

ಭಾರತದ ಜಿಡಿಪಿಗೆ ತಯಾರಿಕಾ ವಲಯದ ಕೊಡುಗೆ ಹೆಚ್ಚಿಸುವ ನಿಟ್ಟಿನಲ್ಲಿ ಈ ಒಪ್ಪಂದ ನೆರವಾಗುವ ನಿರೀಕ್ಷೆ ಇದೆ. ಆಧುನಿಕ ತಂತ್ರಜ್ಞಾನ ತ್ವರಿತವಾಗಿ ಅಳವಡಿಸಿಕೊಳ್ಳಲು ಹಾಗೂ ಮಧ್ಯ ಪ್ರಾಚ್ಯ, ಯುರೋಪ್, ಆಫ್ರಿಕಾಕ್ಕೆ ವಹಿವಾಟು ವಿಸ್ತರಿಸಲು ಎರಡೂ ದೇಶದ ಕಂಪನಿಗಳಿಗೆ ಈ ಒಪ್ಪಂದದಿಂದ ಅನುಕೂಲ ಆಗಲಿದೆ ಎಂದು ದೇವರಾಜನ್ ತಿಳಿಸಿದ್ದಾರೆ.

ಪಂಜ ಕುಸ್ತಿ: ಮಧುರಾಗೆ ‘ದಸರಾ ಕುಮಾರಿ’ ಪ್ರಶಸ್ತಿ

ಬೆಂಗಳೂರಿನ ಶ್ರೀನಿವಾಸಗೆ ‘ದಸರಾಶ್ರೀ’

ಪ್ರಜಾವಾಣಿ ವಾರ್ತೆ

ಮೈಸೂರು: ಪಂಜಕುಸ್ತಿಯ ವೇದಿಕೆಯಲ್ಲಿ ಸೇರಿದ್ದ ರಾಜ್ಯದ ನೂರಾರು ಸ್ಪರ್ಧಿಗಳು ತೋಳ್ಬಲ ಪ್ರದರ್ಶಿಸಿದರು. ರಟ್ಟೆಯರಳಿಸಿ, ಎದುರಾಳಿಯ ಕೈಯನ್ನು ನೆಲಕ್ಕೆ ತಾಗಿಸಿ ಗೆಲುವಿನ ನಗೆ ಬೀರಿದರು.

ದೊಡ್ಡಕೆರೆಯ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ದಸರಾ ಕುಸ್ತಿಯ ಭಾಗವಾಗಿ ಬುಧವಾರ ನಡೆದ ಪಂಜಕುಸ್ತಿಯಲ್ಲಿ ಸ್ಪರ್ಧಿಗಳು ಬಲ ಪ್ರದರ್ಶಿಸಿದರು.

ಪುರುಷರ ವಿಭಾಗದ ‘ದಸರಾಶ್ರೀ’ ಪ್ರಶಸ್ತಿಯು ಬೆಂಗಳೂರಿನ ಬಿ.ವಿ. ಶ್ರೀನಿವಾಸ ಅವರ ಪಾಲಾಯಿತು. ಬೆಂಗಳೂರಿನವರೇ ಆದ ಶಶಿಧರ್ ಅವರ ಕೈಯನ್ನು ಕ್ಷಣ ಮಾತ್ರದಲ್ಲಿ ನೆಲಕ್ಕೆ ತಾಗಿಸಿ ಪ್ರಶಸ್ತಿ ಜಯಿಸಿದರು. ಮಹಿಳೆಯರ ವಿಭಾಗದಲ್ಲಿ ಬೆಂಗಳೂರಿನ ಕೆ.ಎನ್. ಮಧುರಾ ಅವರು ಬೆಂಗಳೂರಿನವರೇ ಆದ ಸಾಹಿನಾ ಬಾನು ಮಣಿಸಿ ‘ದಸರಾ ಕುಮಾರಿ’ ಪ್ರಶಸ್ತಿ ಗೆದ್ದರು.

ಮೈಸೂರಿನ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ಬುಧವಾರ ನಡೆದ ದಸರಾ ಪಂಜಕುಸ್ತಿಯಲ್ಲಿ ‘ದಸರಾಶ್ರೀ’ ಗೆದ್ದ ಬೆಂಗಳೂರಿನ ಬಿ.ವಿ.ಶ್ರೀನಿವಾಸ್, ‘ದಸರಾ ಕುಮಾರಿ’ ಮಧುರಾ, ‘ವಿಶೇಷ ಚೇತನ’ ಪ್ರಶಸ್ತಿ ಗೆದ್ದ ಮಂಜುನಾಥ ಪವಾರ್ ಟ್ರೋಫಿಯೊಂದಿಗೆ ಸಂಭ್ರಮಿಸಿದರು

ಅಂಗವಿಕಲರ ಪಂಜಕುಸ್ತಿಯ ಪುರುಷರ ವಿಭಾಗದಲ್ಲಿ ಬೆಂಗಳೂರಿನ ಮಂಜುನಾಥ ಪವಾರ್ ಅವರು ಹಾಸನದ ಆಂಥೋಣಪ್ಪ ಅವರನ್ನು ಮಣಿಸಿ ‘ವಿಶೇಷ ಚೇತನ’ ಪ್ರಶಸ್ತಿ ತಮ್ಮದಾಗಿಸಿಕೊಂಡರೆ, ಮಹಿಳಾ ವಿಭಾಗದಲ್ಲಿ ಬೆಳಗಾವಿಯ ರಿಜ್ವಾನಾ ಜಾಮದಾರ್ ‘ನವಚೇತನ ತಾರೆ’ ಪ್ರಶಸ್ತಿ ಜಯಿಸಿದರು.

ಈ ಸ್ಪರ್ಧೆಗೆ ಜಿಲ್ಲಾಧಿಕಾರಿ ಕೆ.ವಿ. ರಾಜೇಂದ್ರ ಚಾಲನೆ ನೀಡಿದರು. ಉಪಸಮಿತಿ ಉಪವಿಶೇಷಾಧಿಕಾರಿ ಬಿ.ಎನ್.ನಂದಿನಿ, ಪಂಜ ಕುಸ್ತಿ ಸಮಿತಿ ಅಧ್ಯಕ್ಷ ನವೀನ್ ಚಂದ್ರ, ಕಾರ್ಯಾಧ್ಯಕ್ಷ ವಿಶ್ವನಾಥ್ ಇದ್ದರು.

‘ಜಿಲ್ಲಾಡಳಿತದ ನಿಲುವನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸುವೆ’

ಪ್ರಜಾವಾಣಿ ವಾರ್ತೆ

ದಾವಣಗೆರೆ: ‘ಶಿವಮೊಗ್ಗ ಜಿಲ್ಲಾಡಳಿತವು ನಗರ ಪ್ರವೇಶ ನಿರಾಕರಿಸಿ ನನ್ನ ವಿರುದ್ಧ ಪ್ರತಿಬಂಧಕಾಜ್ಞೆ ಹೊರಡಿಸಿದೆ. ಇದನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸುತ್ತೇನೆ’ ಎಂದು ಶ್ರೀರಾಮ ಸೇನೆ ರಾಷ್ಟ್ರೀಯ ಅಧ್ಯಕ್ಷ ಪ್ರಮೋದ್ ಮುತಾಲಿಕ್ ಹೇಳಿದರು.

‘ರಾಗಿಗುಡ್ಡದಲ್ಲಿ ನಡೆದ ಗಲಭೆಯ ಸಂತ್ರಸ್ತ ಕುಟುಂಬದವರಿಗೆ ಸಾಂತ್ವನ ಹೇಳಲು ಮಂಗಳವಾರ ರಾತ್ರಿ ಶಿವಮೊಗ್ಗಕ್ಕೆ ತೆರಳುತ್ತಿದ್ದೆ. ಅಲ್ಲಿನ ಪೊಲೀಸರು ಹೊಸನಗರ ತಾಲ್ಲೂಕಿನ ಮಾಸ್ತಿಕಟ್ಟೆ ಬಳಿ ನನ್ನನ್ನು ತಡೆದು ದಾವಣಗೆರೆಗೆ ಕರೆತಂದಿದ್ದಾರೆ. ಶಿವಮೊಗ್ಗ ಪ್ರವೇಶ ನಿರಾಕರಿಸಲು ನಾನೇನು ಭಯೋತ್ಪಾದಕನಾ’ ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ಪ್ರಶ್ನಿಸಿದರು.

‘ದೇಶದಲ್ಲಿ ಭಯೋತ್ಪಾದಕರು ಮುಕ್ತವಾಗಿ ಓಡಾಡುತ್ತಿದ್ದಾರೆ. ಹಿಂದೂ ಮುಖಂಡರಿಗೆ ಪ್ರವೇಶ ನಿರಾಕರಿಸಿ ಶಿವಮೊಗ್ಗ ಜಿಲ್ಲಾಡಳಿತ ಪ್ರತಿಬಂಧಕಾಜ್ಞೆ ಹೊರಡಿಸಿರುವುದು ಅಸಹನೀಯ. ಕಾಂಗ್ರೆಸ್ ಸರ್ಕಾರ ಹಿಂದೂ ಹೋರಾಟಗಾರರನ್ನು ಹತ್ತಿಕ್ಕುವ ಕೆಲಸ ಮಾಡುತ್ತಿದೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಔರಂಗಜೇಬನ ಕಟೌಟ್ ಅಳವಡಿಸಿದ್ದ ರಾಗಿಗುಡ್ಡದ ಈದ್‌ಮಿಲಾದ್ ಕಮಿಟಿ ವಿರುದ್ಧ ಪೊಲೀಸರು ಏಕೆ ಕಠಿಣ ಕ್ರಮ ಕೈಗೊಂಡಿಲ್ಲ. ಕಾಂಗ್ರೆಸ್ ಸರ್ಕಾರ ಪಿಎಫ್‌ಐ ಕಾರ್ಯಕರ್ತರ ವಿರುದ್ಧದ ಪ್ರಕರಣಗಳನ್ನು ವಾಪಸ್ ಪಡೆಯುತ್ತಿದೆ. ಇದು ದೇಶದ್ರೋಹಿ ಕೆಲಸ. ನಿಜವಾದ ಅಮಾಯಕರು ಯಾರು ಎಂಬುದನ್ನು ಪೊಲೀಸ್ ಇಲಾಖೆ ಹಾಗೂ ನ್ಯಾಯಾಲಯಗಳು ನಿರ್ಧರಿಸುತ್ತವೆ. ರಾಜ್ಯ ಸರ್ಕಾರ ಓಲೈಕೆ ರಾಜಕಾರಣ ಮಾಡಬಾರದು’ ಎಂದು ಕಿಡಿಕಾರಿದರು.

‘ದೇಶದ ಒಳಿತಿಗಾಗಿ ನರೇಂದ್ರ ಮೋದಿ ನೇತೃತ್ವ ಅಗತ್ಯ. ಇದಕ್ಕಾಗಿ ನವೆಂಬರ್‌ನಿಂದ ರಾಜ್ಯದಾದ್ಯಂತ ‘ಮೋದಿ ಗೆಲ್ಲಿಸಿ–ದೇಶ ಉಳಿಸಿ’ ಅಭಿಯಾನ ನಡೆಸಲಾಗುವುದು’ ಎಂದರು.

ಚೊಕ್ಕಸಂದ್ರ, ಮಲ್ಲಸಂದ್ರದಲ್ಲಿ ಕುಡಿಯುವ ನೀರಿನ ಸಮಸ್ಯೆ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಇಲ್ಲಿನ ಕುಡಿಯುವ ನೀರಿನ ಸಮಸ್ಯೆ ಪ್ರದೇಶಗಳಿಗೆ ಶಾಸಕ ಎಸ್. ಮುನಿರಾಜು ಅವರು ಅಧಿಕಾರಿಗಳೊಂದಿಗೆ ತೆರಳಿ ಪರಿಶೀಲಿಸಿದರು.

ಹತ್ತು ದಿನವಾದರೂ ನೀರು ಪೂರೈಕೆಯಾಗುತ್ತಿಲ್ಲ. ತಗ್ಗು ಪ್ರದೇಶಗಳಿಗೆ ನೀರು ಸರಾಗವಾಗಿ ಹರಿಯುತ್ತದೆ. ಎತ್ತರ ಪ್ರದೇಶದ ಮನೆಗಳಿಗೆ ನೀರು ಪೂರೈಕೆಯಾಗುತ್ತಿಲ್ಲ ಎಂದು ಮಲ್ಲಸಂದ್ರದ ಬಿಎಚ್‌ಇಎಲ್ ಮಿನಿ ಕಾಲೊನಿಯ ಮಹಿಳೆಯರು ಶಾಸಕರಿಗೆ ದೂರು ನೀಡಿದರು.

ಮಲ್ಲಸಂದ್ರದಲ್ಲಿ ಶಾಸಕ ಎಸ್‌ ಮುನಿರಾಜು ಸಂಪು ಪರಿಶೀಲಿಸಿದರು

ವಾರಕ್ಕೊಮ್ಮೆ ನೀರು ಬಿಟ್ಟರು ಅರ್ಧ ಸಂಪು ತುಂಬುವುದಿಲ್ಲ. ಬೋರ್‌ವೆಲ್‌ಗಳಲ್ಲೂ ನೀರು ಇಲ್ಲ. ಕಾವೇರಿ ನೀರು ಸರಿಯಾಗಿ ಬಿಡುತ್ತಿಲ್ಲ ಎಂದು ಚೊಕ್ಕಸಂದ್ರದ ಮಹಿಳೆಯರು ತಮ್ಮ ಅಳಲು ತೋಡಿಕೊಂಡರು.

ವಾಟರ್‌ಮನ್‌ಗಳು ಒಂದು ಕಡೆ ನೀರು ಬಿಟ್ಟು ಮತ್ತೊಂದು ಪ್ರದೇಶಕ್ಕೆ ನೀರು ಹರಿಸುವುದಿಲ್ಲ. ಮನೆಗೆ ಬೇಕಾದಷ್ಟು ನೀರನ್ನು ತುಂಬಲು ನೀರು ಬರುವುದಿಲ್ಲಎಂದು ದೂರಿದರು.

ಸಮಸ್ಯೆ ಆಲಿಸಿದ ಶಾಸಕ ಎಸ್. ಮುನಿರಾಜು ಅವರು ಸಮಯಕ್ಕೆ ಸರಿಯಾಗಿ ನೀರು ಬಿಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಮೈಸೂರು ರೇಸ್

ರಾವಿಶಿಂಗ್ ಫಾರ್ಮ್ ಗೆಲ್ಲುವ ನಿರೀಕ್ಷೆ

ಮೈಸೂರು ಡಿಸ್ಟ್ರಿಕ್ಟ್ ಕಪ್ ಗುರುವಾರದ ಮೈಸೂರು ರೇಸ್‌ಗಳ ಪ್ರದಾನ ಆಕರ್ಷಣೆಯಾಗಿದ್ದು, ರಾವಿಶಿಂಗ್ ಫಾರ್ಮ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಪರ್ಫೆಕ್ಟ್ ಹಾಲೊ 9, ಹೀ ಈಸ್ ದ ಒನ್ 7, ಸ್ಕೈ ಪ್ರಿನ್ಸೆಸ್ 2
2ನೇ ರೇಸ್: ಡಾನ್ ರೈಸಿಂಗ್ 4, ಅಪೋಲೊ ಲೈಟ್ 1, ಶೂಟಿಂಗ್ ವೀನಸ್ 3
3ನೇ ರೇಸ್: ಗ್ರೇಟ್ ಹೋಪ್ 12, ಪಾರ್ಕರ್ 6, ಫ್ಲೆಮಿಂಗೊ ಡ್ಯಾನ್ಸರ್ 3
4ನೇ ರೇಸ್: ಬ್ರೇವ್ ಟ್ರೂಪರ್ 3, ಬ್ಲ್ಯಾಕ್ ಕಾಫಿ 3, ಇಂಡಿಯನ್ ಗ್ಲೋರಿ 5
5ನೇ ರೇಸ್: ರಾವಿಶಿಂಗ್ ಫಾರ್ಮ್ 6, ಸ್ಟಾರ್ ಗ್ಲೋರಿ 3, ಪೆಯೊ 5
6ನೇ ರೇಸ್: ಫೋರ್ ವ್ಹೀಲ್ ಡ್ರೈವ್ 1, ಸೀ ಬ್ಲಶ್ 12, ಸದರ್ನ್ ಪವರ್ 8
7ನೇ ರೇಸ್: ಮಿಸ್ಟರ್ ಹಂಬಲ್ 2, ಸಿಂಕೊ ಡೆ ಮೆಯೊ 12, ಸೆಕ್‌ಮೆಟ್ 4

ಉತ್ತಮ ಬೆಟ್: ತೆನಾಲಿ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಶ್ವಾನದ ನೋಟ
ನಗರದ ಬಿನ್ನಿಪೇಟೆ ರಸ್ತೆಯಲ್ಲಿ ಮಂಗಳವಾರ ಸೊಪ್ಪು ಸಾಗಣೆ ಮಾಡುತ್ತಿದ್ದ ಒಂಟೆತ್ತಿನ ಗಾಡಿಯ ಮೇಲೇರಿದ್ದ ಶ್ವಾನ, ಪಾದಚಾರಿಗಳು ಹಾಗೂ ವಾಹನ ಚಾಲಕರ ಗಮನ ಸೆಳೆಯಿತು ಪ್ರಜಾವಾಣಿ ಚಿತ್ರ: ರಂಜು ಪಿ.

ನೀರು ರಕ್ಷಣೆಗೆ ಪ್ರತ್ಯೇಕ ಕಾನೂನು: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ರಾಜ್ಯದಲ್ಲಿ ಬಹುತೇಕ ಕಡೆ ಕಾಲುವೆಗಳ ನೀರು ಕೊನೆಯ ಹಂತದ ರೈತರಿಗೆ ತಲುಪುತ್ತಿಲ್ಲ. ಈ ಸಮಸ್ಯೆ ನಿವಾರಣೆಗೆ ಪ್ರತ್ಯೇಕ ಕಾನೂನು ತರಲಾಗುವುದು’ ಎಂದು ಜಲಸಂಪನ್ಮೂಲ ಸಚಿವ ಡಿ.ಕೆ.ಶಿವಕುಮಾರ ಹೇಳಿದರು.

‘ಕಾಲುವೆ ನೀರು ದುರ್ಬಳಕೆ ತಡೆಗೆ ಮತ್ತು ನೀರಿನ ರಕ್ಷಣೆಗೆ ಪ್ರತ್ಯೇಕ ಕಾನೂನು ಅಗತ್ಯ. ಮಹಾರಾಷ್ಟ್ರದಲ್ಲಿ ನೀರಿನ ಬಳಕೆ ಶಿಸ್ತಿನಿಂದ ಕೂಡಿದ್ದು, ನಾನೇ ಖುದ್ದು ಪರಿಶೀಲಿಸುವೆ. ಅದೇ ಮಾದರಿ ಜಾರಿಗೊಳಿಸುವೆ’ ಎಂದು ಅವರು ಬುಧವಾರ ಸುದ್ದಿಗಾರರಿಗೆ ತಿಳಿಸಿದರು.

‘ಕೆಲ ಕಡೆ ಮಾತ್ರ ನೀರು ಬಳಕೆದಾರರ ಸಂಘಗಳು ಕ್ರಿಯಾಶೀಲವಾಗಿವೆ. ರಾಜ್ಯದ ಎಲ್ಲಾ ಸಂಘಗಳು ಕ್ರಿಯಾಶೀಲವಾಗಬೇಕು. ಹೊಸ ಸಂಘಗಳ ರಚನೆಗೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಎರಡು ದಿನದಲ್ಲಿಇದರ ಆದೇಶ ಹೊರಡಿಸುವೆ’ ಎಂದರು.

‘ಕಳಸಾ ಬಂಡೂರು ಯೋಜನೆಗೆ ನಮ್ಮ ಆದ್ಯತೆ ಇದೆ. ಕೆಲವು ತಾಂತ್ರಿಕ ಅಡತಡೆಗಳಿದ್ದು, ಕೇಂದ್ರ ಜಲಸಂಪನ್ಮೂಲ ಸಚಿವರೊಂದಿಗೆ ಮಾತನಾಡಿರುವೆ’ ಎಂದರು.

ಕೃಷ್ಣಾ ಮೇಲ್ದಂಡೆ ಯೋಜನೆಗೆ ₹10ಸಾವಿರ ಕೋಟಿ ಕೊಡುವುದಾಗಿ ಘೋಷಿಸಿದ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಪ್ರತಿ ಯೋಜನೆಗೆ ಖುದ್ದು ಭೇಟಿ ನೀಡಿ ಮಾಹಿತಿ ಪಡೆಯುತ್ತಿರುವೆ. ಎರಡು ದಿನಗಳಲ್ಲಿ ಸಚಿವ ಸಂಪುಟ ಸಭೆ ನಡೆಯಲಿದೆ. ಯಾವ ಯೋಜನೆಗೆ ಎಷ್ಟು ಅನುದಾನ ನೀಡಬೇಕು ಎಂದು ಚರ್ಚೆ ನಡೆಯಲಿದೆ. ಕೃಷ್ಣಾ ಮೇಲ್ದಂಡೆ ಯೋಜನೆಗಾಗಿ 20 ಹಳ್ಳಿಗಳ ಸ್ಥಳಾಂತರ ವಿಚಾರವೂ ನನ್ನ ಗಮನಕ್ಕೆ ಇದೆ’ ಎಂದರು.

ಆನೆ ದಾಳಿಗೆ ರೈತ ಸಾವು

ಸರಗೂರು (ಮೈಸೂರು): ತಾಲ್ಲೂಕಿನ ನಡಹಾಡಿ ಗ್ರಾಮದಲ್ಲಿ ಬುಧವಾರ ಮುಂಜಾನೆ ಬಹಿರ್ದೆಸೆಗೆ ಹೋಗಿದ್ದ ರೈತ ಚಿಕ್ಕೇಗೌಡ (60) ಅವರ ಮೇಲೆ ಕಾಡಾನೆ ದಾಳಿ ನಡೆಸಿದ್ದರಿಂದ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಗ್ರಾಮದ ಪಕ್ಕದಲ್ಲೇ ಇರುವ ಜಮೀನಿನಲ್ಲಿ ನಡೆದು ಹೋಗುತ್ತಿದ್ದಾಗ ಹಿಂದಿನಿಂದ ಬಂದ ಕಾಡಾನೆ ದಾಳಿ ನಡೆಸಿದೆ. ಅವರ ಕೈ-ಕಾಲು, ಸೊಂಟ ಮುರಿದು ಸ್ಥಳದಲ್ಲೇ ಮೃತಪಟ್ಟರು. ಅವರಿಗೆ ಪತ್ನಿ, ಇಬ್ಬರು ಪುತ್ರರು ಹಾಗೂ ಪುತ್ರಿ ಇದ್ದಾರೆ.

ಶಾಸಕ ಅನಿಲ್ ಚಿಕ್ಕಮಾದು ಮೃತರ ಕುಟುಂಬಕ್ಕೆ ಸರ್ಕಾರದಿಂದ ₹15 ಲಕ್ಷ ಪರಿಹಾರದ ಚೆಕ್ ವಿತರಿಸಿದರು. ವೈಯಕ್ತಿಕವಾಗಿ ₹10 ಸಾವಿರ ಪರಿಹಾರ ನೀಡಿದರು. ಮೃತರ ಪತ್ನಿ ನಾಗಮ್ಮ ಅವರಿಗೆ 4 ವರ್ಷದವರೆಗೆ ₹ 4 ಸಾವಿರ ತಿಂಗಳ ವೇತನದೊಂದಿಗೆ ಕುಟುಂಬದ ಸದಸ್ಯರಿಗೆ ತಾತ್ಕಾಲಿಕವಾಗಿ ಉದ್ಯೋಗ ನೀಡುವಂತೆ ಅರಣ್ಯ ಇಲಾಖೆಗೆ ಸೂಚಿಸಿದರು. ಪ್ರಕರಣ ದಾಖಲಾಗಿದೆ.

ಹಳಿಯನ್ನೇ ಎತ್ತರಿಸುವ ಯೋಜನೆ

ಒಂದನೇ ಪುಟದಿಂದ

‘ನಾಲ್ಕು ಕಾರಿಡಾರ್‌ಗಳಲ್ಲಿ 26 ಲೆವೆಲ್ ಕ್ರಾಸಿಂಗ್‌ಗಳಿವೆ. ಪ್ರತಿಬಾರಿ ರೈಲು ಬರುವ ಮುಂಚೆ ಇಲ್ಲಿ ಗೇಟ್ ಹಾಕಬೇಕು. ಉಪನಗರ ರೈಲು ಯೋಜನೆ ಕಾಮಗಾರಿ ಪೂರ್ಣಗೊಂಡರೆ 5 ರಿಂದ 10 ನಿಮಿಷಗಳಿಗೆ ಒಂದು ರೈಲು ಸಂಚರಿಸಲಿದೆ. ಗೇಟ್ ಹಾಕಿ ತೆಗೆಯುವುದರ ಒಳಗೆ ಮತ್ತೊಂದು ರೈಲು ಬರುವ ಸಮಯವಾಗಿರುತ್ತದೆ. ಲೆವೆಲ್ ಕ್ರಾಸಿಂಗ್ ಕೆಲಸ ಮಾಡಲು ಸಾಧ್ಯವೇ ಇಲ್ಲ. ಎಲ್‌ಸಿಯಲ್ಲಿ ರೈಲು ಕೆಳಸೇತುವೆ ಅಥವಾ ಮೇಲ್ಸೇತುವೆ ನಿರ್ಮಾಣ ಮಾಡಬೇಕಿದ್ದರೆ ಭೂಸ್ವಾಧೀನ ಮಾಡಬೇಕು. ಬೇರೆ ಬೇರೆ ಕಾರಣಗಳಿಂದ ಕಾಮಗಾರಿ ವಿಳಂಬವಾಗುತ್ತದೆ. ಇದನ್ನು ತಪ್ಪಿಸುವುದಕ್ಕಾಗಿ ನಾವೇ ಪರಿಹಾರ ಕಂಡುಕೊಳ್ಳಬೇಕಾಯಿತು. ಕಾಲದ ಅವಶ್ಯಕತೆಯೇ ಸೃಷ್ಟಿಸಿದ ಆವಿಷ್ಕಾರವೇ ಹಳಿ ಎತ್ತರಿಸುವ ಯೋಜನೆ’ ಎಂದು ಕೆ–ರೈಡ್ ಅಧಿಕಾರಿಗಳು ತಿಳಿಸಿದರು.

10 ಲೆವೆಲ್ ಕ್ರಾಸಿಂಗ್‌ಗಳಲ್ಲಿ ಮೇಲ್ಸೇತುವೆ ಅಥವಾ ಕೆಳಸೇತುವೆ ನಿರ್ಮಿಸಬೇಕಿದ್ದರೆ 16 ಎಕರೆ ಭೂಸ್ವಾಧೀನ ಮಾಡಬೇಕಿತ್ತು. ಅದಕ್ಕೆ ₹ 130 ಕೋಟಿ ಪರಿಹಾರ ನೀಡಬೇಕಿತ್ತು. ಕೆಳ ಸೇತುವೆ ನಿರ್ಮಿಸಿದಾಗ ಮಳೆಗಾಲದಲ್ಲಿ ನೀರು ನಿಂತು ವಾಹನ ಸಂಚಾರಕ್ಕೆ ಅಡ್ಡಿಯಾಗುತ್ತಿತ್ತು. ಈ ಸಮಸ್ಯೆಗಳನ್ನು ಹಳಿ ಎತ್ತರಿಸುವ ಯೋಜನೆ ತಪ್ಪಿಸಿದೆ ಎಂದು ವಿವರಿಸಿದರು.

ಎಲ್ಲ ಎಲ್‌ಸಿಗಳನ್ನು ತೆರವು ಮಾಡಬೇಕು ಎಂಬುದು ಇಲಾಖೆಯ ಉದ್ದೇಶ. ಶೀಘ್ರ ಈ ಕೆಲಸವಾಗಲಿದೆ
ಕುಸುಮಾ ಹರಿಪ್ರಸಾದ್, ನೈರುತ್ಯ ರೈಲ್ವೆ ಬೆಂಗಳೂರು ವಿಭಾಗೀಯ ಹೆಚ್ಚುವರಿ ವ್ಯವಸ್ಥಾಪಕಿ (ಆಡಳಿತ)

ಕಡಿಮೆಯಾಗಲಿರುವ ವಾಹನ ದಟ್ಟಣೆ: ‘ಪ್ರತಿ ಲೆವೆಲ್ ಕ್ರಾಸಿಂಗ್‌ನಲ್ಲಿ ರೈಲು ಬಂದು ಹೋಗುವ ಸಮಯದಲ್ಲಿ ಕನಿಷ್ಠ 5 ನಿಮಿಷ ವಾಹನಗಳು ಸಾಲುಗಟ್ಟಿ ನಿಂತಿರುತ್ತವೆ. ಮೊದಲೇ ವಾಹನ ದಟ್ಟಣೆ ಹೆಚ್ಚಿರುವ ಬೆಂಗಳೂರಿನಲ್ಲಿ ಇನ್ನಷ್ಟು ಬಿಗಡಾಯಿಸಲು ಇದು ಕೂಡ ಕಾರಣ. ಅಲ್ಲದೇ ಪ್ರತಿ ಎಲ್‌ಸಿಯಲ್ಲಿ ದಿನಕ್ಕೆ ಮೂವರು ರೈಲ್ವೆ ಸಿಬ್ಬಂದಿ ಕೆಲಸ ಮಾಡುತ್ತಿದ್ದಾರೆ. ಗೇಟ್ ಹಾಕಿದ ಮೇಲೂ ಪಾದಚಾರಿಗಳು ಗೇಟ್ ಬಳಿ ಬಗ್ಗಿ ಒಳಬಂದು ಹಳಿ ದಾಟುತ್ತಿದ್ದಾರೆ. ಇದು ಅಪಾಯಕಾರಿಯಾಗಿದ್ದು, ಎಲ್‌ಸಿ ತೆರವು ಈ ಅಪಾಯವನ್ನು ತಪ್ಪಿಸಲಿದೆ. ಅಲ್ಲಿ ಸಿಬ್ಬಂದಿಯೂ ಬೇಕಾಗಿಲ್ಲ. ಲೆವೆಲ್ ಕ್ರಾಸಿಂಗ್ ಹತ್ತಿರ ಬರುವಾಗ ರೈಲುಗಳು ಹಾರ್ನ್ ಹಾಕುವುದರಿಂದ ಶಬ್ದ ಉಂಟಾಗುತ್ತಿತ್ತು. ಅದೂ ತಪ್ಪಲಿದೆ’ ಎನ್ನುತ್ತಾರೆ ಸಿಟಿಜನ್ಸ್ ಫಾರ್ ಸಿಟಿಜನ್ಸ್ (ಸಿ4ಸಿ) ಸಂಸ್ಥಾಪಕ ರಾಜ್‌ಕುಮಾರ್ ದುಗರ್.

ರಾಜಕುಮಾರ್

ಮೈಸೂರು ವಿಶ್ವವಿದ್ಯಾಲಯದ ಘಟಿಕೋತ್ಸವ

ತಾಯಿಯಾದ ಬಳಿಕ ಓದಿ 15 ಚಿನ್ನ ಪಡೆದ ‘ಶ್ರೀವಿದ್ಯಾ’

● ಎಂ. ಮಹೇಶ

ಮೈಸೂರು: ಜಿಲ್ಲೆಯ ಹುಣಸೂರು ತಾಲ್ಲೂಕಿನ ಕಲ್ಕುಣಿಕೆ ಗ್ರಾಮದ ಶ್ರೀವಿದ್ಯಾ ಹೆಣ್ಣು ಮಗುವಿನ ತಾಯಿಯಾದ ನಂತರ ಸ್ನಾತಕೋತ್ತರ ಪದವಿಯೊಂದಿಗೆ (ಎಂ.ಎ. ಕನ್ನಡ) 15 ಚಿನ್ನದ ಪದಕ ಮತ್ತು 4 ನಗದು ಬಹುಮಾನ ಗಳಿಸಿ ಬೀಗಿದ್ದಾರೆ.

29 ವರ್ಷ ವಯಸ್ಸಿನ ಅವರಿಗೆ ಇಲ್ಲಿನ ಕ್ರಾಫರ್ಡ್ ಭವನದಲ್ಲಿ ಬುಧವಾರ ನಡೆದ ಮೈಸೂರು ವಿ.ವಿ.ಯ 103ನೇ ವಾರ್ಷಿಕ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಹಾಗೂ ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ ಪದಕ ಮತ್ತು ಬಹುಮಾನ ಪ್ರದಾನ ಮಾಡುವಾಗ ಸಭಾಂಗಣದಲ್ಲಿ ಚಪ್ಪಾಳೆಗಳ ಸುರಿಮಳೆಯಾಯಿತು.

ಎಸ್ಸೆಸ್ಸೆಲ್ಸಿಯಲ್ಲಿ ಕನ್ನಡ ವಿಷಯದಲ್ಲಿ ಅತಿಹೆಚ್ಚು ಅಂಕ ಗಳಿಸಿದ್ದಕ್ಕೆ ಅವರಿಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ಪುರಸ್ಕಾರ ದೊರೆತಿತ್ತು. ಅವರಿಗೆ 7 ವರ್ಷದ ಹೆಣ್ಣು ಮಗುವಿದೆ. ಅವರ ಪತಿ ಪ್ರದೀಪ್ ಕೆ.ಎಸ್. ಪಿರಿಯಾಪಟ್ಟಣ ತಾಲ್ಲೂಕಿನ ಕಿರನಲ್ಲಿ ಗ್ರಾಮದ ಸರ್ಕಾರಿ ಶಾಲೆಯಲ್ಲಿ ಶಿಕ್ಷಕರಾಗಿದ್ದಾರೆ. ‘ನನ್ನ ಸಾಧನೆಗೆ ಕುಟುಂಬದ ಸಹಕಾರ ದೊಡ್ಡದಿದೆ’ ಎಂದು ಶ್ರೀವಿದ್ಯಾ ಸ್ಮರಿಸಿದರು.

ಮೈಸೂರು ವಿಶ್ವವಿದ್ಯಾಲಯದ ಕ್ರಾಫರ್ಡ್ ಭವನದಲ್ಲಿ ಬುಧವಾರ ನಡೆದ 103ನೇ ವಾರ್ಷಿಕ ಘಟಿಕೋತ್ಸವದಲ್ಲಿ ಅತಿ ಹೆಚ್ಚು ಚಿನ್ನದ ಪದಕ ಗಳಿಸಿ ಸಂಭ್ರಮಿಸಿದ ತನಿಷಾ ಚಂಗಪ್ಪ (16, ಎಂಟೆಕ್), ಸ್ನೇಹಾ ಅಬ್ರಾಹಂ (16, ಎಂಎಸ್ಸಿ ರಸಾಯನವಿಜ್ಞಾನ), ಶ್ರೀವಿದ್ಯಾ (15 ಎಂಎ, ಕನ್ನಡ) ಮತ್ತು ಜ್ಯೋತಿ ರಾಜಶೇಖರ ಹುಲ್ಲೋಳಿ (10, ಎಂಎ ಸಂಸ್ಕೃತ) ಪ್ರಜಾವಾಣಿ ಚಿತ್ರ

‘ಪಾತ್ರೆ ಅಂಗಡಿ, ಸೈಕಲ್ ಶಾಪ್ ನಡೆಸುತ್ತಿದ್ದ ಅಪ್ಪ, ಪ್ರಥಮ ಪಿಯುಸಿ ಪರೀಕ್ಷೆಯ ಹಿಂದಿನ ದಿನವೇ ಅಪಘಾತದಲ್ಲಿ ನಿಧನರಾದರು. ನೋವಿನಲ್ಲೂ ಪರೀಕ್ಷೆ ಎದುರಿಸಿ ಟಾಪರ್ ಆಗಿದ್ದೆ. ಪದವಿ ಓದುವಾಗ, ತಾಯಿ ನಿಧನರಾದರು. ನಂತರ ನನ್ನನ್ನು ಹಾಗೂ ತಂಗಿಯನ್ನು ಸಂಬಂಧಿಕರು ಪೋಷಿಸಿದರು. ಈಗ ತಂದೆ–ತಾಯಿ ಇದ್ದಿದ್ದರೆ ಎಷ್ಟು ಸಂತೋಷ ಪಡುತ್ತಿದ್ದರೋ?’ ಎಂದಾಗ ಅವರ ಕಣ್ಣಾಲಿಗಳು ತುಂಬಿಬಂದವು.

‘3 ವರ್ಷ ನಾವೇ ಪಾತ್ರೆ ಅಂಗಡಿ ನಡೆಸುತ್ತಿದ್ದೆವು. ಬಳಿಕ ಆಗಲಿಲ್ಲ. ಬಿ.ಇಡಿ ಆದ ಮೇಲೆ ಮದುವೆಯಾಯಿತು. ಮಗುವಾದ ಬಳಿಕ, 2 ವರ್ಷ ಓದಲಾಗಲಿಲ್ಲ. ಸ್ನಾತಕೋತ್ತರ ಪದವಿಗಾಗಿ ಮೈಸೂರಿಗೆ ನಿತ್ಯವೂ ಹೋಗಿ ಬರುವುದು ಕಷ್ಟವೆಂದು ಬಿಟ್ಟಿದ್ದೆ. ಆದರೆ, ಹುಣಸೂರಿನಲ್ಲೇ ದೇವರಾಜ ಅರಸು ಕಾಲೇಜಿನಲ್ಲಿ ಎಂಎ ಕೋರ್ಸ್ ಆರಂಭವಾದ್ದರಿಂದ ಉನ್ನತ ಶಿಕ್ಷಣ ಪಡೆದೆ. ಸಹಾಯಕ ಪ್ರಾಧ್ಯಾಪಕಿ ತ್ರಿವೇಣಿ ಮೇಡಂ ಕಾರಣದಿಂದ ಪ್ರವೇಶ ಪಡೆದೆ’ ಎಂದು ಸ್ಮರಿಸಿದರು.

ನವವರ್ಣ

ಎಂಇಎಸ್ ಕಿಶೋರ ಕೇಂದ್ರ ಶಾಲೆಯ ಶಿಕ್ಷಕಿಯರು, ಮಲ್ಲೇಶ್ವರ, ಬೆಂಗಳೂರು

ಕೆಎಲ್ಇ ಸಂಸ್ಥೆಯ ಪದವಿ ಕಾಲೇಜಿನ ಸಿಬ್ಬಂದಿ, ನಾಗರಬಾವಿ, ಬೆಂಗಳೂರು

ಶಾಂತಿನಿಕೇತನ ಪಬ್ಲಿಕ್ ಶಾಲೆ ಮಹಿಳಾ ಸಿಬ್ಬಂದಿ, ರಾಮನಗರ

ಮಧುರಾ ಮತ್ತು ಗೆಳತಿಯರು, ಸಿಐಎಲ್ ಬಡಾವಣೆ, ಸಂಜಯನಗರ, ಬೆಂಗಳೂರು

ಶ್ರೀ ಗಾಯತ್ರಿ ಭಜನಾ ಮಂಡಳಿ ಸದಸ್ಯೆಯರು, ಶ್ರೀ ಯಾಜ್ಞವಲ್ಕ್ಯ ಆಶ್ರಮ, ಚಾಮರಾಜಪೇಟೆ, ಬೆಂಗಳೂರು

ಜಿಆರ್‌ವಿ ಇಂಗ್ಲಿಷ್ ಹೈಸ್ಕೂಲ್ ಸಿಬ್ಬಂದಿ, ಬೆಂಗಳೂರು

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಿಬ್ಬಂದಿ, ಹೊಸಕೋಟೆ, ಬೆಂಗಳೂರು

ಅಂಬಿಕಾ ಮತ್ತು ಸ್ನೇಹಿತೆಯರು, ರಾಜಾ ಸಿಂಗ್ ಪೇಟೆ, ಬೆಂಗಳೂರು

ಶ್ರೀ ಲಕ್ಷುರಿಯಾ ಅಪಾರ್ಟ್‌ಮೆಂಟ್‌ನ ಗೆಳತಿಯರು, ಬೆಂಗಳೂರು

ಸುಕೃತ ಭಜನಾಮಂಡಳಿಯ ಸದಸ್ಯೆಯರು, ಯಲಹಂಕ

ಚೈತ್ರಾ ಮತ್ತು ಗೆಳತಿಯರು, ಉತ್ತರಹಳ್ಳಿ, ಬೆಂಗಳೂರು

ವಿಜಿಎಲ್‌ಎನ್ ಸಂಸ್ಥೆಯ ಮಹಿಳಾ ಸಿಬ್ಬಂದಿ, ಇನ್‌ಫ್ಯಾಂಟ್ರಿ ರಸ್ತೆ, ಬೆಂಗಳೂರು

ನಳಿನಾ ಮತ್ತು ಗೆಳತಿಯರು, ನಾಗರಬಾವಿ, ಬೆಂಗಳೂರು

ಶ್ರೀ ಶಾರದಾಂಬ ಶ್ರೀ ಶಕ್ತಿ ಸಂಘದ ಸದಸ್ಯರು, ಕತ್ರಿಗುಪ್ಪೆ, ಬೆಂಗಳೂರು

ಗೀತಾ ಮತ್ತು ಗೆಳತಿಯರು, ನಾಗರಬಾವಿ, ಬೆಂಗಳೂರು

ಸಾವಿತ್ರಮ್ಮ ಕುಟುಂಬ, ಸುಂಕದಕಟ್ಟೆ

ಅನುಪಮ ಮತ್ತು ಗೆಳತಿಯರು, ಬೆಂಗಳೂರು.

ದೇಯಾಂಶಿ, ನಾಗರಭಾವಿ, ಬೆಂಗಳೂರು

ಅಕ್ಷಯಪಾತ್ರ ಫೌಂಡೇಶನ್, ಬೆಂಗಳೂರು

ವಿಜಯಶ್ರೀ ಮತ್ತು ಸ್ನೇಹಿತೆಯರು, ಆಂಧ್ರಹಳ್ಳಿ, ಬೆಂಗಳೂರು

ಚಿನ್ನು ಹೊಸಕೋಟೆ, ಬೆಂಗಳೂರು

ಸ್ವರೂಪ ರಾಜಮನೆ ಮತ್ತು ಸ್ನೇಹಿತೆಯರು, ಇಂದಿರಾನಗರ, ಬೆಂಗಳೂರು

ಲತಾ ಮತ್ತು ಸ್ನೇಹಿತೆಯರು, ಶ್ರೀ ಚೈತನ್ಯ ಟೆಕ್ನೋ ಸ್ಕೂಲ್ ಗುಬ್ಬಲಾಳ, ಬೆಂಗಳೂರು

ವಾಣಿಶ್ರೀ ಮತ್ತು ಸ್ನೇಹಿತೆಯರು, ಹೈಕೋರ್ಟ್ ಸಿಬ್ಬಂದಿ, ಬೆಂಗಳೂರು

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಸಿಬ್ಬಂದಿ, ಬೆಂಗಳೂರು

ಹಿಲ್‌ಸೈಡ್ ಕಾಲೇಜ್ ಆಫ್ ಫಾರ್ಮಸಿ, ರಘುವನಹಳ್ಳಿ, ಬೆಂಗಳೂರು

ಯೂನಿವರ್ಸಲ್ ಪಬ್ಲಿಕ್ ಸ್ಕೂಲ್ ಸಿಬ್ಬಂದಿ, ರಾಮನಗರ ಟೌನ್

ಸುಧಾ ಮತ್ತು ಗೆಳತಿಯರು, ಬೆಂಗಳೂರು

ಬ್ರ್ಯಾಂಡ್ ಕಾಲೇಜಿನ ಉಪನ್ಯಾಸಕರು, ಬೆಂಗಳೂರು

ವಾಣಿಜ್ಯ ತೆರಿಗೆ ಇಲಾಖೆಯ ಸಿಬ್ಬಂದಿ, ಯಶವಂತಪುರ, ಬೆಂಗಳೂರು

ಸುನಂದ ಮತ್ತು ಸ್ನೇಹಿತೆಯರು, ಬೆಂಗಳೂರು ವಿಶ್ವವಿದ್ಯಾಲಯ

ಮರದಿನಾದ ಮಹಿಳಾ ಗುಂಪು, ಹನುಮಂತನಗರ, ಬೆಂಗಳೂರು

ಷೇರುಪೇಟೆ ವಹಿವಾಟು 551



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,811
ಇಂದಿನ ಅಂತ್ಯ	19,671
▼	140
ದಿನದ ಕನಿಷ್ಠ	19,659

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹555
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹562

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1600 (1560)
ಸೋಯಾ (ರಿಫೈನ್ಡ್)	₹920 (915)
ಸೂರ್ಯಕಾಂತಿ (ರಿಫೈನ್ಡ್)	₹917 (915)
ಪಾಮೋಲಿನ್	₹830(828)

ವಿನಿಮಯ ದರ

$ ಡಾಲರ್	83.25
£ ಪೌಂಡ್	101.57
€ ಯುರೊ	88.03
¥ ಯೆನ್ (100ಕ್ಕೆ)	56

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಪುತ್ತೂರು	₹4500-7300
ತಿಪಟೂರು	₹8000-9400
ತುಮಕೂರು	₹3800-4600
ತುರುವೇಕೆರೆ	₹8300-9000

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹2400-2800
ಮಧ್ಯಮ	₹1800-2400
ಸಣ್ಣ	₹1000-1800

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹149.50
ಆರ್‌ಎಸ್‌ಎಸ್-5	₹143
ಗುಡ್ ಲಾಟ್	₹132

ಇಳಿಕೆ ಕಂಡ ವಿಪ್ರೊ ವರಮಾನ

ನವದೆಹಲಿ (ಪಿಟಿಐ): ಪ್ರಮುಖ ಐ.ಟಿ. ಕಂಪನಿ ವಿಪ್ರೊ ಲಿಮಿಟೆಡ್‌ನ ಕಾರ್ಯಾಚರಣಾ ವರಮಾನವು ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹22,540 ಕೋಟಿಯಿಂದ ₹22,516 ಕೋಟಿಗೆ ಇಳಿಕೆ ಕಂಡಿದೆ.

ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಕಂಪನಿಯ ಲಾಭವು ₹2,667 ಕೋಟಿ ಆಗಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಇದ್ದ (₹2,649 ಕೋಟಿ) ಲಾಭಕ್ಕೆ ಹೋಲಿಸಿದರೆ ಅಲ್ಪ ಹೆಚ್ಚಳ ಕಂಡುಬಂದಿದೆ.

ಜಾಗತಿಕ ಆರ್ಥಿಕ ಮುನ್ನೋಟವು ದುರ್ಬಲ ಆಗಿರುವುದರಿಂದ ವರಮಾನದಲ್ಲಿ ಇಳಿಕೆ ಕಂಡುಬಂದಿದೆ. ಡಿಸೆಂಬರ್ ತ್ರೈಮಾಸಿಕದಲ್ಲಿಯೂ ಇದೇ ಕಾರಣಕ್ಕೆ ವರಮಾನವು ಶೇ 3.5 ರಿಂದ ಶೇ 1.5ಕ್ಕೆ ಇಳಿಕೆ ಕಾಣಲಿದೆ ಎಂದು ತಿಳಿಸಿದೆ.

ಅನಿಶ್ಚಿತ ಪರಿಸ್ಥಿತಿಯಿಂದಾಗಿ ವಹಿವಾಟು ನಡೆಸುವುದು ಕಷ್ಟವಾಗುತ್ತಿದೆ. ಹಣದುಬ್ಬರ ಮತ್ತು ಬಡ್ಡಿದರ ಗರಿಷ್ಠ ಮಟ್ಟದಲ್ಲಿ ಇವೆ. ಸೇವೆಗಳನ್ನು ಬಯಸುವ ಕಂಪನಿಗಳ ಬಹಳ ಎಚ್ಚರಿಕೆಯಿಂದ ಹೂಡಿಕೆ ಮಾಡುತ್ತಿವೆ ಎಂದು ವಿಪ್ರೊ ಕಂಪನಿಯ ಸಿಇಒ ಥಿಯರಿ ಡೆಲಾಪೋರ್ಟ್ ತಿಳಿಸಿದ್ದಾರೆ.

ಕಂಪನಿ ಬಿಟ್ಟು ಹೋಗುತ್ತಿರುವವರ ಪ್ರಮಾಣವು ಶೇ 15.5ಕ್ಕೆ ಇಳಿಕೆ ಕಂಡಿದೆ. ಒಟ್ಟು ಸಿಬ್ಬಂದಿ ಸಂಖ್ಯೆಯು ಶೇ 7ರಷ್ಟು ಇಳಿಕೆ ಕಂಡು 2.44 ಲಕ್ಷಕ್ಕೆ ತಲುಪಿದೆ ಎಂದು ಕಂಪನಿ ಹೇಳಿದೆ.

ಎಲ್‌ಟಿಐ ಮೈಂಡ್‌ಟ್ರೀ ಲಾಭ ಇಳಿಕೆ

ಮುಂಬೈ: ದೇಶದ 6ನೇ ಅತಿದೊಡ್ಡ ಐ.ಟಿ. ಸೇವೆಗಳ ಕಂಪನಿ ಎಲ್‌ಟಿಐ ಮೈಂಡ್‌ಟ್ರೀ ನಿವ್ವಳ ಲಾಭವು ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹1,162 ಕೋಟಿಗೆ ಇಳಿಕೆ ಕಂಡಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಕಂಪನಿಯ ನಿವ್ವಳ ಲಾಭವು ₹1,189 ಕೋಟಿಯಷ್ಟು ಇತ್ತು. ಕಂಪನಿಯ ಒಟ್ಟು ವರಮಾನವು ಶೇ 8.2ರಷ್ಟು ಹೆಚ್ಚಾಗಿ ₹8,905 ಕೋಟಿಗೆ ತಲುಪಿದೆ. ಆದರೆ, ಕಾರ್ಯಾಚರಣಾ ಲಾಭವು ಶೇ 17.5ರಿಂದ ಶೇ 16ಕ್ಕೆ ಇಳಿದಿದೆ.

ಹಿಂಗಾರಿನ ಒಟ್ಟು 6 ಬೆಳೆಗಳ ಕನಿಷ್ಠ ಬೆಂಬಲ ಬೆಲೆ ಹೆಚ್ಚಿಸಿದ ಕೇಂದ್ರ ಸರ್ಕಾರ

ಗೋಧಿ ಮೇಲಿನ ಎಂಎಸ್‌ಪಿ ಹೆಚ್ಚಳ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಗೋಧಿ ಮೇಲಿನ ಕನಿಷ್ಠ ಬೆಂಬಲ ಬೆಲೆಯನ್ನು (ಎಂಎಸ್‌ಪಿ) 2024-25ನೇ ಮಾರುಕಟ್ಟೆ ಅವಧಿಗೆ ಕ್ವಿಂಟಲ್‌ಗೆ ₹150ರಷ್ಟು ಹೆಚ್ಚಳ ಮಾಡಿದೆ. ಇದರಿಂದಾಗಿ ಗೋಧಿ ಮೇಲಿನ ಎಂಎಸ್‌ಪಿ ಕ್ವಿಂಟಲ್‌ಗೆ ₹2,275ಕ್ಕೆ ಏರಿಕೆ ಆಗಿದೆ.

ಗೋಧಿ ಬೆಳೆಯುವ ಮಧ್ಯಪ್ರದೇಶ, ರಾಜಸ್ಥಾನದಂತಹ ಪ್ರಮುಖ ರಾಜ್ಯಗಳಲ್ಲಿ ವಿಧಾನಸಭೆ ಚುನಾವಣೆ ನಡೆಯುವ ಬೆನ್ನಲ್ಲೇ ಕೇಂದ್ರವು ಈ ನಿರ್ಧಾರ ತೆಗೆದುಕೊಂಡಿದೆ.

2014ರಲ್ಲಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಅಧಿಕಾರಕ್ಕೆ ಬಂದ ಬಳಿಕ ಮಾರುಕಟ್ಟೆ ಅವಧಿಯೊಂದರಲ್ಲಿ ಎಂಎಸ್‌ಪಿಯಲ್ಲಿ ಆಗಿರುವ ಗರಿಷ್ಠ ಏರಿಕೆ ಇದಾಗಿದೆ. 2017-18, 2018-19, 2019-20 ಮತ್ತು

2023-24ರ ಅವಧಿಯಲ್ಲಿ ಕ್ವಿಂಟಲ್‌ಗೆ ₹100 ರಿಂದ ₹110ರವರೆಗೆ ಹೆಚ್ಚಳ ಮಾಡಲಾಗಿದೆ. ಆರ್ಥಿಕ ವ್ಯವಹಾರಗಳ ಸಚಿವ ಸಂಪುಟ ಸಮಿತಿಯು ಈ ನಿರ್ಧಾರ ತೆಗೆದುಕೊಂಡಿದೆ.

2023-24ನೇ ಮಾರುಕಟ್ಟೆ ಅವಧಿಗೆ (ಏಪ್ರಿಲ್-ಮಾರ್ಚ್) ಗೋಧಿಗೆ ಕ್ವಿಂಟಲ್‌ಗೆ ₹2,125 ರಷ್ಟು ಎಂಎಸ್‌ಪಿ ಇದೆ.

ಹಿಂಗಾರು ಅವಧಿಯಲ್ಲಿ ಬೆಳೆಯುವ 6 ಬೆಳೆಗಳ ಮೇಲಿನ ಎಂಎಸ್‌ಪಿ ಹೆಚ್ಚಿಸಲು ಸಮಿತಿಯು ಒಪ್ಪಿಗೆ ನೀಡಿದೆ ಎಂದು ಮಾಹಿತಿ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್ ತಿಳಿಸಿದ್ದಾರೆ. ಕಡಲೆಕಾಳು, ಬಾರ್ಲಿ, ಚೆನ್ನಂಗಿ ಬೇಳೆ (ಮಸೂರ್), ಸಾಸಿವೆ ಮತ್ತು ಕುಸುಬೆ ಮೇಲಿನ ಎಂಎಸ್‌ಪಿಯನ್ನೂ ಹೆಚ್ಚಿಸಲಾಗಿದೆ.

2023-24ನೇ ಬೆಳೆ ವರ್ಷದಲ್ಲಿ (ಜುಲೈ-ಜೂನ್) 11.4 ಕೋಟಿ ಟನ್ ಗೋಧಿ ಉತ್ಪಾದನೆ ಆಗುವ ಅಂದಾಜನ್ನು ಕೃಷಿ ಸಚಿವಾಲಯ ಮಾಡಿದೆ. 2022-23ರ ಅವಧಿಗೆ ಉತ್ಪಾದನೆಯನ್ನು 11.05 ಲಕ್ಷ ಟನ್‌ಗೆ ತಗ್ಗಿಸಲಾಗಿದೆ. ಸಚಿವಾಲಯದ ಪ್ರಕಾರ, ಗೋಧಿ ಬಿತ್ತನೆಗೆ ಸಾಕಷ್ಟು ಬೀಜ ಪೂರೈಕೆ ಆಗಿದೆ.

ಎಂಎಸ್‌ಪಿ ವಿವರ (₹ ಕ್ವಿಂಟಲ್‌ಗೆ)

ಬೆಳೆ	2023-24	2024-25	ಏರಿಕೆ
ಗೋಧಿ	2,125	2,275	150
ಬಾರ್ಲಿ	1,735	1,850	115
ಸಾಸಿವೆ	5,450	5,650	200
ಚೆನ್ನಂಗಿ	6,000	6,425	425
ಕುಸುಬೆ	5,650	5,800	150

ಪೂರೈಕೆ ಕೊರತೆ: ಗೋಧಿ ದರ ಏರಿಕೆ

ಮುಂಬೈ (ರಾಯಿಟರ್ಸ್): ಹಬ್ಬದ ಋತುವಿನ ಬೇಡಿಕೆಗೆ ಅನುಗುಣವಾಗಿ ಪೂರೈಕೆ ಆಗದೇ ಇರುವುದರಿಂದ ದೇಶಿ ಮಾರುಕಟ್ಟೆಯಲ್ಲಿ ಗೋಧಿ ಬೆಲೆಯು 8 ತಿಂಗಳ ಗರಿಷ್ಠ ಮಟ್ಟಕ್ಕೆ ಏರಿಕೆ ಕಂಡಿದೆ.

ದೆಹಲಿಯಲ್ಲಿ ಗೋಧಿ ಬೆಲೆಯು ಶೇ 1.6ರಷ್ಟು ಹೆಚ್ಚಾಗಿ ಟನ್‌ಗೆ ₹27,390ಕ್ಕೆ ತಲುಪಿದೆ. ಫೆಬ್ರುವರಿ 10ರ ನಂತರದ ಗರಿಷ್ಠ ದರ ಇದಾಗಿದೆ. ಕಳೆದ ಆರು ತಿಂಗಳಿನಲ್ಲಿ ದರವು ಶೇ 22ರಷ್ಟು ಹೆಚ್ಚಾಗಿದೆ.

ಹಬ್ಬದ ಬೇಡಿಕೆಯು ಗೋಧಿ ಬೆಲೆ ಹೆಚ್ಚಳಕ್ಕೆ ಕಾರಣವಾಗುತ್ತಿದೆ. ಬೆಲೆ ಕಡಿಮೆ ಆಗಬೇಕಾದರೆ ಸರ್ಕಾರವು ಸುಂಕ ಇಲ್ಲದೇ ಆಮದು ಮಾಡಿಕೊಳ್ಳಲು ಅನುಮತಿ ನೀಡಬೇಕು ಎಂದು ರೋಲರ್ ಫ್ಲೋರ್ ಮಿಲ್ಲರ್ಸ್ ಫೆಡರೇಷನ್‌ನ ಅಧ್ಯಕ್ಷ ಪ್ರಮೋದ್ ಕುಮಾರ್ ಎಸ್. ಹೇಳಿದ್ದಾರೆ.

ಗೋಧಿ ಆಮದು ಸುಂಕವು ಸದ್ಯ ಶೇ 40ರಷ್ಟು ಇದೆ. ಸದ್ಯದ ಮಟ್ಟಿಗೆ ಸರ್ಕಾರವು ಆಮದು ಸುಂಕ ಕೈಬಿಡುವ ಸಾಧ್ಯತೆ ಇಲ್ಲ ಎಂದು ಆಹಾರ ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು ಕಳೆದ ತಿಂಗಳು ಹೇಳಿದ್ದರು.

ಸಕ್ಕರೆ ರಫ್ತು ನಿರ್ಬಂಧ ಅವಧಿ ವಿಸ್ತರಣೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಸಕ್ಕರೆ ರಫ್ತು ಮೇಲೆ ವಿಧಿಸಿರುವ ನಿರ್ಬಂಧವನ್ನು ಅಕ್ಟೋಬರ್ 31ರ ಆಚೆಗೂ ವಿಸ್ತರಣೆ ಮಾಡಿದೆ. ಹಬ್ಬದ ಋತುವಿನಲ್ಲಿ ದೇಶಿ ಮಾರುಕಟ್ಟೆಯಲ್ಲಿ ಸಕ್ಕರೆ ಲಭ್ಯತೆಯನ್ನು ಹೆಚ್ಚಿಸುವ ಉದ್ದೇಶದಿಂದ ಈ ಕ್ರಮ ಕೈಗೊಂಡಿರುವುದಾಗಿ ತಿಳಿಸಿದೆ.

ಸರ್ಕಾರದ ಈ ಹಿಂದಿನ ಆದೇಶದಲ್ಲಿ ಅಕ್ಟೋಬರ್ 31ರವರೆಗೆ ನಿರ್ಬಂಧ ಹೇರಲಾಗಿತ್ತು. ಆದರೆ, ವಿದೇಶಿ ವ್ಯಾಪಾರದ ಮಹಾನಿರ್ದೇಶನಾಲಯವು ಹೊರಡಿಸಿರುವ ಪ್ರಕಟಣೆಯಲ್ಲಿ 2023ರ ಅಕ್ಟೋಬರ್ 31ರ ಆಚೆಗೂ ನಿರ್ಬಂಧ ಮುಂದುವರಿಯಲಿದೆ ಎಂದು ತಿಳಿಸಲಾಗಿದೆ.

ಆದರೆ, ಸುಂಕ ವಿನಾಯಿತಿ ಕೋಟಾದ ಅಡಿ (ಟಿಆರ್‌ಕ್ಯು) ಯುರೋಪ್ ಒಕ್ಕೂಟ ಮತ್ತು ಅಮೆರಿಕಕ್ಕೆ ರಫ್ತು ಮಾಡುವುದಕ್ಕೆ ಈ ನಿರ್ಬಂಧವು ಅನ್ವಯಿಸುವುದಿಲ್ಲ ಎಂದು ಹೇಳಿದೆ.

ಸಕ್ಕರೆ ರಫ್ತು ಮಾಡಲು ಸರ್ಕಾರದಿಂದ ಲೈಸೆನ್ಸ್ ಪಡೆದುಕೊಳ್ಳಬೇಕಿದೆ. ಲೈಸೆನ್ಸ್ ಪಡೆಯುವುದನ್ನು ನಿರ್ಬಂಧದ ವ್ಯಾಪ್ತಿಗೆ ತರಲಾಗಿದೆ.

ಆಕಸ್ಮಿಕ ಲಾಭ ತೆರಿಗೆ ತಗ್ಗಿಸಿದ ಕೇಂದ್ರ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಬುಧವಾರದಿಂದ ಜಾರಿಗೆ ಬರುವಂತೆ ದೇಶದಲ್ಲಿ ಉತ್ಪಾದನೆ ಆಗುವ ಕಚ್ಚಾ ತೈಲದ ಮೇಲಿನ ಆಕಸ್ಮಿಕ ಲಾಭ ತೆರಿಗೆ ತಗ್ಗಿಸಿದೆ. ಇದೇ ವೇಳೆ, ಡೀಸೆಲ್ ಮತ್ತು ವಿಮಾನ ಇಂಧನದ ಮೇಲಿನ ತೆರಿಗೆಯನ್ನು ಸಹ ಇಳಿಕೆ ಮಾಡಿದೆ.

ಸರ್ಕಾರ ಹೊರಡಿಸಿರುವ ಅಧಿಸೂಚನೆಯ ಪ್ರಕಾರ, ದೇಶದಲ್ಲಿ ಉತ್ಪಾದನೆ ಆಗುವ ಕಚ್ಚಾ ತೈಲದ ಮೇಲಿನ ಆಕಸ್ಮಿಕ ಲಾಭ ತೆರಿಗೆಯು ಪ್ರತಿ ಟನ್‌ಗೆ ₹12,100 ಇದ್ದದ್ದು ₹9,050ಕ್ಕೆ ಇಳಿಕೆ ಆಗಿದೆ.

ಡೀಸೆಲ್ ಮೇಲಿನ ರಫ್ತು ತೆರಿಗೆಯನ್ನು ಪ್ರತಿ ಲೀಟರಿಗೆ ₹5 ರಿಂದ ₹4ಕ್ಕೆ ಇಳಿಕೆ ಮಾಡಲಾಗಿದೆ. ಪೆಟ್ರೋಲ್ ಮೇಲಿನ ಶೂನ್ಯ ತೆರಿಗೆಯನ್ನು ಮುಂದುವರಿಸಲಾಗಿದೆ. 2022ರ ಜುಲೈ 1ರಿಂದ ಆಕಸ್ಮಿಕ ಲಾಭ ತೆರಿಗೆ ವಿಧಿಸುವುದನ್ನು ಆರಂಭಿಸಲಾಗಿದೆ.

ಮುಂಬೈ ಧಾರಣೆ

ಶೇಂಗಾ

18-10-2023

ಜಾವಾ 70/80(ಹೊಸ)	12300-12400
ಜಾವಾ 80/90(ಹೊಸ)	12000-12100
ದಪ್ಪ ಮಧ್ಯಪ್ರದೇಶ(ಹೊಸ)	10600-10700
ದಪ್ಪ ಗುಜರಾತ್(ಹೊಸ)	11400-11500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1610 (1570)
ಒಂದು ವಾರದ ಡೆಲಿವರಿ	1605 (1565)
ಸೋಯಾ ಕಚ್ಚಾ	865 (862)
ಪಾಮ್ ವಾರದ ಡೆಲಿವರಿ	828 (826)
ಸೂರ್ಯಕಾಂತಿ ಎಣ್ಣೆ ಕಚ್ಚಾ	850 (840)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
59,650 (58,950)
ಬೆಳ್ಳಿ ಕೆ.ಜಿ 72,200 (70,800)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ		ಹೊಸಚಾಲಿ	37699-40009	ರಾಶಿ	42609-48099
ಕೋಕ	15000-27500	**ಪುತ್ತೂರು**		ಸರಕು	58619-81410
ಹಳತು	46000-48500	ಕೋಕ	11000-25000	**ಶಿರಸಿ**	
ಕುಮಟ		ಹೊಸತು	34000-43000	ಬೆಟ್ಟೆ	32699-43099
ಚಿಪ್ಪು	31509-34509	**ಶಿವಮೊಗ್ಗ**		ಬಿಳಿಗೋಟು	28472-35799
ಕೋಕ	20169-32599	ಬೆಟ್ಟೆ	48119-52700	ಚಾಲಿ	37400-41208
ಫ್ಯಾಕ್ಟರಿ	11019-26829	ಗೊರಬಾಳು	17990-37169	ಕೆಂಪುಗೋಟು	30698-30699
ಹಳೆಚಾಲಿ	39369-40109	ಹೊಸತು	45369-45569	ರಾಶಿ	45508-46889

ತೈಲ ದರ ಏರಿಕೆ; ಸೆನ್ಸೆಕ್ಸ್ 551 ಅಂಶ ಇಳಿಕೆ

ವಿಶ್ವ ಮಟ್ಟದಲ್ಲಿ ನಕಾರಾತ್ಮಕ ವಹಿವಾಟು: ನಿರಾಸೆ ಮೂಡಿಸಿದ ಐ.ಟಿ. ಸಾಧನೆ

ಮುಂಬೈ (ಪಿಟಿಐ/ರಾಯಿಟರ್ಸ್): ಜಾಗತಿಕ ಮಾರುಕಟ್ಟೆಗಳಲ್ಲಿ ನಡೆದ ಇಳಿಮುಖ ವಹಿವಾಟು ಮತ್ತು ಕಚ್ಚಾ ತೈಲ ದರ ಏರಿಕೆಯ ಕಾರಣಗಳಿಂದಾಗಿ ದೇಶದ ಷೇರುಪೇಟೆಗಳಲ್ಲಿ ಬುಧವಾರ ಸೂಚ್ಯಂಕಗಳು ಇಳಿಕೆ ಕಾಣುವಂತಾಯಿತು.

ಮಧ್ಯಪ್ರಾಚ್ಯ ಬಿಕ್ಕಟ್ಟು ತೀವ್ರಗೊಂಡಿದ್ದರಿಂದ ಬುಧವಾರ ಬ್ರೆಂಟ್ ಕಚ್ಚಾ ತೈಲ ದರವು ಬ್ಯಾರಲ್‌ಗೆ ಶೇ 3.36ರಷ್ಟು ಏರಿಕೆ ಕಂಡು 93 ಡಾಲರ್‌ಗೆ ತಲುಪಿತ್ತು. ವಹಿವಾಟಿನ ಅಂತ್ಯದ ವೇಳೆಗೆ ಬ್ಯಾರಲ್‌ಗೆ 92.92 ಡಾಲರ್ ತಗ್ಗಿತು.

ಇಸ್ರೇಲ್-ಹಮಾಸ್ ಸಮರ ತೀವ್ರಗೊಂಡಿರುವುದರಿಂದಾಗಿ ತೈಲ ಪೂರೈಕೆಗೆ ಅಡ್ಡಿಯಾಗುವ ಸಂಭವ ಎದುರಾಗಿದೆ. ಇಸ್ರೇಲ್ ಮೇಲೆ ತೈಲ

ನಿರ್ಬಂಧ ಹೇರುವುದಾಗಿ ಇರಾನ್ ಹೇಳಿದೆ. ಆದರೆ, ಈ ಕುರಿತು ಒಪೆಕ್ + ತಕ್ಷಣಕ್ಕೆ ಯಾವುದೇ ಕ್ರಮ ತೆಗೆದುಕೊಳ್ಳುವ ಆಲೋಚನೆ ಇಲ್ಲ ಎಂದು ಮೂಲಗಳು ಹೇಳಿವೆ. ಈ ಬೆಳವಣಿಗೆಗಳು ಭಾರತವನ್ನೂ ಒಳಗೊಂಡು ಜಾಗತಿಕ ಷೇರುಪೇಟೆಗಳ ಮೇಲೆ ನಕಾರಾತ್ಮಕ ಪರಿಣಾಮ ಬೀರಿದವು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 551 ಅಂಶ ಇಳಿಕೆ ಕಂಡು 65,877 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 140 ಅಂಶ ಇಳಿಕೆಯಾಗಿ 19,671 ಅಂಶಗಳಲ್ಲಿ ವಹಿವಾಟು ಅಂತ್ಯಗೊಳಿಸಿತು.

ಜಾಗತಿಕ ಮಾರುಕಟ್ಟೆಯಲ್ಲಿ ದುರ್ಬಲ ವಹಿವಾಟು ನಡೆದಿದ್ದು, ಭಾರತದ ಷೇರುಪೇಟೆಗಳಲ್ಲಿ ಲಾಭ ಗಳಿಕೆಯ ಕಾರಣವಾಯಿತು. ಮಧ್ಯಪ್ರಾಚ್ಯ ಬಿಕ್ಕಟ್ಟು ತೀವ್ರಗೊಂಡಿದ್ದರಿಂದ ಕಚ್ಚಾ ತೈಲ ದರವು ಏರಿಕೆ ಕಾಣುವಂತಾಯಿತು ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಐ.ಟಿ. ಮತ್ತು ಹಣಕಾಸು ವಲಯದ ಎರಡನೇ ತ್ರೈಮಾಸಿಕದ ಸಾಧನೆಯು ನಿರಾಶಾದಾಯಕ ಆಗಿದೆ. ಇದು ದೇಶಿ ಷೇರುಪೇಟೆಗಳಲ್ಲಿ ಎಚ್ಚರಿಕೆಯಿಂದ ವಹಿವಾಟು ನಡೆಯುವಂತೆ ಮಾಡಿತು ಎಂದೂ ಅವರು ತಿಳಿಸಿದ್ದಾರೆ.

ವಲಯವಾರು ವಿದ್ಯುತ್ ಶೇ 1.45, ಹಣಕಾಸು ಸೇವೆಗಳು ಶೇ 1.20, ಬ್ಯಾಂಕಿಂಗ್ ಶೇ 1.18ರಷ್ಟು ಇಳಿಕೆ ಕಂಡಿವೆ.

ಏಷ್ಯಾದಲ್ಲಿ ಶಾಂಘೈ ಮತ್ತು ಹಾಂಗ್‌ಕಾಂಗ್ ಮಾರುಕಟ್ಟೆಗಳಲ್ಲಿ ನಕಾರಾತ್ಮಕ ವಹಿವಾಟು ನಡೆಯಿತು. ಸೋಲ್ ಮತ್ತು ಟೋಕಿಯೊ ವಹಿವಾಟು ಏರಿಕೆ ಕಂಡಿತು. ಯುರೋಪಿನ ಮಾರುಕಟ್ಟೆಗಳಲ್ಲಿಯೂ ಇಳಿಮುಖ ವಹಿವಾಟು ನಡೆಯಿತು.

ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಇರ್ವಿನ್ ರಸ್ತೆ, ಮೈಸೂರು-570001
Website:www.mmcri/karnataka.gov.in
Email: mmcrimysore@yahoo.com
Ph: 0821-2520512 (Off), 2520803(Fax)
ಸಂ:ಸರಬ/ವಿವ/170/2023-24 ದಿನಾಂಕ: 09.10.2023

ಅಲ್ಪಾವಧಿ ಮರು-ಟೆಂಡರ್ ಅಧಿಸೂಚನೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999-ನಿಯಮ 2000 ರಂತೆ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಇಲ್ಲಿನ ಸಹ ಆಸ್ಪತ್ರೆಗಳಾದ ಕೆ.ಆರ್‌ಆಸ್ಪತ್ರೆ, ಚೆಲುವಾಂಬ ಆಸ್ಪತ್ರೆ ಮತ್ತು ಪಿ.ಕೆ.ಟಿ.ಬಿ ಮತ್ತು ಸಿ.ಡಿ.ಆಸ್ಪತ್ರೆ, ಟ್ರಾಮಾಕೇರ್ ಸೆಂಟರ್ ಮತ್ತು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಿಗೆ ಔಷಧಿ (ಪೈಪೆರಾಸಿಲಿನ್) ಮತ್ತಿತರ ಪದಾರ್ಥಗಳನ್ನು ಒಂದು ವರ್ಷದಅವಧಿಗೆ ಸರಬರಾಜು ಮಾಡಲು ವಿದ್ಯುನ್ಮಾನ ವೇದಿಕೆ ಮುಖಾಂತರಅಲ್ಪಾವಧಿ ಮರು ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಯನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: htttp://kppp.karnataka.gov.in ಮೂಲಕ ದಿನಾಂಕ 09.10.2023 ರಿಂದ ಪಡೆಯಬಹುದಾಗಿದ್ದು, ದಿನಾಂಕ: 25.10.2023 ರಂದು ಅಪರಾಹ್ನ 5.00 ರೊಳಗಾಗಿ ಸಲ್ಲಿಸಬಹುದಾಗಿರುತ್ತದೆ. ಇ.ಎಂ.ಡಿ ಸಲ್ಲಿಸದ ಟೆಂಡರ್ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಒಂದು ವೇಳೆ ಸಾರ್ವಜನಿಕರ ರಜೆಯೆಂದು ಘೋಷಿಸಲ್ಪಟ್ಟರೆ,ಮುಂದಿನ ಕೆಲಸದ ದಿನಾಂಕವನ್ನು ಕೊನೆಯ ದಿನಾಂಕವೆಂದು ಪರಿಗಣಿಸತಕ್ಕದ್ದು, ಈ ಬಗ್ಗೆ ಯಾವುದೇ ಅಧಿಸೂಚನೆ ಹೊರಡಿಸಲಾಗುವುದಿಲ್ಲ.

ಸಹಿ/- ನಿರ್ದೇಶಕರು ಮತ್ತು ಡೀನ್

DIPR/DDMYS/KSMCA/532/2022-23

ಧಾರ್ಮಿಕ ಸ್ಥಳ ನಿರ್ವಹಣೆ ಸುಪ್ರೀಂನಿಂದ ಅರ್ಜಿ ವಜಾ

ನವದೆಹಲಿ (ಪಿಟಿಐ): ಮುಸ್ಲಿಮರು, ಪಾರ್ಸಿಗಳು ಹಾಗೂ ಕ್ರೈಸ್ತರಂತೆ ತಮ್ಮ ಧಾರ್ಮಿಕ ಸ್ಥಳಗಳನ್ನು ಸ್ಥಾಪಿಸಿ, ನಿರ್ವಹಣೆ ಮಾಡುವುದಕ್ಕೆ ಹಿಂದೂಗಳು, ಸಿಖ್ಖರು, ಜೈನರು ಹಾಗೂ ಬೌದ್ಧರಿಗೂ ಅವಕಾಶ ನೀಡಬೇಕು ಎಂದು ಕೋರಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ವಿಚಾರಣೆಗೆ ಪರಿಗಣಿಸಲು ಸುಪ್ರೀಂ ಕೋರ್ಟ್ ಬುಧವಾರ ನಿರಾಕರಿಸಿದೆ.

‘ಇದು ಪ್ರಚಾರ ಪಡೆಯುವುದಕ್ಕಾಗಿ ಸಲ್ಲಿಸಿರುವ ಅರ್ಜಿ’ ಎಂದು ಹೇಳಿದ, ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ನ್ಯಾಯಪೀಠ, ‘ಈ ವಿಷಯವು ಸಂಸತ್ ವ್ಯಾಪ್ತಿಗೆ ಬರುತ್ತದೆಯಲ್ಲದೇ, ಇದರಲ್ಲಿ ನ್ಯಾಯಾಲಯ ಮಧ್ಯಪ್ರವೇಶಿಸುವುದಿಲ್ಲ’ ಎಂದು ಸ್ಪಷ್ಟಪಡಿಸಿತು.

‘ನೀವು ಸಮರ್ಪಕವಾದ ಅರ್ಜಿಯನ್ನು ಸಲ್ಲಿಸಿ. ಈ ತರಹದ ಅರ್ಜಿಗಳಿಗೆ ಪರಿಹಾರ ನೀಡಲು ಸಾಧ್ಯವೇ? ಅರ್ಜಿಯನ್ನು ಕೂಡಲೇ

ಹಿಂದಕ್ಕೆ ಪಡೆದು, ಪರಿಹಾರ ನೀಡಲು ಸಾಧ್ಯವಿರುವಂತಹ ಹಾಗೂ ತಿರುಳು ಇರುವಂತಹ ಮನವಿ ಸಲ್ಲಿಸಿ’ ಎಂದು ಪಿಐಎಲ್ ಸಲ್ಲಿಸಿರುವ ವಕೀಲ ಅಶ್ವಿನ್ ಉಪಾಧ್ಯಾಯ ಅವರನ್ನು ಉದ್ದೇಶಿಸಿ ನ್ಯಾಯಪೀಠ ಹೇಳಿತು.

ದೇಶದಲ್ಲಿರುವ ಧಾರ್ಮಿಕ ಮತ್ತು ಚಾರಿಟಬಲ್ ದತ್ತಿಗಳ ನಿರ್ವಹಣೆಗೆ ಸಂಬಂಧಿಸಿ ಏಕರೂಪ ಸಂಹಿತೆ ರೂಪಿಸಬೇಕು. ತಮ್ಮ ಶ್ರದ್ಧಾಕೇಂದ್ರಗಳನ್ನು ನಿರ್ವಹಣೆ ಮಾಡುವುದಕ್ಕೆ ನಿರ್ದಿಷ್ಟ ಧರ್ಮದ, ನಂಬಿಕೆಗಳನ್ನು ಹೊಂದಿರುವವರಿಗೆ ಅವಕಾಶ ಕಲ್ಪಿಸಿರುವುದನ್ನು ಉಪಾಧ್ಯಾಯ ಪಿಐಎಲ್‌ನಲ್ಲಿ ಉಲ್ಲೇಖಿಸಿದ್ದರು. ಇದೇ ವಿಚಾರವಾಗಿ ಸ್ವಾಮಿ ಜಿತೇಂದ್ರಾನಂದ ಸರಸ್ವತಿ ಸಲ್ಲಿಸಿದ್ದ ಅರ್ಜಿಯನ್ನೂ ಕೋರ್ಟ್ ತಿರಸ್ಕರಿಸಿತು.

ಅಗ್ನಿ ಅವಘಡ: ಕಟ್ಟಡದಿಂದ ಜಿಗಿದ ಯುವಕ

ಒಂದನೇ ಪುಟದಿಂದ....

ಮಧ್ಯಾಹ್ನದ ವೇಳೆ ಗ್ರಾಹಕರು ಯಾರೂ ಇರಲಿಲ್ಲ. ಕೆಳ ಅಂತಸ್ತಿನಲ್ಲಿದ್ದ ಕಾರ್ಮಿಕರು ಹೊರಬಂದು ಪಾರಾಗಿದ್ದಾರೆ.

‘ಕಟ್ಟಡದ ಪಕ್ಕದಲ್ಲೇ ಮರವಿತ್ತು. ಅದನ್ನು ಹಿಡಿದು ಪಾರಾಗಲು ಕಟ್ಟಡದಿಂದ ಜಿಗಿದಿದ್ದಾರೆ. ಅದು ಸಾಧ್ಯವಾಗಲಿಲ್ಲ. ಕೆಳಕ್ಕೆ ಬಿದ್ದ ಅವರನ್ನು ತಕ್ಷಣ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಕೈ, ಕಾಲು, ತಲೆಗೆ ಗಂಭೀರವಾದ ಗಾಯಗಳಾಗಿವೆ’ ಎಂದು ಪ್ರತ್ಯಕ್ಷದರ್ಶಿಗಳು ಮಾಹಿತಿ ನೀಡಿದರು.

20 ದಿನಗಳ ಹಿಂದೆಯಷ್ಟೇ ಕೆಫೆ ಆರಂಭವಾಗಿತ್ತು. ಕಟ್ಟಡದ 4ನೇ ಅಂತಸ್ತಿನಲ್ಲಿ ಕೆಫೆ ನಡೆಸಲಾಗುತ್ತಿತ್ತು. ಅಡುಗೆ ಕೋಣೆಯ ಒಂದು ಮೂಲೆಯಲ್ಲಿ ವಾಣಿಜ್ಯ ಬಳಕೆಯ ಸಿಲಿಂಡರ್ ದಾಸ್ತಾನು ಇಡಲಾಗಿತ್ತು. ಸಿಲಿಂಡರ್ ಸ್ಫೋಟದಿಂದ ಹೊತ್ತಿಕೊಂಡ ಬೆಂಕಿ ಕಟ್ಟಡವನ್ನು ಆವರಿಸಿಕೊಂಡು ಕೆಫೆಯಲ್ಲಿದ್ದ ಪೀಠೋಪಕರಣಗಳು ಭಸ್ಮವಾಗಿವೆ.

ಕೋರಮಂಗಲದ ಮಡ್ ಪೈಪ್ ಕೆಫೆಯಲ್ಲಿ ಸಂಭವಿಸಿದ ಬೆಂಕಿ ಅವಘಡದಲ್ಲಿ ಕಟ್ಟಡದಿಂದ ಜಿಗಿದಿದ್ದ ಯುವಕ ಪ್ರೇಮ್

ಕಟ್ಟಡ ಹೊರಭಾಗದಲ್ಲಿ ಕೆಫೆ ಎಂದು ನಾಮಫಲಕ ಹಾಕಿಕೊಂಡು ರೆಸ್ಟೋರೆಂಟ್ ನಡೆಸುತ್ತಿದ್ದರು ಎಂಬ ಆರೋಪ ಕೇಳಿಬಂದಿದೆ. ಕಟ್ಟಡದಲ್ಲಿ ಸುರಕ್ಷತಾ ಕ್ರಮ ಕೈಗೊಂಡಿರಲಿಲ್ಲ. ಸಂಜೆ ಅಥವಾ ರಾತ್ರಿ ವೇಳೆ ಘಟನೆ ನಡೆದಿದ್ದರೆ ದೊಡ್ಡ ಅನಾಹುತವೇ ಸಂಭವಿಸುವ ಸಾಧ್ಯತೆಯಿತ್ತು ಎಂದು ಸ್ಥಳೀಯರು ತಿಳಿಸಿದರು. ಕೆಫೆ ಮಾಲೀಕ ಕರಣ್ ಜೈನ್ ವಿರುದ್ಧ ಸುದ್ದಗುಂಟೆಪಾಳ್ಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮದುವೆಗೆ ಕನಿಷ್ಠ ವಯಸ್ಸು: ಸಮಿತಿಯ ಅವಧಿ ವಿಸ್ತರಣೆ

ನವದೆಹಲಿ (ಪಿಟಿಐ): ಹೆಣ್ಣಿನ ವಿವಾಹದ ಕನಿಷ್ಠ ವಯಸ್ಸನ್ನು 18ರಿಂದ 21ಕ್ಕೆ ಏರಿಸುವ ಮಸೂದೆಯನ್ನು ಪರಿಶೀಲಿಸುತ್ತಿರುವ ಸಂಸದೀಯ ಸಮಿತಿಗೆ ವರದಿ ಸಲ್ಲಿಸಲು ನೀಡಿದ್ದ ಗಡುವನ್ನು ಮತ್ತೆ ಮೂರು ತಿಂಗಳು ವಿಸ್ತರಿಸಲಾಗಿದೆ.

ರಾಜ್ಯಸಭೆಯ ಸಭಾಪತಿ ಜಗದೀಪ್ ಧನಕರ್ ಅವರು, ಸಮಿತಿಗೆ ಮಸೂದೆಯನ್ನು ಪರಿಶೀಲಿಸಿ ವರದಿ ಸಲ್ಲಿಸಲು ನೀಡಿದ್ದ ಗಡುವನ್ನು 2024ರ ಜನವರಿ 24ರವರೆಗೆ ವಿಸ್ತರಿಸಿದ್ದಾರೆ ಎಂದು ರಾಜ್ಯಸಭೆಯ ಪ್ರಕಟಣೆಯಲ್ಲಿ ಮಂಗಳವಾರ ತಿಳಿಸಲಾಗಿದೆ.

ಇದಕ್ಕೂ ಮುನ್ನ ಸಹ ವರದಿ ಸಲ್ಲಿಸಲು ನೀಡಿದ್ದ ಗಡುವನ್ನು ವಿಸ್ತರಿಸಲಾಗಿತ್ತು. 2021ರ ಡಿಸೆಂಬರ್‌ನಲ್ಲಿ ಲೋಕಸಭೆಯಲ್ಲಿ ಬಾಲ್ಯ ವಿವಾಹ ನಿಷೇಧ (ತಿದ್ದುಪಡಿ) ಮಸೂದೆ-2021 ಮಂಡಿಸಲಾಗಿತ್ತು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6366430266 /6366430366

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000ರಿಂದ20,000 ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

Multiple Vacancy

REQUIRED SUPERVISOR, Telecaller & Field Executive For Bank_Loan Collection. Direct Recruitment to Company:- 7899040499, 9620206756.

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

MNC ಕಂಪನಿಗಳಿಗೆ ಕೆಲಸಕ್ಕೆ ಬೇಕಾಗಿದ್ದಾರೆ. ಊಟ, ರೂಮ್, ESI, PF, OT. 18,500-47,500. SSLC, PUC. 8861041526, 7022121680.

Wanted

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು, ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ. ಊಟವಸತಿಯಿದೆ. 13,000 - 17,000. 8951315839, 7022770052

ಪ್ರವಾಸ

Travel

29.11.2023 ಆಂಧ್ರ, ಕಲ್ಕತ್ತ ಕೋನಾರ್ಕ್,ಭುವನೇಶ್ವರ್. 14.12.2023 ಅಷ್ಟಜ್ಯೋತಿರ್ಲಿಂಗ ಪ್ರವಾಸ. 15.02.2024 ನೇಪಾಳ,ಮುಕ್ತಿನಾಥ ಕಾಶಿ,ಅಯೋಧ್ಯ. 02.05.2024 ಚಾರ್‌ಧಾಮ್ ಪ್ರವಾಸ. ಸಂಪರ್ಕಿಸಿ: ಏಷ್ಯನ್ ಟೂರ್ಸ್ ಅಂಡ್ ಟ್ರಾವಲ್ಸ್ ಬೆಂಗಳೂರು.70. 9342287551 8050629305

16.11.2023 08.01.2024 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 22.11.2023 08.12.2023 13.01.2024 ದುಬೈ,ಅಬುದಾಬಿ 5 ದಿನಗಳು. 06.12.2023 12.01.2024 ನೇಪಾಳ 9 ದಿನಗಳು. 23.12.2023 12.01.2024 ಭೂತಾನ್ 8 ದಿನಗಳು. 17.11.2023 11.12.2023 ಶ್ರೀಲಂಕಾ 6 ದಿನಗಳು. 22.11.2023 06.12.2023 13.01.2024 ರಾಜಸ್ಥಾನ್ 10 ದಿನಗಳು. 12.12.2023 13.01.2024 ಗುಜರಾತ್ 8 ದಿನಗಳು. 27.11.2023 05.01.2024 ಅಸ್ಸಾಂ,ಮೇಘಾಲಯ 9 ದಿನಗಳು. 11.12.2023 04.01.2024 ಕಾಶಿ,ಗಯಾ ಅಲಹಾಬಾದ್ 7 ದಿನಗಳು. ಜೈನ್ ಟ್ರಾವಲ್ಸ್ ಮಲ್ಲೇಶ್ವರ. ಬೆಂಗಳೂರು.03 9448402248 7022547922

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 24/11 ರಾಯಲ್ ರಾಜಸ್ಥಾನ, ಜೈಪುರ್ 21/12 ಗುಜರಾತ್, ನಾಗನಾಥ, ಸೋಮನಾಥ್. 15/11 ಹೈದರಾಬಾದ್, ರಮನಾಚಾರ್ಯ. 9591017782, 9964527782

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

2019ರ ನಕಲಿ ಜನನ ಪ್ರಮಾಣಪತ್ರ ಪ್ರಕರಣ

ಆಜಂಖಾನ್, ಪತ್ನಿ, ಪುತ್ರನಿಗೆ 7 ವರ್ಷ ಜೈಲು

ರಾಮ್‌ಪುರ(ಉತ್ತರ ಪ್ರದೇಶ) (ಪಿಟಿಐ): ನಕಲಿ ಜನನ ಪ್ರಮಾಣಪತ್ರ ಪ್ರಕರಣದಲ್ಲಿ ಸಮಾಜವಾದಿ ಪಕ್ಷದ ನಾಯಕ ಆಜಂ ಖಾನ್, ಪತ್ನಿ ತಜೀಮ್ ಫಾತಿಮಾ ಹಾಗೂ ಪುತ್ರ ಅಬ್ದುಲ್ಲ ಆಜಂ ಅವರಿಗೆ ಇಲ್ಲಿನ ಜನಪ್ರತಿನಿಧಿಗಳ ನ್ಯಾಯಾಲಯ ಏಳು ವರ್ಷ ಜೈಲು ಶಿಕ್ಷೆ ಹಾಗೂ ತಲಾ ₹ 50 ಸಾವಿರ ದಂಡ ವಿಧಿಸಿ ಬುಧವಾರ ಆದೇಶಿಸಿದೆ.

ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಧೀಶ ಶೋಭಿತ್ ಬನ್ಸಲ್, ಮೂವರು ತಪ್ಪಿತಸ್ಥರಿಗೆ ಗರಿಷ್ಠ ಶಿಕ್ಷೆ ವಿಧಿಸಿದರು. ಆದೇಶ ಪ್ರಕಟವಾದ ನಂತರ, ಬಿಗಿ ಪೊಲೀಸ್ ಭದ್ರತೆಯಲ್ಲಿ ಮೂವರನ್ನು ರಾಮ್‌ಪುರ ಜಿಲ್ಲಾ ಕಾರಾಗೃಹಕ್ಕೆ ಕರೆದೊಯ್ಯಲಾಯಿತು.

ಇದಕ್ಕೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಆಜಂ ಖಾನ್, ‘ಈ ದಿನ ಒಂದು ನಿರ್ಧಾರವನ್ನು ಪ್ರಕಟಿಸಲಾಗಿದೆ. ನಿರ್ಧಾರಕ್ಕೂ, ನ್ಯಾಯಕ್ಕೂ ವ್ಯತ್ಯಾಸ ಇದೆ’ ಎಂದು ಪ್ರತಿಕ್ರಿಯಿಸಿದರು.

ಜೈಲಿನ ಹೊರಗಡೆ, ಹಿರಿಯ ಪುತ್ರ ಅದೀಪ್ ಆಜಂ ಅವರು ಪಾಲಕರನ್ನು ತಬ್ಬಿಕೊಂಡದ್ದು ಕಂಡುಬಂತು.

ಪ್ರಕರಣವೇನು?: ‘ಪುತ್ರ ಅಬ್ದುಲ್ಲ ಆಜಂ ಎರಡು ನಕಲಿ ಜನನ ಪ್ರಮಾಣಪತ್ರ ಪಡೆಯಲು ಆಜಂ ಖಾನ್ ಹಾಗೂ ತಜೀಮ್ ಫಾತಿಮಾ ನೆರವಾಗಿದ್ದರು. ಒಂದು ಪ್ರಮಾಣಪತ್ರವನ್ನು ಲಖನೌದಿಂದ ಹಾಗೂ ಮತ್ತೊಂದು ಪ್ರಮಾಣಪತ್ರವನ್ನು ರಾಮ್‌ಪುರದಿಂದ ಪಡೆಯಲಾಗಿದೆ’

ಆಜಂ ಖಾನ್, ಪತ್ನಿ ತಜೀಮ್ ಫಾತಿಮಾ, ಪುತ್ರ ಅಬ್ದುಲ್ಲ ಆಜಂ –ಪಿಟಿಐ ಚಿತ್ರ

ಎಂದು ಬಿಜೆಪಿ ಶಾಸಕ ಆಕಾಶ್ ಸಕ್ಸೇನಾ ದೂರು ನೀಡಿದ್ದರು. ಈ ದೂರಿನ ಅನ್ವಯ ಮೂವರ ವಿರುದ್ಧ 2019ರ ಜನವರಿ 3ರಂದು ರಾಮ್‌ಪುರದ ಗಂಜ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು.

ರಾಮ್‌ಪುರ ಮುನ್ಸಿಪಾಲಿಟಿಯಲ್ಲಿ ನೀಡಿದ್ದ ಪ್ರಮಾಣಪತ್ರದಲ್ಲಿ ಅಬ್ದುಲ್ಲ ಅವರ ಜನ್ಮ ದಿನಾಂಕ 1993ರ ಜನವರಿ 1 ಎಂದು ನಮೂದಿಸಲಾಗಿದೆ. ಲಖನೌದಲ್ಲಿ ಪಡೆದಿದ್ದ ಪ್ರಮಾಣಪತ್ರದಲ್ಲಿ 1990ರ ಸೆಪ್ಟೆಂಬರ್ 30 ಎಂಬುದಾಗಿ ನಮೂದಿಸಲಾಗಿದೆ ಎಂದು ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ. ಕಳೆದ ವರ್ಷ ನಡೆದ ಚುನಾವಣೆಯಲ್ಲಿ ಸ್ವಾರ್ ಕ್ಷೇತ್ರದಿಂದ ಆಯ್ಕೆಯಾಗಿದ್ದ ಅಬ್ದುಲ್ಲಗೆ, 2008ರಲ್ಲಿ ದಾಖಲಾಗಿದ್ದ ಪ್ರಕರಣವೊಂದರಲ್ಲಿ ಎರಡು ವರ್ಷ ಜೈಲು ಶಿಕ್ಷೆ ವಿಧಿಸಿ ಮೊರಾದಾಬಾದ್ ಕೋರ್ಟ್ ಫೆಬ್ರುವರಿಯಲ್ಲಿ ಆದೇಶಿಸಿತ್ತು. ಇದರ ಬೆನ್ನಲ್ಲೇ, ಶಾಸಕ ಸ್ಥಾನದಿಂದ ಅನರ್ಹಗೊಳಿಸಲಾಗಿತ್ತು.

ಮೊರಾದಾಬಾದ್ ಕೋರ್ಟ್ ಆದೇಶಕ್ಕೆ ತಡೆ ನೀಡುವಂತೆ ಕೋರಿ ಅಬ್ದುಲ್ಲ ಸಲ್ಲಿಸಿದ್ದ ಮೇಲ್ಮನವಿಯನ್ನು ಅಲಹಾಬಾದ್ ಹೈಕೋರ್ಟ್ ತಿರಸ್ಕರಿಸಿತ್ತು.

‘ಪ್ರಭಾವ ಬಳಕೆ’: ‘ಪುತ್ರ 2017ರ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಲು ಅರ್ಹನಾಗಬೇಕು ಎಂಬ ಕಾರಣಕ್ಕೆ ಆಜಂ ಖಾನ್ ತನ್ನ ಪ್ರಭಾವ ಬಳಸಿ, ನಕಲಿ ಜನನ ಪ್ರಮಾಣಪತ್ರ ಪಡೆದಿದ್ದರು’ ಎಂದು ಬಿಜೆಪಿ ಶಾಸಕ ಸಕ್ಸೇನಾ ಆರೋಪಿಸಿದರು.

‘ಮೊದಲ ಜನನ ಪ್ರಮಾಣಪತ್ರದ ಪ್ರಕಾರ ಆಜಂ ಖಾನ್ ಪುತ್ರ ಅಬ್ದುಲ್ಲ ವಯಸ್ಸು 2017ರಲ್ಲಿ 24 ವರ್ಷ ಇತ್ತು. ಹೀಗಾಗಿ ವಿಧಾನಸಭಾ ಚುನಾವಣೆಗೆ ಸ್ಪರ್ಧಿಸುವ ಅರ್ಹತೆ ಹೊಂದಿರಲಿಲ್ಲ. ತನ್ನ ಪ್ರಭಾವ ಬಳಸಿ ಆಜಂ ಖಾನ್ ಪಡೆದಿದ್ದ ಮತ್ತೊಂದು ಜನನ ಪ್ರಮಾಣಪತ್ರದಲ್ಲಿ ಅಬ್ದುಲ್ಲ ಜನ್ಮದಿನಾಂಕವನ್ನು 1990, ಸೆಪ್ಟೆಂಬರ್ 30 ಎಂದು ತೋರಿಸಲಾಗಿತ್ತಲ್ಲದೇ, ಚುನಾವಣೆಗೆ ಸ್ಪರ್ಧಿಸಲು ಅರ್ಹನನ್ನಾಗಿ ಮಾಡಲಾಗಿತ್ತು’ ಎಂದೂ ಸಕ್ಸೇನಾ ಹೇಳಿದ್ದಾರೆ.

ಪತ್ರಕರ್ತೆ ಸೌಮ್ಯಾ ಕೊಲೆ: ಐವರು ದೋಷಿ

ನವದೆಹಲಿ(ಪಿಟಿಐ): ಹದಿನೈದು ವರ್ಷಗಳ ಹಿಂದೆ ನಡೆದ ಟಿ.ವಿ ಪತ್ರಕರ್ತೆ ಸೌಮ್ಯಾ ವಿಶ್ವನಾಥನ್ ಅವರ ಕೊಲೆ ಪ್ರಕರಣದಲ್ಲಿ ಭಾಗಿಯಾದ ಐವರು ಆರೋಪಿಗಳನ್ನು ದೆಹಲಿಯ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯವು, ತಪ್ಪಿತಸ್ಥರೆಂದು ಘೋಷಿಸಿದೆ.

ರವಿಕಪೂರ್, ಅಮಿತ್ ಶುಕ್ಲಾ, ಬಲ್ಜೀತ್ ಮಲಿಕ್, ಅಜಿತ್‌ಕುಮಾರ್ ಹಾಗೂ ಅಜಯ್ ಸೇಥಿ ಅವರ ಮೇಲಿನ ಆರೋಪ ಸಾಬೀತಾಗಿದೆ. ಎಲ್ಲರೂ ದೋಷಿಗಳಾಗಿದ್ದಾರೆ ಎಂದು ಹೆಚ್ಚುವರಿ ನ್ಯಾಯಾಧೀಶ ರವೀಂದ್ರಕುಮಾರ್ ಪಾಂಡೆ ಬುಧವಾರ ನ್ಯಾಯಾಲಯದಲ್ಲಿ ಪ್ರಕಟಿಸಿದರು.

ಯಾವುದೇ, ಸಂಶಯಕ್ಕೆ ಆಸ್ಪದ ಇಲ್ಲದಂತೆ ಸಾಕ್ಷ್ಯಗಳನ್ನು ಸಾಬೀತುಪಡಿಸುವಲ್ಲಿ ಪ್ರಾಸಿಕ್ಯೂಷನ್ ಯಶಸ್ವಿಯಾಗಿದೆ ಎಂದ ಅವರು, ಅಕ್ಟೋಬರ್ 26ರಂದು ಶಿಕ್ಷೆಯ ಪ್ರಮಾಣ ಪ್ರಕಟಿಸುವುದಾಗಿ ಹೇಳಿದರು.

ಈ ಐವರ ವಿರುದ್ಧ ಕೊಲೆ, ಸಾಕ್ಷ್ಯ ನಾಶ ಹಾಗೂ ಕ್ರಿಮಿನಲ್ ಪಿತೂರಿ ಎಸಗಿದ ಆರೋಪವಿತ್ತು. ಮಹಾರಾಷ್ಟ್ರ ಸಂಘಟಿತ ಅಪರಾಧ ನಿಯಂತ್ರಣ ಕಾಯ್ದೆ (ಮೋಕಾ) ಅಡಿ ಪ್ರಕರಣ ದಾಖಲಿಸಲಾಗಿತ್ತು. ಕೃತ್ಯಕ್ಕೆ ಸಹಕರಿಸಿದ ಸೇಥಿ ವಿರುದ್ಧ ಐಪಿಸಿ ಸೆಕ್ಷನ್ 411 (ಕಳವಾದ ಆಸ್ತಿಯನ್ನು ಅಪ್ರಮಾಣಿಕವಾಗಿ ಸ್ವೀಕರಿಸುವುದು) ಅಡಿ ಆರೋಪ ರುಜುವಾತಾಗಿದೆ.

ಸೌಮ್ಯಾ ಅವರು 2008ರ ಸೆಪ್ಟೆಂಬರ್ 30ರಂದು ಮುಂಜಾನೆ 3.30ರ ಸುಮಾರಿಗೆ ಕೆಲಸ ಮುಗಿಸಿಕೊಂಡು ತನ್ನ ಕಾರಿನಲ್ಲಿ ಮನೆಗೆ ಮರಳುತ್ತಿದ್ದರು. ಈ ವೇಳೆ ದರೋಡೆ ಮಾಡುವ ಉದ್ದೇಶದಿಂದ ವಸಂತ ವಿಹಾರ್ ಬಳಿ ಕಾರನ್ನು ಅಡ್ಡಗಟ್ಟಿದ್ದ ದುಷ್ಕರ್ಮಿಗಳು, ಅವರ ತಲೆಗೆ ಗುಂಡು ಹಾರಿಸಿ ಹತ್ಯೆಗೈದಿದ್ದರು. ಈ ಕೃತ್ಯ ರಾಷ್ಟ್ರಾದ್ಯಂತ ಸುದ್ದಿಯಾಗಿತ್ತು.

> **ನಾವು ಅನುಭವಿಸಿದ ನೋವನ್ನು ಅವರು ಅನುಭವಿಸಬೇಕು. ತಪ್ಪಿತಸ್ಥರಿಗೆ ಜೀವಿತಾವಧಿವರೆಗೆ ಶಿಕ್ಷೆ ವಿಧಿಸಬೇಕು**
> **ಮಾಧವಿ ವಿಶ್ವನಾಥನ್,** ಸೌಮ್ಯಾ ಅವರ ತಾಯಿ

ಪೊಲೀಸರು ಐವರನ್ನೂ ಬಂಧಿಸಿದ್ದರು. 2009ರ ಮಾರ್ಚ್‌ನಿಂದ ಜೈಲಿನಲ್ಲಿದ್ದಾರೆ.

ಆಯುಧ ನೀಡಿದ ಸುಳಿವು: ಸೌಮ್ಯಾ ಕೊಲೆ ನಡೆದ ಒಂದು ತಿಂಗಳ ಬಳಿಕ ಫರಿದಾಬಾದ್‌ನಲ್ಲಿ ಐಟಿ ಉದ್ಯೋಗಿ ಜಿಗೀಶಾ ಘೋಷ್ ಎಂಬುವರ ಕೊಲೆಯಾಗಿತ್ತು. ಈ ಪ್ರಕರಣದಲ್ಲಿ ವಶಪಡಿಸಿಕೊಂಡಿದ್ದ ಆಯುಧವು ಸೌಮ್ಯ ಕೊಲೆ ಪ್ರಕರಣ ಭೇದಿಸಲು ಮಹತ್ವದ ಸುಳಿವು ನೀಡಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಘೋಷ್ ಅವರ ಕೊಲೆಯಲ್ಲಿ ಭಾಗಿಯಾದ ಕಪೂರ್, ಶುಕ್ಲಾ ಹಾಗೂ ಮಲಿಕ್ ಅವರನ್ನು ಪೊಲೀಸರು ತೀವ್ರ ತನಿಖೆಗೆ ಒಳಪಡಿಸಿದಾಗ ಸೌಮ್ಯಾ ಅವರನ್ನು ಕೊಲೆ ಮಾಡಿರುವುದಾಗಿ ಬಾಯಿಬಿಟ್ಟಿದ್ದರು. ಬಳಿಕ ಉಳಿದ ಇಬ್ಬರನ್ನು ಬಂಧಿಸಲಾಗಿತ್ತು.

ವಿಚಾರಣೆಯ ವಿಳಂಬ ಪ್ರಶ್ನಿಸಿ ಮಲಿಕ್, 2019ರಲ್ಲಿ ದೆಹಲಿ ಹೈಕೋರ್ಟ್‌ನ ಮೆಟ್ಟಿಲೇರಿದ್ದ. ಈ ಅರ್ಜಿಯ ವಿಚಾರಣೆ ನಡೆಸಿದ್ದ ಹೈಕೋರ್ಟ್, ಆರೋಪಪಟ್ಟಿ ಸಲ್ಲಿಕೆಯಾಗಿ ಒಂಬತ್ತೂವರೆ ವರ್ಷಗಳು ಕಳೆದರೂ ತೀರ್ಪು ಪ್ರಕಟಿಸಲು ವಿಳಂಬ ಧೋರಣೆ ಏಕೆ ಎಂದು ವಿಚಾರಣಾ ನ್ಯಾಯಾಲಯವನ್ನು ಪ್ರಶ್ನಿಸಿತ್ತು.

ಸೂಕ್ತ ಸಾಕ್ಷ್ಯಾಧಾರ ಹಾಜರುಪಡಿಸುವಲ್ಲಿ ಪ್ರಾಸಿಕ್ಯೂಷನ್ ವಿಳಂಬ ಮಾಡುತ್ತಿದೆ ಹಾಗೂ ವಿಶೇಷ ಸರ್ಕಾರಿ ಅಭಿಯೋಜಕರ ನೇಮಕದಲ್ಲೂ ವಿಳಂಬವಾಗಿದೆ ಎಂದು ನ್ಯಾಯಾಲಯವು, ಹೈಕೋರ್ಟ್‌ಗೆ ತಿಳಿಸಿತ್ತು.

ರೋಹಿತ್ ಬಳಗಕ್ಕೆ ಇಂದು ಬಾಂಗ್ಲಾದೇಶದ ಸವಾಲು • ಜಯದ ಹಾದಿಗೆ ಮರಳಲು ಶಕೀಬ್ ಬಳಗದ ತವಕ

ಅಜೇಯ ಓಟದತ್ತ ಭಾರತ ಚಿತ್ತ

ಪ್ರಜಾವಾಣಿ ವಾರ್ತೆ

ಪುಣೆ: ರೋಹಿತ್ ಶರ್ಮಾ ನಾಯಕತ್ವದ ಭಾರತ ತಂಡವು ವಿಶ್ವಕಪ್ ಟೂರ್ನಿಯಲ್ಲಿ 'ಹ್ಯಾಟ್ರಿಕ್ ಜಯ'ದ ಸಾಧನೆ ಮಾಡಿದೆ. ಅದೇ ಲಯವನ್ನು ಮುಂದುವರಿಸುವತ್ತ ಚಿತ್ತ ನೆಟ್ಟಿದೆ.

ಗುರುವಾರ ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆ (ಎಂ.ಸಿ.ಎ) ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ಭಾರತ ತಂಡವು ಬಾಂಗ್ಲಾದೇಶವನ್ನು ಎದುರಿಸಲಿದೆ. ಮೇಲ್ನೋಟಕ್ಕೆ ಭಾರತ ತಂಡವೇ ಗೆಲ್ಲುವ ನೆಚ್ಚಿನ ತಂಡವಾಗಿದೆ. ಕಳೆದ ಮೂರು ಪಂದ್ಯಗಳಲ್ಲಿ ಆಸ್ಟ್ರೇಲಿಯಾ, ಅಫ್ಗಾನಿಸ್ತಾನ ಮತ್ತು ಪಾಕಿಸ್ತಾನ ತಂಡಗಳನ್ನು ಮಣಿಸಿರುವ ಭಾರತವು ಭರ್ತಿ ಆತ್ಮವಿಶ್ವಾಸದಲ್ಲಿದೆ.

ಆದರೆ ಟೂರ್ನಿಯಲ್ಲಿ ಈಗಾಗಲೇ ಎರಡು ಅಚ್ಚರಿಯ ಫಲಿತಾಂಶಗಳು ಹೊರಬಿದ್ದಿವೆ. ಸಾಧಾರಣ ತಂಡಗಳಾದ ಅಫ್ಗಾನಿಸ್ತಾನವು ಹಾಲಿ ಚಾಂಪಿಯನ್ ಇಂಗ್ಲೆಂಡ್ ತಂಡಕ್ಕೆ ಮತ್ತು ನೆದರ್ಲೆಂಡ್ಸ್ ತಂಡವು ಬಲಿಷ್ಠ ದಕ್ಷಿಣ ಆಫ್ರಿಕಾಕ್ಕೆ ಆಘಾತ ನೀಡಿವೆ. ಆದ್ದರಿಂದ ಈಗ ಯಾವುದೇ ತಂಡವನ್ನು ಹಗುರವಾಗಿ ಪರಿಗಣಿಸುವಂತಿಲ್ಲ.

ಅಫ್ಗನ್ ಮತ್ತು ನೆದರ್ಲೆಂಡ್ಸ್ ತಂಡಗಳಿಗೆ ಹೋಲಿಕೆ ಮಾಡಿದರೆ ಬಾಂಗ್ಲಾದೇಶವು ಹೆಚ್ಚು ಅನುಭವಿ ಮತ್ತು ಬಲಶಾಲಿಯೇ ಆಗಿದೆ. ಆದ್ದರಿಂದ ಭಾರತ ತಂಡಕ್ಕೆ ಕಠಿಣ ಪೈಪೋಟಿಯೊಡ್ಡುವ ಸಾಮರ್ಥ್ಯವೂ ಅದಕ್ಕಿದೆ. ತಮ್ಮ ವೃತ್ತಿಜೀವನದ ಕೊನೆಯ ವಿಶ್ವಕಪ್ ಟೂರ್ನಿಯಲ್ಲಿ ಆಡುತ್ತಿರುವ ಶಕೀಬ್ ಅಲ್ ಹಸನ್ ನಾಯಕತ್ವದ ತಂಡವು ಕಳೆದ ಮೂರು ಪಂದ್ಯಗಳಲ್ಲಿ ಅಫ್ಗಾನಿಸ್ತಾನ ಎದುರು ಜಯಿಸಿದರೆ, ನ್ಯೂಜಿಲೆಂಡ್ ಮತ್ತು ಇಂಗ್ಲೆಂಡ್ ತಂಡಗಳಿಗೆ ಶರಣಾಗಿತ್ತು. ನಾಲ್ಕರ ಘಟ್ಟಕ್ಕೆ ಹೋಗುವ ಕನಸು ಉಳಿಯಬೇಕಾದರೆ ಬಾಂಗ್ಲಾ ತಂಡವು ತನ್ನ ಪಾಲಿನಲ್ಲಿ ಉಳಿದಿರುವ ಆರು ಪಂದ್ಯಗಳಲ್ಲಿ ಕನಿಷ್ಠ ನಾಲ್ಕರಲ್ಲಿ ಜಯಿಸಲೇಬೇಕು.



ಪುಣೆಯ ಕ್ರೀಡಾಂಗಣದಲ್ಲಿ ಭಾರತ ತಂಡದ ಆಟಗಾರರ ತಾಲೀಮು –ಪಿಟಿಐ ಚಿತ್ರ

ಅದಕ್ಕಾಗಿ ಭಾರತ ಎದುರಿನ ಪಂದ್ಯದಲ್ಲಿ ಗೆಲುವಿನ ಅಭಿಯಾನ ಆರಂಭಿಸುವ ಸವಾಲು ಬಾಂಗ್ಲಾಗೆ ಇದೆ. ಆದರೆ, ಭಾರತ ತಂಡವು ಈಗ ಎಲ್ಲ ವಿಭಾಗಗಳಲ್ಲಿಯೂ ಉತ್ತಮ ಲಯದಲ್ಲಿದೆ. ಆರಂಭಿಕ ಬ್ಯಾಟರ್ ರೋಹಿತ್ ಶರ್ಮಾ ಅವರಂತೂ ಕಳೆದ ಎರಡೂ ಪಂದ್ಯಗಳಲ್ಲಿ ತಮ್ಮ 'ಹಿಟ್‌ಮ್ಯಾನ್' ಖ್ಯಾತಿಗೆ ತಕ್ಕಂತೆ ಆಡಿದ್ದಾರೆ. ಡೆಂಗಿ ಜ್ವರದಿಂದ ಚೇತರಿಸಿಕೊಂಡು ಬಂದಿರುವ ಶುಭಮನ್ ಗಿಲ್ ಕೂಡ ಉತ್ತಮ ಲಯಕ್ಕೆ ಮರಳುವ ಸೂಚನೆ ತೋರಿದ್ದಾರೆ. ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್ ಮತ್ತು ಕೆ.ಎಲ್. ರಾಹುಲ್ ಅವರು ಮಧ್ಯಮ ಕ್ರಮಾಂಕದ ಶಕ್ತಿಯಾಗಿದ್ದಾರೆ.

ಈ ಬ್ಯಾಟಿಂಗ್ ಪಡೆಯನ್ನು ಕಟ್ಟಿಹಾಕುವುದು ಬಾಂಗ್ಲಾದ ವೇಗಿ ಮುಸ್ತಫಿಜುರ್ ರೆಹಮಾನ್, ಶೊರಿಫುಲ್ ಇಸ್ಲಾಂ ಮತ್ತು ಸ್ಪಿನ್ನರ್ ಮೆಹದಿ ಹಸನ್ ಮಿರಾಜ್ ಅವರ ಮುಂದಿರುವ ಪ್ರಮುಖ ಸವಾಲು. ಆದರೆ ಇದಕ್ಕಿಂತಲೂ ಕಠಿಣ ಸವಾಲು ಬಾಂಗ್ಲಾ ಬ್ಯಾಟರ್‌ಗಳ ಮುಂದಿದೆ. ಭಾರತದ ಸ್ಪಿನ್ ಜೋಡಿ ಕುಲದೀಪ್ ಯಾದವ್ ಮತ್ತು ರವೀಂದ್ರ ಜಡೇಜ, ವೇಗದ ಜೋಡಿ ಜಸ್‌ಪ್ರೀತ್ ಬೂಮ್ರಾ ಹಾಗೂ ಮೊಹಮ್ಮದ್ ಸಿರಾಜ್ ಅವರನ್ನು ಎದುರಿಸಿ ನಿಲ್ಲುವುದು ಸುಲಭವಲ್ಲ. ಹಾರ್ದಿಕ್ ಪಾಂಡ್ಯ ಕೂಡ ವಿಕೆಟ್ ಉರುಳಿಸುವಲ್ಲಿ ಮುಂಚೂಣಿಯಲ್ಲಿದ್ದು ದೊಡ್ಡ ಜೊತೆಯಾಟಗಳನ್ನು ಮುರಿಯುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ.

ಪಂದ್ಯ ಆರಂಭ: ಮಧ್ಯಾಹ್ನ 2
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್ ಆ್ಯಪ್

ತಂಡದ ಸಂಯೋಜನೆಯನ್ನು ಬದಲಾವಣೆ ಮಾಡುವ ಮಾತುಕತೆ ನಡೆದಿಲ್ಲ. ಕಳೆದ 3 ಪಂದ್ಯಗಳ ಜಯದಲ್ಲಿ ಆಡಿರುವ ತಂಡವನ್ನೇ ಮುಂದುವರಿಸಲಾಗುವುದು.

ಪಾರಸ್ ಮಾಂಬ್ರೆ ಭಾರತ ತಂಡದ ಸಹಾಯಕ ಕೋಚ್

ರ‍್ಯಾಂಕಿಂಗ್: 6ನೇ ಸ್ಥಾನಕ್ಕೆ ರೋಹಿತ್

ದುಬೈ (ಪಿಟಿಐ): ವಿಶ್ವಕಪ್‌ನಲ್ಲಿ ಅಮೋಘ ಪ್ರದರ್ಶನದ ಪರಿಣಾಮ ಭಾರತ ಕ್ರಿಕೆಟ್ ತಂಡದ ನಾಯಕ ರೋಹಿತ್ ಶರ್ಮಾ ಬುಧವಾರ ಪ್ರಕಟವಾದ ಐಸಿಸಿ ಏಕದಿನ ಬ್ಯಾಟರ್‌ಗಳ ರ‍್ಯಾಂಕಿಂಗ್ ಪಟ್ಟಿಯಲ್ಲಿ ಐದು ಸ್ಥಾನಗಳಷ್ಟು ಬಡ್ತಿ ಪಡೆದು ಆರನೇ ಸ್ಥಾನಕ್ಕೆ ಜಿಗಿದಿದ್ದಾರೆ.

ವಿಶ್ವಕಪ್‌ನಲ್ಲಿ ರೋಹಿತ್ ಅಫ್ಗಾನಿಸ್ತಾನ ವಿರುದ್ಧ 131 ರನ್, ನಂತರ ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನ ವಿರುದ್ಧ ಬಿರುಸಿನ 36 ರನ್ ಗಳಿಸಿ ಉತ್ತಮ ಲಯದಲ್ಲಿದ್ದಾರೆ.

ಪಾಕಿಸ್ತಾನ ತಂಡದ ನಾಯಕ ಬಾಬರ್ ಆಜಂ ಅವರು 836 ರೇಟಿಂಗ್ ಪಾಯಿಂಟ್ಸ್ ಸಂಪಾದಿಸಿ ಅಗ್ರಸ್ಥಾನದಲ್ಲಿದ್ದಾರೆ. ಅವರಿಗಿಂತ 18 ಪಾಯಿಂಟ್ ಹಿಂದೆಯಿರುವ ಭಾರತದ ಶುಭಮನ್ ಗಿಲ್ ಅವರು ಎರಡನೇ ಸ್ಥಾನದಲ್ಲಿ ಇದ್ದಾರೆ.

ಮೊದಲ ವಿಶ್ವಕಪ್ ಪಂದ್ಯ

ಪುಣೆಯಲ್ಲಿರುವ ಕ್ರೀಡಾಂಗಣದಲ್ಲಿ ಇದೇ ಮೊದಲ ಬಾರಿಗೆ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಪಂದ್ಯ ನಡೆಯಲಿದೆ. 2017ರಿಂದ ಇಲ್ಲಿಯವರೆಗೆ ಈ ತಾಣದಲ್ಲಿ ಐದು ಅಂತರ ರಾಷ್ಟ್ರೀಯ ಏಕದಿನ ಪಂದ್ಯಗಳು ನಡೆದಿವೆ. ಅದರಲ್ಲಿ ಮೂರು ಪಂದ್ಯಗಳಲ್ಲಿ ತಂಡಗಳು 300ಕ್ಕೂ ಹೆಚ್ಚು ರನ್‌ಗಳ ಮೊತ್ತವನ್ನು ದಾಖಲಿಸಿವೆ.

ಬ್ಯಾಟರ್‌ಗಳಿಗೆ ಹೆಚ್ಚು ಅನುಕೂಲವಾಗುವ ಲಕ್ಷಣಗಳು ಪಿಚ್‌ನಲ್ಲಿವೆ. ಪಂದ್ಯದ ದಿನದಂದು ಮಳೆಯ ಸಾಧ್ಯತೆ ಹೆಚ್ಚಿಲ್ಲ. ಆದರೆ ತಾಪ ಹೆಚ್ಚಿರುವ ಸಂಭವ ಇದೆ.

25 ವರ್ಷಗಳ ನಂತರ ಮುಖಾಮುಖಿ

ಭಾರತ ತಂಡವು ತನ್ನ ತವರಿನಂಗಳದಲ್ಲಿ 25 ವರ್ಷಗಳ ನಂತರ ಬಾಂಗ್ಲಾದೇಶದ ವಿರುದ್ಧ ಏಕದಿನ ಕ್ರಿಕೆಟ್ ಪಂದ್ಯ ಆಡಲಿದೆ.

1998ರಲ್ಲಿ ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದಿದ್ದ ಏಕದಿನ ಪಂದ್ಯದಲ್ಲಿ ಭಾರತ ಮತ್ತು ಬಾಂಗ್ಲಾ ಮುಖಾಮುಖಿಯಾಗಿದ್ದವು. ಆ ಪಂದ್ಯದಲ್ಲಿ ಬಾಂಗ್ಲಾ ತಂಡದಲ್ಲಿ ಮಿನಾಜುಲ್ ಅಬೆದಿನ್, ಖಾಲಿದ್ ಮೆಹಮೂದ್ ಮತ್ತು ಅತ್ತರ್ ಅಲಿ ಖಾನ್ ಆಡಿದ್ದರು.

ಸದ್ಯ ಮಿನಾಜುಲ್ ಸದ್ಯ ಬಾಂಗ್ಲಾದೇಶದ ಆಯ್ಕೆ ಸಮಿತಿಯ ಮುಖ್ಯಸ್ಥರಾಗಿದ್ದಾರೆ. ಖಾಲಿದ್ ತಂಡದ ನಿರ್ದೇಶಕ ಮತ್ತು ಖಾನ್ ಟಿ.ವಿ. ವೀಕ್ಷಕ ವಿವರಣೆಗಾರ ಆಗಿದ್ದಾರೆ.

ಭಾರತ ತಂಡದ ನಾಯಕ ರೋಹಿತ್ ಶರ್ಮಾ –ಪಿಟಿಐ ಚಿತ್ರ

ಬಾಂಗ್ಲಾ ತಂಡದ ನಾಯಕ ಶಕೀಬ್ ಅಲ್ ಹಸನ್ –ಪಿಟಿಐ ಚಿತ್ರ

ಯಾವ ತಂಡವೂ ದೊಡ್ಡದಲ್ಲ: ಕೊಹ್ಲಿ

'ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಯಾವ ತಂಡವೂ ದೊಡ್ಡದಲ್ಲ. ಆದರೆ ಕೆಲವು ತಂಡಗಳನ್ನು ಮಾತ್ರ ದೊಡ್ಡ (ಬಲಾಢ್ಯ) ಎಂದು ಭಾವಿಸಿ ಅವುಗಳನ್ನಷ್ಟೇ ಗುರಿಯಾಗಿಟ್ಟುಕೊಂಡು ಆಡುವುದು ಅಪಾಯಕಾರಿ. ಅದರಿಂದಾಗಿ ನಾವು ದೊಡ್ಡದಲ್ಲ ಎಂದುಕೊಂಡ ತಂಡಗಳ ಎದುರು ಆಘಾತ ಅನುಭವಿಸಬೇಕಾಗುತ್ತದೆ' ಎಂದು ಭಾರತ ತಂಡದ ಬ್ಯಾಟರ್ ವಿರಾಟ್ ಕೊಹ್ಲಿ ಹೇಳಿದರು.

ಈ ಬಾರಿಯ ಟೂರ್ನಿಯಲ್ಲಿ ಹೊರಹೊಮ್ಮಿರುವ ಎರಡು ಅಚ್ಚರಿಯ ಫಲಿತಾಂಶಗಳ ಕುರಿತು ಸುದ್ದಿಗಾರರು ಕೇಳಿದ ಪ್ರಶ್ನೆಗೆ ವಿರಾಟ್ ಪ್ರತಿಕ್ರಿಯಿಸಿದರು. ಬಾಂಗ್ಲಾ ತಂಡದ ಕುರಿತು ಮಾತನಾಡಿದ ಕೊಹ್ಲಿ, 'ಹಲವು ವರ್ಷಗಳಿಂದ ನಾನು ಶಕೀಬ್ ಅಲ್ ಹಸನ್ ಎದುರು ಆಡಿದ್ದೇನೆ. ಅದ್ಭುತ ಆಟಗಾರ. ಅನುಭವಿಯಾಗಿರುವ ಅವರು ಬ್ಯಾಟರ್‌ಗಳನ್ನು ವಂಚಿಸಿ ವಿಕೆಟ್ ಗಳಿಸುವ ಕುರಿತು ಚೆನ್ನಾಗಿ ತಿಳಿದಿದ್ದಾರೆ. ಉತ್ತಮ ಸ್ಪಿನ್ನರ್ ಆಗಿದ್ದಾರೆ' ಎಂದರು.

ವಿಶ್ವಕಪ್ ಕ್ರಿಕೆಟ್: ಪಾಯಿಂಟ್ ಪಟ್ಟಿ

ದೇಶ	ಪಂದ್ಯ	ಗೆಲುವು	ಸೋಲು	ಟೈ	ಪಾಯಿಂಟ್	ಎನ್‌ಆರ್‌ಆರ್
ನ್ಯೂಜಿಲೆಂಡ್	4	4	0	0	8	1.923
ಭಾರತ	3	3	0	0	6	1.821
ದಕ್ಷಿಣ ಆಫ್ರಿಕಾ	3	2	1	0	4	1.385
ಪಾಕಿಸ್ತಾನ	3	2	1	0	4	-0.137
ಇಂಗ್ಲೆಂಡ್	3	1	2	0	2	-0.084
ಬಾಂಗ್ಲಾದೇಶ	3	1	2	0	2	-0.699
ಆಸ್ಟ್ರೇಲಿಯಾ	3	1	2	0	2	-0.734
ನೆದರ್ಲೆಂಡ್ಸ್	3	1	2	0	2	-0.993
ಅಫ್ಗಾನಿಸ್ತಾನ	4	1	3	0	2	-1.250
ಶ್ರೀಲಂಕಾ	3	0	3	0	0	-1.532

ಪಾಕ್ ತಂಡದ ಬಾಬರ್ ಆಜಂ ಅಭ್ಯಾಸ –ಪ್ರಜಾವಾಣಿ ಚಿತ್ರ/ಎಸ್‌.ಕೆ. ದಿನೇಶ್

ಬೆಂಗಳೂರಿನಲ್ಲಿ ಪಾಕ್ ಆಟಗಾರರ ಅಭ್ಯಾಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾಕಿಸ್ತಾನ ಕ್ರಿಕೆಟ್ ತಂಡವು ಸುಮಾರು 23 ವರ್ಷಗಳ ನಂತರ ಬೆಂಗಳೂರಿನಲ್ಲಿ ಏಕದಿನ ಕ್ರಿಕೆಟ್ ಪಂದ್ಯ ಆಡಲು ಸಿದ್ಧವಾಗಿದೆ.

1996ರ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಪಂದ್ಯ ಹಾಗೂ 1999ರಲ್ಲಿ ನಡೆದಿದ್ದ ಪೆಪ್ಸಿ ಕಪ್ ಟೂರ್ನಿಯಲ್ಲಿ ಪಾಕ್ ತಂಡವು ಭಾರತದ ಎದುರು ಆಡಿತ್ತು. ಅದರ ನಂತರ ಇಲ್ಲಿ 2012ರಲ್ಲಿ ಟಿ20 ಪಂದ್ಯದಲ್ಲಿ ಭಾರತ ಮತ್ತು ಪಾಕ್ ಮುಖಾಮುಖಿಯಾಗಿದ್ದವು.

ಈ ಬಾರಿಯ ಟೂರ್ನಿಯಲ್ಲಿ ಪಾಕ್ ತಂಡವು ಆಸ್ಟ್ರೇಲಿಯಾ ಎದುರು ಇಲ್ಲಿ ಆಡಲಿದೆ. ಶುಕ್ರವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿರುವ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಪಾಕಿಸ್ತಾನ ಮತ್ತು ಆಸ್ಟ್ರೇಲಿಯಾ ತಂಡಗಳು ಮುಖಾಮುಖಿಯಾಗಲಿವೆ. ಈ ಪಂದ್ಯದ ಸಿದ್ಧತೆಗಾಗಿ ಪಾಕ್ ತಂಡದ ಆಟಗಾರರು ಬುಧವಾರ ಮಧ್ಯಾಹ್ನದ ಅವಧಿಯಲ್ಲಿ ಅಭ್ಯಾಸ ನಡೆಸಿದರು.

ಅ.14ರಂದು ಅಹಮದಾಬಾದಿನಲ್ಲಿ ನಡೆದಿದ್ದ ಪಂದ್ಯದಲ್ಲಿ ಭಾರತದ ಎದುರು ಸೋತಿದ್ದ ಪಾಕ್ ತಂಡವು ಬೆಂಗಳೂರಿಗೆ ಬಂದಿಳಿದಿತ್ತು. ಆದರೆ ತಂಡದ ಬಹುತೇಕ ಆಟಗಾರರಿಗೆ ವೈರಲ್ ಜ್ವರ ಕಾಡಿತ್ತು. ಇದರಿಂದ ಚೇತರಿಸಿಕೊಂಡ ನಂತರ ಬುಧವಾರ ಅಭ್ಯಾಸ ನಡೆಸಿದರು. ಬಾಬರ್ ಆಜಂ, ವೇಗಿ ಶಾಹೀನ್ ಅಫ್ರಿದಿ ಸೇರಿದಂತೆ ಎಲ್ಲ ಪ್ರಮುಖ ಆಟಗಾರರೂ ನೆಟ್ಸ್‌ನಲ್ಲಿ ಹಾಜರಿದ್ದರು. ಬ್ಯಾಟಿಂಗ್, ಫೀಲ್ಡಿಂಗ್ ಮತ್ತು ಬೌಲಿಂಗ್ ಅಭ್ಯಾಸ ನಡೆಸಿದರು. ಭಾರತದ ಎದುರಿನ ಹೀನಾಯ ಸೋಲಿನ ಆಘಾತದಿಂದ ಹೊರಬರಲು ಮತ್ತು ಲೋಪಗಳನ್ನು ಸುಧಾರಿಸಿಕೊಳ್ಳುವ ಪ್ರಯತ್ನದಲ್ಲಿ ಆಟಗಾರರಿದ್ದರು. ಅವರಿಗೆ ತರಬೇತುದಾರರ ಸಿಬ್ಬಂದಿಯು ಮಾರ್ಗದರ್ಶನ ನೀಡಿತು.

'ಬಹುತೇಕ ಎಲ್ಲ ಆಟಗಾರರೂ ಜ್ವರದಿಂದ ಗುಣಮುಖರಾಗಿದ್ದಾರೆ. ಹವಾಗುಣಕ್ಕೆ ಹೊಂದಿಕೊಳ್ಳುತ್ತಿದ್ದಾರೆ. ನೆಟ್ಸ್‌ನಲ್ಲಿ ಎಲ್ಲರೂ ಲವಲವಿಕೆಯಿಂದ ಭಾಗವಹಿಸಿದ್ದರು. ಶುಕ್ರವಾರದ ವೇಳೆಗೆ ಇನ್ನಷ್ಟು ಫಿಟ್ ಆಗುವ ಭರವಸೆ ಮೂಡಿದೆ. ಮೊಹಮ್ಮದ್ ಹ್ಯಾರಿಸ್ ಒಬ್ಬರು ಇನ್ನೂ ಚೇತರಿಕೆಯ ಹಾದಿಯಲ್ಲಿದ್ದಾರೆ. ಚಿಕಿತ್ಸೆಗೆ ಸ್ಪಂದಿಸುತ್ತಿದ್ದಾರೆ' ಎಂದು ತಂಡದ ಮೂಲಗಳು ತಿಳಿಸಿವೆ.

ಆಸ್ಟ್ರೇಲಿಯಾ ಅಭ್ಯಾಸ: ಆಸ್ಟ್ರೇಲಿಯಾ ಕ್ರಿಕೆಟ್ ತಂಡದ ಆಟಗಾರರು ಹೊನಲು ಬೆಳಕಿನಲ್ಲಿ ಅಭ್ಯಾಸ ನಡೆಸಿದರು.

ಕೊನೆಯ ಓವರುಗಳು ಹಿನ್ನಡೆಗೆ ಕಾರಣ: ವಾಲ್ಟರ್ ಬೇಸರ

ಧರ್ಮಶಾಲಾ (ಪಿಟಿಐ): ನೆದರ್ಲೆಂಡ್ಸ್ ವಿರುದ್ಧ ಕೊನೆಯ ಕೆಲವು ಓವರುಗಳು ನಿರಾಶಾದಾಯಕ ರೀತಿಯಲ್ಲಿದ್ದುದು ಮತ್ತು ಬ್ಯಾಟಿಂಗ್‌ನಲ್ಲಿ ಕಳಪೆ ಆರಂಭ ಮಾಡಿದ್ದೇ ಸೋಲಿಗೆ ಕಾರಣವಾಯಿತು ಎಂದು ದಕ್ಷಿಣ ಆಫ್ರಿಕಾ ಕೋಚ್ ರಾಬ್ ವಾಲ್ಟರ್ ಹೊಣೆ ಮಾಡಿದ್ದಾರೆ.

ಮಂಗಳವಾರದ ಪಂದ್ಯದಲ್ಲಿ ನೆದರ್ಲೆಂಡ್ ವಿರುದ್ಧ ದಕ್ಷಿಣ ಆಫ್ರಿಕಾ ತಂಡ 38 ರನ್‌ಗಳಿಂದ ಆಘಾತ ಕಂಡಿತ್ತು.

'ಎದುರಾಳಿ ತಂಡದ ಏಳು ವಿಕೆಟ್‌ಗಳನ್ನು 140 ರನ್ನಿಗೆ ಪಡೆದಾಗ ಪಂದ್ಯ ನಮ್ಮ ಕೈಲಿತ್ತು. ಆದರೆ ಅವರ ಇನಿಂಗ್ಸ್ ಬೇಗನೇ ಮುಗಿಸಲು ನಮಗೆ ಆಗಲಿಲ್ಲ. ಆಗಲೇ ಬಿಗಿ ಹಿಡಿತ ಕಳೆದುಕೊಂಡೆವು. ಇಂಥ ಮೊತ್ತ ಬೆನ್ನಟ್ಟುವಾಗ ಉತ್ತಮ ಆರಂಭ ಬೇಕಿತ್ತು. ಆದರೆ ಕೆಟ್ಟ ಆರಂಭದಿಂದ ನಾವು ಒತ್ತಡಕ್ಕೆ ಒಳಗಾದೆವು' ಎಂದು ನಿರಾಶೆ ವ್ಯಕ್ತಪಡಿಸಿದರು.

ಸತತ ನಾಲ್ಕನೇ ಜಯ ಸಾಧಿಸಿದ ಕಿವೀಸ್ ಪಡೆ

ಲಥಾಮ್, ಫಿಲಿಪ್ಸ್ ಆಟಕ್ಕೆ ಬಸವಳಿದ ಅಫ್ಗಾನಿಸ್ತಾನ: ಸ್ಯಾಂಟನರ್, ಫರ್ಗ್ಯುಸನ್‌ಗೆ ಮೂರು ವಿಕೆಟ್

ಚೆನ್ನೈ (ಪಿಟಿಐ): ಗ್ಲೆನ್ ಫಿಲಿಪ್ಸ್ ಮತ್ತು ನಾಯಕ ಟಾಮ್ ಲಥಾಮ್ ಅವರ ಚೆಂದದ ಬ್ಯಾಟಿಂಗ್ ಬಲದಿಂದ ನ್ಯೂಜಿಲೆಂಡ್ ತಂಡವು ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಅಫ್ಗಾನಿಸ್ತಾನ ವಿರುದ್ಧ ಜಯಿಸಿತು.

ಎಂ.ಎ. ಚಿದಂಬರಂ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಕಿವೀಸ್ ತಂಡವು 149 ರನ್‌ಗಳ ಜಯ ಸಾಧಿಸಿತು. ಇದರೊಂದಿಗೆ ನ್ಯೂಜಿಲೆಂಡ್ ತಂಡವು ಟೂರ್ನಿಯಲ್ಲಿ ಸತತ ನಾಲ್ಕನೇ ಜಯ ಸಾಧಿಸಿತು. 8 ಅಂಕಗಳೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನ ಉಳಿಸಿಕೊಂಡಿತು.

ನಾಲ್ಕು ದಿನಗಳ ಹಿಂದಷ್ಟೇ ಅಫ್ಗಾನಿಸ್ತಾನ ತಂಡವು ಹಾಲಿ ಚಾಂಪಿಯನ್ ಇಂಗ್ಲೆಂಡ್ ತಂಡವನ್ನು ಸೋಲಿಸಿತ್ತು. ಅದರಿಂದಾಗಿ ಕಿವೀಸ್ ಬಳಗಕ್ಕೂ ಅಫ್ಗನ್ ಕಠಿಣ ಪೈಪೋಟಿಯೊಡ್ಡುವ ನಿರೀಕ್ಷೆ ಗರಿಗೆದರಿತ್ತು. ಆದರೆ, ಎಲ್ಲ ವಿಭಾಗಗಳಲ್ಲಿಯೂ ಮಿಂಚಿದ ಕಿವೀಸ್ ಜಯಭೇರಿ ಬಾರಿಸಿತು.

ಟಾಸ್ ಗೆದ್ದ ಅಫ್ಗಾನಿಸ್ತಾನ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳಾದ ಲಥಾಮ್ (68; 74ಎ, 4X3, 6X2) ಮತ್ತು ಗ್ಲೆನ್ (71; 80ಎ, 4X4, 6X4) ಅವರ ಅರ್ಧಶತಕಗಳ ಬಲದಿಂದ ಕಿವೀಸ್ ತಂಡವು 50 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 288 ರನ್ ಗಳಿಸಿತು. ಇವರಿಬ್ಬರೂ 5ನೇ ವಿಕೆಟ್ ಜೊತೆಯಾಟದಲ್ಲಿ 144 ರನ್ ಸೇರಿಸಿದರು. ಕಿವೀಸ್ ತಂಡದ ಇನಿಂಗ್ಸ್‌ಗೆ ಆರಂಭಿಕ ಬ್ಯಾಟರ್ ವಿಲ್ ಯಂಗ್ (54; 64ಎ, 4X4, 6X3) ಅರ್ಧಶತಕ ಗಳಿಸಿ ಉತ್ತಮ ಆರಂಭ ನೀಡಿದರು.

110 ರನ್ ಗಳಿಸುವಷ್ಟರಲ್ಲಿ ಪ್ರಮುಖ ನಾಲ್ಕು ವಿಕೆಟ್‌ಗಳನ್ನು ಕಳೆದುಕೊಂಡ ಕಿವೀಸ್ ಪಡೆಯನ್ನು ಅಲ್ಪಮೊತ್ತಕ್ಕೆ ಕಟ್ಟಿಹಾಕುವ ಅವಕಾಶ ಅಫ್ಗನ್ ತಂಡಕ್ಕಿತ್ತು. ಆದರೆ, ಐದು ಕ್ಯಾಚ್‌ಗಳನ್ನು ಕೈಚೆಲ್ಲಿದ್ದು ದುಬಾರಿಯಾಯಿತು. ಹೀಗಾಗಿ, ನ್ಯೂಜಿಲೆಂಡ್ ಸವಾಲಿನ ಮೊತ್ತ ಕಲೆಹಾಕಿತು.

ಗುರಿ ಬೆನ್ನಟ್ಟಿದ ಅಫ್ಗನ್ ತಂಡಕ್ಕೆ 34.4 ಓವರ್‌ಗಳಲ್ಲಿ 139 ರನ್ ಗಳಿಸಲು ಮಾತ್ರ ಸಾಧ್ಯವಾಯಿತು. ಆರಂಭದ ಮೂರು ವಿಕೆಟ್‌ಗಳು 43 ರನ್‌ಗೆ ಕಳೆದುಕೊಂಡು ಸಂಕಷ್ಟದಲ್ಲಿದ್ದ ತಂಡಕ್ಕೆ ರೆಹಮತ್ ಶಾ (36) ಮತ್ತು ಅಜ್ಮತ್‌ವುಲ್ಲಾ ಒಮರ್‌ಝೈ (27) ಕೊಂಚ ಬಲ ತುಂಬಿದರು. ನಾಲ್ಕನೇ ವಿಕೆಟ್‌ಗೆ ಅವರು 54 ರನ್ ಕಲೆಹಾಕಿದರು. ಈ ಜೊತೆಯಾಟ ಮುರಿದ ನಂತರ ಉಳಿದ ಆಟಗಾರರು ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ನಿಲ್ಲಲಿಲ್ಲ. ಸ್ಪಿನ್ನರ್ ಮಿಚೆಲ್ ಸ್ಯಾಂಟನರ್ (39ಕ್ಕೆ3) ಮತ್ತು ಲಾಕಿ ಫರ್ಗ್ಯುಸನ್ (19ಕ್ಕೆ3) ಅಫ್ಗನ್ ತಂಡವನ್ನು ಕಟ್ಟಿಹಾಕಿದರು.

ಸಂಕ್ಷಿಪ್ತ ಸ್ಕೋರು: ನ್ಯೂಜಿಲೆಂಡ್: 50 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 288 (ಡೆವೊನ್ ಕಾನ್ವೆ 20, ವಿಲ್ ಯಂಗ್ 54, ರಚಿನ್ ರವೀಂದ್ರ 32, ಟಾಮ್ ಲಥಾಮ್ 68, ಗ್ಲೆನ್ ಫಿಲಿಪ್ಸ್ 71, ಮಾರ್ಕ್ ಚಾಪಮನ್ ಔಟಾಗದೆ 25, ನವೀನ್ ಉಲ್ ಹಕ್ 48ಕ್ಕೆ2, ಅಜ್ಮತ್‌ವುಲ್ಲಾ 56ಕ್ಕೆ2) **ಅಫ್ಗಾನಿಸ್ತಾನ:** 34.4 ಓವರ್‌ಗಳಲ್ಲಿ 139 (ರೆಹಮತ್ ಶಾ 36, ಅಜ್ಮತ್‌ವುಲ್ಲಾ ಒಮರ್‌ಝೈ 27, ಟ್ರೆಂಟ್ ಬೌಲ್ಟ್ 18ಕ್ಕೆ2, ಮಿಚೆಲ್ ಸ್ಯಾಂಟನರ್ 39ಕ್ಕೆ3, ಲಾಕಿ ಫರ್ಗ್ಯುಸನ್ 19ಕ್ಕೆ3) **ಫಲಿತಾಂಶ:** ನ್ಯೂಜಿಲೆಂಡ್ ತಂಡಕ್ಕೆ 149 ರನ್‌ಗಳ ಜಯ. **ಪಂದ್ಯಶ್ರೇಷ್ಠ:** ಗ್ಲೆನ್ ಫಿಲಿಪ್ಸ್.

ನ್ಯೂಜಿಲೆಂಡ್ ತಂಡದ ಟಾಮ್ ಲಥಾಮ್ ಮತ್ತು ಗ್ಲೆನ್ ಫಿಲಿಪ್ಸ್ –ಪಿಟಿಐ ಚಿತ್ರ

ವಿಶ್ವಕಪ್ ಕ್ರಿಕೆಟ್ ಪಂದ್ಯಗಳಿಗೆ ಚಿನ್ನಸ್ವಾಮಿ ಕ್ರೀಡಾಂಗಣ ಸಜ್ಜು



ರಘುರಾಮ ಭಟ್

ಬೆಂಗಳೂರು: ಈವರೆಗೆ ಏಕದಿನ ವಿಶ್ವಕಪ್‌ನ ಒಟ್ಟು ಏಳು ಪಂದ್ಯಗಳಿಗೆ ಆತಿಥ್ಯ ವಹಿಸಿರುವ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣ ಈ ಬಾರಿಯ ವಿಶ್ವಕಪ್‌ನಲ್ಲಿ ಐದು ಪಂದ್ಯಗಳಿಗೆ ಆತಿಥ್ಯ ವಹಿಸಲು ಸಜ್ಜಾಗಿದೆ. ಶುಕ್ರವಾರ ಪಾಕಿಸ್ತಾನ– ಆಸ್ಟ್ರೇಲಿಯಾ ತಂಡಗಳು ಮುಖಾಮುಖಿ ಆಗಲಿವೆ. ಆಸ್ಟ್ರೇಲಿಯಾ ಮೂರನೇ ಬಾರಿ ಇಲ್ಲಿ ವಿಶ್ವಕಪ್ ಪಂದ್ಯವನ್ನು ಆಡುತ್ತಿದೆ.

'ವಿಶ್ವಕಪ್ ಪಂದ್ಯಗಳಿಗೆ ಮುನ್ನ ಅಂದುಕೊಂಡಿದ್ದ ಎಲ್ಲ ಕೆಲಸಗಳು ಈಗಾಗಲೇ ಮುಗಿದಿವೆ. ಒಂದೂವರೆ ತಿಂಗಳಿಂದ ಹಗಲೂ–ರಾತ್ರಿ ಕೆಲಸ ಗಳು ನಡೆದಿವೆ. ಕ್ರೀಡಾಂಗಣದ ಛಾವಣಿ ಯನ್ನು ಹೊಸದಾಗಿ ಅಳವಡಿಸಿದ್ದು ಇದು ಕ್ರೀಡಾಂಗಣದ ರೂಪವನ್ನು ಹೆಚ್ಚಿಸಿದೆ. ಎಲ್ಲಾ ಶೌಚಾಲಯಗಳನ್ನು ಮೇಲ್ದರ್ಜೆಗೇರಿಸಲಾಗಿದೆ. ಮಾಧ್ಯಮ ಕೇಂದ್ರದ ಸಭಾಂಗಣವನ್ನು ನವೀಕರಿಸಲಾಗಿದೆ' ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಅಧ್ಯಕ್ಷ ರಘುರಾಮ ಭಟ್ ಬುಧವಾರ 'ಪ್ರಜಾವಾಣಿ'ಗೆ ತಿಳಿಸಿದರು.

'ವಿಶ್ವಕಪ್ ಪಂದ್ಯಗಳಿಗಾಗಿ ಮೂರು ಪಿಚ್‌ಗಳನ್ನು ಸಜ್ಜುಗೊಳಿಸಲಾಗಿದೆ. ಕ್ಯುರೇಟರ್‌ಗಳ ಶ್ರಮ ತುಂಬಾ ಇದೆ. ಗ್ರೌಂಡ್ಸ್‌ಮನ್‌ಗಳೂ ಕ್ರೀಡಾಂಗಣವನ್ನು ಸುಸ್ಥಿತಿಯಲ್ಲಿಡಲು ಹಗಲಿರುಳು ಕೆಲಸ ಮಾಡಿದ್ದಾರೆ' ಎಂದು ಹೇಳಿದರು.

'ಈ ಹಿಂದೆ ಪ್ರತಿ ಬಾರಿ ಇಲ್ಲಿನ ಪ್ರೇಕ್ಷಕವರ್ಗ ಕ್ರೀಡಾಮನೋಭಾವದಿಂದ ವರ್ತಿಸಿದೆ. ಹವಾಗುಣ ಚೆನ್ನಾಗಿರುವುದರಿಂದ, ಹಿಂದಿನ ಅಂತರರಾಷ್ಟ್ರೀಯ ಪಂದ್ಯಗಳಿಗೆ ಹೊರಗಿನಿಂದಲೂ ಪ್ರೇಕ್ಷಕರು ಸಾಕಷ್ಟು ಸಂಖ್ಯೆಯಲ್ಲಿ ಬಂದಿದ್ದಾರೆ. ಈ ಬಾರಿಯೂ ಬರುವ ವಿಶ್ವಾಸವಿದೆ' ಎಂದರು.

ಹಿಂದಿನ ಏಳು ಪಂದ್ಯಗಳು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ1987ರ ಅಕ್ಟೋಬರ್ 14ರಂದು ನಡೆದ ರಿಲಯನ್ಸ್ ವಿಶ್ವಕಪ್ ಪಂದ್ಯದಲ್ಲಿ ಭಾರತ 16 ರನ್‌ಗಳಿಂದ ನ್ಯೂಜಿಲೆಂಡ್ ತಂಡವನ್ನು ಸೋಲಿಸಿತ್ತು. 1996ರ ವಿಶ್ವಕಪ್‌ನ ಎರಡನೇ ಕ್ವಾರ್ಟರ್‌ಫೈನಲ್‌ನಲ್ಲಿ ಭಾರತ 39 ರನ್‌ಗಳಿಂದ ಬದ್ಧ ಎದುರಾಳಿ ಪಾಕಿಸ್ತಾನ ತಂಡವನ್ನು ಸೋಲಿಸಿತ್ತು. ಈ ಮೇಲಿನ ಎರಡು ಪಂದ್ಯಗಳ ಜೊತೆಗೆ 2011ರ ವಿಶ್ವಕಪ್‌ನಲ್ಲಿ ಈ ಕ್ರೀಡಾಂಗಣ ಐದು ಪಂದ್ಯಗಳ ಆತಿಥ್ಯ ವಹಿಸಿತ್ತು.

ಪಾಶ್ಚಾತ್ಯ ರಾಷ್ಟ್ರಗಳ ವಿರುದ್ಧ ಅಧ್ಯಕ್ಷ ಷಿ ಜಿನ್‌ಪಿಂಗ್ ಟೀಕೆ

'ಅವಲಂಬನೆ ತಗ್ಗಿಸಲು ಹುನ್ನಾರ'

ಬೀಜಿಂಗ್ (ರಾಯಿಟರ್ಸ್): 'ಪಾಶ್ಚಾತ್ಯ ರಾಷ್ಟ್ರಗಳು ಬೆಲ್ಟ್ ಆ್ಯಂಡ್ ರೋಡ್ ಉಪಕ್ರಮವನ್ನು (ಬಿಆರ್‌ಐ) ದುರ್ಬಲಗೊಳಿಸಲು ಯತ್ನಿಸುತ್ತಿವೆ. ಆ ಮೂಲಕ ಚೀನಾ ಆರ್ಥಿಕತೆ ಮೇಲೆ ಪಾಲುದಾರ ರಾಷ್ಟ್ರಗಳು ಹೊಂದಿರುವ ಅವಲಂಬನೆ ತಗ್ಗಿಸಲು ಹುನ್ನಾರ ನಡೆಸಿವೆ' ಎಂದು ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು ಟೀಕಿಸಿದ್ದಾರೆ.

ಬುಧವಾರ ಇಲ್ಲಿ ಆರಂಭವಾದ ಬಿಆರ್‌ಐ ಸಭೆಯಲ್ಲಿ ಮಾತನಾಡಿದ ಅವರು, 'ದಶಕದ ಹಿಂದೆ ರೂಪಿಸಿದ ಯೋಜನೆ ಇದಾಗಿದೆ. ಏಷ್ಯಾ, ಆಫ್ರಿಕಾ ಹಾಗೂ ಯುರೋಪ್ ನಡುವೆ ನೆಲ, ಜಲ ಮಾರ್ಗವಾಗಿ ಜಾಗತಿಕ ಮೂಲ ಸೌಕರ್ಯ ಅಭಿವೃದ್ಧಿ ಹಾಗೂ ಇಂಧನ ಸಂಪರ್ಕ ಬೆಸೆಯುವುದೇ ಇದರ ಮೂಲ ಉದ್ದೇಶ. ಈ ಕುರಿತು ಸಿದ್ಧಪಡಿಸಿದ್ದ ನೀಲನಕ್ಷೆಗಳು ಈಗ ಯೋಜನೆಗಳ ರೂಪ ಪಡೆದಿವೆ' ಎಂದು ಹೇಳಿದರು.

ಚೀನಾ ಮೇಲಿನ ಅವಲಂಬನೆ ತಗ್ಗಿಸಲು ಮುಂದಾಗಿರುವ ಯುರೋಪ್ ರಾಷ್ಟ್ರಗಳ ನಡೆ ಸರಿಯಲ್ಲ. ಇದರಿಂದ ಪಾಲುದಾರ ರಾಷ್ಟ್ರಗಳು ಸಂಕಷ್ಟದ ಕುಣಿಕೆಗೆ ಸಿಲುಕಲಿವೆ. ಇಂತಹ ಏಕಪಕ್ಷೀಯ ಧೋರಣೆ, ಆರ್ಥಿಕ ನಿರ್ಬಂಧ, ಹೂಡಿಕೆಯ ಪೂರೈಕೆ ಸರಪಳಿಯನ್ನು ತುಂಡರಿಸುವ ನಿರ್ಧಾರಕ್ಕೆ ನಮ್ಮ ವಿರೋಧವಿದೆ ಎಂದರು.

ಬಿಆರ್‌ಐ ಒಳಪಟ್ಟ ಎಲ್ಲಾ ರಾಷ್ಟ್ರಗಳ ಪರಸ್ಪರ ಆರ್ಥಿಕ ನೆರವಿನ ಅವಲಂಬನೆ ಹಿಂದೆ ಅಭಿವೃದ್ಧಿಯ ಆಶಯ ಅಡಗಿದೆ. ಇದಕ್ಕೆ ಬೆದರಿಕೆ, ಅಪಾಯ ಎದುರಾದರೆ ನಮ್ಮ ಬದುಕು ಸುಧಾರಿಸುವುದಿಲ್ಲ. ಅಭಿವೃದ್ಧಿಯ ವೇಗವೂ ಕುಂಠಿತಗೊಳ್ಳಲಿದೆ ಎಂದು ಹೇಳಿದರು.

ಟಿಯಾನನ್‌ಮೆನ್ ಚೌಕದ ಸಭಾಂಗಣದಲ್ಲಿ ಸಭೆ ನಡೆಯುತ್ತಿದೆ. ಜಾಗತಿಕ ದಕ್ಷಿಣ ಭಾಗಕ್ಕೆ ಸೇರಿದ ದೇಶಗಳು ಸೇರಿದಂತೆ 130ಕ್ಕೂ ಹೆಚ್ಚು ರಾಷ್ಟ್ರಗಳ ಒಂದು ಸಾವಿರ ಪ್ರತಿನಿಧಿಗಳು ಇದರಲ್ಲಿ ಪಾಲ್ಗೊಂಡಿದ್ದಾರೆ. ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಕೂಡ ಭಾಗವಹಿಸಿದ್ದಾರೆ.

ಚೀನಾದ ಬೀಜಿಂಗ್‌ನಲ್ಲಿ ನಡೆದ ಬೆಲ್ಟ್ ಆ್ಯಂಡ್ ರೋಡ್ ಉಪಕ್ರಮದ ಸಭೆಯಲ್ಲಿ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಹಾಗೂ ಅಧ್ಯಕ್ಷ ಷಿ ಜಿನ್‌ಪಿಂಗ್ ಪರಸ್ಪರ ಹಸ್ತಲಾಘವ ಮಾಡಿಕೊಂಡರು –ಎಎಫ್‌ಪಿ ಚಿತ್ರ

ಸಿಕ್ಕಿಂನಲ್ಲಿ ಪ್ರವಾಹ: ಮೃತರ ಸಂಖ್ಯೆ 40ಕ್ಕೆ

ಗ್ಯಾಂಗ್ಟಕ್ (ಪಿಟಿಐ): ಸಿಕ್ಕಿಂನಲ್ಲಿ ಪ್ರವಾಹದಿಂದ ಮೃತಪಟ್ಟವರ ಸಂಖ್ಯೆ 40ಕ್ಕೆ ಏರಿಕೆಯಾಗಿದೆ. ಬುಧವಾರ 2 ಮೃತದೇಹಗಳು ಪತ್ತೆಯಾಗಿದ್ದು, ಇನ್ನೂ 76 ಮಂದಿ ನಾಪತ್ತೆಯಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಕ್ಟೋಬರ್ 4ರಂದು ಮೇಘಸ್ಫೋಟಗೊಂಡು ತೀಸ್ತಾ ನದಿಯಲ್ಲಿ ಪ್ರವಾಹ ಉಂಟಾಗಿತ್ತು. ಇದರಿಂದ 88,000 ಮಂದಿ ಸಂಕಷ್ಟಕ್ಕೆ ಸಿಲುಕಿದ್ದಾರೆ. ಸದ್ಯ ರಾಜ್ಯದ ವಿವಿಧೆಡೆ 20 ಪರಿಹಾರ ಶಿಬಿರಗಳಲ್ಲಿ 2,080 ಮಂದಿ ಆಶ್ರಯ ಪಡೆದಿದ್ದಾರೆ ಎಂದು ರಾಜ್ಯ ವಿಪತ್ತು ನಿರ್ವಹಣಾ ಮಂಡಳಿ ತಿಳಿಸಿದೆ.

ಬಹುತೇಕ ಮೃತದೇಹಗಳು ಪಾಕ್‌ಯಾಂಗ್‌ನಲ್ಲಿ ಪತ್ತೆಯಾಗಿವೆ. 26 ಮೃತದೇಹಗಳು ಇಲ್ಲಿ ಪತ್ತೆಯಾಗಿವೆ. ಮಂಗನ್‌ನಲ್ಲಿ ನಾಲ್ಕು, ಗ್ಯಾಂಗ್ಟಕ್‌ನಲ್ಲಿ ಎಂಟು ಮತ್ತು ನಂಚಿಯಲ್ಲಿ 2 ಮೃತದೇಹಗಳು ಪತ್ತೆಯಾಗಿವೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಪಿಎಂಎಲ್‌ಎ: ಇ.ಡಿ ಅಧಿಕಾರ ಎತ್ತಿ ಹಿಡಿದಿದ್ದ ತೀರ್ಪು

ಮರುಪರಿಶೀಲನೆ ಅಗತ್ಯತೆಯ ಪರಾಮರ್ಶೆ: ಸುಪ್ರೀಂಕೋರ್ಟ್

ನವದೆಹಲಿ(ಪಿಟಿಐ): ಹಣದ ಅಕ್ರಮ ವರ್ಗಾವಣೆ ಆರೋಪ ಎದುರಿಸುತ್ತಿರುವವರಿಗೆ ಸೇರಿದ ಸ್ವತ್ತುಗಳನ್ನು ಜಪ್ತಿ ಮಾಡಿ, ಅವರನ್ನು ಬಂಧಿಸಲು ಜಾರಿ ನಿರ್ದೇಶನಾಲಯ (ಇ.ಡಿ) ಹೊಂದಿರುವ ಅಧಿಕಾರವನ್ನು ಎತ್ತಿ ಹಿಡಿದು ಕಳೆದ ವರ್ಷ ತಾನು ನೀಡಿದ್ದ ತೀರ್ಪಿನ ಮರುಪರಿಶೀಲನೆ ಅಗತ್ಯವಿದೆಯೇ ಎಂಬುದನ್ನು ಪರಾಮರ್ಶಿಸುವುದಾಗಿ ಸುಪ್ರೀಂಕೋರ್ಟ್ ಬುಧವಾರ ಹೇಳಿದೆ.

ಜಾರಿ ನಿರ್ದೇಶನಾಲಯ ಹೊಂದಿರುವ ಅಧಿಕಾರಕ್ಕೆ ಸಂಬಂಧಿಸಿದ ಕೆಲ ಅಂಶಗಳ ಕುರಿತು ಮೂವರು ನ್ಯಾಯಮೂರ್ತಿಗಳಿದ್ದ ನ್ಯಾಯಪೀಠ ಕಳೆದ ವರ್ಷ ಜುಲೈ 27ರಂದು ನೀಡಿದ್ದ ತೀರ್ಪಿನ ಮರುಪರಿಶೀಲನೆ ಮಾಡುವಂತೆ ಕೋರಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆ ವೇಳೆ ವಿಶೇಷ ನ್ಯಾಯಪೀಠ ಈ ಮಾತು ಹೇಳಿದೆ.

'ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆಗೆ (ಪಿಎಂಎಲ್‌ಎ) ಸಂಬಂಧಿಸಿದ ವಿಚಾರಗಳನ್ನು ಮೂವರು ನ್ಯಾಯಮೂರ್ತಿಗಳದ್ದ ನ್ಯಾಯಪೀಠ ಈಗಾಗಲೇ ಪರಾಮರ್ಶಿಸಿದೆ. ಹೀಗಾಗಿ, ಈಗ ತೀರ್ಪಿನ ಮರುಪರಿಶೀಲನೆ ಸೀಮಿತವಾಗಿರಲಿದೆ' ಎಂದು ನ್ಯಾಯಮೂರ್ತಿ ಸಂಜಯಕಿಶನ್ ಕೌಲ್ ಅವರಿದ್ದ ವಿಶೇಷ ಪೀಠ ಹೇಳಿದೆ.

ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಹಾಗೂ ಬೇಲಾ ಎಂ.ತ್ರಿವೇದಿ ಅವರೂ ಈ ಪೀಠದಲ್ಲಿದ್ದಾರೆ.

ವಿಚಾರಣೆ ವೇಳೆ, 'ತೀರ್ಪಿನ ಮರುಪರಿಶೀಲನೆಗೆ ನನ್ನ ಸಹಮತ ಇಲ್ಲ' ಎಂದು ಹೇಳಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, 'ಇದು ಕಾನೂನು ಪ್ರಕ್ರಿಯೆಯ ಅವಹೇಳನ ಮತ್ತು ದುರುಪಯೋಗವಾಗುತ್ತದೆ' ಎಂದು ಪೀಠಕ್ಕೆ ತಿಳಿಸಿದರು.

'ತೀರ್ಪಿನ ಮರುಪರಿಶೀಲನೆ ಕೋರಿ ಸಲ್ಲಿಸುವ ಅರ್ಜಿಯಲ್ಲಿ ಏನಾದರೂ ತಿರುಳಿದ್ದಲ್ಲಿ ಮಾತ್ರ, ಆ ಕಾರ್ಯವನ್ನು ಕೈಗೆತ್ತಿಕೊಳ್ಳಬಹುದು. ಇಲ್ಲದೇ ಹೋದಲ್ಲಿ ಇದೊಂದು ನಿಷ್ಫಲ ಚರ್ಚೆಯಾಗುತ್ತದೆ. ಮೂವರು ಸದಸ್ಯರಿದ್ದ ಪೀಠವು ಇತ್ಯರ್ಥಪಡಿಸಿದ ವಿಷಯವನ್ನು ಮತ್ತೆ ಪರಾಮರ್ಶೆ ಮಾಡಬೇಕು ಎಂದು ವ್ಯಕ್ತಿಯೊಬ್ಬರು ಅರ್ಜಿ ಸಲ್ಲಿಸಿದ್ದಾರೆ ಎಂಬ ಕಾರಣಕ್ಕೂ ಈ ಕಾರ್ಯವಾಗಬಾರದು' ಎಂಬ ಮೆಹ್ತಾ ಅವರ ಆಕ್ಷೇಪವನ್ನು ಪೀಠವು ಪರಿಗಣಿಸಿತು.

ಎರಡೂ ಕಡೆಯವರ ವಾದಗಳನ್ನು ಆಲಿಸಿದ ಪೀಠವು, ಒಂದು ಪ್ರಕರಣದ ವಿಚಾರಣೆಯನ್ನು ವಿಸ್ತೃತ ಪೀಠಕ್ಕೆ ವರ್ಗಾಯಿಸುವ ಕ್ರಮವನ್ನು ವಿವರಿಸಿತು. ನಂತರ, ವಿಚಾರಣೆಯನ್ನು ನವೆಂಬರ್ 22ಕ್ಕೆ ಮುಂದೂಡಿತು.

ಹೈಕೋರ್ಟ್‌ಗಳ 16 ನ್ಯಾಯಮೂರ್ತಿಗಳ ವರ್ಗಾವಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ಹೈಕೋರ್ಟ್‌ನ ನ್ಯಾಯಮೂರ್ತಿ ನರೇಂದರ್.ಜಿ ಸೇರಿದಂತೆ 16 ನ್ಯಾಯಮೂರ್ತಿಗಳನ್ನು ವರ್ಗಾವಣೆಗೊಳಿಸಿ ಕೇಂದ್ರ ಸರ್ಕಾರ ಮಂಗಳವಾರ ಆದೇಶ ಹೊರಡಿಸಿದೆ.

ನರೇಂದರ್ ಅವರನ್ನು ಆಂಧ್ರಪ್ರದೇಶ ಹೈಕೋರ್ಟ್‌ಗೆ ವರ್ಗಾಯಿಸಲಾಗಿದೆ. ವಕೀಲ ಕೆ.ವಿ. ಅರವಿಂದ ಅವರನ್ನು ಕರ್ನಾಟಕ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿಯಾಗಿ ನೇಮಕ ಮಾಡಲಾಗಿದೆ.

ವರ್ಗಾವಣೆ ಆದವರಲ್ಲಿ ಮಣಿಪುರ ಹೈಕೋರ್ಟ್‌ನ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಕೂಡ ಇದ್ದಾರೆ.

ಅಲ್ಲದೇ, ದೇಶದ ವಿವಿಧ ಹೈಕೋರ್ಟ್‌ಗಳಿಗೆ ಹೊಸದಾಗಿ 17 ನ್ಯಾಯಮೂರ್ತಿಗಳು ಹಾಗೂ ಹೆಚ್ಚುವರಿ ನ್ಯಾಯಮೂರ್ತಿಗಳನ್ನು ನೇಮಕ ಮಾಡಲಾಗಿದೆ. ಈ ಕುರಿತು ಕೇಂದ್ರ ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಅವರು ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಈ ಕುರಿತು ಮಾಹಿತಿ ಹಂಚಿಕೊಂಡಿದ್ದಾರೆ.

ಧಾರವಾಡ: ಐಟಿಎಫ್ ಟೂರ್ನಿಯಲ್ಲಿ ಶ್ರೇಯಾಂಕ ಆಟಗಾರರಿಗೆ ಮುನ್ನಡೆ

ಚಾಪೆಲ್, ಪ್ರಜ್ವಲ್ ದೇವ್‌ಗೆ ಜಯ

• ಬಿ.ಜೆ.ಧನ್ಯಪ್ರಸಾದ್

ಧಾರವಾಡ: ಅಗ್ರ ಶ್ರೇಯಾಂಕದ ಆಟಗಾರ ಅಮೆರಿಕದ ನಿಕ್ ಚಾಪೆಲ್, ಅಂತರರಾಷ್ಟ್ರೀಯ ಟೆನಿಸ್ ಟೂರ್ನಿಯ ಎರಡನೇ ದಿನವಾದ ಬುಧವಾರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ ದಕ್ಷಿಣ ಕೊರಿಯಾದ ವೂಬಿನ್ ಶಿನ್ ಅವರನ್ನು 6-3, 6-3 ರಲ್ಲಿ ನೇರ ಸೆಟ್‌ಗಳಿಂದ ಸೋಲಿಸಿದರು. ಮೊದಲ ದಿನ ಅನಿರೀಕ್ಷಿತ ಫಲಿತಾಂಶಗಳೇನೂ ಇಲ್ಲದೇ ಶ್ರೇಯಾಂಕ ಆಟಗಾರರು ಮುನ್ನಡೆದರು.

ಅಂತರರಾಷ್ಟ್ರೀಯ ಆಟಗಾರ, ನಾಲ್ಕನೇ ಶ್ರೇಯಾಂಕದ ರಾಮಕುಮಾರ್ ರಾಮನಾಥನ್ ಅವರಿಗೆ ಫೈಸಲ್ ಖಮರ್ ಅವರು ಉತ್ತಮ ಪೈಪೋಟಿ ನೀಡಿದರು. ಮೊದಲ ಸೆಟ್‌ಅನ್ನು ಟೈಬ್ರೇಕರ್‌ನಲ್ಲಿ ಗೆದ್ದ ರಾಮಕುಮಾರ್ ಅಂತಿಮವಾಗಿ 7-6 (3), 6-2ರಿಂದ ಗೆಲುವು ಸಾಧಿಸಿದರು.

ಎರಡನೇ ಶ್ರೇಯಾಂಕದ ಬೊಗ್ದಾನ್ ಬೊಬ್ರೊವ್ 6-2, 6-4ರಿಂದ ಕ್ವಾಲಿಫೈಯರ್ ಅಭಿನವ್ ಸಂಜೀವ್ ಷಣ್ಮುಗಂ ಅವರನ್ನು ಹಿಮ್ಮೆಟ್ಟಿಸಿದರು.

ಮೂರು ದಿನಗಳ ಹಿಂದೆ ಅಹಮದಾಬಾದಿನಲ್ಲಿ ನಡೆದ ಐಟಿಎಫ್ ಟೂರ್ನಿಯಲ್ಲಿ ವಿಜೇತರಾಗಿದ್ದ ಫ್ಲೊರೆಂಟ್ ಬಾಕ್ಸ್ 6-2, 2-0ಯಿಂದ ಮುಂದಿದ್ದಾಗ ಅವರ ಎದುರಾಳಿ ಸ್ಟಿಯಿನ್ ಪೆಲ್ (ನೆದರ್ಲೆಂಡ್ಸ್) ಪಂದ್ಯ ಬಿಟ್ಟುಕೊಟ್ಟರು. ಫ್ಲೊರೆಂಟ್ ಇಲ್ಲಿ ಆರನೇ ಶ್ರೇಯಾಂಕ ಪಡೆದಿದ್ದಾರೆ.

ಐದನೇ ಶ್ರೇಯಾಂಕದ ಆಟಗಾರ ಜಪಾನ್‌ನ ಕಜುಕಿ ನಿಶಿವಾಕಿ, ಎಂಟನೇ ಶ್ರೇಯಾಂಕದ ಆಟಗಾರ, ಎಸ್.ಡಿ.ಪ್ರಜ್ವಲ್ ದೇವ್ (ಮೈಸೂರು), ಏಳನೇ ಶ್ರೇಯಾಂಕದ ಸಿದ್ಧಾರ್ಥ್ ರಾವತ್, ರಿಷಬ್ ಅಗರವಾಲ್, ಇಟಲಿಯ ಎನ್ರಿಕೊ ಜಿಯಾಕೊಮಿನಿ, ರಣಜಿತ್ ವಿರಾಲಿ ಮುರಗೇಶನ್, ಸೂರಜ್ ಆರ್.ಪ್ರಬೋಧ್ ಅವರೂ ಎರಡನೇ ಸುತ್ತನ್ನು ತಲುಪಿದರು.

ಅರ್ಹತಾ ಸುತ್ತಿನಿಂದ ಬಂದಿದ್ದ ಮಾಧ್ವಿನ್ ಕಾಮತ್ ಯಶಸ್ಸಿನ ಓಟ ಮುಂದುವರಿಸಿ, ವೈಲ್ಡ್ ಕಾರ್ಡ್ ಪ್ರವೇಶ ಪಡೆದಿದ್ದ ಮನೀಷ್ ಗಣೇಶ್ ಅವರನ್ನು 6-3, 6-4ರಿಂದ ಪರಾಭವಗೊಳಿಸಿದರು.

ಧಾರವಾಡದಲ್ಲಿ ಆಯೋಜಿಸಿರುವ ಐಟಿಎಫ್ ಪಂದ್ಯದಲ್ಲಿ ಪ್ರಜ್ವಲ್ ದೇವ್ ಅವರು ಚೆಂಡು ಹೊಡೆದ ಪರಿ – ಬಿ.ಎಂ.ಕೇದಾರನಾಥ/ ಪ್ರಜಾವಾಣಿ ಚಿತ್ರ

ಪಂದ್ಯ ಸ್ಥಗಿತ

ಡಬಲ್ಸ್ ವಿಭಾಗದಲ್ಲಿ ಪುರವ್ ರಾಜಾ ಮತ್ತು ರಾಮಕುಮಾರ್ ರಾಮನಾಥನ್ ಜೋಡಿ ಹಾಗೂ ದಿಗ್ವಿಜಯ್ ಪ್ರತಾಪ್ ಸಿಂಗ್ ಹಾಗೂ ಕರಣ್ ಸಿಂಗ್ ಜೋಡಿ ನಡುವಿನ ಪ್ರಿ ಕ್ವಾರ್ಟರ್ ಫೈನಲ್ ಪಂದ್ಯವನ್ನು ಸ್ಥಗಿತಗೊಳಿಸಲಾಗಿದೆ. ಈ ಹಂತದಲ್ಲಿ ದಿಗ್ವಿಜಯ್ ಸಿಂಗ್ ಹಾಗೂ ಕರಣ್ ಸಿಂಗ್ 7-6ರಿಂದ ಮುಂದಿದ್ದರು.

ಯುನೈಟೆಡ್ ತಂಡ ಜಯಭೇರಿ

ಬೆಂಗಳೂರು: ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 4-1ರಿಂದ ರೆಬೆಲ್ಸ್ ಎಫ್‌ಸಿ ತಂಡವನ್ನು ಮಣಿಸಿತು.

ಬುಧವಾರ ನಡೆದ ಪಂದ್ಯದಲ್ಲಿ ಯುನೈಟೆಡ್ ತಂಡದ ಪರವಾಗಿ ಜೈಸನ್ ಜೋರ್ಡಾನ್ ವಾಜ್, ಅಕ್ಷುನ್ನ ತ್ಯಾಗಿ, ರಾಯನ್ ವಿಲ್ಫ್ರೆಡ್, ಆಶ್ರಯ ಭಾರದ್ವಾಜ್ ತಲಾ ಒಂದು ಗೋಲು ಗಳಿಸಿದರು. ರೆಬೆಲ್ಸ್ ಪರ ಏಕೈಕ ಗೋಲನ್ನು ಸೂರಜ್ ಗುರುಂಗ್ ತಂದಿತ್ತರು.

ಮತ್ತೊಂದು ಪಂದ್ಯದಲ್ಲಿ ಎಫ್‌ಸಿ ಅಗ್ನಿಪುತ್ರ ತಂಡವು 7-2 ರಿಂದ ಎಎಸ್‌ಸಿ ಅಂಡ್ ಸೆಂಟರ್ ಎಫ್‌ಸಿ ತಂಡವನ್ನು ಸೋಲಿಸಿತು. ಅಗ್ನಿಪುತ್ರ ತಂಡದ ಪರ ನಿಖಿಲ್ ರಾಜ್ ಮುರುಗೇಶಕುಮಾರ್ ಹ್ಯಾಟ್ರಿಕ್ ಗೋಲು ಗಳಿಸಿದರು. ಸುಕ್‌ರಾಜ್ ಸುಬ್ಬ, ಯಾದವ್ ರಾಹುಲ್, ಪ್ರಶಾತ್ ಚೆಟ್ರಿ, ಲಾಲ್ನುಂಜಮಾ ತಲಾ ಒಂದು ಗೋಲು ಗಳಿಸಿದರು. ಎಎಸ್‌ಸಿ ತಂಡದ ಪರ ವಹೆಂಗಬಾಮ್ ನೀರಜ್ ಕುಮಾರ್ ಮತ್ತು ಸುರೇಶ್ ಸಿಂಗ್ ತಲಾ ಒಂದು ಬಾರಿ ಚೆಂಡನ್ನು ಗುರಿ ಸೇರಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಬಿ. ನಾಗೇಂದ್ರ ಜೊತೆ ಇತ್ತೀಚೆಗೆ ಚೀನಾದಲ್ಲಿ ನಡೆದ 19ನೇ ಏಷ್ಯನ್ ಕ್ರೀಡಾಕೂಟದಲ್ಲಿ ಪದಕ ಪಡೆದ ರಾಜ್ಯದ ಕ್ರೀಡಾಪಟುಗಳು ಮತ್ತು ತರಬೇತುದಾರರು

ಏಷ್ಯನ್ ಗೇಮ್ಸ್: ಪದಕ ವಿಜೇತರನ್ನು ಸನ್ಮಾನಿಸಿದ ಸಿ.ಎಂ

‘ಉದ್ಯೋಗದಲ್ಲಿ ಕ್ರೀಡಾಪಟುಗಳಿಗೆ ಮೀಸಲಾತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸದ್ಯ ಪೊಲೀಸ್ ಮತ್ತು ಅರಣ್ಯ ಇಲಾಖೆಗಳಲ್ಲಿ ಕ್ರೀಡಾಪಟುಗಳಿಗೆ ನೇಮಕಾತಿಯಲ್ಲಿ ಶೇ 3ರಷ್ಟು ಮೀಸಲಾತಿ ನೀಡಲಾಗುತ್ತಿದ್ದು, ಇತರ ಇಲಾಖೆಗಳಲ್ಲಿ ಶೇ 2ರಷ್ಟು ಮೀಸಲಾತಿ ನೀಡುವ ಕುರಿತು ಪರಿಶೀಲಿಸಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಚೀನಾದಲ್ಲಿ ಇತ್ತೀಚೆಗೆ ನಡೆದ 19ನೇ ಏಷ್ಯನ್ ಕ್ರೀಡಾಕೂಟದಲ್ಲಿ ಪದಕ ಪಡೆದ ರಾಜ್ಯದ ಕ್ರೀಡಾಪಟುಗಳು ಮತ್ತು ತರಬೇತುದಾರರನ್ನು ಗೃಹ ಕಚೇರಿ ಕೃಷ್ಣಾದಲ್ಲಿ ಸನ್ಮಾನಿಸಿ, ನಗದು ಪುರಸ್ಕಾರ ಪ್ರದಾನ ಮಾಡಿ ಮಾತನಾಡಿದ ಅವರು, ‘ರಾಜ್ಯ ಸರ್ಕಾರ ಕ್ರೀಡೆಗೆ ಉತ್ತೇಜನ ನೀಡಲು ಬದ್ಧವಾಗಿದೆ’ ಎಂದರು.

‘ಈ ಬಾರಿ ಚೀನಾದಲ್ಲಿ ನಡೆದ ಏಷ್ಯನ್ ಕ್ರೀಡಾಕೂಟದಲ್ಲಿ ಭಾರತೀಯ ಕ್ರೀಡಾಪಟುಗಳು ಅತ್ಯಧಿಕ ಪದಕಗಳನ್ನು ಗೆದ್ದಿದ್ದಾರೆ. ಕಳೆದ ಬಾರಿ 70, ಈ ಬಾರಿ 107 ಪದಕ ಗೆದ್ದಿದ್ದಾರೆ. ನಮ್ಮ ರಾಜ್ಯದ ಎಂಟು ಕ್ರೀಡಾಪಟುಗಳು ಈ ಬಾರಿ ಪದಕ ಪಡೆದಿದ್ದಾರೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಪದಕ ಗೆಲ್ಲುವುದು ಸಣ್ಣ ವಿಷಯವಲ್ಲ. ಇದಕ್ಕೆ ಅಪಾರ ಪರಿಶ್ರಮದ ಅಗತ್ಯವಿದೆ. ಒಲಿಂಪಿಕ್ಸ್‌ನಲ್ಲಿಯೂ ಪದಕ ಗೆಲ್ಲುವ ಪ್ರಯತ್ನ ಮಾಡಿ’ ಎಂದು ಹಾರೈಸಿದರು.

ಈಜು; ಪೃಥ್ವಿ, ನೈಶಾಗೆ 5 ಪದಕ

ದಸರಾ: ನೆಟ್‌ಬಾಲ್‌ನಲ್ಲಿ ದಕ್ಷಿಣ ಕನ್ನಡ, ಬೆಂಗಳೂರಿಗೆ ಪ್ರಶಸ್ತಿ

• ಆರ್.ಜಿತೇಂದ್ರ

ಮೈಸೂರು: ಬಸವನಗುಡಿ ಈಜು ಕೇಂದ್ರದ ಎಂ. ಪೃಥ್ವಿ ಹಾಗೂ ಡಾಲ್ಫಿನ್ ಈಜು ಕೇಂದ್ರದ ನೈಶಾ ಶೆಟ್ಟಿ ಇಲ್ಲಿ ನಡೆಯುತ್ತಿರುವ ಸಿ.ಎಂ. ಕಪ್ ರಾಜ್ಯ ಮಟ್ಟದ ದಸರಾ ಕ್ರೀಡಾಕೂಟದ ಈಜು ಸ್ಪರ್ಧೆಯಲ್ಲಿ ಕ್ರಮವಾಗಿ ಪುರುಷ ಹಾಗೂ ಮಹಿಳೆಯರ ವಿಭಾಗದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರು.

ನೈಶಾ ತಾವು ಸ್ಪರ್ಧಿಸಿದ ಐದು ಸ್ಪರ್ಧೆಗಳಲ್ಲೂ ಚಿನ್ನ ಗೆದ್ದು ಗಮನ ಸೆಳೆದರು. ಪೃಥ್ವಿ ನಾಲ್ಕು ಚಿನ್ನ ಹಾಗೂ ಒಂದು ಬೆಳ್ಳಿಯ ಪದಕಕ್ಕೆ ಮುತ್ತಿಟ್ಟರು. ಬಸವನಗುಡಿ ಈಜು ಕೇಂದ್ರವು ಟೂರ್ನಿಯಲ್ಲಿ ಒಟ್ಟು 30 ಚಿನ್ನ, 29 ಬೆಳ್ಳಿ ಹಾಗೂ 18 ಕಂಚಿನೊಂದಿಗೆ 77 ಪದಕ ತನ್ನದಾಗಿಸಿಕೊಂಡಿತು. ಡಾಲ್ಫಿನ್ ಈಜು ಕೇಂದ್ರವು 8 ಚಿನ್ನ, 5 ಬೆಳ್ಳಿ ಹಾಗೂ 2 ಕಂಚಿನೊಂದಿಗೆ 15 ಪದಕ ಪಡೆಯಿತು.

ನೆಟ್‌ಬಾಲ್: ನೆಟ್‌ಬಾಲ್ ಸ್ಪರ್ಧೆಯ ಪುರುಷರ ವಿಭಾಗದಲ್ಲಿ ದಕ್ಷಿಣ ಕನ್ನಡ ಹಾಗೂ ಮಹಿಳೆಯರ ವಿಭಾಗದಲ್ಲಿ ಬೆಂಗಳೂರು ನಗರ ತಂಡಗಳು ಪ್ರಶಸ್ತಿ ಗೆದ್ದುಕೊಂಡವು. ಪುರುಷರ ವಿಭಾಗದ ಫೈನಲ್ಸ್‌ನಲ್ಲಿ ದಕ್ಷಿಣ ಕನ್ನಡ 42-26 ರಿಂದ ಆತಿಥೇಯ ಮೈಸೂರು ತಂಡದ ವಿರುದ್ಧ ಜಯಗಳಿಸಿತು. ಮಹಿಳೆಯರ ವಿಭಾಗದ ಫೈನಲ್‌ನಲ್ಲಿ ಬೆಂಗಳೂರು ನಗರ ತಂಡ 43-31 ರಿಂದ ದಕ್ಷಿಣ ಕನ್ನಡ ತಂಡವನ್ನು ಮಣಿಸಿತು.

ಫೈನಲ್‌ಗೆ ಬೆಳಗಾವಿ: ಪುರುಷ ಹಾಗೂ ಮಹಿಳೆಯರ ಕೊಕ್ಕೊನಲ್ಲಿ ಬೆಳಗಾವಿ ತಂಡಗಳು ಫೈನಲ್‌ಗೆ ಲಗ್ಗೆಯಿಟ್ಟವು. ಪುರುಷರ ವಿಭಾಗದ ಸೆಮಿಫೈನಲ್‌ನಲ್ಲಿ ಬೆಳಗಾವಿ ತಂಡ 17-14 ಅಂಕಗಳಿಂದ ರಾಯಚೂರು ತಂಡವನ್ನು ಮಣಿಸಿತು. ವಿಜೇತ ತಂಡದ ಪರ ಎಂ. ಅಕ್ಷಯ್ ಉತ್ತಮ ಪ್ರದರ್ಶನ ನೀಡಿದರು. ಮತ್ತೊಂದು ಸೆಮಿಫೈನಲ್‌ನಲ್ಲಿ ಬಾಗಲಕೋಟೆ ತಂಡ 14-13 ಅಂತರದಿಂದ ಧಾರವಾಡ ತಂಡದ ವಿರುದ್ಧ ಜಯಗಳಿಸಿತು. ಮಹಿಳೆಯರ ವಿಭಾಗದ ಸೆಮಿಫೈನಲ್ ಪಂದ್ಯಗಳಲ್ಲಿ ಯಾದಗಿರಿ 5-4 ಅಂತರದಿಂದ ಮೈಸೂರು ವಿರುದ್ಧ, ಬೆಳಗಾವಿ ತಂಡವು 9-7ರಿಂದ ಬೆಂಗಳೂರು ತಂಡವನ್ನು ಮಣಿಸಿದವು.

ಮೂರನೇ ದಿನದ ಫಲಿತಾಂಶ: ಪುರುಷರು: ಈಜು: 200 ಮೀ. ಬ್ರೆಸ್ಟ್‌ಸ್ಟ್ರೋಕ್: ಡೇನಿಯಲ್ ಪೌಲ್-1, ಶ್ರೇಯಸ್ ಮಂಜುನಾಥ್-2. ಕಾಲ: 2ನಿ. 36.86 ಸೆ; 4X100 ಮೀ. ಮೆಡ್ಲೆ ರಿಲೆ: ಬಸವನಗುಡಿ ಈಜು ಕೇಂದ್ರ ‘ಎ’-1, ಬಸವನಗುಡಿ ಈಜು ಕೇಂದ್ರ ‘ಬಿ’ -2. ವೇಟ್‌ಲಿಫ್ಟಿಂಗ್: 81 ಕೆ.ಜಿ. ವಿಭಾಗ: ಬಿ. ರಜತ್ ರೈ-1, ಎಂ. ಜೀವನ್-2; 89 ಕೆ.ಜಿ. ವಿಭಾಗ: ಜೇಮ್ಸ್ ಕ್ಯಾರಿ-1, ಯಶ್ ತೆವಾಟಿಯಾ-2; 96 ಕೆ.ಜಿ. ವಿಭಾಗ; ಎಂ.ಕೆ. ಸಂತೋಷ್-1, ನಿಂಗನಗೌಡ ಪೊಲೀಸ್‌ಪಾಟೀಲ-2; 102 ಕೆ.ಜಿ. ವಿಭಾಗ: ಲೋಕಚಂದ್-1, ಜಿತೇಂದರ್ ಸೋಲಂಕಿ-2. ಮಹಿಳೆಯರು: ಈಜು: 200 ಮೀ. ಬ್ರೆಸ್ಟ್‌ಸ್ಟ್ರೋಕ್: ಎಸ್.ತಾನ್ಯ-1, ವಿಹಿತಾ ನಯನ-2. 4X100 ಮೀ ಮೆಡ್ಲೆ ರಿಲೆ: ಬಸವನಗುಡಿ ಈಜು ಕೇಂದ್ರ ‘ಎ’-1, ಬಸವನಗುಡಿ ಈಜು ಕೇಂದ್ರ ‘ಬಿ’-2. ಲಾನ್ ಟೆನಿಸ್: ಡಬಲ್ಸ್: ಶರ್ಮದಾ ಬಾಲು, ಎಂ. ಸುಹಿತಾ (ಬೆಂಗಳೂರು)-1, ಕಾಶ್ವಿ ಸುನಿಲ್, ಉನ್ನತಿ ಮುರಳೀಧರ್-2.

ಈಜು ಸ್ಪರ್ಧೆಯ ವೈಯಕ್ತಿಕ ಚಾಂಪಿಯನ್ ಪ್ರಶಸ್ತಿ ಪಡೆದ ಎಂ. ಪೃಥ್ವಿ ಹಾಗೂ ನೈಶಾ ಪ್ರಶಸ್ತಿಯೊಂದಿಗೆ

ಡಿಕೆಸಿಎ ಆಯೋಜಿತ ಫಿಡೆ ರೇಟೆಡ್ ಚೆಸ್ ಟೂರ್ನಿ

ಮುನ್ನಡೆಯಲ್ಲಿ ಗಹನ್, ಸುಶಾಂತ್

ಪ್ರಜಾವಾಣಿ ವಾರ್ತೆ

ಮಂಗಳೂರು: ಅಗ್ರ ಶ್ರೇಯಾಂಕದ ಆಟಗಾರ, ಮಂಗಳೂರಿನ ಗಹನ್ ಎಂ.ಜಿ. ಸೇರಿದಂತೆ ಕರ್ನಾಟಕದ ಏಳು ಆಟಗಾರರು ಇಲ್ಲಿ ನಡೆಯುತ್ತಿರುವ ಫಿಡೆ ರೇಟೆಡ್ ರಾಷ್ಟ್ರೀಯ ಚೆಸ್ ಟೂರ್ನಿಯಲ್ಲಿ ಮುನ್ನಡೆ ಕಾಯ್ದುಕೊಂಡಿದ್ದಾರೆ. ಒಟ್ಟಾರೆ 30 ಆಟಗಾರರು ಅಗ್ರ ಸ್ಥಾನದಲ್ಲಿದ್ದಾರೆ.

ನಗರದ ಪುರಭವನದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಚೆಸ್ ಸಂಸ್ಥೆ ಆಯೋಜಿಸಿರುವ ₹ 6 ಲಕ್ಷ ಬಹುಮಾನ ಮೊತ್ತದ ಟೂರ್ನಿಯಲ್ಲಿ ಬುಧವಾರ ಮೂರನೇ ಸುತ್ತಿನ ನಂತರ ತಮಿಳುನಾಡು ಆಟಗಾರರು ಕೂಡ ಉತ್ತಮ ಸಾಮರ್ಥ್ಯ ತೋರಿದ್ದು, ನಾಲ್ವರು ಪೂರ್ಣ ಪಾಯಿಂಟ್‌ಗಳೊಂದಿಗೆ ಮುನ್ನಡೆಯಲ್ಲಿದ್ದಾರೆ. ಫಿಡೆ ಮಾಸ್ಟರ್ ಗಹನ್ ಮೂರನೇ ಸುತ್ತಿನಲ್ಲಿ ಕರ್ನಾಟಕದ ಲಕ್ಷಿತ್ ಬಿ. ಸಾಲಿಯಾನ್ ಅವರನ್ನು ಮಣಿಸಿದರು. ಶ್ರೀಕಾಂತ್ ಎನ್. ಮತ್ತು ವಿದ್ಯಾನಾಥನ್ ಕಣ್ಣನ್ ಕ್ರಮವಾಗಿ ಕರ್ನಾಟಕದ ಅಜಿತ್ ಎಂ.ಪಿ. ಮತ್ತು ಅಭಿನವ್ ವಿ. ವಿರುದ್ಧ ಜಯಗಳಿಸಿದರು.

ಎರಡನೇ ಶ್ರೇಯಾಂಕದ ಲೋಕೇಶ್ ಎನ್. (ತಮಿಳುನಾಡು), ಮೂರನೇ ಶ್ರೇಯಾಂಕದ ಇಂದ್ರಜಿತ್ ಮಹೇಂದ್ರಕರ್ (ಮಹಾರಾಷ್ಟ್ರ) ಮತ್ತು ನಾಲ್ಕನೇ ಶ್ರೇಯಾಂಕದ ರಾಮನಾಥನ್ ಬಾಲಸುಬ್ರಹ್ಮಣ್ಯನ್ (ತಮಿಳುನಾಡು) ಕೂಡ ಅಗ್ರ ಸ್ಥಾನದಲ್ಲಿದ್ದಾರೆ.

ಕರ್ನಾಟಕದ ಗಹನ್ ಎಂ.ಜಿ.

ಪ್ಯಾರಾ ಏಷ್ಯನ್ ಕ್ರೀಡಾಕೂಟಕ್ಕೆ ಬಳ್ಳಾರಿ ಹುಡುಗ

ಬಳ್ಳಾರಿ: ಅಪಘಾತದಲ್ಲಿ ಎರಡೂ ಕಾಲು ಕಳೆದುಕೊಂಡರೂ ಛಲ ಬಿಡದೆ, ಪರಿಶ್ರಮದಿಂದ ಸಾಧನೆ ಮಾಡಿದ ಇಲ್ಲಿನ 17 ವರ್ಷದ ಈಜುಪಟು ಗೋಪಿಚಂದ್ ಎಲ್. ಇದೇ 22ರಿಂದ 28ರವರೆಗೆ ಚೀನಾದ ಹಾಂಗ್‌ಝೌನಲ್ಲಿ ನಡೆಯಲಿರುವ ಪ್ಯಾರಾ ಏಷ್ಯನ್ ಗೇಮ್ಸ್‌ಗೆ ಆಯ್ಕೆಯಾಗಿದ್ದಾರೆ.

ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ದರೋಜಿ ಗ್ರಾಮದ ಗೋಪಿಚಂದ್ ಈಜು ಸ್ಪರ್ಧೆಯಲ್ಲಿ ಈವರೆಗೆ 25 ಚಿನ್ನ ಹಾಗೂ 8 ಬೆಳ್ಳಿ ಸೇರಿ ಅನೇಕ ಪದಕಗಳನ್ನು ಗೆದ್ದಿದ್ದಾರೆ. ಅವರು ರಾಜಶೇಖರ್ ಹಾಗೂ ವಸಂತಾ ಅವರ ಪುತ್ರ.

2016ರಿಂದ ಈವರೆಗೆ ಅನೇಕ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಈಜು ಸ್ಪರ್ಧೆಗಳಲ್ಲಿ ವಿಜೇತರಾಗಿದ್ದಾರೆ. ಈಜು ಸ್ಪರ್ಧೆಯಲ್ಲಿ ರಾಷ್ಟ್ರ ಮಟ್ಟದಲ್ಲಿ 12 ಚಿನ್ನ, 3 ಬೆಳ್ಳಿ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ 2 ಚಿನ್ನದ ಪದಕಗಳನ್ನು ಗಳಿಸಿದ್ದಾರೆ.

ಗೋಪಿಚಂದ್

ಜಾರ್ಖಂಡ್ ವಿರುದ್ಧ ಕರ್ನಾಟಕಕ್ಕೆ ಜಯ

ಬೆಂಗಳೂರು: ಹಾರ್ದಿಕ್ ರಾಜ್ (11ಕ್ಕೆ4) ಮತ್ತು ಧೀರಜ್ ಜೆ. ಗೌಡ (23ಕ್ಕೆ 3) ಅವರ ಪ್ರಬಲ ಬೌಲಿಂಗ್ ದಾಳಿಯ ನೆರವಿನಿಂದ ಕರ್ನಾಟಕ ತಂಡವು ಹೈದರಾಬಾದ್‌ನಲ್ಲಿ ನಡೆದ ಬಿಸಿಸಿಐ 19 ವರ್ಷದೊಳಗಿನವರ ವಿನೂ ಮಂಕಡ್ ಟ್ರೋಫಿ ಟೂರ್ನಿಯ ಪಂದ್ಯದಲ್ಲಿ 7 ವಿಕೆಟ್‌ಗಳಿಂದ ಜಾರ್ಖಂಡ್ ತಂಡವನ್ನು ಮಣಿಸಿತು.

ಜಾರ್ಖಂಡ್ ತಂಡ 36.2 ಓವರ್‌ಗಳಲ್ಲಿ 104 ಆಲೌಟ್ ಆಯಿತು. ಕರ್ನಾಟಕ ತಂಡ 24.2 ಓವರ್‌ಗಳಲ್ಲಿ 3 ವಿಕೆಟ್‌ಗೆ 105 ರನ್ ಗಳಿಸಿತು.

Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) – 122050, India; **Website:** www.honda2wheelersindia.com; **Customer Care:** customercare@honda2wheelersindia.com

*Terms and Condition apply. Product shown in the picture may vary from the actual product available in the market. Accessories shown in the product are not part of the standard equipment. Features may vary with colours & variants.

Honda Exclusive Authorised Dealerships: Ananda Honda - BOMMANAHALLI: 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; **Anekal Honda - ANEKAL:** 080-27830234, 9880417779; **City Honda - ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397, 080-43333330; **Haiku Honda - DOMLUR:** 49656565, 9342432156; **INDIRANAGAR:** 9844478636; **Dhruvdesh Honda - MEKHRI CIRCLE:** 40500700, 9343968413; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; **Planet Honda - RAJAJINAGAR:** 08068898888, 9980927735; **PEENYA:** 08068898888, 9980927730; **SUNKADAKATTE:** 08068898888, 9980927728; **BASAWESHWAR NAGAR:** 08068898888, 9980927726; **Raja Honda - KORAMANGALA:** 08067329000,9035310055; **Prime Honda - VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; **Silicon Honda - RV ROAD:** 9844502222, 9844726973; **BANSHANKARI:** 9844502444, 8722279009; **R.R. NAGAR:** 9964388333, 9071175200; **MONOTYPE:** 7353744400, **JAYANAGAR:** 8722801626; **Saphire Honda - JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; **VFM Honda - KR PURAM:** 9071858885, 9071858881; **HENNUR ROAD:** 9108989817, 9108989818; **Tansi Honda - HOODI:** 7259030091, 9741410101; **MARTHAHALLI:** 7259030100, 7259030093; **VARTHUR RD:** 8105597877, 9686573013; **GUNJUR:** 9606450642, 9606450643; **Turbo Honda - DODDABALLAPURA:** 7022620885; **NELAMANAGALA:** 080-27722333, 7022008894; **Wings Honda - HOSKOTE:** 7676907272; **MALUR:** 7676155600; **TC PALYA:** 9590815959; **Sri Kausthub Honda - KOLAR:** 9900018515, 9900018516;; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; **Namma Honda - CHIKKABALLAPUR:** 9606060610, 9611996114; **CHINTAMANI:** 9606060620, 9611996115; **BAGEPALLI:** 9611596112, 9611596110; **Shankar Honda - GOWRIBIDANUR:** 9900007422/33; **SIDLAGHATTA:** 9611596113; **Century Honda - TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; **Shantinath Honda - TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; **Honey Honda - PAVAGADA:** 9535941215; **Annapoorna Honda - MADHUGIRI:** 9886627429; **Vignesh Honda - TIPTUR:** 9886711161; **TURUVEKERE:** 9448214014; **Sri Srinivasa Honda - CHIKKANAYAKANAHALLI:** 8722522221; **Prestige Honda - RAMNAGARA:** 9606490030, 9606036040; **KANAKAPURA:** 9606036053, 9606036054; **CHANNAPATNA:** 9606490034, 9035717953; **ART Honda - BIDADI:** 9945966771, 9164871007; **Springs Honda - KENGERI:** 9513771114; **Nideesh Honda - DEVANAHALLI:** 9108871999, 9686608579; **VIJAYAPURA:** 9108871999, 7899870207.

For Bulk/Institutional enquiries, please write us at: institutionalsales@honda2wheelersindia.com